## ಅಧ್ಯಾಯ 1

# ಅನ್ಯಜನರ ವರ್ಣನೆ

### ಮುನ್ನುಡಿ (1:1-7)

ಸಮಾಜದಿಂದ ಸಮಾಜಕ್ಕೆ ಪತ್ರ ಬರೆಯುವ ವಿಧಗಳು ವ್ಯತ್ಯಾಸವಾಗಿರುತ್ತವೆ. ನಾನು ಒಂದು ಪತ್ರವನ್ನು ಬರೆಯುವಾಗ, ಮೊದಲು ನಾನು ಯಾರಿಗೆ ಬರೆಯುತ್ತಿದ್ದೆನೋ ಆ ವ್ಯಕ್ತಿಯ ಹೆಸರನ್ನು ಹಾಕುತ್ತೇನೆ ಮತ್ತು ನನ್ನ ಹೆಸರನ್ನು ಕೊನೆಯಲ್ಲಿ ಬರೆಯುತ್ತೇನೆ. ಹೊಸ ಒಡಂಬಡಿಕೆಯ ಕಾಲದಲ್ಲಿ, ಪತ್ರಗಳು ಸಾಮಾನ್ಯವಾಗಿ ಒಂದು ಉದ್ದವಾದ ಸುರುಳಿ ಸುತ್ತಿದ ಹಾಳೆಯಲ್ಲಿ ಬರೆಯಲಾಗುತ್ತಿತ್ತು. ಬರಹಗಾರನು ಪತ್ರದ ಮೊದಲಲ್ಲಿಯೇ ತನ್ನ ಹೆಸರನ್ನು ಬರೆಯುತ್ತಿದ್ದನು, ಹೀಗೆ ಸ್ವೀಕರಿಸುವವರು ನೋಡಿದ ತಕ್ಷಣವೇ ಯಾರು ಕಳುಹಿಸಿದ್ದಾರೆಂಬದನ್ನು ತಿಳಿದುಕೊಳ್ಳುತ್ತಿದ್ದರು. ಆ ಕಾಲದಲ್ಲಿ, ಪತ್ರಗಳು ಸಾಂಪ್ರದಾಯಿಕವಾಗಿ ಬರಹಗಾರನ ಹೆಸರಿನಿಂದ ಪ್ರಾರಂಭಿಸಿ, ನಂತರ ಅದು ಯಾರಿಗೆ ಕಳುಹಿಸಲ್ಪಡುತ್ತಿತ್ತೋ ಅವರ ಬಿರುದು, ಮತ್ತು ಒಂದು ವಂದನೆಯೊಂದಿಗೆ ಆರಂಭವಾಗುತ್ತಿತ್ತು. ಪೌಲನು ಆತನ ವಾಚಕರಿಗೆ ಪರಿಚಿತವಿದ್ದ ವಿಧಾನವನ್ನು ಉಪಯೋಗಿಸಿದನು, ಅದು ದೈನಂದಿನ ಪತ್ರ ವ್ಯವಹಾರದಲ್ಲಿ ಉಪಯೋಗಿಸಲಾಗುತ್ತಿದ್ದ ವಿಧಾನವಾಗಿತ್ತು.

ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಪ್ರಾರಂಭದ ವಚನಗಳಲ್ಲಿ ಮೂರು ಸಾಮಾನ್ಯ ಅಂಶಗಳಿರುತ್ತವೆ:

> ಬರಹಗಾರನ ಹೆಸರು: “ಪೌಲನು” (1:1).
> ಸ್ವೀಕರಿಸುವವರ ಬಿರುದು: “ರೋಮಾಪುರದಲ್ಲಿರುವ ಎಲ್ಲಾ . . .” (1:7a).
> ವಂದನೆ: “ಕೃಪೆ . . . ಮತ್ತು ಸಮಾಧಾನ” (1:7b).

ಹೇಗೂ, ಪೌಲನು, ತನ್ನ ಉದ್ದೇಶಗಳಿಗಾಗಿ ಪರಿಚಿತವಾದ ವಿಧಾನವನ್ನು ಅನುಸರಿಸಿದನು, ಪ್ರತಿ ವಿಭಾಗದಲ್ಲಿ ಮಹತ್ತಾದ ಸತ್ಯಗಳನ್ನು ತುಂಬಿದ್ದನು. ಆದುದರಿಂದ, ನಾವು ಪ್ರತಿಯೊಂದು ವಾಕ್ಯದ ಸಾಲನ್ನು ಗಮನಿಸುವದು ಅಗತ್ಯವಾಗಿರುತ್ತದೆ.

#### ಬರಹಗಾರನು, ಪೌಲನು (1:1-6)

**1ಯೇಸು ಕ್ರಿಸ್ತನ ದಾಸನೂ ಅಪೊಸ್ತಲನಾಗುವದಕ್ಕೆ ಕರೆಯಲ್ಪಟ್ಟವನೂ ದೇವರ**

**ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟವನೂ ಆಗಿರುವ ಪೌಲನು ರೋಮಾಪುರದಲ್ಲಿ ದೇವರಿಗೆ ಪ್ರೀಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುವದೇನೆಂದರೆ ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. 2ಸುವಾರ್ತೆಯನ್ನು ಸಾರಿ ಹೇಳಿಸುತ್ತೇನೆಂದು ದೇವರು ಮುಂಚಿತವಾಗಿ ಪವಿತ್ರ ಶಾಸ್ತ್ರಗಳಲ್ಲಿ ತನ್ನ ಪ್ರವಾದಿಗಳ ಮೂಲಕ ಮಾತು ಕೊಟ್ಟನು. 3ಈ ಸುವಾರ್ತೆಯು ದೇವರ ಮಗನೂ ನಮ್ಮ ಕರ್ತನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದದ್ದು. ಆತನು ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನೂ, 4ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದ ಮಹಾತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ. 5ಆತನ ಹೆಸರಿನ ಪ್ರಸಿದ್ಧಿಗಾಗಿ ಎಲ್ಲಾ ಅನ್ಯಜನಗಳಲ್ಲಿ ನಂಬಿಕೆಯೆಂಬ ವಿಧೇಯತ್ವ ಉಂಟಾಗುವದಕ್ಕೋಸ್ಕರ ನಾವು ಆತನ ಮೂಲಕವಾಗಿ ಕೃಪೆಯನ್ನೂ ಅಪೊಸ್ತಲತನವನ್ನೂ ಹೊಂದಿದೆವು. 6ಯೇಸು ಕ್ರಿಸ್ತನವರಾಗುವದಕ್ಕೆ ಕರೆಯಲ್ಪಟ್ಟ ನೀವು ಸಹ ಆ ಅನ್ಯಜನರೊಳಗಿ ನವರಾದ್ದರಿಂದ ನಿಮಗೆ ಬರೆಯುತ್ತೇನೆ.**

ರೋಮಾಪುರದವರಿಗೆ ಬರೆದ ಪತ್ರಿಕೆಯ ಪ್ರಾರಂಭಿಕ ವಚನಗಳು ಪೌಲನ ಪತ್ರಿಕೆಯ ಗುಣಸ್ವಭಾವಗಳನ್ನು ವ್ಯಕ್ತಪಡಿಸುತ್ತವೆ. ಒಂದು ವಿಚಾರ ಅವನನ್ನು ಒಂದು ವಿಷಯದ ಚರ್ಚೆಗೆ ನಡಿಸುವದು, ಅದು ಮುಂದೆ ಅವನನ್ನು ಮತ್ತೊಂದು ವಿಷಯದ ಚರ್ಚೆಗೆ ನಡಿಸುತ್ತದೆ, ಅದು ಬಳಿಕ ಅವನನ್ನು ಮತ್ತೊಂದಾವದೋ ವಿಷಯದ ಚರ್ಚೆಗೆ ಕರೆದೊಯ್ಯುವದು. ಆತನು ಒಂದು ಪರಿಕಲ್ಪನೆಯಿಂದ ಮತ್ತೊಂದು ಪರಿಕಲ್ಪನೆಗೆ ಸಾಗುತ್ತಾನೆ, ಅನೇಕ ವೇಳೆ ಅದು ಒಂದು *ದೀರ್ಘವಾದ* ಸಾಲಾಗಿರುತ್ತದೆ. ಈ ಪತ್ರಿಕೆಯ ಮೊದಲ ಏಳು ವಚನಗಳು ಒಂದೇ ವಾಕ್ಯದ ಸಾಲಾಗಿರುತ್ತವೆ—ಗ್ರೀಕ್ ಪ್ರತಿಯಲ್ಲಿ 93 ಮತ್ತು NASB ಆವೃತ್ತಿಯಲ್ಲಿ 127 ಪದಗಳು.[1] ಪೌಲನ ಆಲೋಚನೆಯ ಸರಮಾಲೆಯನ್ನು ಹಿಂಬಾಲಿಸುವದು ಬಹಳ ಸವಾಲಿನಿಂದ ಕೂಡಿರಬಲ್ಲದು!

**ವಚನ 1. ಪೌಲನು** ಮುಂಚೆ ಯಾವತ್ತೂ ರೋಮಾಪುರಕ್ಕೆ ಭೇಟಿಕೊಟ್ಟಿರಲಿಲ್ಲ ವಾದ್ದರಿಂದ (1:13), ಆತನ ಆರಂಭಿಕ ಮಾತುಗಳು ಒಂದು ವೈಯಕ್ತಿಕ ಪರಿಚಯದಂತಿ ರುತ್ತವೆ. ಅದು ಒಂದು ರೀತಿ ಅಪೊಸ್ತಲನು ರೋಮಾಪುರದಲ್ಲಿರುವ ಕ್ರೈಸ್ತರ ಮುಂದೆ ನಿಂತಿದ್ದಾನೆ, ತನ್ನ ಬಾಹುಗಳನ್ನು ಅಗಲವಾಗಿ ತೆರೆದು “ನನ್ನನ್ನು ನಿಮಗೆ ಪರಿಚಯ ಮಾಡಿಕೊಳ್ಳುತ್ತೇನೆ!” ಎಂದು ಹೇಳಿದಂತಿರುತ್ತದೆ.

ತಾನು “ಪೌಲನು” ಎಂದು ಪರಿಚಯಿಸಿಕೊಂಡ ಬಳಿಕ, ಆತನು ಮೊದಲು ತನ್ನ ಸ್ಥಾನವನ್ನು ಕುರಿತು ಮಾತಾಡುತ್ತಾನೆ: ಆತನು **ಯೇಸು ಕ್ರಿಸ್ತನ ದಾಸನು** ಆಗಿದ್ದನು. “ದಾಸನು” ಎಂಬುದು ಗ್ರೀಕ್ ಪದವಾದ “ಗುಲಾಮ” (δοῦλος, *doulos*) ನ ಅನುವಾದವಾಗಿರುತ್ತದೆ. ರೋಮಿನ ಪ್ರಜೆಗಳಿಗೆ “ಗುಲಾಮ” ಎಂಬ ಪದದ ಪರಿಚಯವಿತ್ತು ಮತ್ತು ಆದರ ಅರ್ಥ ತಿಳಿದಿತ್ತು. ರೋಮಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರು ಗುಲಾಮರಾಗಿದ್ದರೆಂದು (ಬಹುಶಃ 600,000) ಅಂದಾಜಿಸಲಾಗಿದೆ. ರೋಮಿನ ಸಾಧಾರಣ ಪ್ರಜೆಗೆ ಗುಲಾಮ ಎಂದು ಕರೆಯಲ್ಪಡುವದು ಅವಮಾನದ ಸಂಗತಿಯಾಗಿರುತ್ತಿತ್ತು. ಒಬ್ಬ

ಗುಲಾಮನು ಮತ್ತೊಬ್ಬರಿಗೆ ಸ್ವಂತವನಾಗಿರುತ್ತಾನೆ; ಆತನು ಒಂದು ಸ್ವತ್ತು ಹಾಗೂ ಆತನಿಗೆ ವೈಯಕ್ತಿಕ ಹಕ್ಕುಗಳಿರಲಿಲ್ಲ. ಆತನು ಅಸ್ತಿತ್ವದಲ್ಲಿರುವ ಏಕೈಕ ಉದ್ದೇಶವು ಆತನ ಯಜಮಾನನಿಗಾಗಿಯೇ. ಹೀಗಿದ್ದರೂ, ಪೌಲನು ತನ್ನನ್ನು ಒಬ್ಬ ಗುಲಾಮನು—"ಯೇಸು ಕ್ರಿಸ್ತನ ದಾಸನು" ಎಂದು ಗುರುತಿಸಿಕೊಳ್ಳುತ್ತಾನೆ. ಅಪೊಸ್ತಲನು ಇಚ್ಛಾಪೂರ್ವಕ ದಾಸನಾಗಿದ್ದನು. ಆತನು ತನಗಾಗಿ ಚಿಂತಿಸಲಿಲ್ಲ, ಆದರೆ ತನ್ನ ಯಜಮಾನನಿಗೆ ವಿಧೇಯನಾಗಲು ಜೀವಿಸಿದನು (ಗಲಾತ್ಯ 2:20).

ಪ್ರತಿಯೊಬ್ಬ ಕ್ರೈಸ್ತನು ಯೇಸುವಿನ ದಾಸನಾಗಿದ್ದಾನೆ. ಆತನು ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟಿದ್ದಾನೆ (ನೋಡಿರಿ 1 ಕೊರಿಂಥ 6:19, 20; 7:22, 23; 9:19); ಅವನು ಆತನಿಗೆ ಸಂಬಂಧಿಸಿರುವವನಾಗಿದ್ದಾನೆ. ಅನಂತರ ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ಒತ್ತಿ ಹೇಳಿದ್ದೇನೆಂದರೆ ಜನರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ (6:3-6), ಅವರು "ನೀತಿಗೆ ದಾಸರಾಗುತ್ತಾರೆ" (6:17, 18) ಎಂಬದಾಗಿ. ಆದದರಿಂದ ಕ್ರೈಸ್ತರು ತಾವು ಮಾಡುವ ಎಲ್ಲಾದರಲ್ಲಿಯೂ ತಮ್ಮ ಯಜಮಾನನನ್ನು (ಕರ್ತನನ್ನು) ಮಹಿಮೆಪಡಿಸುವದಕ್ಕೆ ತೀರ್ಮಾನಿಸಬೇಕು.

ತಾನು ಒಬ್ಬ ದಾಸನೆಂದು ಹೇಳಿದ ಬಳಿಕ, ಪೌಲನು ತನ್ನ ಶ್ರೇಷ್ಟತ್ವವನ್ನು ಪ್ರಸ್ತಾಪಿಸುತ್ತಾನೆ: ಆತನು ಒಬ್ಬ **ಅಪೊಸ್ತಲನಾಗಿ ಕರೆಯಲ್ಪಟ್ಟಿದ್ದನು.** ಪ್ರಾಥಮಿಕವಾಗಿ, ಆತನು ಯೇಸುವಿನ ದಾಸನಾಗಿದ್ದನು; ಎರಡನೆಯದಾಗಿ, ಆತನು ಒಬ್ಬ ಅಪೊಸ್ತಲನಾಗಿದ್ದನು. ರಾಜ್ಯದಲ್ಲಿ ನಮಗೆ ಯಾವ ಪಾತ್ರವಿದ್ದರೂ, ನಾವು ಮೊಟ್ಟಮೊದಲು ದಾಸರಾಗಿರತಕ್ಕದ್ದು.

"ಅಪೊಸ್ತಲ" ಒಂದು ಗ್ರೀಕ್ ಪದವಾಗಿದೆ (ἀπόστολος, *apostolos*) ಇದು ತದ್ರೂಪವಾಗಿ ಅನುವಾದಿಸಲ್ಪಟ್ಟಿದೆ. ಇದು "ಇಂದ" ದ ಉಪಸರ್ಗ (ἀπό, *apo*) ಜೊತೆಗೆ "ಕಳುಹಿಸು" ಎಂಬ ಕ್ರಿಯಾಪದವಾದ (στέλλω, *stellō*) ಎಂಬ ಎರಡು ಪದಗಳನ್ನೊಳಗೊಂಡಿದೆ. "ಅಪೊಸ್ತಲ" ಎಂಬುದರ ಅಕ್ಷರಶಃ ಅರ್ಥವು "ಕಳುಹಿಸಲ್ಪಟ್ಟವನು."[2] ಈ ಪದವು ಕೆಲವು ಸಾರಿ ಸಾಮಾನ್ಯ ಅರ್ಥದಲ್ಲಿ ಉಪಯೋಗಿಸಲ್ಪಡುತ್ತದೆ. ಯೋಹಾನ 13:16 ರಲ್ಲಿ ಇದು "ಕಳುಹಿಸಲ್ಪಟ್ಟಾತನು" ಮತ್ತು ಫಿಲಿಪ್ಪಿಯವರಿಗೆ 2:25 ರಲ್ಲಿ "ಸಂದೇಶಕನು" ಎಂದು ಅನುವಾದಿಸಲ್ಪಟ್ಟಿದೆ. ಬಾರ್ನಬನು ಒಬ್ಬ "ಅಪೊಸ್ತಲ" ಎಂದು ಕರೆಯಲ್ಪಟ್ಟನು (ಅಪೊಸ್ತಲರ ಕೃತ್ಯಗಳು 14:14), ಯಾಕೆಂದರೆ ಆತನು ಅಂತಿಯೋಕ್ಯದಲ್ಲಿನ ಸಭೆಯಿಂದ ಕಳುಹಿಸಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 13:1-3). ಸಾಮಾನ್ಯವಾಗಿ, "ಅಪೊಸ್ತಲರು" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನಿಂದ ಆರಿಸಿಕೊಳ್ಳಲ್ಪಟ್ಟು ಕಳುಹಿಸಲ್ಪಟ್ಟವರನ್ನು ಸೂಚಿಸುವದಕ್ಕೆ ವಿಶೇಷವಾಗಿ ಉಪಯೋಗಿಸಲ್ಪಟ್ಟಿದೆ: ಹನ್ನೆರಡು ಮಂದಿ (ಲೂಕ 6:13; ಅಪೊಸ್ತಲರ ಕೃತ್ಯಗಳು 1:26) ಮತ್ತು ಪೌಲನು. ಪೌಲನು ಅನ್ಯಜನರಿಗೆ ಅಪೊಸ್ತಲನಾಗಿರುವದಕ್ಕಾಗಿ ಕ್ರಿಸ್ತನಿಂದ ಆರಿಸಿಕೊಳ್ಳಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 9:15).

ಪೌಲನ ಟೀಕೆಕಾರರು ಅವನು ತನ್ನನ್ನು ತಾನೇ ಅಪೊಸ್ತಲನಾಗಿ ನೇಮಿಸಿಕೊಂಡವನು ಎಂದು ಆರೋಪಿಸುತ್ತಾರೆ, ಆದ್ದರಿಂದ ಆತನು "ತಾನು ಅಪೊಸ್ತಲನಾಗಿರುವದಕ್ಕೆ ಕರೆಯಲ್ಪಟ್ಟವನು" ಎಂಬದನ್ನು ಒತ್ತಿ ಹೇಳುತ್ತಾನೆ. ಅವನು

"ದೇವರ ಚಿತ್ತಾನುಸಾರವಾಗಿ" ಕರೆಯಲ್ಪಟ್ಟವನು (1 ಕೊರಿಂಥ 1:1; ನೋಡಿರಿ ಗಲಾತ್ಯ 1:1; ಎಫೆಸ 1:1; ಕೊಲೊಸ್ಸೆ 1:1; 1 ತಿಮೊಥೆ 1:1; 2 ತಿಮೊಥೆ 1:1). ಈ ದೈವಿಕ ಕರೆಯುವಿಕೆಯು ದಮಸ್ಕದ ಮಾರ್ಗದಲ್ಲಿ ಸಂಭವಿಸಿತ್ತು, ಆಗ ಆತನು "ಕೃಪೆ ಮತ್ತು ಅಪೊಸ್ತಲತ್ವ" ಎರಡನ್ನೂ ಪಡೆದುಕೊಂಡಿದ್ದನು (1:5).

ಆತನ ಸ್ಥಾನ ಮತ್ತು ಶ್ರೇಷ್ಟತ್ವಗಳನ್ನು ತಿಳಿಸಿದ ಮೇಲೆ, ಪೌಲನು ತನ್ನ ಉದ್ದೇಶವನ್ನು ಒತ್ತಿ ಹೇಳುತ್ತಾನೆ: **ಆತನು ದೇವರ ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟವನಾಗಿದ್ದನು.** Goodspeed ಆವೃತ್ತಿಯಲ್ಲಿ "ದೇವರ ಶುಭವಾರ್ತೆಯನ್ನು ಸಾರುವದಕ್ಕಾಗಿ ಪ್ರತ್ಯೇಕಿಸಲ್ಪಟ್ಟವನು" ಎಂದಿರುತ್ತದೆ. ವಚನ 15 ರಲ್ಲಿ, ಪೌಲನು ತನ್ನ ವಾಚಕರಿಗೆ "ನಿಮಗೆ ಸುವಾರ್ತೆ ಸಾರಲು ನಾನು ಸಿದ್ಧನಾಗಿದ್ದೇನೆ" ಎಂದು ಹೇಳಿದನು. ಎಲ್ಲಾ ಜನರಿಗೂ ಸುವಾರ್ತೆಯನ್ನು ಸಾರುವದು ಆತನ ಜೀವಿತ ಉದ್ದೇಶವಾಗಿತ್ತು.

ಪೌಲನು ಒಬ್ಬ ಸಮರ್ಪಿತ ಫರಿಸಾಯನಾಗಿದ್ದರಿಂದ (ಫಿಲಿಪ್ಪಿಯ 3:5, 6), ಆತನು ಪದಗಳನ್ನು ಇಲ್ಲಿ ಜಾಣ್ಮೆಯಿಂದ ಉಪಯೋಗಿಸಿರಬಹುದು. ಅನುವಾದಿಸಲ್ಪಟ್ಟ "ಪ್ರತ್ಯೇಕಿಸಲ್ಪಟ್ಟವನು" ಎಂಬದರ ಗ್ರೀಕ್ ಪದವು (ἀφωρισμένος, *aphōrismenos*) "ಫರಿಸಾಯ" (Φαρισαῖος, *Pharisaios*)[3] ಎಂಬ ಅದೇ ಮೂಲ ಅರ್ಥವನ್ನೇ ಹೊಂದಿದೆ. Anders Nygren ಈ ಏಕಾರ್ಥದ ವಿಚಾರದೆಡೆಗೆ ಗಮನವನ್ನು ಸೆಳೆಯುತ್ತಾನೆ: "ಒಬ್ಬ ಫರಿಸಾಯನಾಗಿ ತನ್ನನ್ನು ಧರ್ಮಶಾಸ್ತ್ರಕ್ಕಾಗಿ ಪ್ರತ್ಯೇಕಿಸಿಕೊಂಡಿ ದ್ದನು, ಆದರೆ ಈಗ ದೇವರು ಆತನನ್ನು ಒಂದು ಸಂಪೂರ್ಣ ಬೇರೆಯೇ ಆದ ಕಾರ್ಯಕ್ಕಾಗಿ, 'ದೇವರ ಸುವಾರ್ತೆ' ಗಾಗಿ ಪ್ರತ್ಯೇಕಿಸಿಟ್ಟಿದ್ದನು."[4]

ಪೌಲನು ತನ್ನ ಕುರಿತು ಪರಿಚಯವನ್ನು ಮಾಡಿಕೊಳ್ಳುತ್ತಿದ್ದನಾದರೂ, ಆತನು ತಕ್ಷಣವೇ ಗಮನವನ್ನು ಸುವಾರ್ತೆ ಕಡೆಗೆ ತಿರುಗಿಸಿ ಈ ಮಾತುಗಳನ್ನು ಹೇಳುತ್ತಾನೆ: "ಸುವಾರ್ತೆಯನ್ನು ಸಾರುವದಕ್ಕೋಸ್ಕರ ನೇಮಿಸಲ್ಪಟ್ಟವನೂ." ಅನುವಾದಿಸಲ್ಪಟ್ಟ ಗ್ರೀಕ್ ಪದವಾದ "ಸುವಾರ್ತೆ" (εὐαγγέλιον, *euangelion*) ಎಂಬ ಪದವು "ಶುಭ" (εὖ, *eu*) ಮತ್ತು "ವಾರ್ತೆ" (ἀγγελία, *angelia*) ಎಂಬ ಎರಡು ಶಬ್ದಗಳ ಸಮ್ಮಿಲನವಾಗಿದೆ.

ವಾರ್ತೆ ಎಂಬುದು ನಿಜವಾಗಿಯೂ ಸಂಭವಿಸಿದ ಒಂದು ಸಂಗತಿಯ ಕುರಿತ ವರದಿಯಾಗಿದೆ, ಆದರೆ ಇದು ಅದಕ್ಕಿಂತಲೂ ಹೆಚ್ಚಿನದ್ದಾಗಿದೆ. ಈ ಮುಂಜಾನೆ ನಾನು ನನ್ನ ತಲೆಯನ್ನು ಬಾಚಿಕೊಂಡೆನು, ಆದರೆ ಅದೊಂದು ಸುದ್ದಿಯೇ ಅಲ್ಲ. ಸುದ್ದಿಯು ನಿಜವಾಗಿಯೂ ಸಂಭವಿಸಿದ ಒಂದು ಮಹತ್ವವಾದ ವಿಷಯವಾಗಿರಬೇಕು. ಸುವಾರ್ತೆಯು ಒಂದು "ವಾರ್ತೆ" ಆಗಿದೆ ಎಂಬುದು ಅದು ನಿಜವಾಗಿಯೂ ಸಂಭವಿಸಿತೆಂಬದನ್ನು ತೋರಿಸುತ್ತದೆ—ಅದೊಂದು ಕಟ್ಟುಕಥೆಯಲ್ಲ—ಮತ್ತು ಅದು ಪ್ರಾಮುಖ್ಯವಾದ್ದದ್ದು! ಹೇಗೂ, ಸುವಾರ್ತೆಯು ಒಂದು ವಾರ್ತೆ ಎಂಬುದಕ್ಕಿಂತಲೂ ಹೆಚ್ಚಿನದಾಗಿದೆ; ಅದು ಶುಭವಾರ್ತೆಯಾಗಿದೆ. ನಾನು ನನ್ನ ಉದ್ಯೋಗ ಕಳೆದುಕೊಂಡರೆ, ಅದು ಮಹತ್ವದ್ದಾಗಿರುವದು ಆದರೆ ನನ್ನ ಹೆಂಡತಿಯು ಅದನ್ನು ಶುಭವಾರ್ತೆಯಾಗಿ ಪರಿಗಣಿಸುವದಿಲ್ಲ. ಯಾರೋ ಒಬ್ಬರು ನನಗೆ ದೊಡ್ಡ ಮೊತ್ತದ ಹಣವನ್ನು ಕೊಟ್ಟರೆ, ಆಕೆ ಅದನ್ನು "ವಾರ್ತೆ" ಮತ್ತು "ಶುಭ" ಎಂದೂ ಕರೆಯುವಳು! ಸುವಾರ್ತೆಯ "ಶುಭಸಂದೇಶ" ಏನೆಂದರೆ ನಾವು ಪಾಪದಲ್ಲಿ ಕಳೆದುಹೋಗಿ ನಮ್ಮನ್ನು ರಕ್ಷಿಸಿಕೊಳ್ಳಲು

ಆಗದವರಾಗಿದ್ದಾಗ್ಯೂ, ದೇವರು ನಮ್ಮನ್ನು ಪ್ರೀತಿಸಿದನು ಮತ್ತು ನಾವು ರಕ್ಷಿಸಲ್ಪಡುವಂತಾಗಲು ತನ್ನ ಮಗನನ್ನು ನಮಗಾಗಿ ಮರಣಿಸುವದಕ್ಕೆ ಕಳುಹಿಸಿದನು (ಯೋಹಾನ 3:16). ಸುವಾರ್ತೆಯ ಹೃದಯ ಭಾಗವೆಂದರೆ ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನ ಆಗಿರುತ್ತದೆ (1 ಕೊರಿಂಥ 15:1-4).

ಈ ಸುವಾರ್ತೆಯ ವಿಷಯವಾಗಿ, ಪೌಲನು ಮೊದಲು ಇದು ದೇವರಿಂದ ಕೊಡಲ್ಪಟ್ಟಿತೆಂಬದನ್ನು ತಿಳಿಸುತ್ತಾನೆ. ಆತನು ಇದನ್ನು "ದೇವರ ಸುವಾರ್ತೆ" ಎಂದು ಕರೆದನು. ಸುವಾರ್ತೆಯು ಪೌಲನ ಮನಸ್ಸಿನಲ್ಲಿ ಉತ್ಪತ್ತಿಯಾಗಿರಲಿಲ್ಲ; ಅದು ಮನುಷ್ಯ ಜ್ಞಾನದಿಂದಾಗಿರಲಿಲ್ಲ; ಅದು ಸ್ವತಃ ದೇವರಿಂದಲೇ ಬಂದದ್ದಾಗಿತ್ತು. AB ಇದನ್ನು "ದೇವರ ಮತ್ತು ದೇವರಿಂದ ಬಂದ ಸುವಾರ್ತೆ" ಎಂದು ಕರೆಯಿತು.

**ವಚನ 2.** ಇದರ ಜೊತೆಗೆ, ಸುವಾರ್ತೆಯು ಪ್ರವಾದಿಗಳಿಂದ ವಾಗ್ದಾನ ಮಾಡಲ್ಪಟ್ಟಿತ್ತೆಂದು ಹೇಳುತ್ತಾನೆ: **ಸುವಾರ್ತೆಯನ್ನು ಸಾರಿ ಹೇಳುತ್ತೇನೆಂದು ದೇವರು ಮುಂಚಿತವಾಗಿ ಪವಿತ್ರ ಶಾಸ್ತ್ರಗಳಲ್ಲಿ ತನ್ನ ಪ್ರವಾದಿಗಳ ಮೂಲಕ ಮಾತು ಕೊಟ್ಟನು.** "ಯೇಸು ಕ್ರಿಸ್ತನ ಕುರಿತ ಸುವಾರ್ತೆಯು ದೃಢವಾಗಿ ಹಳೆ ಒಡಂಬಡಿಕೆಯ ನೆಲದಲ್ಲಿಯೇ ಬೇರೂರಿದೆ" [5] ಎಂಬದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕೆಂದು ಆತನ ಇಚ್ಚೆಯಾಗಿತ್ತು (ನೋಡಿರಿ 1:17). ರೋಮಾಪುರದವರಿಗೆ ಬರೆದ ಪತ್ರಿಕೆಯು ಇಬ್ರಿಯ ವಾಕ್ಯಭಾಗಗಳಿರುವ ಎಪ್ಪತ್ತುನಾಲ್ಕು ಉಲ್ಲೇಖಗಳನ್ನೊಳಗೊಂಡಿದೆ.[6]

**ವಚನ 3.** ಅತ್ಯಂತ ಪ್ರಾಮುಖ್ಯವಾಗಿ, ಸುವಾರ್ತೆಯು ಯೇಸುವಿನೆಡೆಗೆ ಬೆರಳು ತೋರಿಸುವುದಾಗಿದೆ ಎಂಬುದನ್ನು ತನ್ನ ವಾಚಕರು ಅರ್ಥಮಾಡಿಕೊಳ್ಳಬೇಕೆಂಬುದು ಪೌಲನ ಇಚ್ಚೆಯಾಗಿತ್ತು. ಅದು **ತನ್ನ ಮಗನ ವಿಷಯವಾಗಿ** ದೇವರಿಂದ ಬಂದ ಸುವಾರ್ತೆಯಾಗಿತ್ತು. Phillips ಆವೃತ್ತಿಯಲ್ಲಿ ಇದು "ಸುವಾರ್ತೆಯು ದೇವರ ಮಗನಲ್ಲಿ ಕೇಂದ್ರಿಕೃತವಾಗಿದೆ." ಈ ಸಂದೇಶಕ್ಕೆ ಒಂದೇ ಕೇಂದ್ರ ಬಿಂದುವಿರುತ್ತದೆ, ಮತ್ತು ಆ ಕೇಂದ್ರ ಬಿಂದು ಕ್ರಿಸ್ತನೇ.[7]

ಈ ಸಂದರ್ಭದಲ್ಲಿ, ಪೌಲನ ಗಮನವು ಬೇರೆಡೆ ಹೋಗುತ್ತದೆ—ಈ ಸಾರಿ ಯೇಸುವಿನ ಕಡೆಗೆ. ವಚನ 3 ಮತ್ತು 4 ರಲ್ಲಿ ಕ್ರಿಸ್ತನ ಕುರಿತ ಅತ್ಯಂತ ಶ್ರೇಷ್ಠ ಹೇಳಿಕೆಗಳಲ್ಲೊಂದನ್ನು ಕಾಣುತ್ತೇವೆ. ಮೊದಲು, ಪೌಲನು ಹೇಳಿದ್ದೇನೆಂದರೆ ಯೇಸು **ಶಾರೀರಿಕ ವಾಗಿ ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದಾತನು.** ಕ್ರಿಸ್ತನ ಮಾನವ ಭಾಗದ ಬಗ್ಗೆ ನೋಡುವದಾದರೆ, ಆತನು ದಾವೀದನ ಸಂತತಿಯಾಗಿದ್ದಾನೆ (ಮತ್ತಾಯ 1:1), ಮರಿಯಳಲ್ಲಿ ಹುಟ್ಟಿದವನು, ನೇರವಾಗಿ ದಾವೀದನ ಸಂತಾನದವನು (ಲೂಕ 1:27). ಹಾಗಾದರೆ, ಯೇಸು ಪೂರ್ಣ ಮನುಷ್ಯನಾಗಿದ್ದನು.

**ವಚನ 4.** ಅದೇ ಸಮಯದಲ್ಲಿ, ಯೇಸು ಪೂರ್ಣ ದೇವರು ಸಹ ಆಗಿದ್ದಾನೆ. **ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ.** 3 ಮತ್ತು 4 ವಚನಗಳಲ್ಲಿನ ವೈವಿಧ್ಯತೆಯು ಸ್ಪಷ್ಟವಾಗಿ ತೋರುತ್ತದಷ್ಟೆ: ಆತನ ಶಾರೀರ ಸಂಬಂಧದಲ್ಲಿ, ಯೇಸು ದಾವೀದನ ಸಂತತಿಯಾಗಿದ್ದನು; ಆದರೆ ಆತ್ಮದ ವಿಷಯದಲ್ಲಿ, ಆತನು ದೇವರ ಕುಮಾರನಾಗಿದ್ದನು. ಯೇಸುವಿನ ಪುನರುತ್ಥಾನವು ಆತನು

ದೇವಕುಮಾರನೆಂಬುದಕ್ಕೆ ಅಲ್ಲಗಳೆಯಲು ಸಾಧ್ಯವಾಗದಂಥ ಪುರಾವೆಯನ್ನು ಒದಗಿಸುತ್ತದೆ. Goodspeed ಆವೃತ್ತಿಯು ಈ ವಚನದ ತಿರುಳನ್ನು ಹೀಗೆ ಅನುವಾದಿಸಿದೆ "ಆತನು ಶಾರೀರಕವಾಗಿ ದಾವೀದನ ಸಂತಾನವಾಗಿದ್ದನು . . . ಸತ್ತವರೊಳಗಿಂದ ಎಬ್ಬಿಸಲ್ಪಡುವ ಮೂಲಕ ದೇವರ ಮಗನೆಂದು ನಿರ್ಣಾಯಕವಾಗಿ ಘೋಷಿಸಲ್ಪಟ್ಟನು." ಹಾಗಾದರೆ ಪ್ರಾಥಮಿಕ ಅರ್ಥವು ಸ್ಪಷ್ಟವಾಗಿದೆ—ಆದರೆ ಈ ವಚನದಲ್ಲಿ ಬಹಳಷ್ಟು ಮಾಹಿತಿಯಿರುವದರಿಂದ ಇದನ್ನು ಜಾಗರೂಕತೆಯಿಂದ ವಿಶ್ಲೇಷಿಸಬೇಕು.

ಯೇಸು "ದೇವಕುಮಾರನೆಂದು ಘೋಷಿಸಲ್ಪಟ್ಟನು." ಪುನರುತ್ಥಾನವು ಯೇಸುವನ್ನು ದೇವಕುಮಾರನಾಗಿ ಮಾಡಲಿಲ್ಲ; ಆತನು ಯಾವಾಗಲೂ ದೈವೀಕನಾಗಿದ್ದನು. ಬದಲಾಗಿ ಪುನರುತ್ಥಾನವು "ಈತನು ನನಗೆ ಪ್ರಿಯನಾಗಿರುವ ಮಗನು; ಈತನನ್ನು ನಾನು ಮೆಚ್ಚಿದ್ದೇನೆ" (ಮತ್ತಾಯ 17:5; ನೋಡಿರಿ 3:17) ಎಂದು ಘೋಷಿಸುವದನ್ನು ಮುಂದುವರೆಸುವದಕ್ಕೆ ದೇವರು ಅನುಸರಿಸಿದ ಒಂದು ದಾರಿಯಾಗಿತ್ತು. ಯೇಸು ದೇವಕುಮಾರನಲ್ಲ ಎಂದು ಹೇಳುವದಕ್ಕೆ ಲೋಕವು ಶಿಲುಬೆಯನ್ನು ಆರಿಸಿಕೊಂಡಿತ್ತು (ನೋಡಿರಿ ಮತ್ತಾಯ 27:40), ಅದೇ ವೇಳೆಯಲ್ಲಿ "ಹೌದು, ಆತನು ದೇವಕುಮಾರನೇ!" ಎಂದು ಘೋಷಿಸುವದಕ್ಕೆ ದೇವರು ಪುನರುತ್ಥಾನವನ್ನು ಆರಿಸಿಕೊಂಡನು.

ಯೇಸು "ದೇವರ ಮಹತ್ಕಾರ್ಯದಿಂದ (ಶಕ್ತಿಯಿಂದ) ದೇವಕುಮಾರನೆಂದು ಘೋಷಿಸಲ್ಪಟ್ಟನು." ರೋಮನ್ನರಿಗೆ ಶಕ್ತಿಯ ಬಗ್ಗೆ ಗೊತ್ತಿತ್ತು: ಅವರು ಶಕ್ತಿಯನ್ನು ಪ್ರದರ್ಶಿಸಿದರು; ಅವರು ಶಕ್ತಿಯನ್ನು ಪೂಜಿಸಿದರು. ನೀವು "ಅವರಿಗೆ ಶಕ್ತಿ ಯಾರಲ್ಲಿದೆ?" ಎಂದು ಕೇಳಿದರೆ ಅವರು "ಚಕ್ರವರ್ತಿಯ ಬಳಿಯಿದೆ, ಅವನಿಗೆ ಸೈನ್ಯಬಲವಿದೆ. ಅದೇ ಶಕ್ತಿ" ಎಂದು ಉತ್ತರಿಸುತ್ತಿದ್ದರು. ಅವರ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ, ನಿಜವಾಗಿಯೂ ಶಕ್ತಿ ಇದ್ದದ್ದು ದೇವರಲ್ಲಿಯೇ, ಮತ್ತು ಆತನು ತನ್ನ ಮಹಾಶಕ್ತಿಯನ್ನು ಉಪಯೋಗಿಸಿ ತನ್ನ ಮಗನನ್ನು ಸತ್ತವರೊಳಗಿಂದ ಎಬ್ಬಿಸಿದನೆಂಬುದಾಗಿದೆ.

ಯೇಸು "ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದು . . . ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನು."[8] ದೇವರ ರಕ್ಷಣಾ ಸಂಕಲ್ಪದಲ್ಲಿ ಪುನರುತ್ಥಾನದ ಪ್ರಾಮುಖ್ಯತೆಯನ್ನು ಎಷ್ಟು ಒತ್ತಿ ಹೇಳಿದರೂ ಸಾಲದು (ನೋಡಿರಿ 6:4, 5, 9; 7:4; 8:11, 34; 10:9). ಕ್ರಿಸ್ತನ ದೇಹವು ಸಮಾಧಿಯಲ್ಲಿಯೇ ಉಳಿದಿದ್ದರೆ, ಆತನ ಪಾಪ ಪರಿಹಾರಕ ಯಜ್ಞವು ದೇವರಿಂದ ಅಂಗೀಕರಿಸಲ್ಪಟ್ಟಿತೋ ಎಂಬ ಪ್ರಶ್ನೆಯು ಹಾಗೆಯೇ ಉಳಿದು ಹೋಗುತ್ತಿತ್ತು. ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂಬ ಸತ್ಯವು ಯಜ್ಞ ಅಂಗೀಕಾರವಾಯಿತು ಮತ್ತು ಪಾಪದ ವಿರುದ್ಧ ದೇವರ ಪರಿಶುದ್ಧ ಕೋಪಾಗ್ನಿಯು (1:18) ಶಮನಗೊಳಿಸಲ್ಪಟ್ಟಿತು ಎಂಬದನ್ನು ಘೋಷಿಸುವದಾಗಿತ್ತು (3:25)! ಯೇಸುವಿನ ಪುನರುತ್ಥಾನವು ವಿಭಿನ್ನವಾಗಿತ್ತು; ಇತರರು ಪುನರುತ್ಥಾನಗೊಳಿಸಲ್ಪಟ್ಟಿದ್ದರು ಆದರೆ ಯೇಸು ಮಾತ್ರವೇ "ಇನ್ನು ಮುಂದೆ ಸಾಯದವನಾಗಿ" ಎಬ್ಬಿಸಲ್ಪಟ್ಟಿದ್ದನು (6:9). ಈ ಏಕೈಕ ಪುನರುತ್ಥಾನವು ಯೇಸು ಏನೆಲ್ಲಾ ಆಗಿದ್ದನೋ ಮತ್ತು ಮಾಡಿದನೋ ಅದಕ್ಕೆಲ್ಲಾ ದೇವರ ಅನುಮೋದನೆಯ ಮುದ್ರೆಯಾಗಿತ್ತು.

ಪುನರುತ್ಥಾನದ ಮೂಲಕ ಯೇಸು "ಪವಿತ್ರವಾದ ಆತ್ಮನ" ಪ್ರಕಾರ ದೇವರ ಕುಮಾರನೆಂದು ಘೋಷಿಸಲ್ಪಟ್ಟನು. ಆಂಗ್ಲದ ಸತ್ಯವೇದದ ಕೆಲವು ಆವೃತ್ತಿಗಳಲ್ಲಿ ಆತ್ಮನು

(spirit) ಎಂದು ಹೇಳುವಾಗ ಚಿಕ್ಕ "s" ಉಪಯೋಗಿಸಲಾಗಿದೆ, ಅದು ಯೇಸುವಿನ ಸ್ವಂತ ಆತ್ಮವನ್ನು ಅಥವಾ ಆತನ ಆತ್ಮೀಕ ಸ್ವಭಾವವನ್ನು ಸೂಚಿಸುವದಕ್ಕೆ ಇರಬಹುದು (KJV; NRSV; Goodspeed). ಆದರೆ ಬಹಳಷ್ಟು ಇತರ ಆವೃತ್ತಿಗಳಲ್ಲಿ ಪರಿಶುದ್ಧಾತ್ಮನನ್ನು ಸೂಚಿಸಲು ದೊಡ್ಡ "S" ಉಪಯೋಗಿಸಲಾಗಿರುತ್ತದೆ. ರೋಮಾಪುರದವರಿಗೆ ಪತ್ರಿಕೆಯಲ್ಲಿ ಅನೇಕ ವೇಳೆ ಶರೀರಭಾವವು (ಪರಿಶುದ್ಧ) ಆತ್ಮಕ್ಕೆ ವಿರುದ್ಧವೆಂದು ತೋರ್ಪಡಿಸಲ್ಪಟ್ಟಿದೆ (ನೋಡಿರಿ 8:4-6, 9, 13). F. F. Bruce ಪ್ರಕಾರ, "*ಪವಿತ್ರವಾದ ಆತ್ಮ* ಎಂಬುದು ಸಾಧಾರಣವಾಗಿ ಪರಿಶುದ್ಧಾತ್ಮನನ್ನು ಕರೆಯುವ ಇಬ್ರಿಯಾ ವಿಧಾನವಾಗಿದೆ."[9] "ಪರಿಶುದ್ಧ ಆತ್ಮನ ಪ್ರಕಾರ" ಎಂಬ ಪದಗುಚ್ಛವು ಪವಿತ್ರಾತ್ಮನು ಪುನರುತ್ಥಾನದ ಕಥೆಯನ್ನು ಪ್ರಕಟಗೊಳಿಸಿದನೆಂದು ಸೂಚಿಸುತ್ತಿರ ಬಹುದು, ಆದರೆ ಬಹುಶಃ ಅದು ಯೇಸು ಆತ್ಮನ ಬಲದಿಂದ ಎಬ್ಬಿಸಲ್ಪಟ್ಟನೆಂಬದನ್ನು ಸೂಚಿಸುವದಾಗಿತ್ತು (ನೋಡಿರಿ 8:11).

ರೋಮಾಪುರ 1:3, 4 **ನಮ್ಮ ಕರ್ತನಾದ ಯೇಸು ಕ್ರಿಸ್ತನು** ಎಂಬ ಬಿರುದಿನ್ನೊಂದಿಗೆ ಉತ್ತುಂಗಕ್ಕೇರುತ್ತದೆ. ಆ ಮಾತುಗಳು 3ನೇ ವಚನದ ಆರಂಭದ ಮಾತುಗಳೊಂದಿಗೆ ಸಂಬಂಧ ಹೊಂದಿವೆ. ಅವೆರಡನ್ನು ಒಂದೂಗೂಡಿಸುವದಾದರೆ, ಈ ಸಂಗತಿಯನ್ನು ಕಾಣುತ್ತೇವೆ: "ಆತನ ಕುಮಾರನ ವಿಷಯವಾಗಿ, . . . ನಮ್ಮ ಕರ್ತನಾದ ಯೇಸು ಕ್ರಿಸ್ತನು." "ನಮ್ಮ ಕರ್ತನಾದ ಯೇಸು ಕ್ರಿಸ್ತನು" ಎಂಬ ಈ ನಾಲ್ಕು ಪದಗಳು ಯೇಸು ಯಾರೆಂಬದನ್ನು ಸಂಪೂರ್ಣವಾಗಿ ವಿವರಿಸುತ್ತವೆ, ಮತ್ತು ಪ್ರತಿ ಪದವೂ ಮಹತ್ವದಿಂದ ತುಂಬಿದೆ. "ಯೇಸು" (Ἰησοῦς, *Iēsous*) ಆತನನ್ನು ರಕ್ಷಣೆಯ ಮೂಲಾಧಾರ ಎಂದು ಘೋಷಿಸುತ್ತದೆ (ಮತ್ತಾಯ 1:21). "ಕ್ರಿಸ್ತನು" (Χριστός, *Christos*) ಎಂಬುದು ಗ್ರೀಕ್ ಪದವಾಗಿದ್ದು ಇದು ಇಬ್ರಿಯ "ಮೆಸ್ಸೀಯ"—ಅಭಿಷೀಕ್ತನು, ಅರಸನು, ಶತಮಾನ ಗಳಿಂದ ಯೆಹೂದ್ಯರು ಕಾಯುತ್ತಿದ್ದಾತನು—ಎಂಬುದರಿಂದ ಬಂದಿದೆ. "ಕರ್ತನು" (Κύριος, *Kurios*) ಅಂದರೆ "ಒಡೆಯನು" ಅಥವಾ "ಆಳುವಾತನು" ಎಂದರ್ಥ. ಈ ಮೂರು ವಿಧದ ಮತ್ತು ಸಮಗ್ರ ಬಿರುದು ಯೆಹೂದ್ಯರಿಗೆ ಅತ್ಯಂಥ ಮಹತ್ವವಾದ ("ಮೆಸ್ಸೀಯ") ಪದ ಹಾಗೂ ಅನ್ಯಜನರಿಗೆ ಅತ್ಯಂಥ ಅರ್ಥವುಳ್ಳ ("ಕರ್ತನು") ಎಂಬ ಪದಗಳೆರಡರ ಸಮ್ಮಿಲನದೊಂದಿಗೆ ಬಂದದ್ದಾಗಿದೆ. ಪತ್ರಿಕೆಯುದ್ದಕ್ಕೂ, ಪೌಲನು ಯೆಹೂದ್ಯರು ಮತ್ತು ಅನ್ಯಜನರು ಇಬ್ಬರಿಗೂ ಉದ್ದೇಶಿಸಿ ಬರೆಯಲು ಶ್ರಮಿಸುತ್ತಾನೆ.

**ವಚನ 5.** ಯೇಸು ಎಂಬ ವಿಷಯ ಪೌಲನನ್ನು ಪುನಃ ಒಂದು ಸುತ್ತು ಹೋಗಿ ಆತನೆಡೆಗೆ ಕರೆತಂದಿತು: **ಆತನ ಮೂಲಕವಾಗಿ ಕೃಪೆಯನ್ನೂ ಅಪೊಸ್ತಲತನವನ್ನೂ ಹೊಂದಿದೆವು.** "ನಾವು" ಎಂಬ ಬಹುವಚನವನ್ನು ಉಪಯೋಗಿಸುವಲ್ಲಿ, ಪೌಲನು ಇಲ್ಲಿ ಎಲ್ಲಾ ಅಪೊಸ್ತಲರನ್ನೂ ಸೂಚಿಸುತ್ತಿರುವ ಸಾಧ್ಯತೆಯಿದೆ. ಹೇಗೂ, ನಮ್ಮ "ಸಂಪಾದಕೀಯ ನಾವು" ಎಂಬ ಪ್ರಕಾರವೇ ಆತನು ಈ ಬಹುವಚನವನ್ನು ತನ್ನನ್ನು ಸೂಚಿಸುವದಕ್ಕೆ ಉಪಯೋಗಿಸಿರುವ ಸಾಧ್ಯತೆ ಬಹಳಷ್ಟಿರುತ್ತದೆ.

"ಕೃಪೆ [*χάρις*, *charis*] ಪೌಲನ ನೆಚ್ಚಿನ ಪದಗಳಲ್ಲೊಂದಾಗಿತ್ತು, ಮತ್ತು . . . ಆತನು ಇದನ್ನು ವಿವಿಧ ರೀತಿಗಳಲ್ಲಿ ಉಪಯೋಗಿಸಿದನು ಆದರೆ ಯಾವಾಗಲೂ ಅದು ಅಯೋಗ್ಯರಾದ ಜನರಿಗೆ ದೇವರ ವರ ಎಂಬ ಅರ್ಥದಲ್ಲಿಯೇ ಉಪಯೋಗಿಸಿದನು."[10] ಪೌಲನು ಯೇಸುವಿನ ಮೂಲಕ "ಕೃಪೆಯನ್ನು ಸ್ವೀಕರಿಸಿದೆನು" ಎಂದು ಹೇಳಿದಾಗ, ಆತನ

ಮನಸ್ಸಿನಲ್ಲಿ ಆತನ ರಕ್ಷಣೆ ವಿಚಾರ ಇದ್ದಿರಬೇಕು (ನೋಡಿರಿ 1 ತಿಮೊಥೆ 1:15, 16). ಇಲ್ಲಿಯ ಸಾಧ್ಯತೆಯೇನೆಂದರೆ, ತಾನು ಬಹಳ ಅಯೋಗ್ಯನಾಗಿದ್ದಾಗ್ಯೂ ಯೇಸು ಆತನನ್ನು ಅಪೊಸ್ತಲನಾಗಿ ಆರಿಸಿಕೊಂಡನೆಂಬ ಅದ್ಭುತವಾದ ಸಂಗತಿಯನ್ನು ಕುರಿತು ಈ ಮಾತನ್ನು ಹೇಳಿರಬಹುದಾಗಿದೆ (ನೋಡಿರಿ 15:15, 16; 1 ಕೊರಿಂಥ 15:9, 10; ಎಫೆಸ 3:7, 8; 1 ತಿಮೊಥೆ 1:12-14). ಪೌಲನ ದೃಷ್ಟಿಯಲ್ಲಂತೂ, ಪ್ರತಿ ಕ್ರೈಸ್ತರಿಗೆ ತಲಾಂತು ಮತ್ತು ಸೇವೆ ದೇವರಿಂದ ಕೊಡಲ್ಪಟ್ಟದ್ದು, ಅದು ಕರ್ತನ ಅದ್ಭುತವಾದ ಕೃಪೆಯ ಕಾರ್ಯವಾಗಿತ್ತು (12:6-8).

ಪೌಲನು ಕೆಲವು ವರ್ಷಗಳ ಹಿಂದೆ ದಮಸ್ಕದಲ್ಲಿ "ಕೃಪೆ ಮತ್ತು ಅಪೊಸ್ತಲತ್ವ" ವನ್ನು ಪಡೆದುಕೊಂಡಿದ್ದನು. ಯೇಸು ಆ ಪಟ್ಟಣದ ಮಾರ್ಗದಲ್ಲಿ ಆತನಿಗೆ ಕಾಣಿಸಿಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 9:3-5), ಅವನನ್ನು ಅಪೊಸ್ತಲನಾಗಿ ಅರ್ಹಗೊಳಿಸಿದ್ದನು (ನೋಡಿರಿ ಅಪೊಸ್ತಲರ ಕೃತ್ಯಗಳು 1:22; 1 ಕೊರಿಂಥ 15:8-10). ಇದಾದ ಬಳಿಕ, ಪೌಲನಿಗೆ ದೀಕ್ಷಾಸ್ನಾನ ಮಾಡಿಸುವದಕ್ಕೆ (ಅಪೊಸ್ತಲರ ಕೃತ್ಯಗಳು 9:18; 22:16) ಕರ್ತನು ಅನನೀಯ ಎಂಬ ಒಬ್ಬ ಶಿಷ್ಯನನ್ನು ಕಳುಹಿಸಿದ್ದನು ಮತ್ತು ದೇವರು ಆತನಿಗೆ ನೇಮಿಸಿದ ಸೇವೆ ಬಗ್ಗೆ ಆತನು ತಿಳಿಸಿದನು: "ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾದ್ದಾನೆ" (ಅಪೊಸ್ತಲರ ಕೃತ್ಯಗಳು 9:15).

ಅನ್ಯಜನರಿಗೆ ಒಬ್ಬ ಅಪೊಸ್ತಲನಾಗಿ, ಪೌಲನು ಏನು ಮಾಡಬೇಕಾಗಿತ್ತು? ಪೌಲನು ಪರಿಚಯದ ಮಾತುಗಳನ್ನು ಹೇಳುತ್ತಾ ಪೌಲನು ತನ್ನ ಅಪೊಸ್ತಲತ್ವದ ಕೆಲಸ ಏನೆಂದು ವಿವರಿಸಿದನು: **ಎಲ್ಲಾ ಅನ್ಯಜನಗಳಲ್ಲಿ ನಂಬಿಕೆಯೆಂಬ ವಿಧೇಯತ್ವ ಉಂಟಾಗುವದಕ್ಕೋಸ್ಕರ.** "ನಂಬಿಕೆಯ ವಿಧೇಯತ್ವ" ಎಂಬುದು ಗ್ರೀಕ್ ವಾಕ್ಯದ ಅಕ್ಷರಶಃ ಅನುವಾದವಾಗಿದೆ. ಈ ಪತ್ರಿಕೆಯಲ್ಲಿ ಪ್ರಥಮವಾಗಿ "ನಂಬಿಕೆ" ಯನ್ನು (*πίστις*, *pistis*) ತಿಳಿಸಿದ್ದು ಇದಾಗಿದೆ, ಇದು ತನ್ನ ಪ್ರಬಂಧವನ್ನು ಅಭಿವೃದ್ಧಿಪಡಿಸುತ್ತಾ ಸಾಗಿದಂತೆ ಪೌಲನು ಉಪಯೋಗಿಸಿದ ಮುಖ್ಯ ಪದವಾಗಿದೆ. ಜನರು ನಂಬಿಕೆ ಆಧಾರದಿಂದ ರಕ್ಷಿಸಲ್ಪಡುತ್ತಾರೆ ಎಂಬದನ್ನು ಆತನು ಒತ್ತಿ ಹೇಳಿದನು. ಹೇಗೂ, ಆತನು ಇಲ್ಲಿ ಸತ್ತ, ನಿರ್ಜೀವ ನಂಬಿಕೆ ಅಲ್ಲ (ನೋಡಿರಿ ಯಾಕೋಬ 2:17, 26), ಆದರೆ ಸಜೀವ ಹಾಗೂ ಕ್ರಿಯಾಶೀಲವಾದ ನಂಬಿಕೆಯ ಬಗ್ಗೆ ಮಾತಾಡುತ್ತಾನೆ. ಅನುವಾದಿಸಲ್ಪಟ್ಟ "ವಿಧೇಯತೆ" (ὑπακοή, *hupakoē*) ಎಂಬ ಪದವು "ಆಲಿಸು" (ἀκούω, *akouō*) ಮತ್ತು ಉಪಸರ್ಗ ಪದವಾದ "ಅಡಿ" (ὑπό, *hupo*) ಎಂಬ ಎರಡು ಪದಗಳ ಸಮ್ಮಿಲನವಾಗಿದೆ. ಇದು ಒಳಪಡುವಿಕೆ ಎಂಬ ಭಾವನೆ ಅಥವಾ ಅರ್ಥವನ್ನು ನೀಡುತ್ತದೆ.[11]

"ನಂಬಿಕೆಯ ವಿಧೇಯತೆ" ಎಂಬ ಪದಸಮುಚ್ಚಯವನ್ನು ಹಲವು ಆವೃತ್ತಿಗಳು ಹೇಗೆ ಅನುವಾದಿಸುತ್ತವೆಂಬದನ್ನು ನೋಡಿರಿ:

"ನಂಬಿಕೆಯಿಂದ ಬರುವ ವಿಧೇಯತೆ" (NIV)
"ವಿಧೇಯತೆಯುಂಟುಮಾಡುವ ನಂಬಿಕೆ" (Phillips)
"ನಂಬಿಕೆ ಮತ್ತು ವಿಧೇಯತೆ" (NEB)

"ನಂಬು ಮತ್ತು ವಿಧೇಯನಾಗು" (NCV)
"ನಂಬಿಗಸ್ಥ ವಿಧೇಯತೆ" (Barclay)

Douglas J. Moo ರವರ ಮಾತುಗಳನ್ನು ನೋಡುವದಾದರೆ: "ನಂಬಿಕೆ, ನೈಜವಾಗಿದ್ದರೆ, ಅದರ ಫಲ ಯಾವಾಗಲೂ ವಿಧೇಯತೆ ಆಗಿರುವದು; ವಿಧೇಯತೆ, ದೇವರನ್ನು ಮೆಚ್ಚಿಸುವಂತದ್ದಾಗಿರಬೇಕೆಂದರೆ, ಅದು ಯಾವಾಗಲೂ ನಂಬಿಕೆಯನ್ನೊಳಗೊಂಡಿರಬೇಕು."[12] ಅದರ ಜೊತೆಗೆ, D. Stuart Briscoe ನಂಬಿಕೆಯ ಅರ್ಥವನ್ನು ವಿಸ್ತಾರವಾಗಿ ತಿಳಿಸುತ್ತಾರೆ:

> ಪೌಲನ ದೃಷ್ಟಿಯಲ್ಲಿ, ನಂಬಿಕೆ ಎಂಬುದು ಕೇವಲ ಬುದ್ಧಿಗೆ ಸಂಬಂದಿಸಿದ್ದಾಗಲಿ ಅಥವಾ ವಿಶ್ವಾಸ ಮನೋಭಾವ ಸಹ ಆಗಿರಲಿಲ್ಲ ಎಂಬದನ್ನು ಗಮನದಲ್ಲಿಟ್ಟುಕೊಳ್ಳುವದು ಪ್ರಾಮುಖ್ಯ. ಆತನ ಬೋಧನೆಯಲ್ಲಿ ನಂಬಿಕೆ ಎಂಬುದು ವಿಧೇಯತೆಯ ಜೀವನಶೈಲಿಯನ್ನು ಒಳಗೊಂಡಿತ್ತು, ಅದ್ದರಿಂದ ಆತನು ಹೋಗುವಲ್ಲೆಲ್ಲಾ ಜನರು ಒಪ್ಪುವಂತ ಸತ್ಯವನ್ನು ಸಾರಿ, ನಂಬುವಂತ ವಾಗ್ದಾನಗಳನ್ನು ಹೇಳಿ ಮತ್ತು ಅವರು ವಿಧೇಯರಾಗಬೇಕೆಂದು ಆಜ್ಞಾಪಿಸುತ್ತಿದ್ದನು.[13]

ಪೌಲನ ಮನಸ್ಸಿನಲ್ಲಿ, ನಿಜ ನಂಬಿಕೆ ಮತ್ತು ನೈಜ ವಿಧೇಯತೆಗಳೆರಡು ಬೇರ್ಪಡಿಸಲಾರದವುಗಳಾಗಿದ್ದವು. ಕೆಲವು ಸಂದರ್ಭಗಳಲ್ಲಿ, ಆತನು ಈ ಎರಡು ಪದಗಳನ್ನು ಪರ್ಯಾಯವಾಗಿ ಉಪಯೋಗಿಸುತ್ತಾನೆ (ನೋಡಿರಿ 10:16; KJV). ರಕ್ಷಣೆ ತರುವ ನಂಬಿಕೆ ಮತ್ತು ದೇವರ-ಅನುಮೋದನೆಯ ವಿಧೇಯತೆ ಇವೆರಡು ಒಂದೆ ನಾಣ್ಯದ ಎರಡು ಮುಖಗಳು. ಅವುಗಳನ್ನು ಬೇರೆ ಬೇರೆಯಾಗಿ ಚರ್ಚಿಸಬಹುದು, ಆದರೆ ಅವೆರಡನ್ನು ಬೇರ್ಪಡಿಸಲು ಸಾಧ್ಯವಿಲ್ಲ.[14]

ಅಂತಿಮವಾಗಿ, ಯೇಸು ಪೌಲನನ್ನು ಅನ್ಯಜನರಿಗೆ ಅಪೊಸ್ತಲನಾಗಿ ನೇಮಿಸಿದನು, ಹೀಗೆ ಅವರು **ಆತನ ನಾಮದ ನಿಮಿತ್ತ** ನಂಬಿಕೆಯುಳ್ಳ ವಿಧೇಯತೆಯನ್ನು ತೋರಿಸುವವರಾಗಬೇಕೆಂದು ಆಗಿತ್ತು. NLT ಯಲ್ಲಿ ಇದನ್ನು "ಆತನ ನಾಮಕ್ಕೆ ಮಹಿಮೆ ತರುವವರಾಗುವಂತೆ" ಎಂದು ಅನುವಾದಿಸಲಾಗಿದೆ. ಅನ್ಯಜನರಿಗೆ ಬೋಧಿಸುವದಕ್ಕೆ ಪೌಲನಿಗೆ ಸಮತಲವಾದ ಕಾರಣವಿತ್ತು: ಆತನು ದೇವರಿಂದ ದೂರವಾಗಿದ್ದ ಮತ್ತು ಕಳೆದು ಹೋಗಿದ್ದ ಜಗತ್ತನ್ನು ಆತನು ಸಂಧಿಸಬೇಕಾಗಿತ್ತು. ಅಲ್ಲದೆ ಆತನಿಗೊಂದು ಮೇಲ್ಮುಖವಾದ ಕಾರಣವೂ ಇತ್ತು: ಆತನು ಮಾಡಿದ್ದೆಲ್ಲವೂ ಪರಲೋಕದಲ್ಲಿರುವ ತನ್ನ ಯಜಮಾನನಿಗೆ ಮಹಿಮೆ ತರುವಂತದ್ದೇ ಆಗಿತ್ತು.

**ವಚನ 6.** ಪೌಲನು ತನ್ನ ವೈಯಕ್ತಿಕ ಪರಿಚಯದ ಮಾತುಗಳ ಮುಕ್ತಾಯಕ್ಕೆ ಬಂದಾಗ, ಆತನು ಸಾಮಾನ್ಯ ಅನ್ಯಜನರಿಂದ (1:5) ರೋಮಾಪುರದಲ್ಲಿದ್ದ ಅನ್ಯಜನರೆಡೆಗೆ ಸಾಗುತ್ತಾನೆ: **ಯೇಸು ಕ್ರಿಸ್ತನವರಾಗುವದಕ್ಕೆ ಕರೆಯಲ್ಪಟ್ಟ ನೀವು ಸಹ ಆ ಅನ್ಯಜನರೊಳಗಿನವರಾಗಿದ್ದರಿಂದ ಕ್ರಿಸ್ತನವರಾಗಿರುವದಕ್ಕಾಗಿ ಕರೆಯಲ್ಪಟ್ಟಿದ್ದೀರಿ.** ಇಲ್ಲಿ "ಕರೆಯಲ್ಪಟ್ಟಿದ್ದೀರಿ" ಎಂಬ ಅನುವಾದಿಸಲ್ಪಟ್ಟ ಗ್ರೀಕ್ ಪದವು (κλητός, *klētos*) ಪೌಲನು ವಚನ 1ರಲ್ಲಿ ಉಪಯೋಗಿಸಿದ ಅದೇ ಪದವಾಗಿದೆ; ಅದು "ದೈವಿಕವಾಗಿ ಕರೆಯಲ್ಪಡುವ"

ಅರ್ಥವನ್ನು ಕೊಡುತ್ತದೆ. ರೋಮಾಪುರದಲ್ಲಿನ ವಿಶ್ವಾಸಿಗಳು ಪೌಲನ ಹಾಗೆ ಪರಲೋಕದಿಂದ ದರ್ಶನ ಹೊಂದಿ ಕರೆಯಲ್ಪಟ್ಟಿರಲಿಲ್ಲ, ಆದರೆ ಅವರು ಸುವಾರ್ತೆಯ ಮೂಲಕ ಕರೆಯಲ್ಪಟ್ಟಿದ್ದರು (ನೋಡಿರಿ 2 ಥೆಸಲೋನಿಕ 2:14). ಅವರು ಪೌಲನಂತೆ ಅಪೊಸ್ತಲರಾಗಿರುವದಕ್ಕೆ ಕರೆಯಲ್ಪಟ್ಟಿರಲಿಲ್ಲ, ಆದರೆ ಅವರು "ಯೇಸು ಕ್ರಿಸ್ತನವರಾಗಿರುವದಕ್ಕೆ" (NRSV) ಕರೆಯಲ್ಪಟ್ಟಿದ್ದರು. ಈ ದೈವಿಕ ಕರೆಯುವಿಕೆ ಅವರಿಗೆ ಗೌರವ ಮತ್ತು ಯೋಗ್ಯತೆಗಳೆರಡನ್ನೂ ಒದಗಿಸಿತ್ತು.

## ರೋಮಾಪುರದಲ್ಲಿರುವ ಪರಿಶುದ್ಧರಿಗೆ ವಂದನೆಗಳು (1:7)

**7ರೋಮಾಪುರದಲ್ಲಿ ದೇವರಿಗೆ ಪ್ರಿಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುವದೇನೆಂದರೆ – ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.**

**ವಚನ 7.** ಪೌಲನು ಈಗ ತಾನು ಯಾರಿಗೆ ಬರೆಯುತ್ತಿದ್ದಾನೋ ಅವರನ್ನುದ್ದೇಶಿಸಿ ಮಾತಾಡಲು ಸಿದ್ಧನಾದನು. ಆತನು ಸುಮ್ಮನೆ "ರೋಮಾಪುರದಲ್ಲಿರುವ ಸಭೆಗೆ (ಅಥವಾ ಸ್ಥಳಿಯ ಸಭೆಗಳಿಗೆ)" ಅಥವಾ "ರೋಮಾಪುರದಲ್ಲಿರುವ ಕ್ರೈಸ್ತರಿಗೆ" ಎಂದಷ್ಟೇ ಹೇಳಿರಬಹುದಿತ್ತು. ಬದಲಾಗಿ, ಆತನು ತನ್ನ ವಂದನಾರ್ಪಣೆಗೆ ಅರ್ಥಪೂರ್ಣ ಸತ್ಯಗಳನ್ನು ಸೇರಿಸಿದನು. ಆತನು ತನ್ನ ಮಾತುಗಳನ್ನು **ರೋಮಾಪುರದಲ್ಲಿ ದೇವರಿಗೆ ಪ್ರಿಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುವದೇನೆಂದರೆ** ಎಂದು ಸಂಭೋದಿಸಿದನು.

ಒಂದು ವಿಶೇಷ ರೀತಿಯಲ್ಲಿ, ಕ್ರೈಸ್ತರು "ದೇವರಿಗೆ ಪ್ರಿಯ" ಜನವಾಗಿದ್ದಾರೆ. ಖಂಡಿತ, ದೇವರು ಎಲ್ಲರನ್ನೂ ಪ್ರೀತಿಸುತ್ತಾನೆ (ಯೋಹಾನ 3:16)—ಆದರೆ ತನ್ನ ಕರೆಗೆ ಓಗೊಟ್ಟವರೆಡೆಗೆ ಆತನು ಒಂದು ಅದ್ವಿತಿಯವಾದ ಪ್ರೀತಿಯನ್ನು ಇಟ್ಟಿದ್ದಾನೆ. ಯೋಹಾನನು ಹೀಗೆ ಬರೆದನು, "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವುದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ" (1 ಯೋಹಾನ 3:1). ಯೇಸುವನ್ನು ಹಿಂಬಾಲಿಸುವವರು "ದೇವರ ಪ್ರೀತಿಯ ಆಪ್ತಜನರೊಂದಿಗೆ ಸೇರಿಸಲ್ಪಟ್ಟವರು."[15]

ಅಷ್ಟುಮಾತ್ರವಲ್ಲದೆ, ಕ್ರೈಸ್ತರು "ದೇವಜನರು" ಎಂದು ಕರೆಯಲ್ಪಟ್ಟಿದ್ದಾರೆ. ಅನುವಾದಿಸಲ್ಪಟ್ಟ "ದೇವಜನರು" (ἅγιος, *hagios*) ಎಂಬ ಪದವು ನಿಜವಾಗಿಯೂ ವಿಶೇಷಣವಾಗಿದ್ದು "ಪರಿಶುದ್ಧರು" ಅಥವಾ "ಪ್ರತ್ಯೇಕಿಸಲ್ಪಟ್ಟವರು" ಎಂಬ ಅರ್ಥವನ್ನು ಕೊಡುತ್ತದೆ. ಮೂಲಭೂತವಾಗಿ ಕೆಲವು ಸಾರಿ ಈ ಪದವು ಒಂದು ನಾಮಪದವಾಗಿ ಉಪಯೋಗಿಸಲ್ಪಟ್ಟಿದೆ, ಅದು "ಪರಿಶುದ್ಧನು" ಅಥವಾ "ದೇವ ಜನ" ಎಂಬದನ್ನು ಸೂಚಿಸುತ್ತದೆ. ಅದಕ್ಕೆ ಸಂಬಂದಿಸಿ ಕ್ರಿಯಾಪದ ರೂಪವು "ಪರಿಶುದ್ಧಗೊಳಿಸು" ಎಂಬ ಅರ್ಥವನ್ನು ಕೊಡುತ್ತದೆ. ಒಬ್ಬನು ರಕ್ಷಣೆ ಹೊಂದಿದಾಗ ಅವನು ದೇವರಿಂದ "ಪ್ರತ್ಯೇಕಿಸಲ್ಪಡುವನು" ("ಶುದ್ಧೀಕರಣಗೊಂಡವನು") (1 ಕೊರಿಂಥ 6:11; ಇಬ್ರಿಯರಿಗೆ 2:11; 13:12). ಅವನು ಬಳಿಕ ಒಂದು "ಶುದ್ಧೀಕರಣಗೊಂಡ" ಜೀವಿತವನ್ನು ನಡಿಸುವದಕ್ಕೆ

ಕರೆಯಲ್ಪಟ್ಟನು (ಇಬ್ರಿಯರಿಗೆ 12:14; ನೋಡಿರಿ ರೋಮಾಪುರ 6:19, 22; 1 ಥೆಸಲೋನಿಕ 4:3). ಹೊಸ ಕ್ರೈಸ್ತನು, ದೇವರ ಸಹಾಯದಿಂದ, ಕ್ರೈಸ್ತನಾಗುವಾಗ ಇರುವ ಸ್ಥಿತಿಯು (ವೈಯಕ್ತಿಕ) ಶುದ್ಧೀಕರಣಗೊಳ್ಳುವಿಕೆ ಮತ್ತು "ಅನುಭವಾತ್ಮಕವಾಗಿ" ಶುದ್ಧೀಕರಣಗೊಳ್ಳುವಿಕೆಯಿಂದ ಹೆಚ್ಚು ದೈವಭಕ್ತನು ಮತ್ತು ಕ್ರಿಸ್ತನಲ್ಲಿ ಹೆಚ್ಚು ಪರಿಪಕ್ವಗೊಳ್ಳುವನು ಎಂದು ಹಲವು ಬರಹಗಾರರು ಶುದ್ಧೀಕರಣದ ಕುರಿತು ಹೇಳಿದರು.

"Saint" (ಪರಿಶುದ್ಧರು-ದೇವಜನರು) ಎಂಬ ಪದವು ಶೋಷಣೆಗೆ ಮತ್ತು ದುರುಪಯೋಗಕ್ಕೆ ಗುರಿಯಾಗಿರುತ್ತದೆ. ಒಂದು ಪ್ರಮುಖ ಧರ್ಮದಲ್ಲಿ, ಇದನ್ನು ಪ್ರಾಥಮಿಕವಾಗಿ ಮರಣದನಂತರ "ಪರಿಶುದ್ಧರೆಂದು" ಘೋಷಿಸಲ್ಪಟ್ಟ ಕೆಲವು ಆಯ್ದವರನ್ನು ಸೂಚಿಸುವದಕ್ಕೆ ಮಾತ್ರವೇ ಉಪಯೋಗಿಸಲ್ಪಟ್ಟಿದೆ. ಲೋಕದಲ್ಲಿ, ಸಾಮಾನ್ಯವಾಗಿ ಪರಿಪೂರ್ಣ ಅಥವಾ ಪರಿಪೂರ್ಣದ ಹತ್ತಿರವಿರುವವರನ್ನು ಸೂಚಿಸುವದಕ್ಕೆ ಉಪಯೋಗಿಸಲಾಗುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಪ್ರತಿಯೊಬ್ಬ ಕ್ರೈಸ್ತನು ಪರಿಶುದ್ಧನಾಗಿದ್ದಾನೆಂದು ಸತ್ಯವೇದವು ಕಲಿಸುತ್ತದೆ. ಉದಾಹರಣೆಗೆ, "ದೇವಜನರು" ಎಂಬುದು 2 ಥೆಸಲೋನಿಕ 1:10 ರಲ್ಲಿ "ನಂಬಿದ ಎಲ್ಲರನ್ನು" ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ. ಪ್ರತಿಯೊಬ್ಬ ಕ್ರೈಸ್ತನು ಪರಿಶುದ್ಧನೆಂಬ ಬಿರುದು ಇಟ್ಟುಕೊಂಡು ಕರೆಸಿಕೊಳ್ಳಬೇಕು ಅಥವಾ ಇತರರನ್ನು ಹಾಗೆ ಮಾಡುವಂತೆ ಪ್ರೋತ್ಸಾಹಿಸಬೇಕೆಂದು ಪೌಲನ ಮಾತಿನ ಅರ್ಥವಲ್ಲ (ನೋಡಿರಿ ಮತ್ತಾಯ 23:8-10). ಕ್ರೈಸ್ತನಾಗಿರುವ ಪ್ರತಿಯೊಬ್ಬನೂ ದೇವರಿಗೆ ವಿಶೇಷವಾದವನಾಗಿದ್ದಾನೆ ಎಂಬದನ್ನು ಪೌಲನು ದೃಢಪಡಿಸುತ್ತಿದ್ದಾನೆ.

ಪೌಲನು ದೀರ್ಘವಾದ ವಾಕ್ಯವನ್ನು ಒಂದು ವಂದನಾರ್ಪಣೆಯೊಂದಿಗೆ 1:1-7 ಮುಕ್ತಾಯಗೊಳಿಸುತ್ತಾನೆ: **ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.** "ಕೃಪೆ" (χάρις, *charis*) ಎಂಬುದು ಪ್ರಮಾಣಿತವಾಗಿ ರೂಢಿಯಲ್ಲಿದ್ದ ಗ್ರೀಕ್ ಶೈಲಿಯ ವಂದನಾರ್ಪಣೆಯಾಗಿತ್ತು, ಅದೇ ವೇಳೆ "ಶಾಂತಿ" (εἰρήνη, *eirēnē*) ಎಂಬುದು ಒಂದು ಸಹಜವಾದ ಯೆಹೂದಿ ವಂದನಾರ್ಪಣೆಯ ವಿಧವಾಗಿತ್ತು (ಅದು ಇಬ್ರಿಯದ שָׁלוֹם, *shalom* ಎಂಬದರ ಗ್ರೀಕ್ ರೂಪವಾಗಿತ್ತು). ಈ ಎರಡು ಪದಗಳ ಸಂಯೋಜನೆಯಿಂದ ಪೌಲನು ಯೆಹೂದ್ಯರು ಮತ್ತು ಅನ್ಯಜನರು ಇಬ್ಬರನ್ನು ಸ್ಪರ್ಶಿಸಲು ಪ್ರಯತ್ನಿಸಿದನೆಂಬುದರ ಸುಳಿವು ನೀಡುತ್ತದೆ. ಆತನು ತನ್ನ ವಾಚಕರಿಗೆ "ಕೃಪೆ" ಮತ್ತು "ಶಾಂತಿ" ಗಳು "ನಮ್ಮ ತಂದೆಯಾದ ದೇವರಿಂದಲೂ ಮತ್ತು ಕರ್ತನಾದ ಯೇಸುವಿನಿಂದಲೂ" ಬರಬೇಕೆಂದು ಹಾರೈಸಿದನು. ಕೃಪೆಯ ಅಂತಿಮ ಮೂಲಾಧಾರವು ದೇವರೇ, ಮತ್ತು ಅದರ ನಂತರ ಬರುವ ಸಮಾಧಾನ, ಸದಾಕಾಲವೂ ಉಳಿಯುವ ಏಕೈಕ ಸಮಾಧಾನವು ಕ್ರಿಸ್ತ ಯೇಸುವಿನಲ್ಲಿ ಮಾತ್ರವೇ ಸಿಕ್ಕುತ್ತದೆ.

## ಬರೆಯುವದಕ್ಕೆ ಕಾರಣ (1:8-15)

ಪ್ರಾರಂಭಿಕ ವಂದನೆಗಳ ಅರ್ಪಣೆಯ ಜೊತೆಗೆ (1:1-7), ರೋಮದಲ್ಲಿರುವವ ರಿಗಾಗಿ ಒಂದು ಕೃತಜ್ಞತಾರ್ಪಣೆ ಸಲ್ಲಿಸಲಾಗುತ್ತದೆ. ಅಂಥ ಕೃತಜ್ಞತಾ ಪ್ರಾರ್ಥನೆಯು ಸಾಮಾನ್ಯವಾಗಿ ಪ್ರಾಚೀನ ಪತ್ರಿಕೆಗಳಲ್ಲಿ ಕೊನೆಯಲ್ಲಿ ಮಾಡಲಾಗುತ್ತಿತ್ತು. ಪೌಲನು ತನ್ನ

ವಾಚಕರಿಗೋಸ್ಕರ ದೇವರಿಗೆ ಕೃತಜ್ಞತೆ ಸಲ್ಲಿಸುತ್ತಾನೆ. ಆತನು ಅವರನ್ನು ಎಷ್ಟು ಕಾತರದಿಂದ ಭೇಟಿಯಾಗುವದಕ್ಕೆ ಮತ್ತು ಇದುವರೆಗೂ ಏಕೆ ಭೇಟಿಕೊಟ್ಟಿಲ್ಲ ಎಂಬದನ್ನು ಅವರಿಗೆ ವಿವರಿಸುವದಕ್ಕಾಗಿ ಕಾಯುತ್ತಿದ್ದಾನೆಂಬದು ಅವರಿಗೆ ಗೊತ್ತಾಗಬೇಕೆಂದು ಬಯಸಿದನು.

## ಕೃತಜ್ಞತಾರ್ಪಣೆ (1:8)

**8ಮೊದಲನೇದು, ನಿಮ್ಮ ನಂಬಿಕೆಯು ಲೋಕದಲ್ಲೆಲ್ಲಾ ಪ್ರಸಿದ್ಧಿಗೆ ಬಂದದ್ದರಿಂದ ನಿಮ್ಮೆಲ್ಲರ ವಿಷಯವಾಗಿ ಯೇಸು ಕ್ರಿಸ್ತನ ಮೂಲಕ ನನ್ನ ದೇವರಿಗೆ ಸ್ತೋತ್ರ ಮಾಡುತ್ತೇನೆ.**

**ವಚನ 8. ಮೊದಲನೇದು, ... ನಿಮ್ಮೆಲ್ಲರ ವಿಷಯವಾಗಿ ಯೇಸು ಕ್ರಿಸ್ತನ ಮೂಲಕ ನನ್ನ ದೇವರಿಗೆ ಸ್ತೋತ್ರ ಮಾಡುತ್ತೇನೆ.** "ಮೊದಲನೇದು" ಎಂಬ ಪದದ ಅರ್ಥವು ಮುಂದೆ "ಎರಡನೆಯದಾಗಿ" ಮತ್ತು "ಮೂರನೆಯದಾಗಿ" ಎಂದು ಬರಲಿದೆ ಎಂದಾಗಿರುವದಿಲ್ಲ. ಬದಲಿಗೆ, ಆತನು ಮೊದಲು ಮಾಡಬೇಕೆಂದು ಬಯಸಿದ್ದು ಅವರಿಗಾಗಿ ಕೃತಜ್ಞತೆಯನ್ನು ಸಲ್ಲಿಸುವದು ಎಂಬದನ್ನು ಸೂಚಿಸುತ್ತದಷ್ಟೇ. ಪೌಲನು ಅನೇಕ ವೇಳೆ ಒಂದು ಪ್ರಾಮಾಣಿಕವಾದ ಪ್ರಶಂಸೆಯೊಂದಿಗೆ ಆರಂಭಿಸುತ್ತಿದ್ದನು (ನೋಡಿರಿ 1 ಕೊರಿಂಥ 1:4-7). ಆತನ ಕೃತಜ್ಞತಾರ್ಪಣೆಯು ತಂದೆಯಾದ "ದೇವರ" ಕಡೆಗೆ ಆಗಿತ್ತು. "ಯೇಸು ಕ್ರಿಸ್ತನ ಮೂಲಕವಾಗಿ" ಎಂಬುದು ಕ್ರಿಸ್ತನ ಮಧ್ಯಸ್ಥಿಕೆಯ ಪಾತ್ರವನ್ನು ಎತ್ತಿ ತೋರಿಸುವದಾಗಿತ್ತು (1 ತಿಮೊಥೆ 2:5; ನೋಡಿರಿ ಎಫೆಸ 5:20; ಕೊಲೊಸ್ಸೆ 3:17; ಇಬ್ರಿಯ 13:15; 1 ಪೇತ್ರ 2:5).

ರೋಮಾಪುರದಲ್ಲಿರುವ ಸಭೆಗಾಗಿ ಆತನು ಕೃತಜ್ಞತೆಗಳನ್ನು ಸಲ್ಲಿಸಿದ್ದರ ವಿಷಯಕ್ಕೆ ಬಂದರೆ, ಪೌಲನು ಅಲ್ಲಿ ಅದರ ಗಾತ್ರ ಅಥವಾ ಅದರ ಸತ್ಕ್ರಿಯೆಗಳ ಬಗ್ಗೆಯಾಗಲಿ ಪ್ರಸ್ತಾಪಿಸುವದಿಲ್ಲ. ಬದಲಾಗಿ, ಆತನು ಸದಸ್ಯರ *ನಂಬಿಕೆಗಾಗಿ* ಕೃತಜ್ಞತೆಯುಳ್ಳವನಾಗಿದ್ದನು: **ನಿಮ್ಮ ನಂಬಿಕೆಯು ಲೋಕದಲ್ಲೆಲ್ಲಾ ಪ್ರಸಿದ್ಧಿಗೆ ಬಂದದ್ದರಿಂದ.** "ಲೋಕದಲ್ಲೆಲ್ಲಾ" ಎಂಬುದು ಬಹುಶಃ "ರೋಮ್ ಸಾಮ್ರಾಜ್ಯದಲ್ಲೆಲ್ಲಾ" ಎಂಬ ಅರ್ಥವಾಗಿರಬಹುದು. ಕ್ರೈಸ್ತರು ಎಲ್ಲಿಯೇ ಆಗಲಿ ಮತ್ತು ಯಾವಾಗಲಾದರೂ ಆಗಲಿ ಕೂಡಿಬಂದ ವೇಳೆಯಲ್ಲೆಲ್ಲಾ ಅವರು ರೋಮಾಪುರದಲ್ಲಿರುವ ಸಭೆಯ ದೃಢನಂಬಿಕೆಯ ನಿಮಿತ್ತ ಸಂತೋಷಿಸಿದರು. "ರೋಮಾಪುರವು-ಅನ್ಯರ ಪುಜಾವಿಧಾನ, ವಿಗ್ರಹಾರಾಧನೆ, ಹಣದಾಸೆ, ಮತ್ತು ಕ್ರೈಸ್ತತ್ವದೆಡೆಗೆ ದ್ವೇಷ ಹೆಚ್ಚಾಗುತ್ತಿದ್ದ ಸ್ಥಳ-ಕ್ರಿಸ್ತನ ಬೆಳಕು ಇಡೀ ಸಾಮ್ರಾಜ್ಯಕ್ಕೆ ಕಾಣಿಸುವಷ್ಟು ಪ್ರಕಾಶಮಾನವಾಗಿ ಬೆಳಗುತ್ತಿತ್ತು."[16]

## ರೋಮನಲ್ಲಿರುವ ಪರಿಶುದ್ಧರನ್ನು ನೋಡಬೇಕೆಂಬ ಹಂಬಲ (1:9-15)

**9ನಾನು ಪ್ರಾರ್ಥನೆಮಾಡುವಾಗೆಲ್ಲಾ ತಪ್ಪದೆ ನಿಮಗೋಸ್ಕರ ವಿಜ್ಞಾಪನೆಮಾಡಿ ಇನ್ನು ಮೇಲೆಯಾದರೂ ನಿಮ್ಮ ಬಳಿಗೆ ಬರುವದಕ್ಕೆ ದೇವರ ಚಿತ್ತದಿಂದ ನನಗೆ ಹೇಗೂ ಅನುಕೂಲವಾಗಬೇಕೆಂದು ಬೇಡಿಕೊಳ್ಳುತ್ತೇನೆ; ಇದಕ್ಕೆ ದೇವರೇ ನನ್ನ ಸಾಕ್ಷಿ; 10ಆತನ ಮಗನ ಸುವಾರ್ತೆಯನ್ನು ಸಾರುತ್ತಾ ಆತನನ್ನೇ ನನ್ನ ಆತ್ಮದಲ್ಲಿ ಆರಾಧಿಸುವವನಾಗಿದ್ದೇನೆ.**

**[11-12]ನನ್ನ ಮುಖಾಂತರವಾಗಿ ನಿಮಗೆ ಪಾರಮಾರ್ಥಿಕ ವರವೇನಾದರೂ ದೊರಕಿ ನೀವು ದೃಢವಾಗುವದಕ್ಕೋಸ್ಕರ ಅಂದರೆ ನಾನು ನಿಮ್ಮ ನಂಬಿಕೆಯಿಂದ ನೀವು ನನ್ನ ನಂಬಿಕೆಯಿಂದ ಸಹಾಯಹೊಂದಿ ಈ ಪ್ರಕಾರ ನಿಮ್ಮೊಂದಿಗೆ ನಾನು ಧೈರ್ಯಗೊಳ್ಳುವದಕ್ಕೋಸ್ಕರ ನಿಮ್ಮನ್ನು ನೋಡಬೇಕೆಂದು ಅಪೇಕ್ಷಿಸುತ್ತೇನೆ. [13]ಸಹೋದರರೇ, ನನ್ನ ಕೆಲಸವು ಇತರ ಜನಗಳಲ್ಲಿ ಸಫಲವಾದಂತೆ ನಿಮ್ಮಲ್ಲಿಯೂ ಸಫಲವಾದೀತೆಂದು ನಿಮ್ಮ ಬಳಿಗೆ ಬರುವದಕ್ಕೆ ಅನೇಕಾವರ್ತಿ ಮನಸ್ಸುಮಾಡಿಕೊಂಡಿದ್ದಾಗ್ಯೂ ಇಂದಿನವರೆಗೂ ಅಡ್ಡಿಯಾಯಿತೆಂದು ನಿಮಗೆ ತಿಳಿದಿರಬೇಕೆಂಬದು ನನ್ನ ಅಪೇಕ್ಷೆ. [14]ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಅದೆ. [15]ಹೀಗಿರುವದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧವಾಗಿದ್ದೇನೆ.**

**ವಚನ 9.** ಪೌಲನು ತನ್ನ ಮತ್ತು ರೋಮಾಪುರದಲ್ಲಿದ್ದ ಕ್ರೈಸ್ತರ ನಡುವೆ ಸೇತುವೆಯನ್ನು ಕಟ್ಟುತ್ತಾ ಸಾಗಿದಂತೆ, ಆತನು ಅವರಿಗಾಗಿ ಎಡಬಿಡದೆ ಸ್ತೋತ್ರ ಮಾಡುವ ಸ್ವಭಾವವನ್ನು ವ್ಯಕ್ತಪಡಿಸುತ್ತಾನೆ: **ತಪ್ಪದೆ ನಿಮಗೋಸ್ಕರ ವಿಜ್ಞಾಪನೆಮಾಡಿ . . . ಬೇಡಿಕೊಳ್ಳುತ್ತೇನೆ; ಇದಕ್ಕೆ ದೇವರೇ ನನ್ನ ಸಾಕ್ಷಿ; ಆತನ ಮಗನ ಸುವಾರ್ತೆಯನ್ನು ಸಾರುತ್ತಾ ಆತನನ್ನೇ ನನ್ನ ಆತ್ಮದಲ್ಲಿ ಆರಾಧಿಸುವವನಾಗಿದ್ದೇನೆ.** ಆತನು ತನ್ನ ವಾಚಕರು ತನಗೆ ಎಷ್ಟು ಪ್ರಾಮುಖ್ಯರೆಂಬದನ್ನು ದೃಢೀಕರಿಸಲು ಬಹಳ ಪೂಜ್ಯನೀಯ ಮಾತುಗಳನ್ನು ಉಪಯೋಗಿಸುತ್ತಾನೆ (". . . ದೇವರೇ ನನ್ನ ಸಾಕ್ಷಿ"). ಅಷ್ಟುಮಾತ್ರವಲ್ಲದೆ, "ಯಾವಾತನನ್ನು ನನ್ನ ಆತ್ಮದಲ್ಲಿ ಆರಾಧಿಸುವವನಾಗಿದ್ದೇನೋ" ಎಂಬದನ್ನು ಸೇರಿಸುವ ಮೂಲಕ ದೇವರ ಕಡೆಗಿರುವ ಆತನ ಭಕ್ತಿಯು ಕೇವಲ ಬಹಿರಂಗದ್ದಲ್ಲ, ಆದರೆ ಅಂತಃರಂಗದ್ದೂ ಸಹ ಆಗಿದೆ ಎಂಬದನ್ನು ಒತ್ತಿ ಹೇಳಿದನು. NCV ಆವೃತ್ತಿಯಲ್ಲಿ ಅದು "ಯಾವಾತನನ್ನು ನನ್ನ ಸಂಪೂರ್ಣ ಹೃದಯದಿಂದ ಸೇವಿಸುತ್ತೇನೋ" ಎಂದಿರುತ್ತದೆ.

ಅಪೊಸ್ತಲನು ರೋಮಾಪುರದಲ್ಲಿನ ಕ್ರೈಸ್ತರಿಗಾಗಿ "ಎಡೆಬಿಡದೆ" ಪ್ರಾರ್ಥನೆಯಲ್ಲಿ ತೊಡಗಿದ್ದನು. Goodspeed ಆವೃತ್ತಿಯಲ್ಲಿ ಹೀಗೆ ಅನುವಾದಿಸಲ್ಪಟ್ಟಿದೆ, "ನಾನು ಪ್ರಾರ್ಥಿಸುವಾಗ ನಿಮ್ಮನ್ನು ನೆನಪು ಮಾಡಿಕೊಳ್ಳಲು ಮರೆಯುವದಿಲ್ಲ." William Barclay ಇಲ್ಲಿ ಉದ್ಭವಿಸುವ ಭಾವನೆಯನ್ನು ಕುರಿತು ಹೀಗೆ ಹೇಳುತ್ತಾರೆ, "ಹತ್ತೊಂಬತ್ತು (ಅಧಿಕ) ವರ್ಷಗಳ ಬಳಿಕವೂ ಈ ವಾಕ್ಯಭಾಗದಲ್ಲಿನ ಬೆಚ್ಚನೆಯ ಮಮತೆಯು ಈಗಲೂ ಅದರ ಮೂಲಕ ಉಸಿರಾಡುತ್ತದೆ."[17] ಪೌಲನು ತಾನು ಸೇವೆಯ ಮಾಡಿ ಶ್ರಮಿಸಿದ ಸ್ಥಳಗಳಿಗೆ ಮಾತ್ರವೇ ತನ್ನ ಪ್ರಾರ್ಥನೆಯನ್ನು ಸಿಮೀತಗೊಳಿಸಿರಲಿಲ್ಲ (ನೋಡಿರಿ ಎಫೆಸ 1:15, 16; ಫಿಲಿಪ್ಪಿ 1:3, 4; 1 ಥೆಸಲೋನಿಕ 1:2, 3). ಆತನು ಎಂದಿಗೂ ಭೇಟಿ ನೀಡಿರದ ಪಟ್ಟಣಗಳಲ್ಲಿನ ಸಭೆಗಳಿಗಾಗಿ ಸಹ ಆತನು ಪ್ರಾರ್ಥಿಸಿದನು—ಉದಾಹರಣೆಗೆ ರೋಮಾಪುರದಲ್ಲಿನ ಸಭೆಗಾಗಿ. ಆತನ ಹೃದಯಪೂರ್ವಕ ಮಾತುಗಳು ಬಹುಶಃ ಆತನ ವಾಚಕರಿಗೆ ಆತನ ಪತ್ರಿಕೆಯನ್ನೂ ಆತನನ್ನೂ ಅಂಗೀಕರಿಸಿಕೊಳ್ಳುವ ಭಾವನೆಯನ್ನು ಉಂಟುಮಾಡಿತ್ತು.

**ವಚನ 10.** ಪೌಲನು ರೋಮಾಪುರದಲ್ಲಿರುವ ಕ್ರೈಸ್ತರಿಗಾಗಿ ಪ್ರಾರ್ಥಿಸಿದಾಗ, ಆತನು **ಯಾವಾಗಲೂ** ಒಂದು ವಿಶೇಷ ನಿರಂತರ ಮನವಿಯನ್ನು ಸೇರಿಸಿದನು: **ಇನ್ನು ಮೇಲೆಯಾದರೂ ನಿಮ್ಮ ಬಳಿಗೆ ಬರುವದಕ್ಕೆ ದೇವರ ಚಿತ್ತದಿಂದ ನನಗೆ ಹೇಗೂ ಅನೂಕೂಲವಾಗಬೇಕೆಂದು ಬೇಡಿಕೊಳ್ಳುತ್ತೇನೆ.** "ನನಗೆ ಹೇಗೂ ಅನೂಕೂಲವಾಗಬೇಕೆಂದು" ಎಂಬದರ ಅನುವಾದಿತ ಪದವು (εὐοδόω, *euodoō*) ಹೊಸ ಒಡಂಬಡಿಕೆಯಲ್ಲಿ ವಿರಳವಾಗಿ ಸಿಕ್ಕುತ್ತದೆ, ಇದು ಎರಡು ಪದಗಳ ಸಮ್ಮಿಲನವಾಗಿದೆ "ಒಳ್ಳೆಯ" (εὖ, *eu*) ಮತ್ತು "ದಾರಿ" ಅಥವಾ "ಪ್ರಯಾಣ" (ὁδός, *hodos*). ಅದರ ಮೂಲ ಅರ್ಥವು "ಒಳ್ಳೆ ದಾರಿಯಲ್ಲಿ ಪ್ರಯಾಣಿಸು" (ಅಥವಾ ಬಹುಶಃ, "ಪ್ರಯಾಣವು ಸಫಲವಾಗಲಿ"; KJV) ಎಂದಾಗಿರುತ್ತಿತ್ತು, ಆದರೆ ಆ ಪದವು ಕ್ರಮೇಣದಲ್ಲಿ ಹೆಚ್ಚು ಸಾಮಾನ್ಯವಾದ "ಯಶಸ್ವಿಯಾಗು" ಅಥವಾ "ಸಫಲವಾಗಲಿ" ಎಂದು ಚಾಲ್ತಿಯಲ್ಲಿ ಬಂತು (ನೋಡಿರಿ 1 ಕೊರಿಂಥ 16:2; 3 ಯೋಹಾನ 2).[18]

ಅಪೊಸ್ತಲನು ಗ್ರಹಿಸಿಕೊಂಡದ್ದೇನೆಂದರೆ ತನ್ನ ಪ್ರಯಾಣವು ರೋಮಾಪುರವನ್ನು ತಲುಪಿ ಯಶಸ್ವಿಯಾಗುವದು "ದೇವರ ಚಿತ್ತದ" ಮೇಲೆ ಆಧಾರವಾಗಿದೆ ಎಂಬದಾಗಿ (15:32; ನೋಡಿರಿ 1 ಕೊರಿಂಥ 4:19; 16:7). ಆತನು ತಾತ್ಕಾಲಿಕವಾಗಿ ಯೋಜನೆ ಹಾಕಿಕೊಂಡನು (15:22-32), ಆದರೆ ಆತನ ಯೋಜನೆಗಳು ದೇವರ ಮಾರ್ಗದರ್ಶನದ ಪ್ರಕಾರವಾಗಿ ಯಾವಾಗಲೂ ಬದಲಾವಣೆಗೆ ಒಳಪಡಬಹುದಾಗಿದ್ದವು. John R. W. Stott ಪ್ರಕಾರ, ಪೌಲನು "ದೇವರ ಮೇಲೆ ತನ್ನ ಚಿತ್ತವನ್ನು ಹೇರುವದಾಗಲಿ ಅಥವಾ ತನಗೆ ದೇವರ ಚಿತ್ತ ಗೊತ್ತಿದೆಯೆಂದು ಹೇಳುವ ಭಾವನೆಯನ್ನಾಗಲಿ ಹೊಂದಿದವನಾಗಿರಲಿಲ್ಲ. ಬದಲಾಗಿ, ಆತನು ದೇವರ ಚಿತ್ತಕ್ಕೆ ತನ್ನ ಚಿತ್ತವನ್ನು ಒಪ್ಪಿಸಿಕೊಟ್ಟನು."[19]

**ವಚನ 11.** ರೋಮಾಪುರಕ್ಕೆ ಹೋಗಬೇಕೆಂಬ ಬಯಕೆಯು ಪೌಲನಲ್ಲಿದ್ದ ಅತ್ಯಂತ ಆಳವಾದ ಆಕಾಂಕ್ಷೆಯಾಗಿತ್ತು. **ನಿಮ್ಮನ್ನು ನೋಡಬೇಕೆಂದು ಅಪೇಕ್ಷಿಸುತ್ತೇನೆ** ಎಂದು ಆತನು ಹೇಳಿದನು. ಪತ್ರಿಕೆಯ ಅಂತ್ಯದ ಹತ್ತಿರದಲ್ಲಿ, ಆತನು ತನ್ನ ವಾಚಕರಿಗೆ ಹೇಳಿದನು, "ನಿಮ್ಮ ಬಳಿಗೆ ಬರಬೇಕೆಂದು ಅನೇಕ ವರುಷಗಳಿಂದ ನನಗೆ ಬಹಳ ಅಭಿಲಾಷೆಯಿತ್ತು" (15:23). "ಹಂಬಲ" ಮತ್ತು "ಅಭಿಲಾಷೆ" ಎಂಬ ಎರಡೂ ಪದಗಳು (ἐπιποθέω, *epipotheō*) ಬಂದ ಮೂಲ ಗ್ರೀಕ್ ಪದದ ಅರ್ಥವು "ಬಹಳವಾಗಿ ಅಭಿಲಾಷಿಸುತ್ತೇನೆ" ಎಂಬದಾಗಿದೆ.[20] MSG ಆವೃತ್ತಿಯಲ್ಲಿ 1:11ನ್ನು ಹೀಗೆ ಅನುವಾದಿಸಲಾಗಿದೆ: "ಈ ಕಾಯುವಿಕೆಯು ಎಷ್ಟು ದೀರ್ಘವಾಗುತ್ತಾ ಸಾಗುತ್ತದೋ ನೋವು ಅಷ್ಟೇ ಆಳವಾಗುತ್ತದೆ."

ಪೌಲನು ಏಕೆ ಅವರನ್ನು ನೋಡಬೇಕೆಂದು ಹಂಬಲಿಸಿದನು? **ನಿಮಗೆ ಪಾರಮಾರ್ಥಿಕ ವರವೇನಾದರೂ** ದೊರಕಲಿ ಎಂದು ಆತನು ತನ್ನ ವಾಚಕರಿಗೆ ಹಂಚಿಕೊಳ್ಳಬೇಕೆಂದಿದ್ದ ಪಾರಮಾರ್ಥಿಕ ದಾನ ಅಥವಾ ವರಗಳ ನಿಖರವಾದ ಸ್ವರೂಪ ಎಂಥದ್ದೆಂಬುದು ಖಚಿತವಾಗಿ ತಿಳಿಯದು. "ಪಾರಮಾರ್ಥಿಕ" ಎಂಬದರ ಗ್ರೀಕ್ ಅನುವಾದ (πνευματικός, *pneumatikos*) ಪದದ ಅರ್ಥವು ಹೀಗಿರಬಲ್ಲದು, "ಪರಿಶುದ್ಧಾತ್ಮನಿಂದ ಅನುಗ್ರಹಿಸಲ್ಪಟ್ಟದ್ದು"[21] ಅಥವಾ ಅದು "ಕ್ರೈಸ್ತರ ಆತ್ಮೀಕ ಜೀವಿತಕ್ಕೆ ಭಕ್ತಿವೃದ್ಧಿ ಮಾಡುವ"[22] ಒಂದು ಸಂಗತಿಯಿರಬಹುದು. "ವರ" (ದಾನ) ಎಂಬ ಗ್ರೀಕ್ ಅನುವಾದಿತ (χάρισμα, *charisma*) ಎಂಬ ಪದವು ಗ್ರೀಕ್ "ಕೃಪೆ" (χάρις, *charis*) ಎಂಬದಕ್ಕೆ ಸಂಬಂಧಿಸಿದ್ದು

ಮತ್ತು ಅದು ವರ ಎಂಬದನ್ನು ಸೂಚಿಸುತ್ತದೆ, ಅಂದರೆ ಸಂಪಾದನೆ ಮಾಡದ ಒಂದು ವಸ್ತು ಎಂಬದಾಗಿರುತ್ತದೆ. ಹೊಸ ಒಡಂಬಡಿಕೆ ಯಲ್ಲಿ ಇದನ್ನು "ಅಂತಿಮವಾಗಿ ದೇವರಿಂದ ಮಾತ್ರವೇ ಬರುವಂಥ ವರ" ವನ್ನು ಸೂಚಿಸುವದಕ್ಕಾಗಿ ಉಪಯೋಗಿಸಲ್ಪಟ್ಟಿದೆ.[23]

ಪೌಲನು ಮನಸ್ಸಿನಲ್ಲಿ ಒಂದು ಅದ್ಭುತವಾದ ವರ-ಹಳೆಯ ವ್ಯಾಖ್ಯಾನಗ್ರಂಥಗಳು ಅದನ್ನು ಒಂದು "ವಿಶೇಷ ವರ" ಅಥವಾ "ಅಸ್ವಭಾವಿಕ ವರ" ಎಂದು ಕರೆದಿರುತ್ತವೆ- ಎಂಬದನ್ನು ಇಟ್ಟುಕೊಂಡಿರಲಿಕ್ಕೆ ಸಾಧ್ಯವಿಲ್ಲ ಎಂದು ಕೆಲವರು ಮನವರಿಕೆಗೊಂಡಿರುತ್ತಾರೆ. ಅವರು ಈ ತೀರ್ಮಾನಕ್ಕೆ ಬರಲು ಕಾರಣವೇನೆಂದರೆ (ಅವರು ಹೇಳುತ್ತಾರೆ) "ಪವಿತ್ರಾತ್ಮನು ಮಾತ್ರವೇ ಒಂದು ಅದ್ಭುತವಾದ ವರವನ್ನು" ಕೊಡಬಲ್ಲನು. ಇವರಿಗೆ ಈ ಸಂಗತಿ ತಿಳಿಯದೆಂದು ತೋರುತ್ತದೆ, ಏನೆಂದರೆ "ಅಪೊಸ್ತಲರು ಕೈಗಳನ್ನಿಡುವ ಮೂಲಕ ಅಸ್ವಭಾವಿಕ ವರಗಳು ಕೊಡಲ್ಪಡುತ್ತವೆ" ಎಂಬುದು.[24] ಅಪೊಸ್ತಲರ ಕೃತ್ಯಗಳು 8:18 ರಲ್ಲಿ, "ಅಪೊಸ್ತಲರು ಕೈಗಳನ್ನಿಡುವದರ ಮೂಲಕವಾಗಿ ಪವಿತ್ರಾತ್ಮ ದಾನವಾಯಿತು." ಕ್ರೈಸ್ತರಿಗೆ ಅದ್ಭುತವಾದ ಆತ್ಮೀಕ ವರಗಳನ್ನು ಕೊಡುವದರಲ್ಲಿ ಪವಿತ್ರಾತ್ಮನು *ಜವಾಬ್ದಾರನಾಗಿದ್ದನು* ಆದರೆ ಆತನು ಅದನ್ನು ಅಪೊಸ್ತಲರ *ಮೂಲಕ* ಮಾಡಿದನು. ಪೌಲನು ತನ್ನ ಕೈಗಳನ್ನು ಎಫೆಸದಲ್ಲಿನ ಕೆಲವು ಶಿಷ್ಯರ ಮೇಲೆ ಇಟ್ಟಾಗ, ಅವರು ಪ್ರವಾದನೆ ಮತ್ತು ಅನ್ಯಭಾಷೆಗಳನ್ನಾಡುವ ವಿಶೇಷ ವರಗಳನ್ನು ಪಡೆದುಕೊಂಡರು (ಅಪೊಸ್ತಲರ ಕೃತ್ಯಗಳು 19:6). "ಭಾಷೆಗಳು" ಎಂಬುದು ಮಾತಾಡುವವನಿಗೆ ಕಲಿತಿರದ ವಿವಿಧ ಭಾಷೆಗಳನ್ನಾಡುವದೆಂದು ಅರ್ಥ ಎಂದು ಅಪೊಸ್ತಲರ ಕೃತ್ಯಗಳು 2 ರಿಂದ ಸ್ಪಷ್ಟವಾಗಿ ತೋರಿಬರುತ್ತದೆ. ರೋಮಾಪುದಲ್ಲಿನ ಕ್ರೈಸ್ತರ ವಿಷಯಕ್ಕೆ ಬಂದರೆ, ಅವರು ಈಗಾಗಲೇ ಹೊಂದಿದ್ದ ವರಗಳಿಗೆ ಇನ್ನಷ್ಟು ಅದ್ಭುತ ವರಗಳನ್ನು ಕೂಡಿಸಿಕೊಡು ವದಕ್ಕೆ ಪೌಲನು ಹಾರೈಸಿದನೆಂಬ ಸಾಧ್ಯತೆಯಿದೆ (ನೋಡಿರಿ 12:6-8).

ಇನ್ನು ಕೆಲವರು, ಪೌಲನು ಒಂದು ಅದ್ಭುತವಾದ ವರದ ಬಗ್ಗೆ *ಮಾತ್ರವೇ* 1:11 ರಲ್ಲಿ ಉಲ್ಲೇಖಿಸಿರಲು ಸಾಧ್ಯ, ಯಾಕೆಂದರೆ *charisma* ಎಂಬ ಪದವು 1 ಕೊರಿಂಥದವರಿಗೆ 12:4 ರಲ್ಲಿ (ಬಹು ವಚನದಲ್ಲಿ) ಉಪಯೋಗಿಸಲ್ಪಟ್ಟಿದೆ, ಈ ವಾಕ್ಯಭಾಗವು ಕೊರಿಂಥದಲ್ಲಿನ ಸಭೆಯೊಳಗೆ ಅದ್ಭುತ ವರಗಳಿರುವ ಬಗ್ಗೆ ಮಾತಾಡುತ್ತದೆ ಎಂದು ವಾದಿಸುತ್ತಾರೆ. ಹೀಗೆ ಹೇಳುವವರು *charisma* ಎಂಬ ಪದದ ಸಾರ್ವತ್ರಿಕ ಸ್ವಭಾವದ ಕುರಿತು ಅರಿಯದವರಾಗಿರಬಹುದು. ಇದು ಹೊಸ ಒಡಂಬಡಿಕೆಯಲ್ಲಿ ವಿವಿಧ ರೀತಿಗಳಲ್ಲಿ ಉಪಯೋಗಿಸಲ್ಪಟ್ಟಿದೆ. ರೋಮಾಪುರ 6:23 ರಲ್ಲಿ, ಇದು ರಕ್ಷಣೆಯ ವರವನ್ನು ಸೂಚಿಸುತ್ತದೆ. 12:6-8 ರಲ್ಲಿ, ಇದು ಅದ್ಭುತವಾದ ಮತ್ತು ಅದ್ಭುತವಲ್ಲದ ಎರಡೂ ವರಗಳನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ. John Murray ಹೀಗೆ ವಾದಿಸುತ್ತಾರೆ, "ಅನಿರ್ದಿಷ್ಟವಾದ ವ್ಯಕ್ತಪಡಿಸುವಿಕೆಯ ಗುಣವನ್ನು ಉಪಯೋಗಿಸಲಾಗಿದೆ, 'ಕೆಲವು ಆತ್ಮೀಕ ವರಗಳು' ಕೇವಲ ಒಂದು ವಿಶೇಷ ಅಥವಾ ಆತ್ಮನ ಅದ್ಭುತವಾದ ವರಕ್ಕೆ ಮಾತ್ರ ಸಿಮೀತಗೊಳಿಸಲು ನಮಗೆ ಅನುಮತಿಸುವದಿಲ್ಲ."[25]

Moo ರವರ ಪ್ರಕಾರ, "ಪೌಲನು ಎಂದಿಗೂ . . . 'ಆತ್ಮೀಕ' ಮತ್ತು 'ವರ' ಎಂಬ ಸಂಯೋಜನೆಯ ಪದವನ್ನು ಈ ಅರ್ಥದೊಂದಿಗೆ [ಒಂದು ಅದ್ಭುತವಾದ ವರ] ಉಪಯೋಗಿಸಲಿಲ್ಲ."[26] John MacArthur, Jr., ತೀರ್ಮಾನಕ್ಕೆ ಬಂದದ್ದೇನೆಂದರೆ, 1:11

ರಲ್ಲಿ, ಪೌಲನು ಮನಸ್ಸಿನಲ್ಲಿ, "ತಾನು ರೋಮಾಪುರದಲ್ಲಿರುವ ಕ್ರೈಸ್ತರಿಗೆ ಬೋಧನೆ, ಉಪದೇಶ, ಪ್ರಬೋಧನೆ, ಆದರಣೆ, ಪ್ರಾರ್ಥನೆ, ಮಾರ್ಗದರ್ಶನ ಮತ್ತು ಶಿಸ್ತುಗೊಳಿಸುವ ಮೂಲಕ ಅವರಿಗೆ ಒಂದು ಆತ್ಮೀಕ ಲಾಭವನ್ನು ತಂದುಕೊಡಬಹುದು" ಎಂಬದಿತ್ತು.[27] ಪೌಲನ ಹೇಳಿಕೆಯು ಉದ್ದೇಶಪೂರ್ವಕವಾಗಿ ಅಸ್ಪಷ್ಟವೆಂದು ತೋರುತ್ತದೆ ಎಂದು Stott ಹೇಳಿದ ವಿಷಯ ಬಹುಶಃ ಸರಿಯಾಗಿದೆ "ಯಾಕೆಂದರೆ ಈ ಹಂತದಲ್ಲಿ ಆತನಿಗೆ ಅವರ ಮುಖ್ಯ ಆತ್ಮೀಕ ಅಗತ್ಯತೆ ಏನಿತ್ತೆಂಬದು ಗೊತ್ತಿರಲಿಲ್ಲ."[28] ಅಪೊಸ್ತಲನು ಅವರಿಗೆ ತನಗೆ ಸಾಧ್ಯವಾದ ಯಾವದಾದರೂ ರೀತಿಯಲ್ಲಿ ಅವರಿಗೆ ಸಹಾಯ ಮಾಡಬೇಕೆಂಬ ಇಚ್ಛೆ ಹೊಂದಿದ್ದನು.

ಪೌಲನು ತನ್ನ ಈ ಭೇಟಿಯ ಅಂತಿಮ ಗುರಿ ಮತ್ತು ಆತನ ವರದಿಂದಾಗುವ ಫಲಿತವು "ದೃಢಗೊಳ್ಳುವದು" ಎಂಬದು ಅವನ ಮನಸ್ಸಿನಲ್ಲಿತ್ತು: **ನೀವು ದೃಢವಾಗುವದ ಕ್ಕೋಸ್ಕರ.** "ದೃಢವಾಗುವದು" ಎಂಬದರ ಗ್ರೀಕ್ ಪದವು (στηρίζω, *stērizō*) "ಗಟ್ಟಿಗೊಳಿಸು, ಸರಿಮಾಡು" ಎಂಬ ಅರ್ಥವಾಗಿದೆ.[29] ಇದು NIV ಯಲ್ಲಿ "ನಿಮ್ಮನ್ನು ಬಲಿಷ್ಠಗೊಳಿಸಲು" ಎಂದಿರುತ್ತದೆ. ಅದೇ ಗ್ರೀಕ್ ಪದವು ಅಪೊಸ್ತಲರ ಕೃತ್ಯಗಳು 18:23 ರಲ್ಲಿ ಉಪಯೋಗಿಸಲ್ಪಟ್ಟಿದೆ, ಅಲ್ಲಿ ಪೌಲನು "ತರುವಾಯ . . . ಹೊರಟು ಕ್ರಮವಾಗಿ ಗಲಾತ್ಯ ಸೀಮೆಯಲ್ಲಿಯೂ ಫ್ರುಗ್ಯದಲ್ಲಿಯೂ ಸಂಚಾರ ಮಾಡುತ್ತಾ ಶಿಷ್ಯರೆಲ್ಲರನ್ನು *ಬಲಪಡಿಸಿದನು*" (ಒತ್ತಿ ಹೇಳಿದ್ದು ನನ್ನದು). ರೋಮಾಪುರದಲ್ಲಿನ ಕ್ರೈಸ್ತರನ್ನು "ತಿರುಗಿ ವಿಗ್ರಹಾರಾಧನೆಗೆ ಕೊಂಡೊಯ್ಯಲು ಬಯಸಿದ ಅನ್ಯಜನರ ವಿರುದ್ಧ ಮತ್ತು ಅವರನ್ನು ಧರ್ಮಶಾಸ್ತ್ರಕ್ಕೆ ಅಧೀನಗೊಳಿಸಲು ಇಚ್ಛಿಸುತ್ತಿದ್ದ ಯೆಹೂದ್ಯರ ವಿರುದ್ಧವಾಗಿ ಬಲಪಡಿಸುವದು ಪೌಲನ ಇಚ್ಛೆಯಾಗಿತ್ತು"[30] ಎಂದು James Macknight ಅಭಿಪ್ರಾಯಪಡುತ್ತಾರೆ.

**ವಚನ 12.** ತಾನು ವಚನ 11 ರಲ್ಲಿ ಮಾಡಿದ ಹೇಳಿಕೆಯು ಅಪಾರ್ಥಮಾಡಿಕೊಳ್ಳಲ್ಪಡಬಹುದು ಎಂಬದು ಪೌಲನಿಗೆ ಗೊತ್ತಿತ್ತು, ರೋಮಾಪುರದಲ್ಲಿನ ಕ್ರೈಸ್ತರಿಗೆ ತಾನೊಬ್ಬನೇ ಪ್ರಯೋಜನವುಂಟು ಮಾಡುವವನಾಗಿಯೂ ರೋಮಾಪುರದ ಲ್ಲಿನ ಕ್ರೈಸ್ತರು ಕೇವಲ ಪ್ರಯೋಜನ ಪಡೆಯುವವರಾಗಿಯೂ ಕಾಣಿಸಿಕೊಳ್ಳಬಹುದು ಎಂಬದು ಗೊತ್ತಿತ್ತು. ಆದುದರಿಂದ, ಆತನು ಶೀಘ್ರವೇ ಅದಕ್ಕೆ ಸೇರಿಸಿ ಹೀಗೆ ಹೇಳುತ್ತಾನೆ, **ನಾನು ನಿಮ್ಮ ನಂಬಿಕೆಯಿಂದ ನೀವು ನನ್ನ ನಂಬಿಕೆಯಿಂದ ಸಹಾಯ ಹೊಂದಿ ಈ ಪ್ರಕಾರ ನಿಮ್ಮೊಂದಿಗೆ ನಾನು ಧೈರ್ಯಗೊಳ್ಳುವದಕ್ಕೋಸ್ಕರ ನಿಮ್ಮನ್ನು ನೋಡಬೇಕೆಂದು ಅಪೇಕ್ಷಿಸುತ್ತೇನೆ.** ಅಂದರೆ ಆತನು ಇಲ್ಲಿ, "ನಾನು ನಿಮ್ಮನ್ನು ನೋಡಬೇಕೆಂದು ಹಂಬಲಿಸುತ್ತೇನೆ ಯಾಕೆಂದರೆ ಅದು ನಿಮಗೆ ಪ್ರಯೋಜನವನ್ನುಂಟು ಮಾಡುವದು ಮಾತ್ರವಲ್ಲ, ನನಗೂ ಸಹಾಯವಾಗುವದು" ಎಂದು ಹೇಳುತ್ತಿದ್ದಾನೆ. ಆತನು ಅನಂತರದಲ್ಲಿ, ಅವರ ಸಂಗಡದಲ್ಲಿ ತಾನು "ಆನಂದವುಳ್ಳವನಾಗಿ ನಿಮ್ಮ ಸಂಗಡ ವಿಶ್ರಾಂತಿ ಹೊಂದುವಂತೆ" ಅಪೇಕ್ಷಿಸುತ್ತೇನೆಂದು ಹೇಳಿದನು (15:32). ಪೌಲನು ಎದುರುನೋಡಿದ ಅನ್ಯೋನ್ಯತೆಯ ಪರಸ್ಪರತೆಯ ಕೋನವನ್ನು ಕುರಿತು Stott ಒತ್ತಿ ಹೇಳುತ್ತಾರೆ,

> [ಪೌಲನಿಗೆ] ಕ್ರೈಸ್ತ ಅನ್ಯೋನ್ಯತೆಯ ಪರಸ್ಪರತೆಯಿಂದಾಗುವ ಆಶೀರ್ವಾದದ ಬಗ್ಗೆ

> ಗೊತ್ತಿತ್ತು ಮತ್ತು, ಆತನೊಬ್ಬ ಅಪೊಸ್ತಲನಾಗಿದ್ದಾಗ್ಯೂ ಆತನು ಗರ್ವವಿಲ್ಲದೆ ದೀನತೆಯಿಂದ ತನಗೆ ಅದರ ಅಗತ್ಯತೆ ಇದೆಯೆಂದು ಒಪ್ಪಿಕೊಳ್ಳುತ್ತಾನೆ. ಇಂದಿನ ಆಧುನಿಕ ಸುವಾರ್ತ ಸೇವಕನು ಅದೇ ಅಂಗೀಕಾರ ಮನಸ್ಸಿನೊಂದಿಗೆ, ಕೊಡಬೇಕೆನ್ನುವದರ ಜೊತೆಗೆ ಪಡೆದುಕೊಳ್ಳಬೇಕೆಂಬ ಕಾತರದೊಂದಿಗೆ, ಪ್ರೋತ್ಸಾಹಿಸುವದಕ್ಕೂ ಪ್ರೋತ್ಸಾಹ ಹೊಂದುವದಕ್ಕೂ ಮನಸ್ಸುಳ್ಳವನಾಗಿ ಬೇರೊಂದು ದೇಶಕ್ಕೆ ಮತ್ತು ಜನರ ಬಳಿಗೆ ಹೋಗುವದಾದರೆ ಅವನು ಸಂತೋಷ ಹೊಂದಿದವನು! ಮತ್ತು ಅಂಥ ದೀನ ಮನಸ್ಸಿನ [ನಾಯಕರನ್ನು] ಹೊಂದಿರುವ ಸಭೆಯು ಸಂತೋಷವಾದದ್ದು![31]

**ವಚನ 13.** ಪೌಲನು ಒಂದು ಆಕ್ಷೇಪವನ್ನು ನಿರೀಕ್ಷಿಸಿದನು. ಯಾರಾದರೊಬ್ಬರು ಆಕ್ಷೇಪವೆತ್ತಿ, "ನೀನು ನಮ್ಮನ್ನು ಭೇಟಿ ಮಾಡಬೇಕೆಂದು ಇಷ್ಟೊಂದು ಹಂಬಲಿಸುವವನಾಗಿದ್ದರೆ, ಯಾಕೆ ಭೇಟಿ ನೀಡಲಿಲ್ಲ? ನೀನು ಅನೇಕ ಸಾರಿ ಮೆಕದೋನ್ಯಕ್ಕೆ ಬಂದು ಹೋಗಿರುವಿ, ಅದು ಅಡ್ರೇಯಾಟಿಕ್ ಸಮುದ್ರ ದಾಟಿ ಇಟಲಿಯ ಮಾರ್ಗದಿಂದ ನಮ್ಮ ಸ್ಥಳಕ್ಕೆ ಬಹಳ ಹತ್ತಿರದ ದಾರಿಯಾಗಿತ್ತಲ್ಲಾ" ಎಂದು ಪ್ರಶ್ನಿಸಬಹುದಿತ್ತು. ಪೌಲನು ಅಂಥವರಿಗೆ ಹೀಗೆ ಹೇಳಿದನು: **ಸಹೋದರರೇ, . . . ನಿಮ್ಮ ಬಳಿಗೆ ಬರುವದಕ್ಕೆ ಅನೇಕಾವರ್ತಿ ಮನಸ್ಸುಮಾಡಿಕೊಂಡಿದ್ದಾಗ್ಯೂ (ಇಂದಿನವರೆಗೂ ಅಡ್ಡಿಯಾಯಿತೆಂದು) ನಿಮಗೆ ತಿಳಿದಿರಬೇಕೆಂಬದು ನನ್ನ ಆಪೇಕ್ಷೆ.** ಅಧ್ಯಾಯ 15 ರಲ್ಲಿ, ರೋಮ್ ಸಾಮ್ರಾಜ್ಯದ ಪೂರ್ವಭಾಗದಲ್ಲಿ ದೇವರು ಆತನಿಗೆ ಕೊಟ್ಟ ಸೇವೆಯು ಅಧಿಕವಾಗಿದ್ದದರಿಂದ ಅವರ ಬಳಿಗೆ ಬರುವದಕ್ಕೆ "ಅಡ್ಡಿಯಾಯಿತು" ಎಂಬದಾಗಿ ಪೌಲನು ವಿವರಿಸುತ್ತಾನೆ:

> . . . ಯೆರೂಸಲೇಮ್ ಮೊದಲುಗೊಂಡು ಇಲ್ಲುರಿಕ ಸೀಮೆಯ ಪರ್ಯಂತರಕ್ಕೂ ಸುತ್ತಿ ಕ್ರಿಸ್ತನ ಸುವಾರ್ತೆಯ ಸಾರೋಣವನ್ನು ನೆರವೇರಿಸಿದ್ದೇನೆ. . . .
>
> *ಈ ಕಾರಣದಿಂದ ನಿಮ್ಮ ಬಳಿಗೆ ಬರುವದಕ್ಕೆ ನನಗೆ ಅನೇಕಾವರ್ತಿ ಅಭ್ಯಂತರವಾಯಿತು.* ಆದರೆ ಇನ್ನು ಮೇಲೆ ಈ ಪ್ರಾಂತ್ಯಗಳಲ್ಲಿ ನನಗೆ ಅನುಕೂಲವಿಲ್ಲದ್ದರಿಂದಲೂ ನಿಮ್ಮ ಬಳಿಗೆ ಬರುವದಕ್ಕೆ ಅನೇಕ ವರುಷಗಳಿಂದ ಅಭಿಲಾಷೆ ಇರುವದರಿಂದಲೂ ನಾನು ಸ್ಪೇನ್ ದೇಶಕ್ಕೆ ಹೋಗುವಾಗ . . . ನಿಮ್ಮ ದರ್ಶನವನ್ನು ಮಾಡಬೇಕೆಂಬ ಅಭಿಪ್ರಾಯ ಉಂಟು . . . (15:19-24; ಒತ್ತಿ ಹೇಳಿದ್ದು ನನ್ನದು).

ಪೌಲನು ತಾನು ಏಕೆ ರೋಮಾಪುರಕ್ಕೆ ಹೋಗಬೇಕೆಂದು ಬಯಸಿದನೆಂಬದಕ್ಕೆ ಇನ್ನೊಂದು ಕಾರಣ ತಿಳಿಸುತ್ತಾನೆ: **ನನ್ನ ಕೆಲಸವು ಇತರ ಜನಗಳಲ್ಲಿ ಸಫಲವಾದಂತೆ ನಿಮ್ಮಲ್ಲಿಯೂ ಸಫಲವಾದೀತೆಂದು.** ಇಲ್ಲಿ "ಫಲ" (καρπός, *karpos*) ಎಂಬ ಪದವನ್ನು "ಆತ್ಮನ ಫಲ" ಎಂಬರ್ಥದಲ್ಲಿ ವ್ಯಾಖ್ಯಾನಿಸುತ್ತಾರೆ (ಗಲಾತ್ಯ 5:22, 23). ಪೌಲನು ಇಲ್ಲಿ ಪುನಃ ಆ ಕ್ರೈಸ್ತರಿಗೆ ಆತ್ಮೀಕವಾಗಿ ಬೆಳೆಯುವದಕ್ಕೆ ಸಹಾಯ ಮಾಡಲಿಚ್ಛಿಸುತ್ತೇನೆಂದು ಹೇಳುತ್ತಿದ್ದಾನೆ ಎಂಬದಾಗಿ ಇವರು ಭಾವಿಸುತ್ತಾರೆ. ಹೇಗೂ, ಪೌಲನು ಇಲ್ಲಿ "ಹೊಸ ಕ್ರೈಸ್ತರು" ಎಂಬರ್ಥದಲ್ಲಿ "ಫಲ" ಎಂಬ ಪದವನ್ನು ಉಪಯೋಗಿಸಿರಲು ಸಾಧ್ಯತೆ ಬಹಳಷ್ಟಿದೆ. ಆತನು "ರೋಮಾಪುರದಲ್ಲಿ ಹೊಸ ಜನರನ್ನು ಕ್ರಿಸ್ತನಿಗಾಗಿ ಗೆಲ್ಲುವ" ನಿರೀಕ್ಷೆಯನ್ನು ಹೊಂದಿದ್ದನು.[32] CEV ಆವೃತ್ತಿಯಲ್ಲಿ ಹೀಗಿದೆ, "ನಾನು ರೋಮಾಪುರದಲ್ಲಿ

ಕ್ರಿಸ್ತನಿಗಾಗಿ ಹಿಂಬಾಲಕರನ್ನು ಗೆದ್ದುಕೊಳ್ಳಲು ಬಯಸಿದ್ದೆನು."

**ವಚನ 14.** ಪೌಲನು ರೋಮಾಪುರಕ್ಕೆ ಹೋಗಲಿಚ್ಚಿಸಿದ್ದಕ್ಕೆ ನೀಡಿದ ಕೊನೆಯ ಕಾರಣವೆಂದರೆ ಆತನಿಗೆ ತೀರಿಸಬೇಕಾದ ಒಂದು ಋಣವಿತ್ತು: **ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಅದೆ.** "ಗ್ರೀಕರು ಮತ್ತು . . . ಅನ್ಯಜನಗಳು" ಮತ್ತು "ಜ್ಞಾನಿಗಳು ಮತ್ತು . . . ಮೂಢರು" ಎಂದು ವರ್ಗಗಳನ್ನು ಹೆಸರಿಸುವ ಮೂಲಕ, ಪೌಲನು ಇಲ್ಲಿ "ನಾನು *ಸರ್ವರಿಗೂ* ಋಣಸ್ಥನಾಗಿದ್ದೇನೆ" ಎಂದು ಹೇಳುತ್ತಿದ್ದಾನೆ. ಅನೇಕ ಸಮಾಜಗಳಲ್ಲಿ "ನಾವು" ಮತ್ತು "ನಾವು-ಅವರಲ್ಲ" (ಅವರು) ಎಂಬದಾಗಿ ವ್ಯತ್ಯಾಸಗೊಳಿಸುವ ಗುರುತು ಪಟ್ಟಿಗಳನ್ನು ಹೊಂದಿರುತ್ತವೆ. ಯೆಹೂದ್ಯರು "ಯೆಹೂದ್ಯರು ಮತ್ತು ಅನ್ಯಜನರು" ಎಂಬ ಪದಗಳನ್ನು ಉಪಯೋಗಿಸುತ್ತಿದ್ದರು. ರೋಮನ್ನರು "ರೋಮಾಪುರದವರು ಮತ್ತು ಅನ್ಯರು" ಎಂದು ಉಪಯೋಗಿಸುತ್ತಿದ್ದರು. ಗ್ರೀಕರಿಗಾದರೋ, ಅದು "ಗ್ರೀಕರು ಮತ್ತು ಅನಾಗರಿಕರು (ಬಾರ್ಬೆರಿಯನ್ನರು)" ಆಗಿತ್ತು.

ಪೌಲನ ದಿನಗಳಲ್ಲಿ, ಗ್ರೀಕರು ಅವರ ಸಂಸ್ಕೃತಿ ಮತ್ತು ಪರಿಷ್ಕರಣೆಗಳ ವಿಷಯವಾಗಿ ವಿಶ್ವವಿಖ್ಯಾತರಾಗಿದ್ದರು. ಅನಾಗರಿಕರು (ಬಾರ್ಬೆರಿಯನ್ನರು) ಅದಕ್ಕೆ ತದ್ವಿರುದ್ದವಾಗಿ, ಅವರ ಅನಾಗರಿಕತೆಯಿಂದ ಕುಖ್ಯಾತರಾಗಿದ್ದರು. "ಬಾರ್ಬೆರಿಯನ್" ಎಂಬುದು ಒಂದು ಗ್ರೀಕ್ ಪದವಾಗಿದ್ದು (Βάρβαρος, *Barbaros*) ಆಂಗ್ಲದಲ್ಲಿ ಅನುವಾದಿಸಲ್ಪಟ್ಟಿದೆ. ಈ ಪದವು ಗ್ರೀಕರ ಕಿವಿಗಳಿಗೆ ಒಂದು ಒರಟು, ಬುದ್ಧಿಯಿಲ್ಲದಿರುವಿಕೆಯನ್ನು ಪ್ರತಿಬಿಂಭಿಸುವ ಅಪರಿಚಿತ ಭಾಷೆಯ ಶಬ್ದವೆನಿಸುತ್ತಿತ್ತು.[33] "ಗ್ರೀಕರಿಗೂ ಮತ್ತು . . . ಅನ್ಯಜನಗಳಿಗೂ," "ಜ್ಞಾನಿಗಳಿಗೂ ಮತ್ತು . . . ಮೂಢರಿಗೂ" ಎಂಬ ಪದವನ್ನು ಉಪಯೋಗಿಸುವ ಮೂಲಕ, ಪೌಲನು ನಾಗರಿಕರಿಗೂ ಅನಾಗರಿಕರಿಗೂ, ವಿದ್ಯಾವಂತರಿಗೂ ಅವಿದ್ಯಾವಂತರಿಗೂ-*ಸರ್ವ* ಜನರಿಗೂ-ತನಗೊಂದು ಋಣವಿದೆ ಎಂಬದಾಗಿ ಒತ್ತಿ ಹೇಳುತ್ತಿದ್ದಾನೆ.

ಅನುವಾದಿಸಲ್ಪಟ್ಟ "ಋಣ" (ὀφειλέτης, *opheiletēs*) ಎಂಬ ಪದವು ಮತ್ತೊಬ್ಬರಿಗೆ ಯಾವುದೋ ಒಂದು ತರಹದ ಸಾಲಗಾರನಾಗಿರುವದನ್ನು ಸೂಚಿಸುತ್ತದೆ.[34] ಅದೊಂದು ತೀರಿಸದೆ ಬಿಟ್ಟಿರುವಂಥ ಸಾಲ ಎಂದು ಅರ್ಥವಾಗಿದೆ; KJVಯು ಇದನ್ನು "ಸಾಲಗಾರ" ಎಂದು ಅನುವಾದಿಸಿರುತ್ತದೆ. AB ಆವೃತ್ತಿಯು "ನಾನು ಋಣಸ್ಥನಾಗಿದ್ದೇನೆ" ಎಂಬದನ್ನು ಇನ್ನಷ್ಟು ವಿಸ್ತರಿಸುತ್ತದೆ, "ನಾನು ತೀರಿಸಬೇಕಾದ ಒಂದು ಋಣ ಮತ್ತು ಮಾಡಬೇಕಾದ ಒಂದು ಕರ್ತವ್ಯ ಹಾಗೂ ತೀರಿಸಬೇಕಾದ ಒಂದು ಸಾಲ ಇರುತ್ತದೆ."

ಪೌಲನು ಹೇಗೆ ಈ ಸಾಲಕ್ಕೆ ಸಿಲುಕಿದ್ದನು? ಪ್ರಾಥಮಿಕವಾಗಿ ಅವನ ಮನಸ್ಸಿನಲ್ಲಿ ಒಬ್ಬನು ಏನೋ ಒಂದು ವಸ್ತುವನ್ನು ಮತ್ತೊಬ್ಬನಿಗೆ ಸಾಲವಾಗಿ ಕೊಟ್ಟಿದ್ದಾನೆ, ಆದ್ದರಿಂದ ಈಗ ಮೊದಲಿನ ವ್ಯಕ್ತಿಯು ಸಾಲವನ್ನು ಹಿಂದಿರುಗಿಸುವ ವರೆಗೂ ಸಾಲಗಾರ ನಾಗಿರುವನು ಎಂಬ ಈ ವಿಧವಾದ ಸಾಲದ ವಿಚಾರವು ಇರಲಿಲ್ಲ. ಬದಲಾಗಿ, ಇವನ ಸಾಲ ಹೇಗಿತ್ತೆಂದರೆ 1ನೇ ವ್ಯಕ್ತಿಯು 3ನೇ ವ್ಯಕ್ತಿಗೆ ಕೊಡುವಂತೆ ಏನನ್ನೋ 2ನೇ ವ್ಯಕ್ತಿಯ ಕೈಯಲ್ಲಿ ಕೊಟ್ಟಿರುವದಕ್ಕೆ ಸಮನಾಗಿ ಪೌಲನ ಸಾಲವಿರುತ್ತದೆ. ಈ ವಿಷಯದಲ್ಲಿ, 3ನೇ

ವ್ಯಕ್ತಿಗೆ ಸೇರಬೇಕಾದದ್ದನ್ನು ತಲುಪಿಸುವ ತನಕ 2ನೇ ವ್ಯಕ್ತಿಯು "ಸಾಲದಲ್ಲಿ" ರುವವನಾಗಿದ್ದಾನೆ. ಉದಾಹರಣೆಗೆ, ಒಬ್ಬನು ನನಗೆ ಮತ್ತೊಬ್ಬನಿಗೆ ತಲುಪಿಸುವಂತೆ ಹೇಳಿ ನನ್ನ ಕೈಯಲ್ಲಿ ಒಂದಿಷ್ಟು ಹಣವನ್ನು ಕೊಟ್ಟರೆ, ನಾನು ಆ ಹಣವನ್ನು ನನಗಾಗಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ನಾನು ಆ ಹಣವನ್ನು ಆ ವ್ಯಕ್ತಿಗೆ ಕೊಡುವದಕ್ಕೆ-ನೈತಿಕವಾಗಿ, ನ್ಯಾಯವಾಗಿ ಮತ್ತು ಕಾನೂನಾತ್ಮಕವಾಗಿ-ಋಣಸ್ಥನಾಗಿರುತ್ತೇನೆ.

ಪೌಲನು ಒಂದು ವೇಳೆ ತನ್ನ ಗತಕಾಲವನ್ನು ಪರಿಗಣಿಸಿದರೆ, ಆತನು ಅನೇಕ ಋಣಗಳ ಬಗ್ಗೆ ಯೋಚಿಸಬಹುದಿತ್ತು. ದೇವರ ಅನುಗ್ರಹಗಳಲ್ಲಿ, ಆತನು ಒಂದು ಯೆಹೂದಿ ಪಾರಂಪರ್ಯ ಹೊಂದಿದ್ದನು, ಒಂದು ಗ್ರೀಕ್ ಶಿಕ್ಷಣ, ಮತ್ತು ರೋಮಾಪುರದ ನಾಗರಿಕ ಹಕ್ಕನ್ನು ಹೊಂದಿದ್ದನು. ಎಲ್ಲಕ್ಕಿಂತ ಮೇಲಾಗಿ ಆತನು ಕರ್ತನಿಗೆ ತಾನು ಎಷ್ಟೊಂದು ಋಣಸ್ಥನಾಗಿದ್ದಾನೆಂಬದನ್ನು ಗುರುತಿಸಿಕೊಂಡನು. ಪೌಲನ ಋಣಗಾರಿಕೆಯನ್ನು ತಿಳಿಯಪಡಿಸಲು ರೋಮಾಪುರ 5 ರಲ್ಲಿನ ಮಾತುಗಳನ್ನು ಉಪಯೋಗಿಸಬಹುದು:

> ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು. ನೀತಿ ವಂತನಿಗೋಸ್ಕರ ಯಾರಾದರೂ ಪ್ರಾಣ ಕೊಡುವದು ಅಪರೂಪ, ಉಪಕಾರಿಗೋಸ್ಕರ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿ ದರೂ ಮಾಡಾನು. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಡಿಸಿದ್ದಾನೆ. ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ ನಿಶ್ಚಯವಲ್ಲವೇ. ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವದು ಮತ್ತೂ ನಿಶ್ಚಯವಲ್ಲವೇ (ನೋಡಿರಿ 5:6-10).

ಎಲ್ಲಕ್ಕಿಂತ ಮೇಲಾಗಿ, ಪೌಲನ ಮೇಲೆ ಪ್ರಭಾವ ಬೀರಿದ ಅದ್ಭುತವಾದ ಸಂಗತಿಯೇನೆಂದರೆ, ಯೇಸು ಆತನನ್ನು ರಕ್ಷಿಸಿದ್ದು ಮಾತ್ರವಲ್ಲದೆ ಅವನಿಗೆ ರಕ್ಷಿಸುವದಕ್ಕೆ ದೇವರ ಶಕ್ತಿಯಾಗಿರುವ ಸುವಾರ್ತೆಯ ಸಾರೋಣವನ್ನು ಒಪ್ಪಿಸಿದ್ದನು (1:16). ಸುವಾರ್ತೆಯು ಸಾರಲ್ಪಟ್ಟು ಇತರರು ಕರ್ತನ ಬಳಿಗೆ ಬಂದು ಆತನಂತೆಯೇ ಆಶೀರ್ವಾದಗಳನ್ನು ಪಡೆಯಬೇಕೆಂದು ಕ್ರಿಸ್ತನು ಅವನಿಗೆ ಸುವಾರ್ತೆಯನ್ನು ಕೊಟ್ಟಿದ್ದನು.

ಕ್ರಿಸ್ತನು ಪೌಲನ ಆತ್ಮವನ್ನು ರಕ್ಷಿಸಿ ಅವನಿಗೆ ಅಪೊಸ್ತಲತ್ವವನ್ನು ಅನುಗ್ರಹಿಸಿದ್ದರಿಂದ, ಪ್ರತಿಯಾಗಿ ಪೌಲನಿಗೆ, ಕಳೆದು ಹೋಗಿರುವವರಿಗೆ ಮತ್ತು "ಸುವಾರ್ತೆ-ಇಲ್ಲದ" ಜಗತ್ತಿಗೆ ಸುವಾರ್ತೆಯನ್ನು ಸಾರುವ ಋಣವಿತ್ತು.

ಈ ಋಣವು ಪೌಲನ ಜೀವಿತದ ಬಹು ಮುಖ್ಯವಾದ ಸ್ಫೂರ್ತಿಯಾಗಿತ್ತು. ಅದು ಆತನ ಜೀವಿತದ ಗುರಿಯಾಯಿತು, ಅವನ ಜೀವಿಸುವದಕ್ಕೆ ಮುಖ್ಯ ಕಾರಣವಾಯಿತು. ಆತನು ಕೊರಿಂಥದವರಿಗೆ ಬರೆದನು: "ನಾನು ಸುವಾರ್ತೆಯನ್ನು ಸಾರಿದರೂ ಹೊಗಳಿಕೊಳ್ಳು ವದಕ್ಕೆ ನನಗೇನೂ ಆಸ್ಪದವಿಲ್ಲ; ಸಾರಲೇಬೇಕೆಂಬ ನಿರ್ಬಂಧ

ನನಗುಂಟು. ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ . . . ಮನೆ ವಾರ್ತೆಯು ನನ್ನ ವಶಕ್ಕೆ ಕೊಡಲ್ಪಟ್ಟಿದೆ" (1 ಕೊರಿಂಥ 9:16, 17).

ಈ ಮಹಾ ಅಪೊಸ್ತಲನಿಗೆ ತಾನು ಎಲ್ಲಾ ಜನರಿಗೆ, ಅವರು ಯಾವ ದೇಶಕ್ಕೆ ಸೇರಿದ್ದರೂ-ಯಾವದೇ ಸಮಾಜಿಕ ಸ್ಥಿತಿಯಿರಲಿ, ಅವರ ಆರ್ಥಿಕ ಸ್ಥಿತಿ, ವಿದ್ಯಾಭ್ಯಾಸದಮಟ್ಟ, ಜನಾಂಗ, ವಯಸ್ಸು ಅಥವಾ ಹೆಣ್ಣಿರಲಿ, ಗಂಡಿರಲಿ-ಅವರಿಗೆ ತಾನು ಋಣಸ್ಥನಾಗಿದ್ದೇನೆಂಬದು ಬಹಳ ಆಳವಾಗಿ ಮನವರಿಕೆಯಿತ್ತು. ಆತನು ಅರಸರಿಗೂ ರಾಜಪಾಲರಿಗೂ ಬೋಧಿಸಿದನು (ಅಪೊಸ್ತಲರ ಕೃತ್ಯಗಳು 24-26), ಆದರೆ ಆತನು "ದೀನರಿಗೆ" ಸಹ ಬೋಧಿಸಿದನು (12:16; ನೋಡಿರಿ 1 ಕೊರಿಂಥ 1:18-31). ಆತನು "ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ [ಆತನು ಒಂದು ವೇಳೆ] ಅಂಥಂಥವನಾಗಿದ್ದೇನೆ" (1 ಕೊರಿಂಥ 9:22).

**ವಚನ 15.** ಪೌಲನು ಕೃತಜ್ಞಾರ್ಪಣೆಯನ್ನು ಈ ಮಾತುಗಳೊಂದಿಗೆ ಮುಗಿಸುತ್ತಾನೆ (1:8-15): **ಹೀಗಿರುವದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧವಾಗಿದ್ದೇನೆ.** "ಹೀಗಿರುವದರಿಂದ" ಎಂಬ ಪದವು ಪೌಲನು ಮುಂಚೆ ಹೇಳಿದ್ದ ಸಂಗತಿಗಳನ್ನು ಪ್ರತಿಬಿಂಭಿಸುತ್ತದೆ. NIV ಯಲ್ಲಿ ಹೀಗಿದೆ, "*ಅದ್ದರಿಂದಲೇ* ನಾನು ಸಾರುವದಕ್ಕೆ ಅಷ್ಟೊಂದು ಹಂಬಲಿಸುತ್ತೇನೆ" (ಒತ್ತಿ ಹೇಳಿದ್ದು ನನ್ನದು). ಅನುವಾದಿಸಲ್ಪಟ್ಟ ಗ್ರೀಕ್ ಪದವು (πρόθυμος, *prothumos*) ಇಚ್ಛೆಯನ್ನು ಸೂಚಿಸುತ್ತದೆ.[35] Briscoe ಇದನ್ನು ಹೀಗೆ ಬಣ್ಣಿಸುತ್ತಾರೆ:

> ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಬರೆಯುವ ವೇಳೆಯಲ್ಲಿ, ಪೌಲನು ಹೆಚ್ಚುಕಡಿಮೆ ಮೂವತ್ತು ವರ್ಷಗಳ ಕಾಲ ಶಕ್ತಿಮೀರಿ ಹೋಗುವಷ್ಟು ಎಡೆಬಿಡದೆ ಸೇವೆಯಲ್ಲಿ ತೊಡಗಿಸಿಕೊಂಡಿದ್ದನು. ಆತನು ಸಾಕಷ್ಟು ಶ್ರಮೆಗಳನ್ನು ಅನುಭವಿಸಿದ್ದನು ಮತ್ತು ಬಹಳ ವೇದನೆ, ಮಾನಸಿಕ ನೋವುಗಳನ್ನು, ಜನರಿಂದ ತಿರಸ್ಕಾರಗಳನ್ನೆಲ್ಲಾ ಅನುಭವಿಸಿದ್ದನು . . . ಹೀಗಿದ್ದರೂ ಆತನು ಯಾವ ಕಾರಣಕ್ಕೂ ಸ್ವಲ್ಪವೂ ಉತ್ಸಾಹವನ್ನು ಕಳಕೊಂಡಿರಲಿಲ್ಲ.[36]

ಪೌಲನ ಕಾಲದಲ್ಲಿ ರೋಮಾಪುರಕ್ಕೆ ಹೋಗಬೇಕೆಂದು ಬಯಸಿದ್ದವರಲ್ಲಿ ಆತನೊಬ್ಬನೇ ಆಗಿರಲಿಲ್ಲ. ಸಾಮ್ರಾಜ್ಯದ ಹೃದಯ ಭಾಗಕ್ಕೆ ಭೇಟಿಕೊಡಬೇಕೆಂಬುದು ಅನೇಕ ಪ್ರಜೆಗಳ ಕನಸಾಗಿತ್ತು. ವ್ಯತ್ಯಾಸವೇನೆಂದರೆ ಬೇರೆಯವರು ಪ್ರವಾಸಿಗಳಾಗಿ ಹೋಗಿ ಬರಲು ಬಯಸಿದರು ಆದರೆ ಪೌಲನು ಅಲ್ಲಿಗೆ ಒಬ್ಬ ದೇವರ ಸಂದೇಶಕನಾಗಿ ಹೋಗಬೇಕೆಂದು ಹಂಬಲಿಸಿದನು.[37] ಆತ್ಮಗಳನ್ನು ರಕ್ಷಿಸುವದು ಪೌಲನ ಬೋಧನೆಯ ಪ್ರಾಥಮಿಕ ಗುರಿಯಾಗಿತ್ತು. "ಸುವಾರ್ತೆ ಸಾರು" ಎಂಬದರ ಅನುವಾದಿತ ಗ್ರೀಕ್ ಪದ (εὐαγγελίζω, *euangelizō*) ದಿಂದಲೇ "Evangelize-ಸುವಾರ್ತೆ ಸಾರು" ಎಂಬುದು ಬಂದಿರುತ್ತದೆ; ಪೌಲನು ರೋಮಾಪುರಕ್ಕೆ ಹೋಗಲು ಸುವಾರ್ತಾ ಸೇವೆಯ ಉದ್ದೇಶ ಹೊಂದಿದ್ದನು. ಆತನು ರೋಮನ್ ಸಾಮ್ರಾಜ್ಯದ ಪೂರ್ವಭಾಗದ ಪ್ರದೇಶಗಳಲ್ಲೆಲ್ಲಾ ಆತ್ಮಗಳ ಸುಗ್ಗಿಯನ್ನು ಕಾಣುವಂತೆ ಆಶೀರ್ವದಿಸಲ್ಪಟ್ಟಿದ್ದನು; ಈಗ ಆತನು ಅದೇ

ರೀತಿಯ ಫಲವನ್ನು ಸ್ವತಃ ರೋಮಾಪುರದಲ್ಲಿಯೇ ಕಾಣಬೇಕೆಂದು ಅಪೇಕ್ಷಿಸಿದನು.

## ಪ್ರಬಂಧ ಹೇಳಿಕೆ: ಸುವಾರ್ತೆಯು ಯೆಹೂದ್ಯರನ್ನೂ ಅನ್ಯಜನರನ್ನೂ ರಕ್ಷಿಸುವದು (1:16, 17)

ರೋಮಾಪುರ 1:16, 17 ವಚನಗಳು ಪೌಲನ ಪರಿಚಯ ಭಾಗದ ಅಂತಿಮ ವಿಭಾಗವನ್ನೊಳಗೊಂಡಿದೆ. ಆ ಕಾಲದಲ್ಲಿ ಪತ್ರ ವ್ಯವಹಾರಕ್ಕೆ ಉಪಯೋಗಿಸಲಾಗುತ್ತಿದ್ದ ವಿಧಾನವನ್ನೆ ಅನುಸರಿಸುತ್ತಾ, ಪತ್ರವು (1) ಲೇಖಕನ ಹೆಸರಿನೊಂದಿಗೆ ಪ್ರಾರಂಭವಾಯಿತು (1:1), ನಂತರ (2) ಸ್ವೀಕರಿಸುವವರ ಸ್ಥಾನ (1:7a), (3) ಒಂದು ವಂದನಾರ್ಪಣೆ (1:7b), ಮತ್ತು (4) ಒಂದು ಕೃತಜ್ಞಾರ್ಪಣೆಯ ಸಲ್ಲಿಸುವಿಕೆ (1:8). ಪೌಲನು ತನ್ನ ಪತ್ರಿಕೆಯ ದೇಹಭಾಗವನ್ನು ಪ್ರಾರಂಭಿಸುವ ಮುಂಚೆ, ಇನ್ನೊಂದು ಕಾರ್ಯವನ್ನು ಮಾಡುವದಕ್ಕಿದ್ದನು: ಒಂದು ಪ್ರಬಂಧ ಹೇಳಿಕೆಯನ್ನು ಬರೆಯುವದು.

**16ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ. 17ಹೇಗಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ.**

**ವಚನ 16.** ಈ ಪ್ರಬಂಧ ಹೇಳಿಕೆಯು ಪತ್ರಿಕೆಯ ಆರಂಭ ಮತ್ತು ಮುಖ್ಯಭಾಗದ ನಡುವೆ ಒಂದು ಸೇತುವೆಯಂತಿರುತ್ತದೆ. ಆರಂಭದ ಕುರಿತಾಗಿ ನೋಡುವದಾದರೆ, ಗ್ರೀಕ್.ನ ಅನುವಾದಿತ "**for**" (γάρ, *gar*) ಎಂಬ ಪದವು 16ನೇ ವಚನವನ್ನು ಹಿಂದಿನ ವಚನದೊಂದಿಗೆ ಬೇಸೆಯುತ್ತದೆ. ಪೌಲನು ತನ್ನ ವಾಚಕರಿಗೆ ತಾನು ರೋಮಾಪುರಕ್ಕೆ ಹೋಗಬೇಕೆಂದು ಬಯಸಿದನೆಂಬುದಾಗಿ ಈ ಮುಂಚೆ ಹೇಳಿದ್ದನು; ಈಗ ತಾನು *ಏಕೆ* ಅಲ್ಲಿ ಸುವಾರ್ತೆ ಸಾರುವದು ಪ್ರಾಮುಖ್ಯವೆಂಬುದರ ಕಾರಣವನ್ನು ವಿವರಿಸುತ್ತಾನೆ. ಪತ್ರಿಕೆಯ ಮುಖ್ಯಭಾಗದ ವಿಷಯವಾಗಿ ಹೇಳುವದಾದರೆ, ಈ ವಚನಗಳು ಪೌಲನು ಮುಂದೆ ಹೇಳಲಿಕ್ಕಿರುವದೆಲ್ಲಕ್ಕೂ ಒಂದು ವೇದಿಕೆಯನ್ನು ಹಾಕಿಕೊಡುತ್ತದೆ.

ವಚನ 14, 15 ಮತ್ತು 16 ಮೂರು "ನಾನು" ಹೇಳಿಕೆಗಳನ್ನು ಮುಂದಿಡುತ್ತವೆ. ವಚನ 14 ರಲ್ಲಿ ಪೌಲನು ಹೇಳಿದನು, "ನಾನು ಋಣಸ್ಥನಾಗಿದ್ದೇನೆ." ವಚನ 15 ರಲ್ಲಿ ಆತನು ಹೇಳಿದನು, "ನಾನು ಹಂಬಲಿಸುತ್ತೇನೆ." ಈಗ, ವಚನ 16 ರಲ್ಲಿ, ಆತನು ಹೇಳುತ್ತಾನೆ, **ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ.** ಕ್ರೈಸ್ತರು ಶಿಲುಬೆಗೆ ಹಾಕಲ್ಪಟ್ಟಿದ್ದ ಒಬ್ಬ ವ್ಯಕ್ತಿಯನ್ನು ಆರಾಧಿಸುತ್ತಾರೆಂಬ ಕಾರಣಕ್ಕಾಗಿ ಅವರನ್ನು ಹಾಸ್ಯಮಾಡಲಾಗುತ್ತಿತ್ತು. ತಾನು ಸುವಾರ್ತೆಯಿಂದ ಸಂಧಿಸುವದಕ್ಕೆ ಪ್ರಯತ್ನಿಸಿದ ಅನೇಕರಿಗೆ ಶಿಲುಬೆಯ ವಿಷಯ ಅರ್ಥವಾಗಲಿಲ್ಲವಲ್ಲಾ ಎಂದು ದುಃಖಪಟ್ಟನು. ಆತನು ಹೀಗೆ ಬರೆದನು, "ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ. ಇಂಥ ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ ವಿಘ್ನವೂ ಅನ್ಯ ಜನರಿಗೆ ಹುಚ್ಚು ಮಾತೂ ಆಗಿದೆ" (1 ಕೊರಿಂಥ 1:23).

ಅನ್ಯಜನರು ಕ್ರಿಸ್ತನನ್ನು ಈ ರೀತಿಯಾಗಿ ತಿರಸ್ಕರಿಸಿದ್ದನ್ನು Everett Ferguson ಹೀಗೆ ದೃಷ್ಟಾಂತಗೊಳಿಸುತ್ತಾರೆ:

> ಕ್ರೈಸ್ತತ್ವದ ಕುರಿತ ಹೆಚ್ಚು ಪರಿಚಿತ ಕುಚೋದ್ಯವೆಂದರೆ . . . ರೋಮಾಪುರದಲ್ಲಿನ ಬೆಟ್ಟದ ಬೈಲು ಪ್ರದೇಶದ ಒಂದು ಸಿಬ್ಬಂದಿಕೊಠಡಿಯಲ್ಲಿ ಒಂದು ಕಲ್ಲಿನ ಮೇಲಿರುವ ಗೀಚು ಬರಹ. ಶಿಲುಬೆಯ ಮೇಲೆ ಕತ್ತೆಯ ಮುಖವುಳ್ಳ ಒಬ್ಬ ವ್ಯಕ್ತಿಯು ತೂಗುತ್ತಿರುವ ಚಿತ್ರ. ಹತ್ತಿರದಲ್ಲಿ ಒಬ್ಬ ಮನುಷ್ಯನು ಆರಾಧಿಸುವ ಭಂಗಿಯಲ್ಲಿ ಕೈಗಳನ್ನೆತ್ತಿ ನಿಂತಿದ್ದಾನೆ, ಮತ್ತು ಒಂದು ಬರಹ ಹೀಗಿದೆ, "Alexamenos ತನ್ನ ದೇವರನ್ನು ಆರಾಧಿಸುತ್ತಾನೆ." ಯೆಹೂದ್ಯರು ಒಂದು ಕತ್ತೆಯನ್ನು ಆರಾಧಿಸುತ್ತಾರೆಂದು ಆರೋಪಿಸಲ್ಪಟ್ಟಿದ್ದರು; ಈ ಸುಳ್ಳು ಆಪಾದನೆಯನ್ನು [ಸುಳ್ಳು ಆರೋಪ] ಇಲ್ಲಿ ಯೇಸುವಿನ ಮೇಲೆ ಹೊರಿಸಲಾಗಿತ್ತು. ಈ ಚಿತ್ರವು ಈಗ ಕ್ರೈಸ್ತರಿಗೆ ಅಸಹ್ಯಕರವಾಗಿರುತ್ತದೆ, ಆದರೆ ಶಿಲುಬೆಗೆ ಹಾಕಲ್ಪಟ್ಟ ಕರ್ತನ ಬಗ್ಗೆ ಅನ್ಯಜನರ ಯೋಚನೆ ಏನಾಗಿತ್ತೆಂಬುದನ್ನು ಇದು ಬಲವಾಗಿ ತೋರಿಸಿಕೊಡುತ್ತದೆ.[38]

ಈ ರೀತಿಯ ಆರೋಪವು ಕೆಲವು ಕ್ರೈಸ್ತರಿಗೆ ಅವಮಾನದಿಂದ ತಲೆತಗ್ಗಿಸುವಂತೆ ಮಾಡಿರಬಹುದೇನೋ ಆದರೆ ಪೌಲನಿಗೆ ಹಾಗೆ ಇರಲಿಲ್ಲ. ಆತನು ಧೈರ್ಯವಾಗಿ "ಸುವಾರ್ತೆ" ಯನ್ನು-ಶಿಲುಬೆಯ ಕಥೆಯನ್ನು-ಎಲ್ಲಾ ಕಡೆಗಳಲ್ಲಿ ಸಾರಿದನು.

ಈ ಮುಂಚೆ ಹೇಳಿದ ಹಾಗೆ, "ಸುವಾರ್ತೆ" ಎಂಬುದರ ಗ್ರೀಕ್ ಪದವು (*euangelion*) "ಶುಭವಾರ್ತೆ" ಅಥವಾ "ಸಂತೋಷದ ಸುದ್ದಿಗಳು" ಎಂದು ಅರ್ಥವಾಗಿದೆ (1:1ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). ವರ್ಷಗಳಿಂದಲೂ, *euangelion* ಎಂಬ ಪದವು ವಿವಿಧ ರೀತಿಗಳಲ್ಲಿ ಉಪಯೋಗಿಸಲ್ಪಟ್ಟಿತ್ತು,[39] ಆದರೆ ಪೌಲನ ಕಾಲದ ವೇಳೆಗೆ, ಅದಕ್ಕೆ "ಶುಭವಾರ್ತೆ" ಎಂಬ ಸಾಮಾನ್ಯ ಅರ್ಥವಿತ್ತು. ಅದು ಅನುದಿನದ ಜೀವಿತದಲ್ಲಿ ಯಾವದಾದರೂ ಒಳ್ಳೇ ಸುದ್ಧಿಯನ್ನು ಸೂಚಿಸುವದಕ್ಕಾಗಿ ಉಪಯೋಗಿಸಲ್ಪಡುತ್ತಿತ್ತು, ಆದರೆ ಹೊಸ ಒಡಂಬಡಿಕೆಯಲ್ಲಿ, ಅದು ಪ್ರತ್ಯೇಕವಾಗಿ ದೇವರಿಂದ ಬಂದ ಸುವಾರ್ತೆಯನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ. ನಾಲ್ಕು ಸುವಾರ್ತೆಗಳಲ್ಲಿ ಮೆಸ್ಸೀಯನ ಬರೋಣವನ್ನು "ಸುವಾರ್ತೆ" ಅಥವಾ "ಶುಭಸಂದೇಶ" ಎಂದು ಕರೆಯಲಾಗಿದೆ (ಮಾರ್ಕ 1:1). ಯೇಸು ಮತ್ತು ಇತರರು "ರಾಜ್ಯದ ಸುವಾರ್ತೆಯನ್ನು ಸಾರಿದರು" (ಮತ್ತಾಯ 4:23; 9:35): ಮೆಸ್ಸೀಯನು ತನ್ನ ರಾಜ್ಯವನ್ನು (ಸಭೆ) ಸ್ಥಾಪಿಸುವದಕ್ಕಿದ್ದನು ಎಂಬ ಶುಭವಾರ್ತೆ. ಜನರಿಗೆ ಅವರ ಸಮಸ್ಯೆಗಳ ಕುರಿತಾಗಿ ಒಂದು "ಶುಭವಾರ್ತೆ" ಯಿರುತ್ತದೆ ಎಂದು ಹೇಳಲಾಯಿತು (ನೋಡಿರಿ ಲೂಕ 4:18).

ಪತ್ರಿಕೆಗಳಲ್ಲಿ, "ಸುವಾರ್ತೆಯು" ನಮ್ಮ ಪಾಪಗಳಿಗಾಗಿ ಕ್ರಿಸ್ತನು ಸತ್ತನು ಎಂಬದು ಶುಭಸಂದೇಶ ಆಗಿತ್ತು. Robert Mounce ಅದನ್ನು ಹೀಗೆ ವ್ಯಕ್ತಪಡಿಸುತ್ತಾರೆ: ಸುವಾರ್ತೆಯು "ಪಾಪದ ದಾಸತ್ವದಲ್ಲಿರುವ ಮಾನವನ ಸ್ಥಾನದಲ್ಲಿ ಯೇಸುಕ್ರಿಸ್ತನನ್ನು ಕಳುಹಿಸಿ ದೇವರು ಮಾಡಿರುವ ರಕ್ಷಣಾ ಕ್ರಿಯೆಗಳನ್ನು ಸಂಭ್ರಮದಿಂದ ಸಾರುವದೇ ಆಗಿದೆ."[40] ಈ "ಸುವಾರ್ತೆ" ಎರಡು ಕೋನಗಳನ್ನು ಹೊಂದಿದೆ. ಒಂದು "ಐತಿಹಾಸಿಕ ಕೋನ" ಅದರಲ್ಲಿ ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನದ *ಶಾರೀರಿಕ ಸತ್ಯಗಳಿರುತ್ತವೆ*. ಪೌಲನು ಕೊರಿಂಥದವರಿಗೆ ಹೀಗೆ ಬರೆದನು,

> ಸಹೋದರರೇ, ನಾನು ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ ತರುತ್ತೇನೆ . . . ನಾನು ನಿಮಗೆ ತಿಳಿಸಿದ . . . ಅದು ನಾನು ಸಹ ಕಲಿತುಕೊಡಂದ್ದೇ. ಅದೇನೆಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು (1 ಕೊರಿಂಥ 15:1-4).

ರಕ್ಷಣೆ ಹೊಂದುವದಕ್ಕಾಗಿ ಮನುಷ್ಯರು ಮಾಡಬೇಕಾದ ಸಂಗತಿಗಳಾವವೆಂದು ನಾವು ಸಾರಿಬಿಟ್ಟು, ಯೇಸುವಿನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳನ್ನು ನಿರ್ಲಕ್ಷಿಸುವದಾದರೆ, ನಾವು ಸುವಾರ್ತೆಯನ್ನು ಸಾರಿಯೇ ಇಲ್ಲ ಎಂದರ್ಥ.

ಸುವಾರ್ತೆಯು ಒಂದು "ಸಿದ್ಧಾಂತದ ಕೋನ" ವನ್ನು ಸಹ ಹೊಂದಿದೆ. ಸುವಾರ್ತೆಯು ಕೇವಲ ಶಿಲುಬೆಯ ಕಥೆಯನ್ನೊಳಗೊಂಡಿದೆ ಅಷ್ಟೆ ಎಂದು ಕೆಲವರು ಭಾವಿಸುತ್ತಾರೆ, ಆದರೆ ಹಲವಾರು ಸಾರಿ ಹೊಸ ಒಡಂಬಡಿಕೆಯು ಸುವಾರ್ತೆಗೆ *ವಿಧೇಯವಾಗಬೇಕು* ಎಂಬುದರ ಬಗ್ಗೆ ಮಾತಾಡುತ್ತದೆ (2 ಥೆಸಲೋನಿಕ 1:8; 1 ಪೇತ್ರ 4:17; ನೋಡಿರಿ ರೋಮಾಪುರ 19:17; KJV)—ಅಂದರೆ ಸುವಾರ್ತೆಯು ಆಜ್ಞೆಗಳನ್ನು ಸಹ ಹೊಂದಿದೆ ಎಂಬದನ್ನು ತೋರ್ಪಡಿಸುತ್ತದೆ.

ಸುವಾರ್ತೆಯ ಸಿದ್ಧಾಂತದ ಕೋನವು ಶುಭವಾರ್ತೆಯ *ಆತ್ಮೀಕ ಮಹತ್ವದ* ಸುತ್ತ ಕೇಂದ್ರಿಕೃತವಾಗಿದೆ. ದೇವರು ನಮಗಾಗಿ ಮಾಡಿರುವ ಕಾರ್ಯದಿಂದ ನಾವು ಹೇಗೆ ಪ್ರಯೋಜನ ಪಡೆಯಬಹುದೆಂಬದರ ಬಗ್ಗೆ ಸುವಾರ್ತೆಯು ನಮಗೆ ತಿಳಿಸುತ್ತದೆ. ಅಲ್ಲದೆ ಅದು ನಮ್ಮ ಜೀವಿತಗಳ ಮೇಲೆ ಬೀರಬೇಕಾದ ಪ್ರಭಾವದ ಕುರಿತು ಸಹ ಹೇಳುತ್ತದೆ (ನೋಡಿರಿ ಫಿಲಿಪ್ಪಿ 1:27). ಆದ್ಯಪ್ರವರ್ತಕರು ಸುವಾರ್ತೆಯನ್ನು ಈ ಕೆಳಗಿನಂತೆ ಸಾರಾಂಶಗೊಳಿಸಿದರು:

> ನಂಬಬೇಕಾದ *ಸತ್ಯಗಳು*: ನಿರ್ದಿಷ್ಟವಾಗಿ, ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತುಪುನರುತ್ಥಾನ (ನೋಡಿರಿ 1 ಕೊರಿಂಥ 15:1-4).
>
> ವಿಧೇಯವಾಗಬೇಕಾದ *ಆಜ್ಞೆಗಳು:* ನಂಬಿಕೆ, ಪಶ್ಚಾತಾಪ ಮತ್ತು ದೀಕ್ಷಾಸ್ನಾನ ಸೇರಿರುತ್ತವೆ (6:3-6, 17, 18).
>
> ಆನಂದಿಸಬೇಕಾದ *ವಾಗ್ದಾನಗಳು*: ಇವುಗಳೊ ಳಗೆ ಸೇರಿದವುಗಳೆಂದರೆ, ಪಾಪಗಳ ಪರಿಹಾರ, ಪವಿತ್ರಾತ್ಮನ ವರ, ಮತ್ತು ಪರಲೋಕದ ವಾಗ್ದಾನ (ನೋಡಿರಿ ಅಪೊಸ್ತಲರ ಕೃತ್ಯಗಳು 2:38; ಕೊಲೊಸ್ಸೆ 1:21-23; ತೀತನು 1:2).

ಪೌಲನು ಸುವಾರ್ತೆಯ ವಿಷಯದಲ್ಲಿ ನಾಚಿಕೆಯುಳ್ಳವನಾಗಿರಲಿಲ್ಲ ಯಾಕೆಂದರೆ ಅದು **ದೇವರ ಶಕ್ತಿಯಾಗಿತ್ತು.** ಅನುವಾದಿಸಲ್ಪಟ್ಟ ಗ್ರೀಕ್ ಪದವಾದ "ಶಕ್ತಿ" (δύναμις, *dunamis*) ಎಂಬುದು ಆಂಗ್ಲದ "dynamo" (ಡೈನೊಮೊ), "dynamic" (ಡೈನಾಮಿಕ್), ಮತ್ತು "dynamite" (ಡೈನಾಮೈಟ್) ಎಂದಾಗಿರುತ್ತದೆ.

> ರೋಮನ್ ಸಾಮ್ರಾಜ್ಯವನ್ನು ಪ್ರತಿನಿಧಿಸುವ ಒಂದು ಪದವಿದ್ದರೆ ಅದು *ಶಕ್ತಿ*. ಬಲಿಷ್ಠ

> ರೋಮನ್ ಸಾಮ್ರಾಜ್ಯವು ನಿರಂತರವಾಗಿ ವಿಸ್ತರಿಸುವಂತೆಯೂ ಅದರ ಸೈನ್ಯಬಲವು ಯಾರಿಂದಲೂ ಸೋಲಿಸಲಾಗದಂತೆಯೂ ತೋರುತ್ತಿತ್ತು. ರೋಮಾಪುರದಲ್ಲಿ ಜೀವಿಸಿದವರಿಗೆ ರೋಮನ್ನರ ಶಕ್ತಿಯ ಬಗ್ಗೆ ಯಾವಾಗಲೂ ನೆನಪಿನಲ್ಲಿರುತ್ತಿತ್ತು, ಯಾಕೆಂದರೆ ಸೇನಾಧಿಪತಿಗಳು ರಸ್ತೆಗಳಲ್ಲೆಲ್ಲಾ ವಿಜಯಯಾತ್ರೆಗಳನ್ನು ಮಾಡುತ್ತಾ ಇರುತ್ತಿದ್ದರು, ತಾವು ಗೆದ್ದುಕೊಂಡ ದೇಶದ ಸಾವಿರಾರು ಪುರುಷರನ್ನು, ಸ್ತ್ರೀಯರನ್ನು ತಮ್ಮ ಗುಲಾಮರಾಗಿ ಮೆರವಣಿಗೆ ಮಾಡಿಸುತ್ತಿದ್ದರು, ಮತ್ತು ಚಕ್ರವರ್ತಿಗಳು ತಮ್ಮನ್ನು ಆರಾಧಿಸಬೇಕೆಂದು ಆಜ್ಞಾಪಿಸುತ್ತಿದ್ದರು. ಈ ನಿಟ್ಟಿನಲ್ಲಿ [ಹಿನ್ನಲೆಯಲ್ಲಿ], ಪೌಲನು ದೇವರ ಸಾರ್ವಭೌಮತೆಯ ಸಂದೇಶವನ್ನು ಕಳುಹಿಸುತ್ತಾನೆ.[41]

ರೋಮನ್ನರು ತಮಗಿದ್ದ ಶಕ್ತಿಯಲ್ಲಿ ಗರ್ವಪಟ್ಟುಕೊಂಡಿರಬಹುದು, ಆದರೆ ಅವರ ಸಾಮ್ರಾಜ್ಯವನ್ನು ಹಾಳು ಮಾಡುತ್ತಲಿದ್ದ ನೈತಿಕ ಕೊಳಕನ್ನು ನಾಶಮಾಡಲು ಅವರಿಗೆ ಯಾವ ಶಕ್ತಿಯೂ ಇರಲಿಲ್ಲ. ಅವರಿಗೆ ಒಂದು ಕುಟುಂಬದಲ್ಲಿ ಶೋಷಣೆ ಮಾಡುತ್ತಾ ನೆಮ್ಮದಿ ಹಾಳುಮಾಡುತ್ತಿದ್ದ ಪುರುಷನನ್ನು ಒಬ್ಬ ಪ್ರೀತಿಯುಳ್ಳ ಗಂಡ ಮತ್ತು ತಂದೆಯಾಗಿರುವಂತೆ ಮಾರ್ಪಡಿಸುವದಕ್ಕೆ ಅವರಿಗೆ ಶಕ್ತಿಯಿರಲಿಲ್ಲ.[42] ಅಂಥ ಶಕ್ತಿ ದೇವರಿಗೆ ಮಾತ್ರವೇ ಇತ್ತು.

ಸುವಾರ್ತೆಯು **ರಕ್ಷಣೆಗಾಗಿ** ದೇವರ ಶಕ್ತಿಯಾಗಿತ್ತು. "ರಕ್ಷಣೆ" (σωτηρία, *sōtēria*) ಎಂಬ ಪದದ ಮೂಲ ಅರ್ಥವು "ಬಿಡುಗಡೆ" ಎಂಬುದು. ಅದು ಮಿಲಿಟರಿ ವಿಜಯ ಅಥವಾ ವ್ಯಾಧಿಯ ಗುಣವಾಗುವಿಕೆಯನ್ನು ಸೂಚಿಸುವದಕ್ಕಾಗಿ ಉಪಯೋಗಿಸಲಾಗುತ್ತಿತ್ತು. ಪೌಲನು ಉಪಯೋಗಿಸಿದ ಪ್ರಕಾರ, ಅದು ಪಾಪದ ಅಪರಾಧ, ಪಾಪ ಕೃತ್ಯ, ಮತ್ತು ಪಾಪದ ನಿತ್ಯವಾದ ಪರಿಣಾಮಗಳಿಂದ ಸಿಕ್ಕುವ ಬಿಡುಗಡೆಯನ್ನು ಸೂಚಿಸುವದಾಗಿತ್ತು.

ಈ ಶಕ್ತಿಯು **ನಂಬುವಂಥ ಎಲ್ಲರಿಗೂ** ದೊರಕಬೇಕೆಂಬುದು ದೇವರ ಉದ್ದೇಶವಾಗಿತ್ತು. ಪೌಲನು **ಅದು ಮೊದಲು ಯೆಹೂದ್ಯರಿಗೂ ತರುವಾಯ ಗ್ರೀಕರಿಗೂ** ಎಂದು ಹೇಳುವ ಮೂಲಕ ಸುವಾರ್ತೆಯ ಸಾರ್ವತ್ರಿಕತೆಯನ್ನು ಒತ್ತಿ ಹೇಳುತ್ತಾನೆ. "ಗ್ರೀಕ್" (Ἕλλην, *Hellēn*) ಎಂಬುದು ಇಲ್ಲಿಗ್ರೀಕ್ ಭಾಷೆಯನ್ನಾಡುತ್ತಿದ್ದ ಅನ್ಯಜನರ ಜಗತ್ತನ್ನು ಸೂಚಿಸುತ್ತದೆ. ಯೆಹೂದ್ಯರು ಮತ್ತು ಅನ್ಯಜನರು ಅಂದರೆ ಅದು ಎಲ್ಲರಿಗೂ ಎಂದಾಗುತ್ತದೆ. ನಿಜವಾಗಿಯೂ, ಸುವಾರ್ತೆಯು ಪ್ರತಿಯೊಬ್ಬರಿಗಾಗಿಯೂ ಇರುತ್ತದೆ (ನೋಡಿರಿ ಮತ್ತಾಯ 28:18-20; ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 1:8).

ಯೆಹೂದ್ಯರು "ಮೊದಲು" ಎಂದು ಹೇಳುವ ಮೂಲಕ, ಪೌಲನು ಯೆಹೂದ್ಯರನ್ನು ಉತ್ತಮರು ಅಥವಾ ಅನ್ಯಜನರಿಗಿಂತಲೂ ಹೆಚ್ಚು ಪ್ರಾಮುಖ್ಯರು ಎಂಬುದಾಗಿ ಇಲ್ಲಿ ಹೇಳುತ್ತಿಲ್ಲ. ಮುಂದಿನ ಅಧ್ಯಾಯದಲ್ಲಿ ಆತನು ಇದೇ ಪದವಿನ್ಯಾಸವನ್ನು ಉಪಯೋಗಿಸುತ್ತಾನೆ (2:9, 10), ಮತ್ತು ನಂತರ ತಕ್ಷಣವೇ "ದೇವರಿಗೆ ಪಕ್ಷಪಾತವಿಲ್ಲ" ಎಂಬದನ್ನು ಒತ್ತಿ ಹೇಳುತ್ತಾನೆ (2:11). ಆತನು 10:12 ರಲ್ಲಿ, ಹೇಳಿದ್ದೇನೆಂದರೆ "ಈ ವಿಷಯದಲ್ಲಿ ಯೆಹೂದ್ಯನಿಗೂ ಗ್ರೀಕನಿಗೂ ಹೆಚ್ಚು ಕಡಿಮೆ ಏನೂ ಇಲ್ಲ; ಎಲ್ಲರಿಗೂ ಒಬ್ಬನೇ ಕರ್ತ."

ಪೌಲನ ಹೇಳಿಕೆಯು ಹಲವಾರು ಐತಿಹಾಸಿಕ ಸತ್ಯಗಳನ್ನು ಪ್ರತಿಬಿಂಬಿಸುತ್ತದೆ. ಯೆಹೂದ್ಯರು ಒಂದು ವಿಶೇಷ ಜನಾಂಗವಾಗಿದ್ದು ಅವರ ಮೂಲಕವಾಗಿ ದೇವರು

ಲೋಕಕ್ಕೆ ಮೆಸ್ಸೀಯನನ್ನು ತರುವದಕ್ಕೆ ಕ್ರಿಯೆಮಾಡಿದನು. ಮೆಸ್ಸೀಯನು (ಕ್ರಿಸ್ತನು) ಒಬ್ಬ ಯೆಹೂದ್ಯನಾಗಿದ್ದನು, ಮತ್ತು ಆತನು ಯೆಹೂದಿ ಪ್ರಾಂತವಾದ ಪ್ಯಾಲೆಸ್ತೀನ್.ನಲ್ಲಿಯೇ ಜೀವಿಸಿದನು ಹಾಗೂ ಮರಣಿಸಿದನು. ದೇವರು ಮತ್ತು ಯೆಹೂದ್ಯರ ನಡುವಿದ್ದ ಶತಮಾನಗಳಷ್ಟು ದೀರ್ಘವಾದ ಸಂಬಂಧದ ಕಾರಣದಿಂದ, ಮೆಸ್ಸೀಯನನ್ನು ಮತ್ತು ಆತನ ರಾಜ್ಯವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಮೊದಲ ಅವಕಾಶವನ್ನು ಯೆಹೂದ್ಯರಿಗೆ ಅನುಗ್ರಹಿಸಲಾಯಿತು. ಆತನ ರಾಜ್ಯವು (ಸಭೆಯು) ಯೆಹೂದ್ಯ ಜಗತ್ತಿನ ರಾಜಧಾನಿಯಾದ-ಯೆರೂಸಲೇಮಿನಲ್ಲಿ—ಸ್ಥಾಪಿಸಲ್ಪಟ್ಟಿತು ಮತ್ತು ಪ್ರಥಮ ಸುವಾರ್ತೆಯ ಸಂದೇಶವು ಯೆಹೂದ್ಯರಿಗೆ ಸಾರಲ್ಪಟ್ಟಿತು. ಸುವಾರ್ತೆಯು ಪ್ಯಾಲೆಸ್ತೀನ್.ನಿಂದ ಅನ್ಯಜನರ ಜಗತ್ತಿಗೆ ಹರಡಿದ ಮೇಲೆ ಸಹ, ಸುವಾರ್ತೆಯು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಯೆಹೂದ್ಯರಿಗೆ ಬೋಧಿಸಲ್ಪಡುತ್ತಿತ್ತು, ಮತ್ತು ನಂತರ ಅನ್ಯಜನರಿಗೆ ಹೋಯಿತು. ಪೌಲನು ಪಿಸಿದ್ಯದ ಅಂತಿಯೋಕ್ಯದಲ್ಲಿದ್ದ ಯೆಹೂದ್ಯರಿಗೆ ಹೀಗೆ ಹೇಳಿದನು, "ದೇವರ ವಾಕ್ಯವನ್ನು ಮೊದಲು ನಿಮಗೇ ಹೇಳುವದು ಅವಶ್ಯವಾಗಿತ್ತು; ಆದರೆ ನೀವು ಅದನ್ನು ತಳ್ಳಿಬಿಟ್ಟು . . . ಇಗೋ, ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಕಡೆಗೆ ಹೋಗುತ್ತೇವೆ" (ಅಪೊಸ್ತಲರ ಕೃತ್ಯಗಳು 13:46).

"ಮೊದಲು ಯೆಹೂದ್ಯರಿಗೂ ತರುವಾಯ ಗ್ರೀಕರಿಗೂ" ಎಂಬ ಮಾತುಗಳು (ಮತ್ತು ಪತ್ರಿಕೆಯಲ್ಲಿ ಬೇರೆ ಸ್ಥಳಗಳಲ್ಲಿ ಸಿಕ್ಕುವ ಇದೇ ರೀತಿಯ ಮಾತುಗಳು) ತೋರ್ಪಡಿಸುವದೇನೆಂದರೆ ರೋಮಾಪುರದ ಸಭೆಯಲ್ಲಿದ್ದ ಆ ಎರಡು ಜನಾಂಗದ ನಡುವಿನ ಸಂಬಂಧವನ್ನು ರಾಜಿಮಾಡುವದು ಪೌಲನ ಬಯಕೆಯಾಗಿತ್ತು. ಚಕ್ರವರ್ತಿಯಾದ ಔಗುಸ್ತನ ಮೂಲಕ (ಕ್ರಿ.ಶ. 49) ದೇಶದಿಂದ ಹೊರಹಾಕಲ್ಪಟ್ಟ ಮೇಲೆ, ಯೆಹೂದ್ಯರು—ಯೆಹೂದಿ ಕ್ರೈಸ್ತರೂ ಸೇರಿದಂತೆ — ರೋಮಾಪುರಕ್ಕೆ ಹಿಂದಿರುಗಿ ಬಂದರು (ಕ್ರಿ.ಶ. 54). ಅವರು ಹಿಂದಿರುಗಿ ಬರುವ ಘಟನೆಯು ಈ ಪತ್ರಿಕೆಯನ್ನು ಪೌಲನು ಬರೆಯುವದಕ್ಕೆ ಸ್ವಲ್ಪ ವರ್ಷಗಳ ಮುಂಚೆಯಷ್ಟೇ ಸಂಭವಿಸಿತ್ತು (ಕ್ರಿ.ಶ. 57 ಅಥವಾ 58). ಯೆಹೂದ್ಯ ಕ್ರೈಸ್ತರು ಅನ್ಯಜನಾಂಗದ ಕ್ರೈಸ್ತರೊಂದಿಗೆ ಉತ್ತಮ ಬಾಂಧವ್ಯವಿಟ್ಟುಕೊಳ್ಳುವದಕ್ಕೆ ಕಷ್ಟವಿದ್ದಂತೆ ತೋರುತ್ತಿತ್ತು.

Coy Roper ಎರಡು ಪದಗಳನ್ನು ಹೋಲಿಕೆ ಮಾಡುತ್ತಾರೆ: "'ಮೊದಲು ಯೆಹೂದ್ಯರಿಗೂ': ಯೆಹೂದ್ಯರಿಗೆ ದೇವರ ಸಂಕಲ್ಪದಲ್ಲಿ ಒಂದು ವಿಶೇಷ ಸ್ಥಾನವಿತ್ತೆಂಬದನ್ನು ಅನ್ಯಜನರು ತಿಳಿಯಬೇಕೆಂಬದು ಪೌಲನ ಇಚ್ಛೆಯಾಗಿತ್ತು. 'ಮತ್ತು ತರುವಾಯ ಗ್ರೀಕರಿಗೂ': ದೇವರು ಮಾನವರ ರಕ್ಷಣೆಗಾಗಿ ತನ್ನ ಸಂಕಲ್ಪದಲ್ಲಿ ಗ್ರೀಕರನ್ನೂ ಅನ್ಯಜನರನ್ನೂ ಸೇರ್ಪಡೆಗೊಳಿಸಿದ್ದಾನೆಂಬದನ್ನು ಯೆಹೂದ್ಯರು ತಿಳಿದುಕೊಳ್ಳ ಬೇಕೆಂಬುದು ಪೌಲನ ಇಚ್ಛೆಯಾಗಿತ್ತು."[43] ಸಭೆಯಲ್ಲಿ ನಮ್ಮ ಜಾತಿ, ಕುಲ, ಜನಾಂಗದ ಹಿನ್ನಲೆಯನ್ನಿಟ್ಟುಕೊಂಡು ಹೊಗಳಿಕೊಳ್ಳಲು ಅಥವಾ ನಾನು ಬೇರೆಯವರಿಗಿಂತ ಶ್ರೇಷ್ಠನು ಎಂದು ಭಾವಿಸಿಕೊಳ್ಳಲು ಅವಕಾಶವಿಲ್ಲ (2:1, 17; 3:9, 27, 29; 11:13, 18, 25; 14:10). ಬದಲಾಗಿ, ಪ್ರತಿಯೊಬ್ಬರೂ ಮತ್ತೊಬ್ಬರನ್ನು ಪ್ರೀತಿಯಿಂದ ಅಂಗೀಕರಿಸಿಕೊಳ್ಳಬೇಕಿತ್ತು (12:3–5, 10, 16; 14:1, 13; 15:7).

**ವಚನ 17.** ಅವರ ರಕ್ಷಣೆಯ ಆಧಾರವನ್ನು ಕುರಿತು ಒತ್ತಿಹೇಳುವ ಮೂಲಕವಾಗಿ

ಪೌಲನು ಯೆಹೂದ್ಯ ಮತ್ತು ಅನ್ಯಜನರ ಕ್ರೈಸ್ತರ ನಡುವಿನ ತಡೆಗಳನ್ನು ಮುರಿಯುವ ಕಾರ್ಯವನ್ನು ಮುಂದುವರೆಸಿದನು: **ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ** [ಸುವಾರ್ತೆ] **ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ.** ಎರಡೂ ಗುಂಪಿನವರು ಸಹ ಕ್ರಿಸ್ತನಲ್ಲಿಟ್ಟ ಅವರ ನಂಬಿಕೆಯ ನಿಮಿತ್ತದಿಂದ ರಕ್ಷಿಸಲ್ಪಟ್ಟಿದ್ದರೇ ಹೊರತು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸುವದರಿಂದಾಗಲಿ ಅಥವಾ ತಮ್ಮ ಸ್ವಂತ ನೈತಿಕ ಪರಿಪೂರ್ಣತೆಯಿಂದಾಗಲಿ ಅಲ್ಲ.

ಈ ವಚನದಲ್ಲಿ "ನೀತಿ" ಎಂಬುದು ರಕ್ಷಿಸಲ್ಪಟ್ಟವರನ್ನು ನೀತಿವಂತರೆಂದು ಪರಿಗಣಿಸಲ್ಪಡುವಂತೆ ದೇವರು ಏರ್ಪಡಿಸಿದ ದಾರಿಯನ್ನು ಸೂಚಿಸುತ್ತದೆ. ಈ "ನೀತಿಯು" "ದೇವರ ನೀತಿ" ಎಂದು ಕರೆಯಲ್ಪಟ್ಟಿದೆ, ಯಾಕೆಂದರೆ ಅದು ಆತನಿಂದಲೇ ಬರುವದಾಗಿದೆ. ಈ ವಾಕ್ಯಭಾಗವು "ಸುವಾರ್ತೆಯಲ್ಲಿ ಪ್ರಕಟವಾಯಿತು" ಎಂಬದನ್ನು ಒತ್ತಿ ಹೇಳುತ್ತದೆ: ನಾವು ಈ ನೀತಿಯ ಬಗ್ಗೆ ಕಲಿಯುವ ಏಕೈಕ ದಾರಿಯೆಂದರೆ ಸುವಾರ್ತೆಯನ್ನು ಸಾರುವ ಮೂಲಕವೇ.

ಶುಭವಾರ್ತೆಯನ್ನು ಆಲಿಸುವ ಫಲವಾಗಿ, ಮನುಷ್ಯರ ಹೃದಯಗಳಲ್ಲಿ ನಂಬಿಕೆಯುಂಟಾಗುತ್ತದೆ (10:17). ಈ ರೀತಿಯಲ್ಲಿ: "ವಿಶ್ವಾಸದಿಂದ ವಿಶ್ವಾಸಕ್ಕೆ" ದೇವರ ನೀತಿಯು ಪ್ರಕಟಗೊಳಿಸಲ್ಪಡುತ್ತದೆ. ಗ್ರೀಕ್ ವಾಕ್ಯವು ಹೀಗೆ ಅನುವಾದಿಸಲ್ಪಡಬಹುದು, "ಅದರೊಳಗಿಂದ [ἐκ, *ek*] ನಂಬಿಕೆಯೊಳಗೆ ನಂಬಿಕೆ [εἰς, *eis*]." ಪುಟಗಳು ಈ ವಾಕ್ಯಭಾಗದ ಕುರಿತ ಹೇಳಿಕೆಗಳಿಂದ ತುಂಬಿರುತ್ತವೆ, ಆದರೆ ಆ ವಿವಿಧ ಪದಗಳನ್ನು ವರ್ಗೀಕರಿಸುವದರಿಂದ ಅಷ್ಟೇನು ಅರ್ಥವಿರುವದಿಲ್ಲ. ಪೌಲನು ಮುಖ್ಯವಾದ ಭಾವಗಳನ್ನು ನೇರವಾಗಿ ಮಾತಾಡುವಂತೆ ಕಾಣಿಸುತ್ತದೆ. ನಾವು ನಂಬಿಕೆಯ ಆಧಾರದ ಮೇಲೆ ರಕ್ಷಿಸಲ್ಪಟ್ಟಿದ್ದೇವೆ. ಹಾಗಾದರೆ "ದೇವರೊಂದಿಗೆ ಸರಿಯಾಗುವಿಕೆಯನ್ನು" ನಂಬಿಕೆಯ (ಫಲಿತವೆಂದು) ಹೇಳಬಹುದು. ಅದೇ ಸಮಯದಲ್ಲಿ, ಒಬ್ಬನು ಕ್ರೈಸ್ತನಾಗಿ ಬಿಟ್ಟರೆ ಆ ಮೇಲೆ ಅವನಿಗೆ ಇನ್ನು ನಂಬಿಕೆಯ ಅಗತ್ಯವಿಲ್ಲ ಎಂಬದಾಗಿ ತನ್ನ ವಾಚಕರು ಭಾವಿಸಬೇಕೆಂದು ಪೌಲನ ಇಚ್ಛೆಯಾಗಿರಲಿಲ್ಲ. ಒಬ್ಬ ವ್ಯಕ್ತಿಯನ್ನು ರಕ್ಷಿಸುವ ನಂಬಿಕೆಯು ಆತನನ್ನು "ನಂಬಿಕೆಯೊಳಗೆ" ನಡಿಸತಕ್ಕದ್ದು, ಅಂದರೆ ನಂಬಿಕೆಯ ಆಧಾರಿತ ಮತ್ತು ಫಲಿತವಾದ ಜೀವನ ಶೈಲಿಗೆ ಆತನನ್ನು ನಡಿಸಬೇಕು (ನೋಡಿರಿ 2 ಕೊರಿಂಥ 5:7). NIV ಈ ವಿಚಾರವನ್ನು ಹೀಗೆ ತಿಳಿಸುತ್ತದೆ: "*ಮೊದಲಿನಿಂದ ಕಡೆಯವರೆಗಿನ* ನಂಬಿಕೆಯಿಂದ ಬರುವ ನೀತಿ" (ಒತ್ತಿ ಹೇಳಿದ್ದು ನನ್ನದು).

ಪೌಲನು ತನ್ನ ಚಿಂತನೆಯನ್ನು ಬಲಪಡಿಸಲು, ಹಳೆ ಒಡಂಬಡಿಕೆಯ ಒಂದು ವಾಕ್ಯವನ್ನು ಉಲ್ಲೇಖಿಸುತ್ತಾನೆ: "ನೀತಿವಂತನು ನಂಬಿಕೆಯಿಂದಲೇ ಬದುಕುವನು ಎಂದು ಬರೆದಿರುವ ಪ್ರಕಾರ," ಈ ಮಾತುಗಳು ಹಬಕ್ಕೂಕ 2:4 ರಿಂದ ಆರಿಸಿಕೊಳ್ಳಲ್ಪಟ್ಟದ್ದು. ಪುನಃ, ಪೌಲನು ಉಪಯೋಗಿಸಿದ ಈ ಉಲ್ಲೇಖದ ಕುರಿತು ವೇದಾಂತಿಗಳು ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ. ಈ ಪದಗಳು (ಆತ್ಮೀಕ) ಜೀವಿತವನ್ನು ಹೊಂದಿರುವ ವಿಶ್ವಾಸಿ ಎಂದು ಅರ್ಥವೋ ಅಥವಾ ಒಬ್ಬ ಕ್ರೈಸ್ತನು ನಂಬಿಕೆಯ ಜೀವಿತವನ್ನು ನಡಿಸಬೇಕು ಎಂದು ಅರ್ಥವೋ? ಈ ಪ್ರಶ್ನೆಯ ಗೊಂದಲವು RSV ಮತ್ತು NRSV ಆವೃತ್ತಿಗಳಲ್ಲಿ ದೃಷ್ಟಾಂತೀಕರಿಸಲ್ಪಟ್ಟಿದೆ. RSVಯ ಅನುವಾದಕರು 17ನೇ

ವಚನದ ಕಡೇ ಭಾಗವನ್ನು ಹೀಗೆ ವ್ಯಕ್ತಪಡಿಸಿದ್ದಾರೆ: "ನಂಬಿಕೆಯ ಮುಖಾಂತರ ನೀತಿವಂತನಾಗಿರುವವನು ಬದುಕುವನು." ಅನಂತರದಲ್ಲಿ ಹೊಸ ಆವೃತ್ತಿಯಲ್ಲಿ ಅನುವಾದಕರು ಈ ವಾಕ್ಯಭಾಗವನ್ನು ಬದಲಾಯಿಸಿ ಹೀಗೆ ಬರೆದರು, "ನೀತಿವಂತನಾಗಿರುವವನು ನಂಬಿಕೆಯಿಂದ ಬದುಕುವನು."

"ನಂಬಿಕೆಯಿಂದ ಬದುಕುವನು" ಎಂಬ ಪದಗಳನ್ನು ನಾವು ಸಾಮಾನ್ಯವಾಗಿ ಉಪಯೋಗಿಸುವ ರೀತಿಯು ಪೌಲನ ಮನಸ್ಸಿನಲ್ಲಿ ನಂಬಿಕೆಯಾಧರಿತ ಜೀವನ ಶೈಲಿಯ ವಿಚಾರವನ್ನು ಬೆಂಬಲಿಸುತ್ತದೆ. ಹೇಗೂ, ಹಬಕ್ಕೂಕ ಮತ್ತು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಒತ್ತು ಕೊಡಲಾದ ಎರಡೂ ವಾಕ್ಯಗಳು ಸಹ, ಪೌಲನು ನಂಬುವವನು ಜೀವವನ್ನು—ಆತ್ಮೀಕ ಮತ್ತು ನಿತ್ಯಜೀವವನ್ನು—ಹೊಂದುವನೆಂಬ ವಿಚಾರವನ್ನು ಎತ್ತಿ ತೋರಿಸುತ್ತಿದ್ದಾನೆಂಬದನ್ನು ಬೆಂಬಲಿಸುತ್ತವೆ (ನೋಡಿರಿ 6:23).

ಹಬಕ್ಕೂಕದಲ್ಲಿನ ವಾಕ್ಯಭಾಗವು ಹೀಗೆ ಹೇಳುತ್ತದೆ, "ಇಗೋ, ಆ ದುಷ್ಟನ ಅಂತರಾತ್ಮವು ಉಬ್ಬಿಕೊಂಡಿದೆ, ಯಥಾರ್ಥವಲ್ಲ; ನೀತಿವಂತನೋ ತನ್ನ ನಂಬಿಕೆಯಿಂದಲೇ ಬದುಕುವನು" (ಹಬಕ್ಕೂಕ 2:4). ಹಬಕ್ಕೂಕ ಪುಸ್ತಕದ ಪ್ರಸ್ತಾಪವು ಕಸ್ದೀಯರ (ಬಾಬಿಲೋನಿಯರ) ನಾಶನದ ಕುರಿತಾಗಿದೆ. ದೇವರು ಹಬಕ್ಕೂಕನಿಗೆ ತಾನು ಯೆಹೂದವನ್ನು ದಂಡಿಸುವದಕ್ಕೆ ಕಸ್ದೀಯರನ್ನು ಎಬ್ಬಿಸುತ್ತೇನೆಂದು ಹೇಳಿದನು. ಆದರೆ ಕಸ್ದೀಯರು ಇಸ್ರಾಯೇಲ್ಯರಿಗಿಂತಲೂ ಹೆಚ್ಚು ಕೆಟ್ಟವರಾಗಿರುವಾಗ ಏಕೆ ಹೀಗೆ ಎಂಬುದು ಹಬಕ್ಕೂಕನಿಗೆ ತೋಚಲಿಲ್ಲ. ಆದ್ದರಿಂದ ದೇವರು ಹಬಕ್ಕೂಕನಿಗೆ ಖಚಿತಪಡಿಸಿ ಹೇಳಿದ್ದೇನೆಂದರೆ, ಕಸ್ದೀಯರನ್ನು ನಾಶಗೊಳಿಸುವೆನು ಮತ್ತು ಅದರ ಪರಿಣಾಮವಾಗಿ, "ಅದರ ಬಗ್ಗೆ ಚಿಂತೆಮಾಡಬೇಡ. ನನ್ನಲ್ಲಿ ಭರವಸವಿಡು!" ಎಂದು ಪ್ರವಾದಿಗೆ ಹೇಳಿದನು. ಈ ಹಿನ್ನಲೆಯಲ್ಲಿ 2:4ರ ಕಡೇ ಭಾಗವು ಈ ಅರ್ಥವನ್ನು ನೀಡುತ್ತದೆ, "ಸಂಗತಿಗಳು ಕೆಟ್ಟದ್ದಾಗಿ ಕಂಡರೂ (ಕಸ್ದೀಯನ್ನರ ವಿಷಯದಲ್ಲಿ) ನೀತಿವಂತನು ನನ್ನನ್ನು ವಿಶ್ವಾಸಿಸುವನು ಮತ್ತು ಅವನನ್ನು ಸುರಕ್ಷಿತವಾಗಿಡುವದರ ಮೂಲಕ ಅವನಿಗೆ ಪ್ರತಿಫಲ ಕೊಡುವೆನು." W. J. Deane ಇದನ್ನು ಬೇರೆ ಮಾತುಗಳಲ್ಲಿ ಹೇಳುತ್ತಾರೆ: "ಅಹಂಕಾರದ, ದುರಾಶೆಯ ಸಾಮ್ರಾಜ್ಯವು ನಾಶನದಲ್ಲಿ ಮುಳುಗಿ ಹೋದಾಗ, ನಂಬಿಕೆಯುಳ್ಳ ಜನರು ಸುರಕ್ಷಿತವಾಗಿ ಬಾಳುವರು."[44] ಪೌಲನಿಗೆ ಖಂಡಿತವಾಗಿಯೂ ಈ ವಚನದ ಮೂಲ ಒತ್ತು ತಿಳಿದಿತ್ತು; ಆದರೆ ಆತ್ಮನ ನಡಿಸುವಿಕೆಯ ಅಡಿಯಲ್ಲಿ, ಆತನು "ಅದನ್ನು ಆಳವಾದ ಮಹತ್ವದಲ್ಲಿ ಸಹ ಕಂಡನು."[45] ಹಬಕ್ಕೂಕನ ಕಾಲದಲ್ಲಿ ನಂಬಿಕೆಯು ಶಾರೀರಿಕ ಜೀವವನ್ನು ಒದಗಿಸಿತ್ತು, ಮತ್ತು ಪೌಲನ ದಿನಗಳಲ್ಲಿ ಅದು ಆತ್ಮೀಕ ಜೀವಿತವನ್ನು ಒದಗಿಸುವದಾಗಿತ್ತು.

"ನೀತಿವಂತನು ನಂಬಿಕೆಯಿಂದಲೇ ಬದುಕುವನು" ಎಂಬದರ ಎರಡು ಸಂಭಾವ್ಯ ಅರ್ಥಗಳನ್ನು ಪರಿಗಣಿಸಿದ ಮೇಲೆ, ಇವೆರಡರಲ್ಲಿ ಒಂದನ್ನು ಬಿಟ್ಟು ಮತ್ತೊಂದರ ಅರ್ಥದ ಮೇಲೆ ನಮ್ಮ ಗಮನವನ್ನು ಕೇಂದ್ರಿಕರಿಸುವದು ಅವಶ್ಯಕವೋ? ಬಹುಶಃ ಇಲ್ಲ. ಕ್ರೈಸ್ತ ಜೀವಿತವು ನಂಬಿಕೆಯಿಂದ *ಪ್ರಾರಂಭ*ವಾಗುತ್ತದೆ ಮತ್ತು ನಂಬಿಕೆಯೊಂದಿಗೆ ಮುಂದುವರೆಯುತ್ತದೆಂದು ಪೌಲನು ಹೇಳಿದನಾದ್ದರಿಂದ, ಈ ಎರಡೂ ಆಲೋಚನೆ ಗಳನ್ನು ಪುಷ್ಠಿಗೊಳಿಸುವದಕ್ಕಾಗಿ ಬಹುಶಃ ಈ ವಾಕ್ಯವನ್ನು ಉಲ್ಲೇಖಿಸಿರಬಹುದು. ನಾವು ತಿಳಿದುಕೊಳ್ಳಬೇಕಾದ ಪ್ರಾಮುಖ್ಯವಾದ ಸಂಗತಿಯೇನೆಂದರೆ, "ನೀತಿಯನ್ನು ನಮಗೆ

ಅನುಗ್ರಹಿಸುವ ಸಂಕಲ್ಪವು (ನಮ್ಮ) ನಂಬಿಕೆಯಿಂದ ಪ್ರಾರಂಬವಾಗುವ ಮತ್ತು ಮುಂದುವರೆಯುವ ಪ್ರಕ್ರಿಯೆಯಾಗಿದೆ" (1:17; Phillips ಆವೃತ್ತಿ); "ಅದು ಆರಂಭದಿಂದ ಅಂತ್ಯದ ವರೆಗೂ ವಿಶ್ವಾಸದ ಮೂಲಕವಾಗಿದೆ" (1:17; CJB ಆವೃತ್ತಿ).

## ಅನ್ಯಜನರು ದೇವರ ಕೋಪಾಗ್ನಿಗೆ ಅರ್ಹರು (1:18-32)

ರಕ್ಷಣೆಯ ಶುಭವಾರ್ತೆಯ ಮೇಲೆ ಒತ್ತು ಕೊಡುವ ಪೌಲನ ಪ್ರಬಂಧ ಹೇಳಿಕೆಯ ನಂತರ (1:16, 17), ಈಗ ಪೌಲನು *ದೇವರ ಪ್ರೀತಿಯ* ಕುರಿತು ಹೇಳುವನೆಂದು ಒಬ್ಬನು ಎದುರುನೋಡಬಹುದು. ಬದಲಾಗಿ, ಆತನು ತನ್ನ ಗಮನವನ್ನು ದೇವರ ಕೋಪಾಗ್ನಿಯ ಕಡೆಗೆ ತಿರುಗಿಸುತ್ತಾನೆ (1:18-32). ವಚನ 16 ರಲ್ಲಿ, ಪೌಲನು ದೇವರ ಪ್ರೀತಿಯ ಒದಗಿಸುವಿಕೆಯ ಸಾರ್ವತ್ರಿಕ ಸ್ವಭಾವದ ("ಪ್ರತಿಯೊಬ್ಬರಿಗೂ") ಬಗ್ಗೆ ಒತ್ತಿ ಹೇಳಿದ ಮೇಲೆ; ಈಗ ಆತನು ಆ ಒದಗಿಸುವಿಕೆಗೆ ಸಾರ್ವತ್ರಿಕ ಅಗತ್ಯತೆಯನ್ನು ನಿರೂಪಿಸಬೇಕಿತ್ತು. ಅಷ್ಟುಮಾತ್ರವಲ್ಲದೆ, ರಕ್ಷಣೆಯು ಯೆಹೂದ್ಯರಿಗೂ ಅನ್ಯಜನರಿಗೂ ಇರುತ್ತದೆಂದು ಪೌಲನು ಘೋಷಿಸಿದ್ದನು. ಈಗ, ಆತನು "ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರು" (3:9) ಎಂಬದನ್ನು ಸ್ಪಷ್ಟಗೊಳಿಸುವನು. ಪೌಲನು ಪ್ರಾಥಮಿಕವಾಗಿ 1:18-32 ರಲ್ಲಿ ಅನ್ಯಜನರನ್ನೂ, 2:1-3:8 ರಲ್ಲಿ ಯೆಹೂದ್ಯರನ್ನೂ, ಮತ್ತು 3:9-20 ರಲ್ಲಿ ಎಲ್ಲಾ ಮಾನವ ಜನಾಂಗವನ್ನೂ ಮನಸ್ಸಿನಲ್ಲಿಟ್ಟುಕೊಂಡಿದ್ದನು.

### ವಿಗ್ರಹಾರಾಧನೆ ಮೂಲಕ ದೇವರನ್ನು ತಿರಸ್ಕರಿಸುವದು (1:18-25)

**18ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ
ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು
ಪರಲೋಕದಿಂದ ತೋರಿಬರುತ್ತದೆ. 19ಯಾಕಂದರೆ ದೇವರ ವಿಷಯವಾಗಿ
ತಿಳಿಯಬಹುದಾದದ್ದು ಅವರ ಮನಸ್ಸಿಗೆ ಸ್ಪಷ್ಟವಾಗಿ ತಿಳಿದದೆ; ಅದನ್ನು ಅವರಿಗೆ ದೇವರೇ
ಸ್ಪಷ್ಟವಾಗಿ ತಿಳಿಸಿದನು. 20ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ
ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಅತನು ಮಾಡಿದ
ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವುದರಿಂದ ಅವರು
ಉತ್ತರವಿಲ್ಲದವರಾಗಿದ್ದಾರೆ. 21ಯಾಕಂದರೆ ದೇವರ ವಿಷಯವಾಗಿ ಅವರಿಗೆ
ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ
ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿಮಾಡಿ
ಫಲಕಾಣಲಿಲ್ಲ; ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು. 22ತಾವು ಜ್ಞಾನಿಗಳೆಂದು
ಹೇಳಿಕೊಂಡು ಹುಚ್ಚರಾದರು. 23ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ
ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿಯನ್ನು
ಮಾಡಿಕೊಂಡರು.**

**24ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು
ಮಾನಹೀನಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು.**

**[25]ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ಸೃಷ್ಟಿ ಕರ್ತನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು. ಆಮೆನ್.**

"ಕಾರಣ" ಮತ್ತು "ಯಾಕೆಂದರೆ" ಎಂಬ ಜೋಡನೆ ಪದಗಳು ಈ ವಿಭಾಗದುದ್ದಕ್ಕೂ ಅಲ್ಲಲ್ಲಿ ಉಪಯೋಗಿಸಲ್ಪಟ್ಟಿವೆ. ಕೆಲವು ಅನುವಾದಕರು ಈ ವಾಕ್ಯಭಾಗದುದ್ದಕ್ಕೂ ಈ "ಜೋಡನೆಗಳ" ಪದಗಳಿಲ್ಲದೆ ಮೃದುವಾಗಿ ಸಾಗುತ್ತಾರೆ ಮತ್ತು ಕೆಲವೊಂದನ್ನು ಕೈಬಿಟ್ಟಿದ್ದಾರೆ, ಆದರೆ ಪ್ರತಿಯೊಂದು ಸಹ ಪ್ರಾಮುಖ್ಯವಾದದ್ದು. ಈ ಜೋಡನೆಗಳಿಗೆ ಒತ್ತು ಕೊಡುತ್ತಾ, Stott ಹೇಳುವದೇನೆಂದರೆ, "ಪೌಲನು ಮಾಡುವ ಪ್ರತಿಯೊಂದು ಹೇಳಿಕೆಯನ್ನು ಹಿಂದಿನದಕ್ಕೆ ಗ್ರೀಕ್ ಸಂಯೋಗ ಪದವಾದ *gar* [γάρ] ಮತ್ತು *dioti* [διότι], ಅಂದರೆ 'ಕಾರಣ' ಅಥವಾ 'ಯಾಕೆಂದರೆ' ಎಂದು ಅರ್ಥವಾಗಿರುತ್ತದೆ."[46] ಅಪೊಸ್ತಲನು ಅನ್ಯಜನರ ವಿರುದ್ಧವಾಗಿ ಕ್ರಮಬದ್ಧವಾಗಿ ವಿಷಯವನ್ನು, ಅಂಶದಿಂದ ಅಂಶಕ್ಕೆ ಹೆಣೆಯುತ್ತಾನೆ. ಆತನು ನ್ಯಾಯಾಲಯದ ಕೊಠಡಿಯಲ್ಲಿರುವನೋ ಎಂಬಂತೆ ವಿಷಯವನ್ನು (ಮೊಕದ್ದಮೆ) ಬಿಡಿಸಿ ಹೇಳುತ್ತಾನೆ. ಪ್ರತಿ ಸಾರಿ ಆತನು *gar* ಮತ್ತು *dioti* ಪದಗಳನ್ನು ಉಪಯೋಗಿಸುವಾಗಲೆಲ್ಲಾ ಒಬ್ಬ ಪ್ರತಿವಾದಿಯಿಂದ ಕೇಳಲ್ಪಡಬಹುದಾದ ವಿರೋಧಕ್ಕೆ ಉತ್ತರ ಕೊಡುವ ಪ್ರಯತ್ನ ಮಾಡಿದ್ದನು. ಅಂಥ ದೃಶ್ಯವನ್ನು ಕಲ್ಪಿಸಿಕೊಳ್ಳುವದರಿಂದ ಪೌಲನು ಹೇಗೆ ವಿಷಯವನ್ನು ಅಭಿವೃದ್ಧಿಗೊಳಿಸುತ್ತಾನೆಂಬದನ್ನು ಗಮನಿಸುವಂತೆ ಸಹಾಯವಾಗುವದು.

**ವಚನ18a.** ಅಂಥ ಮೊದಲ ದೃಶ್ಯವು ದೇವರಿಂದ ಆರೋಪಿಸಲ್ಪಟ್ಟ ನೀತಿಯ ಅಗತ್ಯತೆ ಏನೆಂದು ಪ್ರಶ್ನಿಸುತ್ತದೆ, ಅದು ವಚನ 17 ರಲ್ಲಿ ಚರ್ಚಿಸಿದ ನೀತಿಯಾಗಿದೆ.

> *ಎದುರಾಳಿ*: "ಮನುಷ್ಯರನ್ನು ನೀತಿವಂತರಾಗಿ ಎಣಿಸುವಂತೆ ದೇವರು ಏರ್ಪಡಿಸಿರುವ ದಾರಿಯು ಸುವಾರ್ತೆಯಲ್ಲಿ ಪ್ರಕಟವಾಯಿತೆಂದು ನೀನು ಹೇಳಿದಿ. ದೇವರು ಪ್ರೀತಿಸ್ವರೂಪಿ ಮತ್ತು ಖಂಡಿತವಾಗಿಯೂ ಯಾರನ್ನೂ ತೀರ್ಪಿಗೆ ಗುರಿಮಾಡುವದಿಲ್ಲವಾದ್ದರಿಂದ, ಅಂಥ ಒಂದು ವ್ಯವಸ್ಥೆಯನ್ನು ಮಾಡುವ ನಿಜವಾದ ಅಗತ್ಯತೆಯಿತ್ತೋ?"

> *ಪೌಲನು*: "ಹೌದು, ಅಗತ್ಯವಿದೆ, ಯಾಕೆಂದರೆ ದೇವರು ಒಬ್ಬ ಕೋಪವುಳ್ಳ ದೇವರು ಸಹ ಆಗಿದ್ದಾನೆ. ಎಲ್ಲರೂ ಪಾಪ ಮಾಡಿದ್ದಾರೆ, ಮತ್ತು ಪಾಪಕ್ಕೆ ದಂಡನೆಯಾಗಬೇಕೆಂದು ದೇವರ ಕೋಪಾಗ್ನಿಯು ಕೇಳುತ್ತದೆ!"

ವಾಕ್ಯಭಾಗವು ಇದರಿಂದ ಅರಂಭವಾಗುತ್ತದೆ, **ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ.** ದೇವರ ನೀತಿಯು ಪ್ರಕಟವಾದ ಹಾಗೆಯೇ ದೇವರ ಕೋಪಾಗ್ನಿಯು ಸಹ ಪ್ರಕಟವಾಗಿದೆ. ದೇವರ ನೀತಿಯು ಸುವಾರ್ತೆಯಲ್ಲಿ ಪ್ರಕಟಗೊಂಡಿರುತ್ತದೆ (1:16, 17). ದೇವರ ಕೋಪಾಗ್ನಿಯು ಬೈಬಲಲ್ಲಿ, ಇತಿಹಾಸದಲ್ಲಿ, ಮತ್ತು ಅನುದಿನದ ಜೀವಿತದಲ್ಲಿ ಸಹ ಪ್ರಕಟಗೊಂಡಿದೆ. ದೇವರ ಕೋಪಾಗ್ನಿಯು ಸುವಾರ್ತೆಯಲ್ಲಿಯೂ ಪ್ರಕಟಗೊಂಡಿರುತ್ತ

ದೆಂದು ಯೋಚಿಸಿದರೆ ತಪ್ಪೇನಿಲ್ಲ—ಯಾಕೆಂದರೆ ದೇವರ ನ್ಯಾಯ ಎಂಬ ಪರಿಕಲ್ಪನೆಯನ್ನು ರಕ್ಷಣೆಯ ಕಥೆಯಿಂದ ತೆಗೆದುಹಾಕಲು ಸಾಧ್ಯವಿಲ್ಲ. ಈ ಪ್ರಕಟಣೆಯು "ಪರಲೋಕದಿಂದ" ತೋರಿ ಬಂತು ಎಂಬದರ ಮೇಲೆ ಪೌಲನು ಒತ್ತು ಕೊಡುತ್ತಿದ್ದಾನೆ. ದೇವರು ಪಾಪಕ್ಕೆ ದಂಡನೆಯಾಗಲೇಬೇಕು ಎಂಬ ಉಪದೇಶವನ್ನು ತೋರಿಸುವದು ಪೌಲನ ಮನಸ್ಸಿನ ಕಲ್ಪನೆಯಾಗಿರಲಿಲ್ಲ; ಅದು ಸ್ವತಃ ದೇವರಿಂದಲೇ ಬಂದದ್ದಾಗಿತ್ತು.

ದೇವರ ಕೋಪಾಗ್ನಿಯು "ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ" ತೋರಿಬರುತ್ತದೆ. ಅನುವಾದಿಸಲ್ಪಟ್ಟ "ಭಕ್ತಿಹೀನತೆ" (ἀσέβεια, *asebeia*) ಎಂಬ ಪದವು "ದೇವರ ವ್ಯಕ್ತಿತ್ವವನ್ನು ಕಡೆಗಣಿಸುವದು" ಎಂಬ ಅರ್ಥವನ್ನು ಕೊಡುತ್ತದೆ.[47] "ದುಷ್ಟತನ" (ἀδικία, *adikia*) ಎಂಬುದು "ತಪ್ಪು ಅಥವಾ ಇಬ್ಬರು ವ್ಯಕ್ತಿಗಳ ನಡುವೆ ಮಾಡಿದ ಅನ್ಯಾಯ ಸೂಚಿಸುವ ಸಮಗ್ರ ಪದವಾಗಿದೆ."[48] ಈ ಎರಡು ಪದಗಳು ಒಟ್ಟಾಗಿ ಎಲ್ಲಾ ಪಾಪವನ್ನು ಒಳಗೊಂಡಿವೆ, ಅದು ದೇವರ ವಿರುದ್ಧವಾಗಿರಬಹುದು ಅಥವಾ ಮನುಷ್ಯನ ವಿರುದ್ಧವಾಗಿರಬಹುದು. ಪಾಪದ ವಿಷಯವಾಗಿ ದೇವರು ನಿಷ್ಕ್ರೀಯವಾಗಿ ಇರುವವನಲ್ಲ. ಯಾವದೇ ಪಾಪವು ಆತನ ಕೋಪಾಗ್ನಿಯನ್ನು ಎಬ್ಬಿಸುವದಾಗಿದೆ.

ದೇವರ ಕೋಪಾಗ್ನಿಯ ವಿಷಯವು ನಿರ್ಲಕ್ಷಿಸಲ್ಪಟ್ಟಿದೆ. ಅದಕ್ಕೆ ಒಂದು ಕಾರಣವೆಂದರೆ ಪ್ರೀತಿಯುಳ್ಳ ದೇವರು ಎಂಬ ಪರಿಕಲ್ಪನೆಯನ್ನು ಕೋಪಾಗ್ನಿಯುಳ್ಳ ದೇವರೆಂಬದರೊಂದಿಗೆ ಹೊಂದಾಣಿಕೆ ಮಾಡುವದು ಕೆಲವರಿಗೆ ಕಷ್ಟಕರವಾಗಿರುತ್ತದೆ. ಅವರು ದೇವರ ಪ್ರೀತಿಯನ್ನು ಅಪಾರ್ಥಮಾಡಿಕೊಂಡು ಹೇಳುವದೇನೆಂದರೆ, "ಖಂಡಿತವಾಗಿಯೂ, ಪ್ರೀತಿಸ್ವರೂಪಿ ದೇವರು ನಮ್ಮೊಂದಿಗೆ ಎಂದಿಗೂ ಕೋಪಗೊಳ್ಳಲಾರನು! ನಾವು ಬಲಹೀನರೆಂದು ಆತನಿಗೆ ತಿಳಿದದೆ, ಆದ್ದರಿಂದ ನಿಸ್ಸಂಶಯವಾಗಿ ಆತನು ನಮ್ಮ ತಪ್ಪುಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಳ್ಳುವದಿಲ್ಲ."

ಇದಕ್ಕೆ ಸಂಬಂಧಿಸಿದ ಇನ್ನೊಂದು ಸಮಸ್ಯೆಯೆಂದರೆ ಕೆಲವರು "ಕೋಪಾಗ್ನಿ" ಯನ್ನು ಮನುಷ್ಯರ ಕೋಪಕ್ಕೆ ಸಮಾನಗೊಳಿಸುತ್ತಾರೆ. ನಾವು ಕೋಪದಿಂದ ಸಿಡಿದೆಳುವದು ಅನೇಕ ಸಾರಿ ಚಿಕ್ಕಚಿಕ್ಕ ಮತ್ತು ಸ್ವಾರ್ಥದ ಹಾಗೂ ಸೇಡಿನ ಕಾರಣಗಳಿಂದಾಗಿರುತ್ತದೆ.[49] ಬೈಬಲು ನಮಗೆ ಕೋಪದಲ್ಲಿ ಇರುವ ಅಪಾಯಗಳ ಕುರಿತು ಎಚ್ಚರಿಸುತ್ತದೆ ಮತ್ತು ಈ ಸಹಜವಾದ ವಿನಾಶಕಾರಿ ಭಾವನೆಯಿಂದ ದೂರವಿರುವ ಬಗ್ಗೆ ಸಲಹೆ ಮಾಡುತ್ತದೆ (ನೋಡಿರಿ ಮತ್ತಾಯ 5:22; ಗಲಾತ್ಯ 5:19-21; ಎಫೆಸ 4:31; ಕೊಲೊಸ್ಸೆ 3:8; ಯಾಕೋಬ 1:19, 20). ಹೀಗಿದ್ದರೂ, ಸತ್ಯವೇದವು "ದೇವರ ಕೋಪದ" ವಿಷಯವಾಗಿ ಮಾತಾಡುತ್ತದೆ. ಸಹಜವಾಗಿ, ಈ ಪದವನ್ನು ದೈವ ಪ್ರೇರಿತವಾದ ಬರಹಗಾರರು ಯಾವ ಅರ್ಥದಿಂದ ಬರೆದರು ಎಂಬದನ್ನು ನಾವು ಅರಿತುಕೊಳ್ಳಬೇಕಿದೆ.

ದೇವರಿಗೆ ಅನ್ವಯಿಸಿದಂತೆ, "ಕೋಪಾಗ್ನಿ" (ὀργή, *orgē*) ಎಂಬ ಪದವು ಅನುವಾದಿಸಲ್ಪಟ್ಟಾಗ ಅದು "ಕೆಟ್ಟದ್ದರ ಕಡೆಗೆ ದೇವರ ಪ್ರತಿಕ್ರಿಯೆಯನ್ನು" ಸೂಚಿಸುತ್ತದೆ; ಅದು "ನ್ಯಾಯಾಧಿಪತಿಯ ಕಡೆಯಿಂದ ಬರುವ ಒಂದು ನ್ಯಾಯಸಮ್ಮತವಾದ ಭಾವನೆಯಾಗಿದೆ."[50] Dave Miller ಇದನ್ನು "ದೇವರ ಕಾನೂನುಬದ್ಧ ಕೋಪಾಗ್ನಿ" ಎಂದು

ಕರೆದರು.[51] Leon Morris ಈ ಪದವನ್ನು ಹೀಗೆ ವಿವರಿಸುತ್ತಾರೆ, "ಕೆಟ್ಟದ್ದಾಗಿರುವ ಎಲ್ಲದರ ಕಡೆಗೆ ಇದು ದೇವರ ಪರಿಶುದ್ಧ ಸ್ವಭಾವಕ್ಕೆ ಸ್ಥಾಪಿತವಾದ ಮತ್ತು ಕ್ರಿಯಾತ್ಮಕವಾದ ವಿರೋಧಿಸುವಿಕೆಯಾಗಿರುತ್ತದೆ." [52]

ದೇವರ ಪರಿಶುದ್ಧ ಸ್ವಭಾವವು ಆತನು ಪಾಪವನ್ನು ದಂಡಿಸಬೇಕೆಂದು ಬೇಡಿಕೆಯಿಡುತ್ತದೆ. Briscoe ದೇವರ ಕೋಪಾಗ್ನಿಯನ್ನು "ಅಪರಿಶುದ್ಧತೆಗೆ ಒಂದು ಪರಿಶುದ್ಧ ಪ್ರತಿಕ್ರಿಯ, ಅನೀತಿಯೆಡೆಗೆ ಒಂದು ನೀತಿಯ ಪ್ರತ್ಯುತ್ತರ, ನಿರ್ಮಲವು ಹೊಲಸನ್ನು ತಿರಸ್ಕರಿಸುವದು ಆಗಿರುತ್ತದೆ."[53] Stott ಪ್ರಕಾರ, "ಕೆಟ್ಟದ್ದನ್ನು ಹೊರತುಪಡಿಸಿ ಇನ್ನಾವದೂ ದೇವರಿಗೆ ಕೋಪಾಗ್ನಿಯನ್ನೆಬ್ಬಿಸಲಿಲ್ಲ, ಮತ್ತು ಕೆಟ್ಟದ್ದು ಯಾವಾಗಲೂ ಆತನಿಗೆ ಕೋಪ ತರುತ್ತದೆ."[54]

ದೇವರ ಪರಿಶುದ್ಧ ಕೋಪಾಗ್ನಿಯು ಮಾನವರ ಸ್ವಾರ್ಥದ ಕೋಪದಂತಿರುವದಿಲ್ಲ, "ಕೋಪಾಗ್ನಿ" ಎಂಬುದು ದೇವರಿಗೆ ಅನ್ವಯಿಸುವಾಗ, ಅದು ಸಂಪೂರ್ಣ ಪಕ್ಷಪಾತವಿಲ್ಲದ್ದು ಎಂದು ಮನವರಿಕೆ ಮಾಡುವದಕ್ಕೆ ಕೆಲವು ವ್ಯಾಖ್ಯಾನಕಾರರು ಬಹಳ ಪ್ರಯಾಸಪಟ್ಟರು. ಹೇಗೂ, ದೇವರ ವಿಧಿಗಳು, ಆತನು ಯಾರೆಂಬುದನ್ನು ವ್ಯಕ್ತಪಡಿಸುವವುಗಳಾಗಿವೆ. ಒಬ್ಬನು ದೇವರ ವಿಧಿಗಳಲ್ಲೊಂದನ್ನು ಉಲ್ಲಂಘಿಸುವಾಗ, ಆತನು ಸ್ವತಃ ದೇವರ ವಿರುದ್ಧವೇ ಪಾಪ ಮಾಡುವವನಾಗಿರುತ್ತಾನೆ. ಪಾಪವು ವೈಯಕ್ತಿಕವಾದದ್ದು, ಮತ್ತು ದೇವರ ಪ್ರತ್ಯುತ್ತರವು ಸಹ ವೈಯಕ್ತಿಕವಾದದ್ದು. ಅದು ಆಕಸ್ಮಿಕ ಪ್ರೇರಣೆಯಿಂದ ಬರುವದಲ್ಲ, ಆದರೆ ಅದು ವೈಯಕ್ತಿಕ.

ನಾವು "ದೇವರ ಕೋಪಾಗ್ನಿ" ಎಂಬ ಮಾತುಗಳನ್ನು ಆಲಿಸುವಾಗ, ನ್ಯಾಯತೀರ್ಪಿನ ದಿನದಂದು "ಬರಲಿರುವ ಕೋಪಾಗ್ನಿ" ಎಂದು ಭಾವಿಸಿಕೊಳ್ಳುತ್ತೇವೆ (1 ಥೆಸಲೋನಿಕ 1:10). ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ "ಕೋಪಾಗ್ನಿ" ಎಂಬುದು ಆ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ (2:5 ರಲ್ಲಿರುವ ಪ್ರಕಾರ), ಆದರೆ ಅದು ಬೇರೆ ರೀತಿಗಳಲ್ಲಿ ಸಹ ಉಪಯೋಗಿಸಲ್ಪಟ್ಟಿದೆ. ಉದಾಹರಣೆಗೆ, ಅದು ನಾಗರಿಕ ಕಾನೂನುಗಳನ್ನು ಉಲ್ಲಂಘಿಸುವವರಿಗೆ ಸಿಕ್ಕುವ ದಂಡಣೆ ಎಂಬ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ (13:4). 1:18 ರಲ್ಲಿ, ವರ್ತಮಾನ ಕಾಲವು ಉಪಯೋಗಿಸಲ್ಪ ಟ್ಟಿದೆ ಎಂಬುದು ಮಹತ್ವವಾದದ್ದು: "ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ . . . ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ" (ಒತ್ತಿ ಹೇಳಿದ್ದು ನನ್ನದು). NIV ಯಲ್ಲಿ ಹೀಗಿದೆ, "*ಪ್ರಕಟಗೊಳ್ಳಲ್ಪಡುತ್ತಿದೆ*" (ಒತ್ತಿ ಹೇಳಿದ್ದು ನನ್ನದು). 1:18 ರಲ್ಲಿನ "ಕೋಪಾಗ್ನಿಯು" ಗತಕಾಲದಲ್ಲಿ ಅಥವಾ ಭವಿಷ್ಯಕಾಲದಲ್ಲಿ ಅಲ್ಲ ಆದರೆ ವರ್ತಮಾನ ಕಾಲದಲ್ಲಿ ಆಗಿದೆ.

ದೇವರ ಈ ಕಾಲದ ಕೋಪಾಗ್ನಿಯು ದೂಷಿಸುವ ಮನಸಾಕ್ಷಿಯನ್ನು (ನೋಡಿರಿ 2:15) ಮತ್ತು ದೇವರಿಂದ ಬೇರ್ಪಟ್ಟಿರುವದರ ವಿವಿಧ ಪರಿಣಾಮಗಳನ್ನು ಒಳಗೊಂಡಿರುತ್ತದೆ (ನೋಡಿರಿ ಯೆಶಾಯ 59:1, 2; ರೋಮಾಪುರ 9:3). ಹೇಗೂ, 1:18ರ ತಕ್ಷಣದ ಸಂದರ್ಭದಲ್ಲಿ, ಪಾಪದ ಫಲಿತವಾದ ಪರಿಣಾಮಗಳನ್ನು ಅನುಭವಿಸುವದಕ್ಕೆ ಒಪ್ಪಿಸಿಕೊಡಲ್ಪಡುವ ದೈವಿಕ ದಂಡಣೆಯನ್ನು ಪೌಲನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಾನೆ. "ದೇವರು ಅವರನ್ನು ಒಪ್ಪಿಸಿಕೊಟ್ಟನು" ಎಂದು ಪೌಲನು ಈ ಅಧ್ಯಾಯದಲ್ಲಿ ಮೂರು ಸಾರಿ ಪ್ರಕಟಿಸಿದ್ದಾನೆ (1:24, 26, 28).

**ವಚನಗಳು 18b, 19.** ಮುಂದಿನ ಕಾಲ್ಪನಿಕ ವಾದ ಪ್ರತಿವಾದದಲ್ಲಿ ಅನ್ಯಜನರು ತಮಗಿದ್ದ ಅಜ್ಞಾನವನ್ನು ಪಾಪಕ್ಕೆ ನೆಪವಾಗಿ ಮುಂದಿಟ್ಟು ಮನವಿ ಮಾಡುವದನ್ನು ಕಾಣುತ್ತೇವೆ.

> *ಎದುರಾಳಿ*: "ದೇವರು ನಮ್ಮ ವಿಷಯವಾಗಿ ಕೋಪಗೊಂಡಿದ್ದಾನೆಂದು ನೀನು ಏಕೆ ಹೇಳುತ್ತಿ? ನಮಗೇನು ಯೆಹೂದ್ಯರಂತೆ ಲಿಖಿತ ಧರ್ಮಶಾಸ್ತ್ರ ಇರಲಿಲ್ಲ. ನಮಗೆ ಯಾವದೇ ತಿಳುವಳಿಕೆಯಿಲ್ಲದೆ ಇರುವಾಗ, ದೇವರು ಏಕೆ ನಮ್ಮ ವಿಷಯದಲ್ಲಿ ಕೋಪಗೊಳ್ಳಬೇಕು?"
>
> *ಪೌಲನು*: "ಆದರೆ ಅನ್ಯಜನರಾದ ನಿಮಗೆ ಉತ್ತಮ ಜ್ಞಾನವಿತ್ತು. ನಿಮಗೆ ಲಿಖಿತ ಧರ್ಮಶಾಸ್ತ್ರ ಇಲ್ಲದೆ ಇದ್ದಿರಬಹುದು, ಆದರೆ ನಿಮ್ಮ ಬಳಿ ಪ್ರಕಟಣೆಯಂತೂ ಇದ್ದೇ ಇತ್ತು. ದೇವರು ನಿಮಗೆ ಅನುಗ್ರಹಿಸಿದ್ದ ಜ್ಞಾನವನ್ನು ನೀವು ದಮನಮಾಡಿದಿರಿ. ನಿಮಗೆ ಒಂದು ಕ್ಷಣವೂ ಇದರ ಸಂಶಯವಿರದಿರಲಿ: ನಿಮ್ಮ ಪಾಪಗಳಿಗೆ ನೀವೇ ಜವಾಬ್ದಾರರು!"

"ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ" ಎಂದು ಹೇಳಿದ ಬಳಿಕ, ಪೌಲನು ಇನ್ನಷ್ಟು ಸೇರಿಸಿದನು, **ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ... ಯಾಕೆಂದರೆ ದೇವರ ವಿಷಯವಾಗಿ ತಿಳಿಯಬಹುದಾದ್ದು ಅವರ ಮನಸ್ಸಿಗೆ ಸ್ಪಷ್ಟವಾಗಿ ತಿಳಿದದೆ; ಅದನ್ನು ಅವರಿಗೆ ದೇವರೇ ಸ್ಪಷ್ಟವಾಗಿ ತಿಳಿಸಿದನು.**[55] ವಚನ 18 ರಲ್ಲಿರುವ "ಸತ್ಯ" ಎಂಬುದು "ಎಲ್ಲಾ ಸತ್ಯ" ವನ್ನು ಸೂಚಿಸುವದಿಲ್ಲ (ನೋಡಿರಿ ಯೋಹಾನ 16:13), ಆದರೆ ಅದು ಅನ್ಯಜನರ ಹೃದಯಗಳಲ್ಲಿ ದೇವರು ಅನುಗ್ರಹಿಸಿದ್ದ ಸತ್ಯದ ಕುರಿತಾಗಿರುತ್ತದೆ. 25ನೇ ವಚನವು ಅದನ್ನು "ದೇವರ ವಿಷಯವಾದ ಸತ್ಯ" ಎಂದು ಕರೆಯುತ್ತದೆ (RSV). "ದೇವರ ವಿಷಯವಾಗಿ ಅವರಿಗೆ ತಿಳುವಳಿಕೆ" ಇತ್ತು ಎಂದು ವಚನ 21 ಹೇಳುತ್ತದೆ, ಅದೇ ವೇಳೆ 32ನೇ ವಚನವು ಅವರಿಗೆ ತಪ್ಪು ಮಾಡಿದರೆ ದಂಡನೆಯಿದೆ ಎಂಬುದು ತಿಳಿದಿತ್ತು ಎಂದು ಹೇಳುತ್ತದೆ.

ಅಧ್ಯಾಯ 1 ಮತ್ತು 2 ದೇವರು ತನ್ನನ್ನು ಮತ್ತು ತನ್ನ ಚಿತ್ತವನ್ನು ಅನ್ಯಜನರಿಗೆ ಎರಡು ನಿರ್ದಿಷ್ಟವಾದ ರೀತಿಗಳಲ್ಲಿ ಪ್ರಕಟಿಸಿದ್ದನೆಂಬದನ್ನು ತಿಳಿಸುತ್ತವೆ: ಸೃಷ್ಟಿ (1:20) ಮತ್ತು ಮನಸ್ಸಾಕ್ಷಿ (2:15). ದೇವರು ಅನ್ಯಜನಾಂಗಕ್ಕೆ ನೀಡಿದ ವಿಶೇಷ ಮತ್ತು ವೈಯಕ್ತಿಕ ಪ್ರಕಟಣೆಗಳನ್ನು ಪಟ್ಟಿಯಲ್ಲಿ ಸೇರಿಸಬಹುದು. ಕರ್ತನು ಯೆಹೂದ್ಯ ಜನಾಂಗವನ್ನು ಪ್ರತ್ಯೇಕಿಸಿ ಅವರಿಗೆ ಒಂದು ಲಿಖಿತ ಪ್ರಕಟಣೆಯನ್ನು ಕೊಟ್ಟನಾದ್ದರಿಂದ (ನೋಡಿರಿ 3:1, 2), ದೇವರಿಗೆ ಅನ್ಯಜನರಲ್ಲಿ ಯಾವದೇ ಆಸಕ್ತಿಯಿರಲಿಲ್ಲ ಮತ್ತು ಅವರಿಗೆ ಯಾವ ಆತ್ಮೀಕ "ಬೆಳಕನ್ನು" ಕೊಡಲಿಲ್ಲವೆಂಬ ಭಾವನೆಯನ್ನುಂಟು ಮಾಡಬಹುದು. ಹೇಗಿದ್ದರೂ, ಇದು ಸತ್ಯವಲ್ಲವೆಂಬದಕ್ಕೆ ವಾಕ್ಯದಲ್ಲಿ ಅನೇಕ ಸುಳಿವುಗಳಿರುತ್ತವೆ. ದೇವರು ಕೇವಲ ಯೆಹೂದ್ಯರ ಬಗ್ಗೆ ಮಾತ್ರ ಕಾಳಜಿ ಹೊಂದಿರಲಿಲ್ಲ, ಬದಲಾಗಿ ಎಲ್ಲಾ ಮಾನವರ ಕುರಿತು ಚಿಂತೆಯುಳ್ಳವನಾಗಿದ್ದನು ಎಂಬದಕ್ಕೆ James Burton Coffman ಹಲವಾರು ಪುಟಗಳ ಬೈಬಲ್.ನ ಪುರಾವೆಗಳನ್ನು ಒದಗಿಸುತ್ತಾರೆ.[56] ಕೆಲವೊಂದು ಉದಾಹರಣೆಗಳನ್ನು

ಅವಲೋಕಿಸಿರಿ:

> *ಮೇಲ್ಕಿಚೇದೆಕನು* "ಮಹೋನ್ನತ ದೇವರ ಯಾಜಕನಾಗಿದ್ದನು" (ಆದಿಕಾಂಡ 14:18), ಆದರೆ ಆತನು ಅಬ್ರಹಾಮನ ಸಂತಾನದಿಂದ ಬಂದವನಾಗಿರಲಿಲ್ಲ.
>
> *ಬಾಳಾಮನು* "ಆತ್ಮನಿಂದ ನಡಿಸಲ್ಪಟ್ಟನು" (ಅರಣ್ಯಕಾಂಡ 24:2), ಆದರೆ ಆತನು ಒಬ್ಬ ಇಸ್ರಾಯೇಲನಾಗಿರಲಿಲ್ಲ.
>
> *ಯೋನನು* ನಿನೆವೆಗೆ ಕಳುಹಿಸಲ್ಪಟ್ಟನು (ಯೋನ 1:2), ಅದೊಂದು ಅನ್ಯಜನಾಂಗದ ಪಟ್ಟಣ.
>
> *ಎಲೀಷನು* ನಾಮಾನನನ್ನು ಸ್ವಸ್ಥಮಾಡಿದನು (2 ಅರಸುಗಳು 5), ಅವನೊಬ್ಬ ಅನ್ಯಜನಾಂಗದ ಸೈನಿಕ.
>
> *ಅನ್ಯಜನಾಂಗದ ಒಬ್ಬ ಪಂಡಿತನು,* ಹೇಗೋ ಯೆಹೂದಿ ಮೆಸ್ಸೀಯನ ಬಗ್ಗೆ ತಿಳಿದುಕೊಂಡಿದ್ದನು (ಮತ್ತಾಯ 2).

ದೇವರು ಹೇಗೆ, ಯಾವಾಗ, ಅಥವಾ ಎಲ್ಲಿ ತನ್ನನ್ನು ಅನ್ಯಜನರಿಗೆ ಪ್ರಕಟಪಡಿಸಿಕೊಂಡನು, ಅಥವಾ ನಿಖರವಾಗಿ ಯಾವ ಪ್ರಕಟಣೆಗಳನ್ನು ನೀಡಿದನು ಎಂಬ ಹಠಮಾರಿತನವನ್ನು ಪ್ರದರ್ಶಿಸಲು ಸಾಧ್ಯವಿಲ್ಲ. ಹೇಗೂ, ನಾವು ಖಚಿತವಾಗಿ ತಿಳಿಯಬಹುದಾದ ಎರಡು ಸಂಗತಿಗಳಿರುತ್ತವೆ. ಒಂದು, ದೇವರ ಪ್ರಕಟಣೆಯು ಎಂದಿಗೂ ಅರ್ಥಹೀನ ಅಥವಾ ಅನಿಶ್ಚಿತತೆಯದ್ದಾಗಿರಲಿಲ್ಲ; ಅದು ಅರ್ಥಮಾಡಿಕೊಳ್ಳತಕ್ಕದ್ದಾಗಿತ್ತು. ಪೌಲನು ಹೀಗೆ ಹೇಳಿದನು, "ದೇವರ ವಿಷಯವಾಗಿ ತಿಳಿಯಬಹುದಾದದ್ದು ಅವರ ಮನಸ್ಸಿಗೆ ತಿಳಿದದೆ; ಅದನ್ನು ಅವರಿಗೆ ದೇವರೇ ಸ್ಪಷ್ಟವಾಗಿ ತಿಳಿಸಿದನು." REB ಹೀಗೆ ಹೇಳುತ್ತದೆ, "ದೇವರ ಬಗ್ಗೆ ತಿಳಿಯಬಹುದಾದ ಎಲ್ಲವೂ ಅವರ ಕಣ್ಣುಗಳ ಮುಂದೆ ಸ್ಪಷ್ಟವಾಗಿ ಇಡಲ್ಪಟ್ಟಿತ್ತು." Knox ಅನುವಾದ ಹೇಳುತ್ತದೆ, "ದೇವರು ತಾನೇ ಅವರಿಗೆ ಸ್ಪಷ್ಟಗೊಳಿಸಿದನು."

ಎರಡನೆಯದು, ಅವರಿಗೆ ದೊರೆತ ದೇವರ ಪ್ರಕಟಣೆಯನ್ನು ಅಮೂಲ್ಯವೆಂದೆಣಿಸಿ ಇಟ್ಟುಕೊಳ್ಳುವ ಬದಲಾಗಿ, ಅನ್ಯಜನರು ಅದನ್ನು ಹತ್ತಿಕ್ಕಿದರು. ಅನುವಾದಿಸಲ್ಪಟ್ಟ "ಅಣಗಿಸು" (κατέχω, *katechō*) ಎಂಬದು ಸಂಯುಕ್ತ ಪದವಾಗಿದ್ದು, "ಕೆಳಗೆ" (κατά, *kata*) ಮತ್ತು "ಹಿಡಿದಿಡು" (ἔχω, *echō*) ಎಂಬ ಎರಡು ಪದಗಳಿಂದಾಗಿದೆ. *Katecho* ಎಂಬದನ್ನು ಒಂದು ಸಕಾರಾತ್ಮಕ ಅರ್ಥದಲ್ಲಿ ಉಪಯೋಗಿಸಬಹುದು ("ದೃಢವಾಗಿ ಹಿಡಿ" ಎಂಬುದರಲ್ಲಿ; 1 ಕೊರಿಂಥ 11:2), ಆದರೆ ಇದನ್ನು 1:18 ರಲ್ಲಿ ಉಪಯೋಗಿಸಿದ ರೀತಿಯನ್ನು ಒಬ್ಬ ಕುಸ್ತಿಯಾಡುವವನಿಗೆ ಹೋಲಿಸಬಹುದು, ತನ್ನ ಎದುರಾಳಿಯು ತಪ್ಪಿಸಿಕೊಳ್ಳದ ಹಾಗೆ "ಅದುಮಿ ಹಿಡಿಯುವದು."[57] CEV ಆವೃತ್ತಿಯು ಹೇಳುವದೇನೆಂದರೆ ಅನ್ಯಜನರು "ಸತ್ಯವನ್ನು ತುಳಿದುಬಿಟ್ಟಿದ್ದರು."

ಅನ್ಯಜನರು ಯೆಹೂದ್ಯರಷ್ಟು ಆತ್ಮೀಕ ಬೆಳಕನ್ನು ಸ್ವೀಕರಿಸದೇ ಇದ್ದಿರಬಹುದು, ಆದರೆ ಅವರಿಗೆ ಸ್ವಲ್ಪವಾದರೂ ಬೆಳಕು ಕೊಡಲ್ಪಟ್ಟಿತ್ತು. ದುಃಖಕರವೆಂದರೆ, ಅವರು

ಬಹಳಷ್ಟು ಕಾಲ ದೇವರು ಅನುಗ್ರಹಿಸಿದ್ದ ಬೆಳಕನ್ನು ನಂದಿಸುತ್ತಲೇ ಬಂದರು. ಅವರನ್ನು ಕತ್ತಲೆಯಲ್ಲಿ ತನ್ನ ಕೈಯಲ್ಲಿರುವ ಏಕೈಕ ದೀಪವನ್ನಿಟ್ಟುಕೊಂಡು ಮಂದ ಬೆಳಕಿನಲ್ಲಿ ಕಷ್ಟಪಟ್ಟು ಸಾಗುತ್ತಿರುವ ಒಬ್ಬನು, ತನ್ನ ಆ ದೀಪವನ್ನು ನಂದಿಸಿಬಿಡುವವನಿಗೆ ಹೋಲಿಕೆ ಮಾಡಬಹುದು. “ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು” (1:21)- ಆದರೆ ಅವರ ಕತ್ತಲೆಗೆ ಜವಾಬ್ದಾರರು ಅವರೇ ಆಗಿದ್ದಾರೆ.

ಅನ್ಯಜನರು ಏಕೆ ಅಷ್ಟೊಂದು ವಿವೇಕವಿಲ್ಲದೆ ನಡೆದುಕೊಂಡರು? “ಅವರು ದುಷ್ಟತನ ನಡಿಸಿ” ಸತ್ಯವನ್ನು ಅದುಮಿಟ್ಟಿದ್ದರು ಎಂದು ಪೌಲನು ಹೇಳುತ್ತಾನೆ. ಇಲ್ಲಿ “ದುಷ್ಟತನ” ಎಂಬುದು ಸಾಮಾನ್ಯ ಅರ್ಥದಲ್ಲಿ ಪಾಪವನ್ನು ಸೂಚಿಸುತ್ತದೆ (ನೋಡಿರಿ 1 ಯೋಹಾನ 5:17). ಒಬ್ಬನ ಜೀವಿತದಲ್ಲಿ ಪಾಪವು ಪ್ರಾಭಲ್ಯ ಹೊಂದಿರುವಾಗ, ಸತ್ಯವು ಅವನಿಗೆ ಮುಜುಗರ, ಬೇಸರ, ಅಸಂತೋಷ ತರಬಲ್ಲದು. ಆ ರೀತಿ ಆಗುವಾಗ, ಅವನು ಎರಡರಲ್ಲಿ ಒಂದು ದಿಕ್ಕಿನೆಡೆಗೆ ಹೋಗಬಲ್ಲನು: ಆತನು ತನ್ನ ಪಾಪವನ್ನು ತೊಲಗಿಸಿ ಬಿಡಬಹುದು—ಅಥವಾ ಆತನು ಸತ್ಯವನ್ನು ತೊಲಗಿಸಿ ಬಿಡಬಹುದು. ಬಹಳಷ್ಟು ಅನ್ಯಜನಾಂಗವು ಎರಡನೆಯದನ್ನು ಆರಿಸಿಕೊಂಡಿದ್ದವು. ಪೌಲನು ವರ್ತಮಾನ ಕಾಲವನ್ನು ಉಪಯೋಗಿಸುವದು (“ಸತ್ಯವನ್ನು ಅಣಗಿಸುವವರು”), ಇದು ಗತಕಾಲದಲ್ಲಿ ಮಾಡಿದ್ದು ಮಾತ್ರವಲ್ಲದೆ ಇದನ್ನು ಅವರು ನಿರಂತರವಾಗಿ ಮಾಡುತ್ತಿದ್ದಾರೆ ಎಂಬದನ್ನು ತೋರಿಸುತ್ತದೆ.

**ವಚನ 20.** ಈ ಹೊತ್ತಿಗಾಗಲೇ, ಪೌಲನು ಇದನ್ನು ಸ್ಪಷ್ಟಗೊಳಿಸಿದನು, ಏನೆಂದರೆ ಅನ್ಯಜನರೆಲ್ಲಾ ದೈವಿಕ ಪ್ರಕಟಣೆ ಹೊಂದಿದ್ದರು ಮತ್ತು ಈ ಕಾರಣದಿಂದ ಅವರು ತಪ್ಪಿಗಸ್ಥರಾಗಿದ್ದಾರೆ.

> *ಎದುರಾಳಿ*: “ದೇವರು ಬಹುಶಃ ಅನ್ಯಜನರಿಗೆ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಮಾತ್ರ ತನ್ನನ್ನು ಪ್ರಕಟಿಸಿಕೊಂಡಿರಬೇಕು; ಆದರೆ ದೇವರು ಅನ್ಯಜನರಿಗೆ ಯಾವ ಪ್ರಕಟಣೆ ಅಥವಾ ಪ್ರಕಟಣೆಗಳನ್ನು ಕೊಟ್ಟಿದ್ದನೆಂಬದು ನಿಖರವಾಗಿ ನಮಗೆ ತಿಳಿಯದಾದ್ದರಿಂದ, ಅನ್ಯಜನರನ್ನೆಲ್ಲಾ ಅಪರಾಧಿಗಳೆಂದು ತೀರ್ಪು ಮಾಡುವದು ನ್ಯಾಯವಲ್ಲ. ಖಂಡಿತವಾಗಿ ಬಹುಪಾಲು ಅನ್ಯಜನರಿಗೆ ಕ್ಷಮೆ ಸಿಕ್ಕಬಹುದು!”

> *ಪೌಲನು*: “ಇಲ್ಲ, ಎಲ್ಲರೂ ಉತ್ತರವಿಲ್ಲದವರಾಗಿದ್ದಾರೆ. ಅವರಿಗೆ ಬೇರೆ ಯಾವ ಪ್ರಕಟಣೆ ಕೊಡಲ್ಪಟ್ಟಿದ್ದರೂ ಸಹ ಅವರೆಲ್ಲರಿಗೂ ಸೃಷ್ಟಿಯ ಮೂಲಕ ಸ್ವತಃ ದೇವರ ಕುರಿತ ಪ್ರಕಟಣೆಯೇ ಸಿಕ್ಕಿತ್ತು. ಅವರ ಸುತ್ತಲೂ ದೇವರು ಮಾಡಿರುವ ಸೃಷ್ಟಿಯಿತ್ತು. ಅವರು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನು ಆಕಾಶದಲ್ಲಿ ಕಾಣಬಹುದಿತ್ತು. ಪುನಃ, ನಾನು ದೃಢವಾಗಿ ಹೇಳುತ್ತೇನೆ, ಅವರಿಗೆ ಯಾವ ಉತ್ತರವೂ (ನೆವವೂ) ಇಲ್ಲ!”

19ನೇ ವಚನದಲ್ಲಿ, ಪೌಲನು ದೇವರ ಕುರಿತಾದ ಕೆಲವು ಸತ್ಯಗಳು ಸರ್ವರಿಗೂ “ಸ್ಪಷ್ಟವಾಗಿ” ತಿಳಿದದೆ ಎಂದು ಎರಡು ಸಾರಿ ಹೇಳಿದ್ದಾನೆ. ಇದು ಸತ್ಯವೆಂಬದಕ್ಕೆ ಆತನು 20ನೇ ವಚನದಲ್ಲಿ, ಒಂದು ಕಾರಣವನ್ನು ಕೊಡುತ್ತಾನೆ: **ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯ ಶಕ್ತಿಯು ದೇವತ್ವವು ಜಗದುತ್ಪತ್ತಿ ಮೊದಲುಗೊಂಡು**

**ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ.**

ದೇವರು ತನ್ನ ಕುರಿತ ಎರಡು "ಪ್ರಕಟಣೆಗಳನ್ನು" ಅನುಗ್ರಹಿಸಿದ್ದಾನೆಂದು ಈ ಮುಂಚೆ ಹೇಳಿದ್ದೇವೆ: ಆತನು ಉಂಟುಮಾಡಿದ *ಲೋಕ*ದಲ್ಲಿನ "ನೈಸರ್ಗಿಕ" ಪ್ರಕಟಣೆ ಮತ್ತು ಆತನ ವಾಕ್ಯದಲ್ಲಿ "ಅಸ್ವಭಾವಿಕ (ಅನ್ಯೆಸರ್ಗಿಕ)" ಪ್ರಕಟಣೆ. ದಾವೀದನು ಕೀರ್ತನೆ 19 ರಲ್ಲಿ ಇವೆರಡರ ಬಗ್ಗೆ ಮಾತಾಡುತ್ತಾನೆ. ಕೀರ್ತನೆಯ ಮೊದಲ ಅರ್ಧ ಭಾಗದಲ್ಲಿ, ದಾವೀದನು ನೈಸರ್ಗಿಕ ಪ್ರಕಟಣೆಯ ಕುರಿತು ಬರೆಯುತ್ತಾನೆ: "ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ. ಗಗನವು ಆತನ ಕೈಕೆಲಸವನ್ನು ಪ್ರಕಟಿಸುತ್ತದೆ" (ಕೀರ್ತನೆ 19:1). ಕೀರ್ತನೆಯ ಕೊನೆಯ ಅರ್ಧಭಾಗವು ಅನ್ಯೆಸರ್ಗಿಕ ಪ್ರಕಟಣೆಯ ಕುರಿತು ತಿಳಿಸುತ್ತದೆ: "ಯೆಹೋವನ ಧರ್ಮಶಾಸ್ತ್ರವು ಲೋಪವಿಲ್ಲದ್ದು; ಅದು ಪ್ರಾಣವನ್ನು ಉಜ್ಜೀವಿಸಮಾಡುವಂಥದ್ದು, ಕರ್ತನ ಕಟ್ಟಳೆ ನಂಬಿಕೆಗೆ ಯೋಗ್ಯವಾದದ್ದು; ಬುದ್ಧಿಹೀನರಿಗೆ ವಿವೇಕಪ್ರದವಾಗಿದೆ" (ಕೀರ್ತನೆ 19:7).

ಪೌಲನು ಲುಸ್ತ್ರದಲ್ಲಿರುವಾಗ, ಆತನು ದೇವರ ನೈಸರ್ಗಿಕ ಪ್ರಕಟಣೆಯ ಬಗ್ಗೆ ಮಾತಾಡಿದನು. ಆತನು ತನ್ನ ಶ್ರೋತೃಗಳಿಗೆ ದೇವರ ಕುರಿತು ಈ ರೀತಿ ವರ್ಣಿಸಿದನು:

> . . . ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣಮಾಡಿದ ಜೀವ ಸ್ವರೂಪನಾದ ದೇವರ . . . ಗತಿಸಿ ಹೋದ ಕಾಲದಲ್ಲಿ . . . ಆತನು ತನ್ನ ವಿಷಯದಲ್ಲಿ ಸಾಕ್ಷಿಕೊಡದೆ ಇರಲಿಲ್ಲ; ನಿಮಗೆ ಆಕಾಶದಿಂದ ಮಳೆಯನ್ನೂ ಸುಗ್ಗೀಕಾಲಗಳನ್ನೂ ದಯಾಪಾಲಿಸಿ ಆಹಾರಕೊಟ್ಟು ನಿಮ್ಮ ಮನಸ್ಸುಗಳನ್ನು ಆನಂದದಿಂದ ತುಂಬಿಸಿ ಉಪಕಾರ ಮಾಡುತ್ತಾ ಬಂದವನು ಆತನೇ (ಅಪೊಸ್ತಲರ ಕೃತ್ಯಗಳು 14:15-17).

ರೋಮಾಪುರ 1:20ನೇ ವಚನದಲ್ಲಿ, ಪೌಲನು "ಜಗತ್ತಿನ ಸೃಷ್ಟಿಯ" ಕುರಿತು ಮತ್ತು "ಆತನು ಮಾಡಿದ ಸೃಷ್ಟಿ" ಕುರಿತು ಮಾತಾಡಿದನು. ಇಂದು, "ಮೇಧಾವಿಗಳು" ಯಾವ ವಿಶೇಷ ಸೃಷ್ಟಿಯೆಂಬುದಿರಲಿಲ್ಲ, ಆದರೆ ಜಗತ್ತಿನಲ್ಲಿರುವದೆಲ್ಲವೂ ವಿಕಾಸದಿಂದ ಆಗಿರುತ್ತದೆ ಎಂದು ವಾದಿಸುತ್ತಾರೆ. ಪೌಲನು ಮೇಧಾವಿ ಮಾತ್ರವಲ್ಲದೆ, ದೇವರಿಂದ ಪ್ರೇರಿಸಲ್ಪಟ್ಟವನು ಸಹ ಆಗಿದ್ದು, *ಸೃಷ್ಟಿಯ ಕಾರ್ಯದಲ್ಲಿ* ನಂಬಿದ್ದನು; ಎಲ್ಲವೂ *ಸೃಷ್ಟಿಸಲ್ಪಟ್ಟಿತು* ಎಂದು ಆತನು ಕಲಿಸಿದನು.

ದೇವರು ಸೃಷ್ಟಿಸಿರುವ ಸಂಗತಿಗಳನ್ನು ನೋಡುವ ಮೂಲಕ ನಾವು ಆತನ ಬಗ್ಗೆ ಸ್ವಲ್ಪ—ಎಲ್ಲವನ್ನು ಅಲ್ಲ ಆದರೆ ಕೆಲವು ಸಂಗತಿಗಳನ್ನು—ಕಲಿಯಬಹುದು ಎಂದು ಪೌಲನು ಖಂಡಿತವಾಗಿ ಹೇಳಿದನು. ಜಗತ್ತನ್ನು ದೃಷ್ಟಿಸುವ ಮೂಲಕ, ಆತನು ಇದ್ದಾನೆಂಬ ಬಗ್ಗೆ ನಾವು ತರ್ಕಿಸಬಹುದು ಎಂಬದಾಗಿ ಪೌಲನು ಹೇಳಿರಬಹುದಿತ್ತು. ಇಲ್ಲಿ ಕಾಣುವ ನಿಯಮವು ಒಂದು ಚಿಕ್ಕ ಮಗು ಸಹ ಅರ್ಥಮಾಡಿಕೊಳ್ಳಬಹುದಾದದ್ದು: ಮಾಡಲ್ಪಟ್ಟಿದ್ದೆಲ್ಲಕ್ಕೂ ಒಬ್ಬ ಮಾಡಿದವನು ಇದ್ದಾನೆ. ನಾವು ಒಂದು ಗಡಿಯಾರದ ದೃಷ್ಟಾಂತವನ್ನು ಉಪಯೋಗಿಸಿದ್ದೇವೆ: ಒಂದು ಗಡಿಯಾರವು ಇದೇ ಅಂದರೆ ಅದರ ನಿರ್ಮಾಣಿಕನು ಸಹ ಇರಲೇಬೇಕು ಎಂಬದನ್ನು ಅದು ಪ್ರಕಟಿಸುತ್ತದೆ. ಇಬ್ರಿಯ

ಬರಹಗಾರನು ಒಂದು ಬೇರೆ ದೃಷ್ಟಾಂತವನ್ನು ಉಪಯೋಗಿಸುತ್ತಾನೆ: "ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು; ಸಮಸ್ತವನ್ನು ಕಟ್ಟಿದಾತನು ದೇವರೇ" (ಇಬ್ರಿಯ 3:4).

ಹೇಗೂ, ಪೌಲನ ಉದ್ದೇಶವು, ದೇವರು *ಇದ್ದಾನೆ* ಎಂಬದನ್ನು ಸಾಭಿತುಪಡಿಸುವದಾಗಿರಲಿಲ್ಲ. ಒಂದು ಉನ್ನತ ಶಕ್ತಿಯು ಇದೆ ಎಂಬ ಬಗ್ಗೆ ಹೆಚ್ಚುಕಮ್ಮಿ ಸಾರ್ವತ್ರೀಕವಾಗಿ ಒಪ್ಪಿಕೊಂಡಿದ್ದ ಸಂಗತಿಯಾಗಿತ್ತು. ಬದಲಾಗಿ, ಅಪೊಸ್ತಲನ ಒತ್ತು ಇದ್ದದ್ದು ದೇವರು *ಯಾರು* ಎಂಬದರ ಮೇಲಾಗಿತ್ತು—ಪೌಲನು ಅದನ್ನು "ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು" ಎಂದು ಕರೆದನು. ಗ್ರೀಕ್ ಮೂಲ ಪ್ರತಿಯಲ್ಲಿ "ಆತನ ಕುರಿತ ಅದೃಶ್ಯವಾದ ಸಂಗತಿಗಳನ್ನು" ಎಂದಷ್ಟೆ ಇರುತ್ತದೆ (KJV ನೋಡಿರಿ). NIV ಯಲ್ಲಿ "ದೇವರ ಕಣ್ಣಿಗೆ ಕಾಣದ ಗುಣಗಳು" ಎಂದಿರುತ್ತದೆ.

"ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು . . . ಬುದ್ಧಿಗೆ ಗೊತ್ತಾಗಿ ಬರುತ್ತವೆ" ಎಂಬ ಈ ಮಾತುಗಳಲ್ಲಿ ಒಂದು ಅಲ್ಲದೆಂದು ತೋರುವ ಮಾತು ಕಾಣುತ್ತದೆ. ಇಲ್ಲಿ "ಕಾಣಬರುತ್ತದೆ" ಎಂಬದರ ಮೂಲ ಪದ (καθοράω, *kathoraō*) ಎಂಬುದು ಒಂದು (κατά, *kata*) ಉಪಸರ್ಗ ಮತ್ತು "ನೋಡು" (ὁράω, *horaō*) ಎಂಬ ಪದಗಳ ಸಮ್ಮಿಲನವಾಗಿದೆ. ಹೊಸ ಒಡಂಬಡಿಕೆಯಲ್ಲಿ, *kathoraō* ಅಂದರೆ "ಗ್ರಹಿಸು, ವಿವೇಚಿಸು"[58] ಎಂದರ್ಥವಾಗಿರುತ್ತದೆ—ಬರೀ ಕಣ್ಣಿನಿಂದ ನೋಡುವದಷ್ಟೆ ಅಲ್ಲ, ಆದರೆ "ಬುದ್ಧಿಯಿಂದ (ಮನಸ್ಸಿನಿಂದ) ಗ್ರಹಿಸು, *ಅರ್ಥಮಾಡಿಕೊ*" ಎಂದಾಗಿರುತ್ತದೆ.[59]

ದೇವರ ಯಾವ "ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು" ಆತನ ಸೃಷ್ಟಿಯಲ್ಲಿ "ಕಾಣಬಹುದಾಗಿದೆ?" ಪೌಲನು ಎರಡು ಸಂಗತಿಗಳನ್ನು ಹೆಸರಿಸಿದನು. ಮೊದಲನೆಯದಾಗಿ, "ಆತನ ನಿತ್ಯಶಕ್ತಿ [δύναμις, *dunamis*]." ದೇವರು ಶಕ್ತಿಯುಳ್ಳವನು ಆದ್ದರಿಂದ ಆತನು "ಬೆಳಕಾಗಲಿ" ಅಂದಾಗ "ಬೆಳಕಾಯಿತು" (ಆದಿಕಾಂಡ 1:3). ಕರ್ತನ ಆ ಒಂದು ಮಾತಿನಿಂದ ಉಂಟಾದ ಶಕ್ತಿಯು ಊಹಿಸಿಕೊಳ್ಳಲಾಗದ್ದಷ್ಟಾಗಿದೆ!

ಎರಡನೆಯದಾಗಿ ಕಾಣಬರುವಂಥ ದೇವರ ಗುಣಲಕ್ಷಣವೇನೆಂದರೆ ಆತನ ಸೃಷ್ಟಿಯಲ್ಲಿ "ಕಾಣುವ" ಆತನ "ದೇವತ್ವವು". "ದೇವತ್ವವು" θειότης (*theiotēs*) ಎಂಬುದರ ಯಥಾರೀತಿಯ ಅನುವಾದವಾಗಿದೆ, ಅದು "ದೇವರು" (θεός, *theos*) ಎಂಬ ಪದದಿಂದ ಬಂದಿರುತ್ತದೆ. *Theiotēs* ಎಂಬುದು ದೇವರ ಗುಣಲಕ್ಷಣವನ್ನು ಸೂಚಿಸುತ್ತದೆ.[60] NCV ಆವೃತ್ತಿಯು *theiotēs* ಎಂಬ ಪದವನ್ನು "ಆತನನ್ನು ದೇವರನ್ನಾಗಿ ಮಾಡುವ ಎಲ್ಲಾ ಸಂಗತಿಗಳನ್ನು" ಎಂದು ಅನುವಾದಿಸಿರುತ್ತದೆ.

ದೇವರ ದೈವಿಕ ಗುಣಲಕ್ಷಣಗಳನ್ನು ಆತನು "ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ" ಎಂಬದಾಗಿ ಪೌಲನು ಹೇಳಿದನು. ನಾವು ನಮ್ಮ ಸುತ್ತಲಿನ ಜಗತ್ತನ್ನು ಗಮನಿಸುವಾಗ, ಅದನ್ನು ಮಾಡಿದವನ ಗುಣಗಳನ್ನು ವಿವೇಚಿಸಿ ತಿಳಿಯುತ್ತೇವೆ. ಸ್ಥೀರವಾದ ನಿರ್ಧರಿತ ನೈಸರ್ಗಿಕ "ನಿಯಮಗಳ" ಪ್ರಕಾರವಾಗಿ ಕಾರ್ಯಮಾಡುವ ಒಂದು ಜಗತ್ತು ತನ್ನ ನಿರ್ಮಾಣಿಕನು ಕ್ರಮಬದ್ಧನಾದವನು ಎಂಬದನ್ನು ತೋರಿಸುತ್ತದೆ. ಆತನು ನಿಸರ್ಗದಲ್ಲಿ "ನಿಯಮಗಳನ್ನು" ಇಟ್ಟಿರುವದಾದರೆ (ಉದಾಹರಣೆ "ಗುರುತ್ವಾಕರ್ಷಣ ನಿಯಮ"), ಆತನು ನೈತಿಕ ಮತ್ತು ಆತ್ಮೀಕ ವಲಯದಲ್ಲಿ ಸಹ ನಿಯಮಗಳನ್ನಿಟ್ಟಿದ್ದಾನೆಂದು ಊಹಿಸುವದು ಸಹಜವಾದದ್ದು. ನಾವು

ಪ್ರಾಕೃತಿಕ ನಿಯಮಗಳನ್ನು ಉಲ್ಲಂಘಿಸಿದಾಗ, ಅದರ ಪರಿಣಾಮಗಳನ್ನು ಎದುರಿಸುತ್ತೇವೆಂಬ ಸತ್ಯವು ನಮಗೆ ಆತ್ಮೀಕ ಮತ್ತು ನೈತೀಕ ನಿಯಮಗಳನ್ನು ಉಲ್ಲಂಘಿಸಿದರೆ ದಂಡನೆಗಳು ಕಾದಿರುತ್ತವೆಂದು ಸೂಚಿಸುತ್ತದೆ. ಈ ವಿಧವಾದ ವಾದವನ್ನು ವಿಸ್ತರಿಸುತ್ತಾ ಹೋಗಬಹುದು. ದೇವರ ಸಮೃದ್ಧಿಯಾದ ಒದಗಿಸುವಿಕೆಯು ದೇವರ ಉದಾರತೆಯನ್ನು ಕುರಿತು ಸಾಕ್ಷಿ ಹೇಳುತ್ತದೆ. ಈ ಜಗತ್ತಿನಲ್ಲಿರುವ ಸೌಂದರ್ಯತೆಯು ದೇವರ ಗುಣಲಕ್ಷಣದ ಸುಂದರತೆಯನ್ನು ಕುರಿತು ಹೇಳುವದಾಗಿದೆ (ನೋಡಿರಿ ಕೀರ್ತನೆ 27:4)—ಮತ್ತು ಮುಂತಾದವುಗಳನ್ನು.

ಅನ್ಯಜನರು ತಮ್ಮ ಮೂಲಪಿತೃಗಳಿಂದ ಕಲಿತ ಅನೇಕ ಸತ್ಯಗಳನ್ನು ನೆನಪಿನಿಂದ ಅಳಿದುಹೋಗುವದಕ್ಕೆ ಬಿಟ್ಟಿದ್ದರು. ಅವರು ಉಳಿದಿದ್ದ ಅಲ್ಪಸ್ವಲ್ಪ ಸತ್ಯವನ್ನು ಸಹ ತಿರುಚಿ, ಕೆಡಿಸಿ ಹಾಕಿದ್ದರು. ಹೀಗಿದ್ದರೂ, ನದಿಯು ಈಗಲೂ ಹರಿಯುತ್ತಿತ್ತು . . . ಹೂಗಳು ಈಗಲೂ ಅರಳುತ್ತಿದ್ದವು . . . ಸೂರ್ಯನು ಪ್ರಕಾಶಿಸುತ್ತಿದ್ದನು . . . ಮುಗಿಲುಬಿಲ್ಲು ಬಿರುಗಾಳಿಯ ನಂತರ ಈಗಲೂ ಆಕಾಶದಲ್ಲಿ ಕಾಣಿಸಿಕೊಳ್ಳುತ್ತಿತ್ತು . . . ಮತ್ತು ರಾತ್ರಿಯಲ್ಲಿ ನಕ್ಷತ್ರಗಳು ಈಗಲೂ ಮಿನುಗುತ್ತಿದ್ದವು. ದೇವರು ತನ್ನ ಯಾವ ಸಾಕ್ಷಿಗಳೂ ಇಲ್ಲದಂತೆ ಬಿಟ್ಟಿರಲಿಲ್ಲ. ಅನ್ಯಜನರಿಗೆ ಸ್ವಲ್ಪ ಆತ್ಮೀಕ ಬೆಳಕು ಇತ್ತು—ಆದರೆ ಅವರು ಬೆಳಕನ್ನು ನಿರ್ಲಕ್ಷಿಸಿದ್ದರು. ಅವರು ತಮಗೆ ದೊರೆತ ಸತ್ಯಗಳಿಗೆ ತಕ್ಕಂತೆ ಜೀವಿಸುವದಕ್ಕೆ ಅವರು ವಿಫಲವಾಗಿದ್ದರು.

ಆದ್ದರಿಂದ ಪೌಲನು ಈ ಮುಕ್ತಾಯಕ್ಕೆ ಬಂದನು, **ಹೀಗಿರುವದರಿಂದ ಅವರು ಯಾವ ಉತ್ತರವಿಲ್ಲದವರಾಗಿದ್ದಾರೆ.** ಅಧ್ಯಾಯ 2 ರಲ್ಲಿ, ಪೌಲನು ಯೆಹೂದ್ಯರ ವಿಷಯವಾಗಿಯೂ ಇದೇ ಆರೋಪವನ್ನು ಮಾಡಿದನು (2:1). ದೇವರ ಚಿತ್ತವನ್ನು ಮಾಡದಿರುವದಕ್ಕಾಗಿ ಮನುಷ್ಯರಲ್ಲಿ ಯಾವ "ಉತ್ತರಗಳೂ" (ನೆಪಗಳೂ) ಇರುವದಿಲ್ಲ ಎಂದು ಇದರ ಅರ್ಥವಲ್ಲ. ಹೀಗೊಂದು ಮಾತಿದೆ, ಏನೆಂದರೆ ತನ್ನ ಬಳಿಯಲ್ಲಿ ದುಡ್ಡಿನ ಪರ್ಸ್ ಇಲ್ಲದಿರುವ ವ್ಯಕ್ತಿಯನ್ನು ನೀವು ಕಾಣಬಹುದು, ಆದರೆ ನೆವಗಳಿಲ್ಲದ ಮನುಷ್ಯನಂತೂ ನಿಮಗೆ ಕಾಣಸಿಕ್ಕುವದಿಲ್ಲ. "ಅವರು ಉತ್ತರವಿಲ್ಲದವರಾಗಿದ್ದಾರೆ" ಎಂದು ಪೌಲನು ಹೇಳಿದಾಗ, ಆತನು ದೇವರನ್ನು ತಿಳಿಯದಿರುವದಕ್ಕಾಗಿ ಮತ್ತು ಆತನ ಚಿತ್ತವನ್ನು ಮಾಡದಿರುವ ದಕ್ಕಾಗಿ ಯಾರ ಬಳಿಯೂ *ತಕ್ಕದಾದ* ನೆವವಿಲ್ಲ ಎಂಬುದು ಆತನ ತಾತ್ಪರ್ಯವಾಗಿತ್ತು. NEBಯು ಇದನ್ನು "ಅವರ ನಡವಳಿಕೆಯನ್ನು ಸಮರ್ಥಿಸಿಕೊಳ್ಳಲು ಅವರಿಗೆ ಸಾಧ್ಯವಾದ ಯಾವ ಉತ್ತರವೂ ಇಲ್ಲ . . ."

**ವಚನಗಳು 21, 22.** ಮುಂದಿನ ಕಾಲ್ಪನಿಕ ವಾದ ಪ್ರತಿವಾದದಲ್ಲಿನ ಅಂಶವೇನೆಂದರೆ, ದೇವರನ್ನು ತಿಳಿಯುವ ಸಾಧ್ಯತೆಗೆ ಮತ್ತು ದೇವರನ್ನು ತಿಳಿಯಲು ಮನುಷ್ಯನ ಬಯಕೆಯ ನಡುವಿನ ವಾದವಿವಾದ.

> *ಎದುರಾಳಿ*: "ನೀನು ಬಹಳ ಕಠೋರ ಎಂದು ನನಗನ್ನಿಸುತ್ತದೆ! ದೇವರನ್ನು ತಿಳಿಯುವದು ಮಾನವರಿಗೆ ಯಾವಾಗಲೂ ಸಾಧ್ಯವಾಗಿ ಇರಲಿಲ್ಲ."
>
> *ಪೌಲನು*: "ಮಾನವನು ದೇವರನ್ನು ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ ಎಂಬುದು ಇಲ್ಲಿ ಸಮಸ್ಯೆಯಲ್ಲ, ಆದರೆ ಅವರಿಗೆ ಆತನನ್ನು ತಿಳಿದುಕೊಳ್ಳುವದಕ್ಕೆ ಮನಸ್ಸಿರಲಿಲ್ಲ. 'ಇನ್ನೆಂದಿಗೂ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ' (1:28)!"

ವಾಕ್ಯವು ಮುಂದುವರೆಯುತ್ತದೆ, **ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ.** "ದೇವರ . . . ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ" ಎಂಬ ಮಾತು ಸ್ವಲ್ಪ ವಿವರಣೆಗೆ ಯೋಗ್ಯವಾಗಿದೆ, ಯಾಕೆಂದರೆ ಮತ್ತೊಂದು ಕಡೆಯಲ್ಲಿ ಪೌಲನು "ಅನ್ಯಜನರು ದೇವರನ್ನು ತಿಳಿದಿರಲಿಲ್ಲ" ಎಂಬದಾಗಿ ಹೇಳಿದ್ದನು (ಗಲಾತ್ಯ 4:8; ನೋಡಿರಿ 1 ಕೊರಿಂಥ 1:21; 1 ಥೆಸಲೋನಿಕ 4:5). ಇಲ್ಲಿ, ಪೌಲನು ಅನ್ಯಜನರಿಗೆ ಗತಕಾಲದಲ್ಲಿ ದೇವರ ಜ್ಞಾನವಿತ್ತು ಎಂಬದನ್ನು ಒತ್ತಿ ಹೇಳುತ್ತಿದ್ದಾನೆ. ಹೇಗೂ, ಅವರು ತಮಗೆ ದೇವರು ದಯಪಾಲಿಸಿದ ಜ್ಞಾನವನ್ನು *ಅಣಗಿಸಿದ್ದರಿಂದ* (1:18), ಅವರು ಈಗ ದೇವರ ಕುರಿತು ಅಜ್ಞಾನಿಗಳಾಗಿದ್ದಾರೆ.

ಅವರು ಆ ಸ್ಥಿತಿಯನ್ನು ಹೇಗೆ ತಲುಪಿದ್ದರು? ಪೌಲನು ದೇವರಿಂದ ದೂರಕ್ಕೆ ಸಾಗುವ ದಾರಿಯ ಕುರಿತು ವಿವರವಾಗಿ ಬಣ್ಣಿಸುತ್ತಾ ಆರಂಭಿಸುತ್ತಾನೆ. ಮೊದಲನೆಯದಾಗಿ, ಅನ್ಯಜನರು "ಆತನನ್ನು ಘನಪಡಿಸಲು" ವಿಫಲರಾಗಿದ್ದರು. "ಘನಪಡಿಸು" ಎಂಬುದರ ಅನುವಾದಿತ ಗ್ರೀಕ್ ಪದವು (δοξάζω, *doxazō*) "ಮಹಿಮೆ" (δόξα, *doxa*) ಎಂಬುದಕ್ಕೆ ಸಂಬಂಧ ಪಟ್ಟಿರುತ್ತದೆ, ಮತ್ತು ಅಕ್ಷರಶಃ "ಮಹಿಮೆಪಡಿಸು" ಎಂಬ ಅರ್ಥವನ್ನು ಹೊಂದಿದೆ. ಮಹಿಮೆಕರವಾದ ಸೂರ್ಯಾಸ್ತಮಾನವುಳ್ಳ ಜಗತ್ತನ್ನು ಒಬ್ಬ ಮಹಿಮೆಕರನಾದ ದೇವರಿಂದ ಸೃಷ್ಟಿಸಲ್ಪಟ್ಟಿದೆ ಎಂಬದನ್ನು ಜನರು ಗ್ರಹಿಸಿಕೊಂಡಿ ರಬೇಕಿತ್ತು. ಘನಗಾಂಭೀರ್ಯವುಳ್ಳ ಗಿಡಮರಗಳನ್ನು ಮತ್ತು ಪರ್ವತಗಳನ್ನು ಹೊಂದಿರುವ ಜಗತ್ತನ್ನು ಒಬ್ಬ ಘನಗಾಂಭಿರ್ಯವುಳ್ಳ ದೇವರೇ ಸೃಷ್ಟಿಸಿರುವದಕ್ಕೆ ಸಾಧ್ಯ. ಅದ್ಭುತವಾದ, ಆಶ್ಚರ್ಯಗಳಿಂದ ತುಂಬಿರುವ ಜಗತ್ತನ್ನು ಅದ್ಭುತ ಮತ್ತು ಆಶ್ಚರ್ಯವಾದ ದೇವರಿಂದ ಮಾತ್ರವೇ ರೂಪಿಸಲ್ಪಟ್ಟಿರಲು ಸಾಧ್ಯ. ಹೀಗಿದ್ದರೂ, ಅನ್ಯಜನರು ದೇವರ ಅದ್ವಿತೀಯ ಮಹಿಮೆಯನ್ನು ಗುರುತಿಸುವದಕ್ಕೆ ನಿರಾಕರಿಸಿದರು ಎಂದು ಪೌಲನು ಹೇಳುತ್ತಾನೆ.

ಎರಡನೆಯದಾಗಿ, ಅವರು **ಆತನನ್ನು ಸ್ತುತಿಸಲಿಲ್ಲ**. ಅವರ ನರನಾಡಿಗಳಲ್ಲಿ ಚಲಿಸುತ್ತಿದ್ದ ಜೀವವನ್ನು ಅವರು ಸ್ವೀಕರಿಸಿದ್ದರು ಮತ್ತು ಆತನು ಒದಗಿಸಿದ ಗಾಳಿಯನ್ನು ಉಸಿರಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 17:25). ಅವರು ಆತನ ಸೂರ್ಯಬೆಳಕನ್ನು ಆನಂದಿಸಿದರು ಮತ್ತು ಆತನ ಮಳೆಯಿಂದ ಪ್ರಯೋಜನ ಪಡೆದರು (ಮತ್ತಾಯ 5:45). ಆತನು ಸಾಧ್ಯವಾಗಿಸುವ ಆಹಾರವನ್ನು ತಿಂದರು ಮತ್ತು ಕಾಲಕಾಲಕ್ಕೆ ಬರುವ ಫಲಗಳಲ್ಲಿ ಸಂತೋಷಿಸಿದರು (ಅಪೊಸ್ತಲರ ಕೃತ್ಯಗಳು 14:17). ಅವರು ಇವುಗಳನ್ನು ಮತ್ತು ಬೇರೆ ವರ ದಾನಗಳನ್ನು ಆತನಿಂದ ಪಡೆದು ಆನಂದಿಸಿದರು, ಆದರೆ ಅವರು ಎಂದಿಗೂ ತಮ್ಮ ಮುಖಗಳನ್ನು ಆಕಾಶದೆಡೆಗೆ ಎತ್ತಿ ಆತನನಿಗೆ "ಸ್ತೋತ್ರ, ದೇವರೇ!" ಎಂದು ಹೇಳುವದಕ್ಕೆ ಸಮಯ ತೆಗೆದುಕೊಳ್ಳಲಿಲ್ಲ.

ಅನ್ಯಜನರ ಜಗತ್ತು ದೇವರನ್ನು ನಿರ್ಲಕ್ಷಿಸುತ್ತಲೇ ಬಂದಿತ್ತು. ಅದರ ಫಲಿತ ಏನಾಗಿತ್ತು? ದೇವರನ್ನು ತಕ್ಕಡಿಯಿಂದ ತೆಗೆದುಬಿಟ್ಟರೆ, ಈ ಲೋಕ ಬೆಲೆ ಕಳಕೊಳ್ಳುತ್ತದೆ; ಅದು ಅರ್ಥಹೀನವಾಗುತ್ತದೆ. ಸರ್ವಕಾಲಗಳ ಈ ದೊಡ್ಡ ಪ್ರಶ್ನೆಗಳಿಗೆ ಉತ್ತರ ಸಿಗದೆ ಹೋಗುತ್ತವೆ. "ನಾವು ಎಲ್ಲಿಂದ ಬಂದಿದ್ದೇವೆ?" ; "ನಾವು ಇಲ್ಲಿ ಏಕೆ ಇದ್ದೇವೆ?" ; "ನಾವು ಎಲ್ಲಿಗೆ ಹೋಗುತ್ತಿದ್ದೇವೆ?" "ನಾವು ದೇವರನ್ನು ಬಿಟ್ಟುಬಿಡುವಾಗ, ನಾವು ಎಲ್ಲಿಂದ ಕೆಲಸಮಾಡಬೇಕೋ ಆ ಮಾನದಂಡವನ್ನು ಅಥವಾ ಸೂಚಕಸ್ಥಾನವನ್ನು

ಕಳೆದುಕೊಳ್ಳುತ್ತೇವೆ."[61]

ಅನ್ಯಜನರು ದೇವರನ್ನು ನಿರ್ಲಕ್ಷಿಸಿದಾಗ, ಅವರು **ವಿಚಾರ ಮಾಡಿ ಮಾಡಿ ಫಲ ಕಾಣಲಿಲ್ಲ; ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು.** ಗ್ರೀಕ್ ಮೂಲ ವಾಕ್ಯದಲ್ಲಿ ಸಿಕ್ಕುವ ಅಸಡ್ಡೆಯನ್ನು ಸವಿಸ್ತಾರವಾಗಿ ವಿವರಿಸುವದು ಕಷ್ಟಕರವಾಗಿರುತ್ತದೆ. "ಫಲಕಾಣಲಿಲ್ಲ" ಎಂಬುದು ಗ್ರೀಕ್ ಪದವಾಗಿದ್ದು (ματαιόω, *mataioō*) ಅದರರ್ಥವು "ನಿಷ್ಫಲ, ವ್ಯರ್ಥ (ವಾಯಿತು)" ಎಂಬದಾಗಿ.[62] ಅನುವಾದಿತ ಪದವಾದ "ವಿಚಾರ ಮಾಡಿ ಮಾಡಿ" (διαλογισμός, *dialogismos*) ಎಂಬದರ ಅರ್ಥವು "ತರ್ಕಗಳು" ಎಂಬುದು (ASV), ಅದರ ಕಾರಣದಿಂದ, ಪೌಲನು ಹೇಳಿದ್ದೇನೆಂದರೆ ಅವರ ತರ್ಕವು ಯಾವ ತರ್ಕವೇ ಇಲ್ಲದ್ದಾಗಿತ್ತು. TEV ಆವೃತ್ತಿಯು ಅವರ ಆಲೋಚನೆಗಳು "ಸಂಪೂರ್ಣ ಅರ್ಥಹೀನ" ಆಗಿದ್ದವು ಎಂದು ಅನುವಾದಿಸುತ್ತದೆ.

"ವಿವೇಕವಿಲ್ಲದ" ಎಂಬ ಅನುವಾದಿತ ಪದವು (ἀσύνετος, *asunetos*) "ವಿವೇಚನೆಯಿಲ್ಲದೆ" ಅಥವಾ "ಅರ್ಥಮಾಡಿಕೊಳ್ಳುವ ಬುದ್ಧಿಯಿಲ್ಲದ" ಎಂಬರ್ಥ ವಾಗಿದೆ.[63] RSVಯು ಇದನ್ನು "ಬುದ್ಧಿಹೀನವಾದ" ಎಂದು, CEVಯು "ಮೂರ್ಖ" ಎಂದು ಅನುವಾದಿಸುತ್ತದೆ. ದೇವರು ಅವರಿಗೆ ಅನುಗ್ರಹಿಸಿದ ಸತ್ಯವನ್ನು ಅನ್ಯಜನರು ತಿರಸ್ಕರಿಸಿದಾಗ, ಅವರ ಹೃದಯಗಳು ಬುದ್ಧಿಹೀನಗೊಂಡವು, ವಿವೇಚನೆ, ಗ್ರಹಿಕೆ ಇಲ್ಲದವುಗಳು ಮತ್ತು ಮೂರ್ಖಗೊಂಡವು. ಅವರ ಹೃದಯಗಳು ಕತ್ತಲೆಯಿಂದ ತುಂಬಿದವು. ಅವರ ಮೂರ್ಖ ತರ್ಕದ ಮೂಲಕ, ಅವರು ತಮಗೆ ದೇವರಿಂದ ಕೊಡಲ್ಪಟ್ಟಿದ್ದ ಬೆಳಕನ್ನು ನಂದಿಸಿಬಿಟ್ಟಿದ್ದರು.

ವಚನ 22 ರಲ್ಲಿ ಪೌಲನ ತೀಕ್ಷ್ಣ ವಿಮರ್ಶೆಯು ಉತ್ತುಂಗವನ್ನು ತಲುಪುತ್ತದೆ: **ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು.** ರೋಮ್ ಮತ್ತು ಇತರ ಪ್ರಮುಖ ನಗರಗಳಲ್ಲಿ ಬಹಳಷ್ಟು ಪ್ರಚಂಡ ಭಾಷಣಕಾರರು, ತತ್ವಜ್ಞಾನಿಗಳು, ಮೇಧಾವಿಗಳು, ಮುತ್ಸದ್ದಿಗಳು ಮತ್ತು ಲೇಖಕರು ಇದ್ದರು, ಅವರು ತಮ್ಮನ್ನು ಜ್ಞಾನಿಗಳು ಎಂದು "ಹೇಳಿಕೊಂಡರು" ಮಾತ್ರವಲ್ಲದೆ ಅವರ "ಪಾಂಡಿತ್ಯವು" ವಿಶ್ವವಿಖ್ಯಾತವಾಗಿತ್ತು. ಹೀಗಿದ್ದರೂ, ಪೌಲನು ಅವರೆಲ್ಲರನ್ನೂ "ಹುಚ್ಚರು" ಎಂದು ತಳ್ಳಿಹಾಕಿದನು.

"ಹುಚ್ಚರು" ಎಂಬ ಪದವು ವಿದ್ಯಾಭ್ಯಾಸ ಅಥವಾ ಬುದ್ಧಿಯೊಂದಿಗೆ ಯಾವ ಸಂಬಂಧ ಹೊಂದಿಲ್ಲ. ಬದಲಾಗಿ, ಈ ಲೋಕವು ಮತ್ತು ಅದರಲ್ಲಿನ ಸಮಸ್ತವನ್ನು ದೇವರ ಪ್ರಕಟಣೆ ಮತ್ತು ದೇವರ ಚಿತ್ತ ಇವುಗಳಿಂದ ಹೊರತುಪಡಿಸಿ ವಿವರಿಸುವದಕ್ಕೆ ಪ್ರಯತ್ನಿಸುವದೇ ಮೂರ್ಖತನ. "ಹುಚ್ಚರಾದರು" ಎಂಬ ಕ್ರಿಯಾಪದವು μωραίνω (*mōrainō)* ಎಂಬದರಿಂದ ಬಂದಿದೆ. ಇದು μωρός (*mōros*) ಎಂಬ ಪದಕ್ಕೆ ಸಂಬಂಧಪಟ್ಟಿದೆ, ಇದರಿಂದಲೇ ಆಂಗ್ಲ ಭಾಷೆಯ "moron" (ಮೂರ್ಖ) ಹುಟ್ಟಿರುತ್ತದೆ. ಪೌಲನ ಪ್ರಕಾರವಾಗಿ, ಒಬ್ಬ ಕಲಿತಿರುವ ವ್ಯಕ್ತಿಯು ದೇವರ ಪ್ರಕಟಣೆಯನ್ನು ಅಲಕ್ಷಿಸಿ ತನ್ನ ಅಭಿಪ್ರಾಯ ತಿಳಿಸುವದಾದರೆ ಆತನು ಒಬ್ಬ "ವಿದ್ಯಾವಂತ ಮೂರ್ಖನು." Coffman ಇದನ್ನು ಹೀಗೆ ಬರೆದರು: ಒಬ್ಬನು ದೇವರನ್ನು ತಿರಸ್ಕರಿಸಿದಾಗ, ಅವನು "Homo sapiens" ("ಬುದ್ಧಿವಂತನು")[64] ಆಗಿರುವದರ ಬದಲಿಗೆ ಆತನು "Homo ignoramus" ("ಅಜ್ಞಾನಿ") ಆಗುತ್ತಾನೆ![65] ಬಹಳ ವರ್ಷದ ಹಿಂದೆ ಯೆರೆಮೀಯನು ಬರೆದ ಹಾಗೆ, "ಮಾನವನ

ಮಾರ್ಗವು ಅವನ ಸ್ವಾಧೀನದಲ್ಲಿಲ್ಲವೆಂದು ನನಗೆ ಗೊತ್ತು; ಮನುಷ್ಯನು ನಡೆದಾಡುತ್ತಾ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನಿಡಲಾರನು" (ಯೆರೆಮೀಯ 10:23). ಒಟ್ಟಾರೆಯಾಗಿ, ಪೌಲನು ಹೇಳಲಿಚ್ಛಿಸಿದ್ದೇನೆಂದರೆ, "ದೇವರಿಲ್ಲದೆ, ಮಾನವರು ತರ್ಕಮಾಡುವದು ಹುಚ್ಚುತನ—ತಿಳುವಳಿಕೆಯಿಲ್ಲದೆ, ಅದು ಕೇವಲ ಅಜ್ಞಾನ ವನ್ನು ಕೂಡಿಸಿಟ್ಟುಕೊಳ್ಳುವದಾಗಿದೆ ಅಷ್ಟೇ!"

**ವಚನ 23.** ಮುಂದಿನ ಕಾಲ್ಪನಿಕ ವಾದವಿವಾದದಲ್ಲಿ, ಮನುಷ್ಯನ ಅಜ್ಞಾನವು ವಿಗ್ರಹಾರಾಧನೆ ಮಾಡುವದರಿಂದ ದೃಷ್ಟಾಂತಗೊಳ್ಳುತ್ತದೆ.

> *ಎದುರಾಳಿ:* "ಹುಚ್ಚುತನವಾ? ತಿಳುವಳಿಕೆಯಿಲ್ಲದೆಯಾ? ಅಜ್ಞಾನವನ್ನು ಕೂಡಿಸಿಟ್ಟುಕೊಳ್ಳುವದಾ? ಖಂಡಿತ ನೀವು ನಿಮ್ಮ ನಿಲುವನ್ನು ಸ್ವಲ್ಪ ಅಧೀಕವಾಗಿಯೇ ವ್ಯಕ್ತಪಡಿಸುತ್ತೀರುವಿರಿ!"
>
> *ಪೌಲನು:* "ನಾನೇನಾದರು ಅರ್ಥ ಮಾಡಿಕೊಂಡಿದ್ದರೆ. ಮಾನವರು ಎಷ್ಟು ಹುಚ್ಚರಾಗಿದ್ದಾರೆಂಬದಕ್ಕೆ ನಿನಗೆ ದೃಷ್ಟಾಂತ ಬೇಕೋ? ಒಂದು ಉದಾಹರಣೆ ಇಲ್ಲಿದೆ: ಮನುಷ್ಯರು ಕಟ್ಟಿಗೆ, ಕಲ್ಲು, ಮಣ್ಣು, ಮತ್ತು ಕಬ್ಬಿಣಗಳ ವಿಗ್ರಹಗಳನ್ನು ಮಾಡುತ್ತಾರೆ—ಮತ್ತು ನಂತರ ತಾವೇ ಉಂಟುಮಾಡಿದವುಗಳನ್ನು ಆರಾಧಿಸುತ್ತಾರೆ !"

"ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು" (1:22) ಎಂಬ ಮಾತುಗಳು ಕೇವಲ ಪ್ರಾರಂಭದ ಮಾತುಗಳಷ್ಟೇ ಆಗಿದ್ದವು. ಅವರು ಎಷ್ಟು ಹುಚ್ಚರಾಗಿ ಮಾರ್ಪಟ್ಟಿದ್ದಾರೆಂಬದಕ್ಕೆ ಆಧಾರ ಕೊಡುತ್ತಾ ಪೌಲನು ತನ್ನ ಮಾತುಗಳನ್ನು ಮುಂದುವರೆಸುತ್ತಾನೆ: ಅವರು **ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ, ಪಶು, ಪಕ್ಷಿ, ಸರ್ಪಾದಿಗಳ ಮೂರ್ತಿಗಳನ್ನು ಮಾಡಿಕೊಂಡರು.**

ದೇವರು ಮನುಷ್ಯರ ಹೃದಯಗಳಲ್ಲಿ ಆರಾಧಿಸಬೇಕೆಂಬ ಅಗತ್ಯತೆಯನ್ನಿಟ್ಟನು. ಒಬ್ಬನು ವಿಶ್ವದ ಯಾವ ಮೂಲೆಗೆ ಹೋದರೂ ಒಂದು ಉನ್ನತವಾದ ಶಕ್ತಿಯನ್ನು ಪೂಜಿಸಬೇಕೆಂಬ ಸಾರ್ವತ್ರಿಕ ಹಂಬಲವು ಇರುವದಕ್ಕೆ ಸಾಕ್ಷಿಯನ್ನು ಕಾಣುತ್ತಾನೆ. ಮಾನವ ಜನಾಂಗವು ಸತ್ಯದೇವರನ್ನು ತಿರಸ್ಕರಿಸಿದಾಗ, ಆರಾಧಿಸಬೇಕೆಂಬ ಬಯಕೆಯು ಈಗಲೂ ಮನುಷ್ಯರ ಹೃದಯಗಳಲ್ಲಿ ಉರಿಯುತ್ತಲಿತ್ತು. ಈ ಬಯಕೆಯನ್ನು ನೆರವೇರಿಸುವದಕ್ಕಾಗಿ, ಅವರು ಸುಳ್ಳು ದೇವರುಗಳನ್ನು ಕಂಡುಹಿಡಿದರು, ಅವುಗಳನ್ನು ಪ್ರತಿನಿಧಿಸುವದಕ್ಕೆ ರೂಪಗಳನ್ನು ಕಲ್ಪಿಸಿಕೊಂಡರು, ಮತ್ತು ಬಳಿಕ ಆ ಮೂರ್ತಿಗಳನ್ನು ಆರಾಧಿಸಿದರು.

ಯೆಹೂದ್ಯರು ಸ್ವತಃ ದೇವರೊಂದಿಗಿನ ಅವರ ಒಡಂಬಡಿಕೆಯ ಪ್ರಾರಂಭದಿಂದ (ವಿಮೋಚನಕಾಂಡ 32) ಹಿಡಿದು ರಾಜ್ಯಗಳು ವಿಭಾಗಿಸಲ್ಪಟ್ಟ ಕಾಲದ (1 ಅರಸುಗಳು 12) ವರೆಗೆ ವಿಗ್ರಹಾರಾಧನೆ ಸಮಸ್ಯೆಯಿಂದ ಬಳಲುತ್ತಿದ್ದರು. ರೋಮಾಪುರದವರಿಗೆ 1:23 ರಲ್ಲಿನ ಭಾಷೆಯನ್ನೇ ಉಪಯೋಗಿಸುತ್ತಾ ಕೀರ್ತನೆಗಾರನು ಹೀಗೆ ಬರೆದನು "ತಮ್ಮ ದಿವ್ಯಮಹಿಮೆಯನ್ನು ಬಿಟ್ಟು ಹುಲ್ಲು ತಿನ್ನುವ ಎತ್ತಿನ ಜಡಮೂರ್ತಿಯನ್ನು ಹಿಡಿದುಕೊಂಡರು"

(ಕೀರ್ತನೆ 106:20).

ವಿಗ್ರಹಾರಾಧನೆಯ ವಿರುದ್ಧ ಮಾಡಲಾಗಿರುವ ಅತ್ಯಂಥ ತೀಕ್ಷ್ಣವಾದ ದಾಳಿಗಳಲ್ಲೊಂದೆಂದರೆ ಅದು ಯೆರೆಮೀಯ 10 ರಲ್ಲಿ ಕಂಡುಬರುತ್ತದೆ. ಪ್ರವಾದಿಯು ಬಹಳ ಗಟ್ಟಿಯಾಗಿ ಹೇಳಿದ್ದೇನೆಂದರೆ ವಿಗ್ರಹಾರಾಧಕರು "ಅವರೆಲ್ಲರೂ ಪಶುಪ್ರಾಯರು, ಮಂದರು" ಮತ್ತು ಎಲ್ಲರೂ ತಿಳುವಳೀಕೆಯಿಲ್ಲದೆ ಪಶುಪ್ರಾಯರಾಗಿದ್ದಾರೆ (ಯೆರೆಮೀಯ 10:8, 14). ಆತನು ಮರದಿಂದ ಮಾಡಿದ ವಿಗ್ರಹಗಳ ಬಗ್ಗೆ ಮಾತಾಡಿದನು, "ಅರಣ್ಯದ ಮರವನ್ನು ಕತ್ತರಿಸುವರು, ಬಡಗಿಯು ಅದನ್ನು ಕೈಯಿಂದ ಬಾಚಿಯಿಂದ ರೂಪಿಸುವನು" (ಯೆರೆಮೀಯ 10:3). ಆತನು ಒತ್ತಿ ತೋರಿಸಿದ್ದೇನೆಂದರೆ, "ಅದನ್ನು ಬೆಳ್ಳಿಬಂಗಾರಗಳಿಂದ ಭೂಷಿಸುತ್ತಾರೆ, ಅಲುಗದ ಹಾಗೆ ಮೊಳೆಗಳಿಂದ ಸುತ್ತಿಗೆಯಿಂದ ಭದ್ರಪಡಿಸುತ್ತಾರೆ" (10:4). ಆತನು ಈ ಮೂರ್ತಿಗಳನ್ನು ". . . ತೋಟದ ಬೆದರುಗಂಬ" ಕ್ಕೆ ಹೋಲಿಸಿದನು ಯಾಕೆಂದರೆ ಅವುಗಳು "ಮಾತಾಡಲಾರವು" (10:5a). ವಿಗ್ರಹಗಳನ್ನು "ಹೊತ್ತುಕೊಂಡು ಹೋಗಬೇಕು, ನಡೆಯಲಾರವು!" (10:5b). ಆತನು ಬರೆದದ್ದೇನೆಂದರೆ "ತಾನು ಕೆತ್ತಿದ ವಿಗ್ರಹದ ನಿಮಿತ್ತ ಪ್ರತಿಯೊಬ್ಬ ಅಕ್ಕಸಾಲಿಗನೂ ಅವಮಾನಕ್ಕೆ ಗುರಿಯಾಗುವನು," ಯಾಕೆಂದರೆ "ಅವುಗಳಲ್ಲಿ ಶ್ವಾಸವೇ ಇಲ್ಲ" (10:14).

ಮಾನವರು ದೇವರ ಮಹಿಮೆಗೆ (*ἀλλάσσω*, *allassō*) "ಬದಲಾಗಿ" ವಿಗ್ರಹಗಳನ್ನು ಮಾಡಿಕೊಂಡಿದ್ದರು. NCVಯು ಇದನ್ನು "ಅವರು ಆ ಮಹಿಮೆಯ ಬದಲಿಗೆ ವಿಗ್ರಹಗಳನ್ನು ಆರಾಧಿಸುವದಕ್ಕೆ *ಮಾರಿಕೊಂಡರು"* (ಒತ್ತಿ ಹೇಳಿದ್ದು ನನ್ನದು). ಒಬ್ಬನು ತನ್ನಲ್ಲಿರುವ ವಸ್ತುವಿನ ಬೆಲೆಯನ್ನು ತಿಳಿದಿಲ್ಲವಾದರೆ, ಅದನ್ನು ಕೊಟ್ಟು ಬದಲಿಗೆ ಅಲ್ಪ ಮೌಲ್ಯದ ಮತ್ತೊಂದನ್ನು ಪಡೆದುಕೊಳ್ಳುವನು. ಉದಾಹರಣೆಗೆ, ಒಂದು ಚಿಕ್ಕ ಬಾಲಕನು ತನ್ನಲ್ಲಿರುವ ಅಮೂಲ್ಯವಾದ ವಜ್ರವನ್ನು ಕೊಟ್ಟು ಹೊಳೆಯುವ ನಕಲಿ ಆಭರಣವನ್ನು ಪಡೆಯಬಹುದು. ಅನ್ಯಜನರು ಇದೆಲ್ಲಾದಕ್ಕಿಂತಲೂ ಕೆಟ್ಟದಾದ ವಿನಿಮಯ ಮಾಡಿದ್ದರು: ಅವರು ದೇವರ ಸತ್ಯಗಳಿಗೆ ಬದಲಾಗಿ ಸುಳ್ಳುಗಳನ್ನು ಕೊಂಡುಕೊಂಡಿದ್ದರು. ತತ್ಪರಿಣಾಮವಾಗಿ, ಅವರು ಸತ್ಯವಾದ, ಮಹಿಮೆಯುಳ್ಳ, ಲಯವಾಗದ ದೇವರ ಬದಲಿಗೆ ಸುಳ್ಳಾದ, ಲಯವಾಗುವ, ಬೆಲೆಯಿಲ್ಲದ ವಿಗ್ರಹಗಳನ್ನು ಮಾಡಿಕೊಂಡಿದ್ದರು.

ನೆನಪಿನಲ್ಲಿರಲಿ, ಅವರು ದೇವರನ್ನು ತಿರಸ್ಕರಿಸಿದಾಗ, ಅವರ ಮನಸ್ಸುಗಳು ಕತ್ತಲಾದವು. ಕತ್ತಲೆಯಲ್ಲಿ ಇಣುಕುತ್ತಿರುವ ಒಬ್ಬ ಚಿಕ್ಕ ಬಾಲಕನು, ಎಲ್ಲಾ ವಿಧವಾದ ಕಾಲ್ಪನಿಕ, ಭಯವುಳ್ಳ ಆಕಾರಗಳನ್ನು ಕಲ್ಪಿಸಿಕೊಳ್ಳುವನು. ಅದೇ ರೀತಿ ಕತ್ತಲೆಯಿಂದ ತುಂಬಿದ ತಮ್ಮ ಬುದ್ಧಿಗಳಿಂದ ಸರ್ವಶಕ್ತನಾದ ದೇವರನ್ನು ದರ್ಶಿಸಲು ಪ್ರಯತ್ನಿಸಿದಾಗ ಇದೇ ಸಂಭವಿಸಿತು. ಅವರು ತಮ್ಮ ಮೂರ್ತಿಗಳನ್ನು "ಲಯವಾಗುವ ಮನುಷ್ಯ, ಪಶು, ಪಕ್ಷಿ, ಸರ್ಪಾದಿಗಳ" ರೂಪದಲ್ಲಿ ಮಾಡಿಕೊಂಡರು. ಪೌಲನ ಹೇಳಿಕೆಯ ಉದಾಹರಣೆಗಳು ಆ ದಿನದಲ್ಲಿ ಎಲ್ಲರ ಕಣ್ಣು ಮುಂದೆಯೇ ಇತ್ತು:

> *"ಮನುಷ್ಯ" :* ರೋಮನ್ನರು ಕೈಸರರನನ್ನು ಆರಾಧಿಸುತ್ತಿದ್ದರು; ಗ್ರೀಕರು ತಮ್ಮ ಅನೇಕ ದೇವರುಗಳನ್ನು ಮನುಷ್ಯರೂಪದಲ್ಲಿ ಕಂಡರು.
>
> *"ಪಕ್ಷಿಗಳು" :* ಐಗುಪ್ತ್ಯರು ವಿವಿಧ ರೀತಿಯ ಪಕ್ಷಿಗಳನ್ನು, IBIS ಎಂಬ ಪಕ್ಷಿಯನ್ನು

ಸಹ ಆರಾಧಿಸುತ್ತಿದ್ದರು.

*"ನಾಲ್ಕು –ಕಾಲುಗಳ ಪ್ರಾಣಿಗಳು" :* ಐಗುಪ್ತ್ಯರು ಹೋರಿಯನ್ನು ಆರಾಧಿಸಿದ್ದರು; ಯೆಹೂದ್ಯರು ತಮ್ಮ ಬಂಗಾರದ ಹಸುಗಳ ಮುಂದೆ ಅಡ್ಡಬಿದ್ದರು.

*"ಹರಿದಾಡುವ ಪ್ರಾಣಿಗಳು"* : ಅಶ್ಶೂರಿಯನ್ನರು ಕ್ರೀಮಿಗಳನ್ನು; ಸರ್ಪಾದಿಗಳನ್ನು ಆರಾಧಿಸುತ್ತಿದ್ದರು; ಐಗುಪ್ತ್ಯರು ಏಡಿಯನ್ನು ಆರಾಧಿಸುತ್ತಿದ್ದರು.

ಅವರ ದಾರಿ ಬಹಳ ಕೀಳುಮಟ್ಟದ್ದಾಗಿತ್ತು. Chester Warren Quimby ಇದನ್ನು ಹೀಗೆ ಕಂಡರು: "ಅವರು ದೇವರನ್ನು ಎರಡು ಕಾಲುಗಳ ಮೇಲೆ ಇಳಿಸಿದರು, ನಂತರ ಎಲ್ಲಾ ನಾಲ್ಕು ಕಾಲುಗಳಿಗೆ ಇಳಿಸಿದರು, ಮತ್ತು ಅನಂತರ ಅವರು ಹೊಟ್ಟೆಯ ಮೇಲೆ ನಿಲ್ಲಿಸಿದರು!"[66] ಅವರ ಮನಸ್ಸು ಎಷ್ಟೊಂದು ಕಾರ್ಗತ್ತಲಾದವೆಂದರೆ ಅವರು ಕೊನೆಗೆ ತಿಗಣಿಗಳನ್ನು ಸಹ ಆರಾಧಿಸುವದಕ್ಕೆ ತೊಡಗಿದರು!

**ವಚನ 24.** ವಚನ 22 ಮತ್ತು 23 ರಲ್ಲಿ ವಿಗ್ರಹಗಳ ಬಗ್ಗೆ ಚರ್ಚಿಸಿದ ನಂತರ, ಪೌಲನು ಹೇಳಿದ್ದೇನೆಂದರೆ **ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು.** "ದೇವರು ಅವರನ್ನು . . . ಒಪ್ಪಿಸಿದನು" ಎಂದು ಹೇಳಿದಾಗ, ಪೌಲನ ಅರ್ಥವೇನಾಗಿತ್ತು? ದೇವರು "ಅವರನ್ನು ಒಪ್ಪಿಸಿಕೊಡುವಾಗ" ಏನು ಮಾಡಿದನು? "ಒಪ್ಪಿಸಿಕೊಟ್ಟನು" ಎಂಬದರ ಅನುವಾದಿತ ಗ್ರೀಕ್ ಶಬ್ಧವು παραδίδωμι (*paradidōmi*) ಎಂದಾಗಿದೆ, ಇದು παρά (*para*) ಉಪಸರ್ಗ ಮತ್ತು δίδωμι (*didōmi*) ("ಕೊಡು")[67] ಎಂಬ ಎರಡು ಪದಗಳಿಂದ ಬಂದಿರುತ್ತದೆ. *Paradidomi* ಅಂದರೆ "ಒಪ್ಪಿಸಿಕೊಡು, ಕೈಗೆ ಒಪ್ಪಿಸು ಬಿಡು"[68] ಎಂದಾಗಿರುತ್ತದೆ. ಈ ಪದವು ಯೇಸುವನ್ನು ವಿಚಾರಣೆಗಾಗಿ ಪಿಲಾತನಿಗೆ ಮತ್ತು ಮರಣದಂಡನೆ ವಿಧಿಸುವದಕ್ಕಾಗಿ ಸಿಪಾಯಿಗಳ ಕೈಗೆ ಒಪ್ಪಿಸಿಕೊಡುವ ಶಿಲುಬೆಯ ಕಥೆಯಲ್ಲಿ ಉಪಯೋಗಿಸಲ್ಪಟ್ಟಿದೆ (ಮಾರ್ಕ 15:1, 15).

ಹಲವಾರು ಅನುವಾದಗಳಲ್ಲಿ ರೋಮಾಪುರ 1ರ ಈ ಪದವು "ಬಿಟ್ಟುಬಿಟ್ಟನು" ಎಂದಿರುತ್ತದೆ ಆದರೆ ಕೆಲವರ ಮನಸ್ಸುಗಳಲ್ಲಿ "ಬಿಟ್ಟುಬಿಟ್ಟನು" ಎಂಬುದು "ಇನ್ನು ಮೇಲೆ ಆಸಕ್ತಿಯಿಲ್ಲ" ಅಥವಾ "ಇನ್ನು ಅವರ ಬಗ್ಗೆ ಚಿಂತೆ ಬಿಟ್ಟನು" ಎಂಬದಾಗಿರುತ್ತದೆ. ದೇವರು ಪಾಪಿಗಳನ್ನು ಒಪ್ಪಿಸಿ ಕೊಟ್ಟಾಗ, ಆತನಿಗೆ ಆಗಲೂ ಅವರ ಬಗ್ಗೆ ಕಾಳಜಿಯಿತ್ತು (2 ಪೇತ್ರ 3:9); ಅವರು ಪುನಃ ತನ್ನ ಬಳಿಗೆ ಬರುವರೆಂದು ಆತನು ಆಗಲೂ ನಿರೀಕ್ಷಿಸುತ್ತಿದ್ದನು. ವಿಷಯವು ಹೀಗಿರುವದರಿಂದ, ಬಹುಪಾಲು ಭಾಷಾಂತರಗಳು *paradidomi*ಯ ಅರ್ಥವನ್ನು ವ್ಯಕ್ತಗೊಳಿಸುವದಕ್ಕೆ ವಿವಿಧ ಇತರ ಪದಗಳನ್ನು ಉಪಯೋಗಿಸುತ್ತವೆ. LB ಭಾಷಾಂತರದಲ್ಲಿ ಇದು "ದೇವರು ಅವರನ್ನು ಕೈ ಬಿಟ್ಟುಬಿಟ್ಟನು" ಎಂದಿರುತ್ತದೆ (1:26).

ಹಾಗಾದರೆ, "ದೇವರು ಅವರನ್ನು ಒಪ್ಪಿಸಿ ಕೊಟ್ಟನು" - ಅಂದರೆ "ಅವರನ್ನು . . . ಕೈಗೆ ಒಪ್ಪಿಸಿದನು," "ವಶಕ್ಕೆ ಕೊಟ್ಟುಬಿಟ್ಟನು" ಅಥವಾ "ಅವರನ್ನು ಹೋಗಲು ಬಿಟ್ಟುಬಿಟ್ಟನು" – ಎಂದು ಪೌಲನು ಹೇಳಿದಾಗ ಆತನ *ತಾತ್ಪರ್ಯ* ಏನಾಗಿತ್ತು? ಪೌಲನ ಈ ಮಾತುಗಳನ್ನು ವ್ಯಾಖ್ಯಾನಕಾರರು ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸುತ್ತಾರೆ,[69] ಆದರೆ ಅವರಲ್ಲಿ

ಬಹುಪಾಲು ಒಂದೇ (ಅಥವಾ ಹೋಲಿಕೆಯ) ಮುಕ್ತಾಯಕ್ಕೆ ಬರುತ್ತಾರೆ. ಮಾನವರನ್ನು ಪಾಪದಲ್ಲಿ ಕೆಳಕ್ಕೆ ಹೋಗುತ್ತಲಿರುವದರಿಂದ ಅವರನ್ನು ತಡೆಯದೆ, ದೇವರು ಅವರನ್ನು ಅವರಿಷ್ಟದಂತೆ ನಡೆಯುವದಕ್ಕೆ ಬಿಟ್ಟನು (ಹೋಲಿಸಿರಿ ಆದಿಕಾಂಡ 6:3). ಇದು NLT ಯಲ್ಲಿ ಹೀಗಿದೆ "ದೇವರು ಅವರನ್ನು ಹೋಗಲು ಮತ್ತು ಅವರ ಹೃದಯವಿಚ್ಚಿಸುವ ಯಾವದೇ ನಾಚಿಕೆಗೆಟ್ಟ ಕಾರ್ಯಗಳನ್ನು ಮಾಡುವದಕ್ಕೆ ಬಿಟ್ಟನು." ಅಲ್ಲದೆ, ಜನರನ್ನು ಅವರ ಪಾಪಗಳ ಪರಿಣಾಮಗಳಿಂದ ಕಾಪಾಡುವದಕ್ಕೆ ಬದಲಿಗೆ, ಅವರು ಆರಿಸಿಕೊಂಡ ಜೀವನ ಶೈಲಿಯ ಪೂರ್ಣ ಪರಿಣಾಮಗಳನ್ನು ಅನುಭವಿಸುವ ಹಾಗೆ ದೇವರು ಅವರನ್ನು ಬಿಟ್ಟುಬಿಟ್ಟನು (ನೋಡಿರಿ ಗಲಾತ್ಯ 6:7). Briscoe ಅವರ ಮಾತುಗಳಲ್ಲಿ ಹೀಗಿರುತ್ತದೆ:

> ಮಾನವರ ಕ್ರಿಯೆಗಳಿಗೆ ದೇವರ ಪ್ರತಿಕ್ರಿಯೆ ಏನಾಗಿತ್ತೆಂದರೆ ಅವರ ಮೇಲೆ ಅಗ್ನಿ ಮತ್ತು ಗಂಧಕಗಳನ್ನು ಕಳುಹಿಸುವದಲ್ಲ . . . ಅನ್ಯಜನಾಂಗದ ವಿಗ್ರಹಾರಾಧಕರ ಮುಖ್ಯಸ್ಥರನ್ನು ನಾಶಗೊಳಿಸಲಿಲ್ಲ, ಆತನು ಈ ದಿನಗಳಲ್ಲೂ ಹಾಗೆ ಮಾಡುತ್ತಿಲ್ಲ. ಆತನು ಅತ್ಯಂಥ ಸೂಕ್ಷ್ಮವಾದ ಮತ್ತು ಅತಿ ಭಯಹುಟ್ಟಿಸುವ ಕಾರ್ಯವನ್ನು ಮಾಡಿದನು—ಆತನು ಮಾನವನಿಗೆ ತನ್ನ ಕ್ರಿಯೆಗಳನ್ನು ಆರಿಸಿಕೊಳ್ಳುವ ಸಂಪೂರ್ಣ ಆಯ್ಕೆಯನ್ನು ಮತ್ತು ನಂತರ ಅದರ ಪರಿಣಾಮಗಳನ್ನು ಅನುಭವಿಸುತ್ತಾ ಜೀವಿಸುವ ಪರಿಪೂರ್ಣ ಸ್ವಾತಂತ್ರ್ಯವನ್ನು ಅನುಗ್ರಹಿಸಿದನು.[70]

J. D. Thomas ಹೀಗೆ ಹೇಳುತ್ತಾರೆ, "ನೀನು ದೇವರಿಂದ ಬೇರ್ಪಡುವದಕ್ಕೆ ತೀರ್ಮಾನಿಸುವದಾದರೆ, ನಿನ್ನನ್ನು ತಡೆಯುವದಕ್ಕಾಗಿ ಆತನು ದೇವದೂತರ ದಂಡನ್ನು ಕಳಿಹಿಸುವದಿಲ್ಲ. ಅದು ಆತನ ಹೃದಯಕ್ಕೆ ಬಹಳ ವೇದನೆಯುಂಟು ಮಾಡುವದು, ಆದರೆ ಆತನು ನಿನ್ನನ್ನು ಹೋಗಲು ಬಿಡುವನು."[71] Richard Rogers ಇದನ್ನು ಹೀಗೆ ಹೇಳುತ್ತಾರೆ: "ನೀನು ನಿನ್ನನ್ನು ಒಂದು ವಿಷಯಕ್ಕೆ ಒಳಪಡಿಸಿಕೊಂಡರೆ, ದೇವರು ನಿನ್ನನ್ನು ಆ ವಿಷಯಕ್ಕೆ ಒಪ್ಪಿಸಿ ಕೊಡುವನು. ಆತನು [ಕೋಪ]ಗೊಂಡಿರುತ್ತಾನೆಂಬದು ಇದಕ್ಕೆ ಕಾರಣವಲ್ಲ, ಆದಾಗ್ಯೂ ಆತನಿಗೆ ಕೋಪವಿದ್ದಿರಬಹುದು. ಅದಕ್ಕೆ ಕಾರಣ ಆತನು ಪ್ರೀತಿ ಸ್ವರೂಪಿ ಎಂಬುದು, ಅದು ಆತನಾಗಿರಲೇಬೇಕು."[72] ಮೂವರು ಲೇಖಕರು ಸಲಹೆಮಾಡಿದ್ದೇನೆಂದರೆ ಪೌಲನು ಆ ದಿನದಲ್ಲಿ ಜನರಿಗೆ "ನಿಮ್ಮ ಸುತ್ತಲೂ ನೋಡಿರಿ! ದೇವರು ತನ್ನ ಕೋಪಾಗ್ನಿಯಲ್ಲಿ ಪಾಪಸ್ವಭಾವವು ತನ್ನ ದಾರಿಯಲ್ಲಿ ಮುಕ್ತವಾಗಿ ಸಾಗುವಂತೆ ಅನುಮತಿಸುತ್ತಿರುವದಕ್ಕೆ ಸಾಕ್ಷಿಗಳು ಎಲ್ಲೆಡೆಯೂ ಲಭ್ಯವಿರುತ್ತವೆ. ಮಾನವ ಜನಾಂಗವು ದೊಡ್ಡ ಇಕ್ಕಟ್ಟಿನಲ್ಲಿರುತ್ತದೆ!"[73] ಎಂದು ಹೇಳುತ್ತಿದ್ದಾನೆ.

ರೋಮಾಪುರ 1:24ರ ಸಂದೇಶವನ್ನು Eugene Peterson ಹೀಗೆ ವ್ಯಕ್ತಪಡಿಸುತ್ತಾರೆ: "ಅದಕ್ಕೆ ದೇವರು ಹೇಳಿದ್ದೇನೆಂದರೆ 'ನಿಮಗೆ ಅದೇ ಇಷ್ಟವಾಗಿದ್ದರೆ, ನಿಮಗೆ ಅದೇ ಸಿಕ್ಕುತ್ತದೆ.' ಅದಾದ ಮೇಲೆ ಅವರು ಹಂದಿಯ ಗೂಡಿನಲ್ಲಿ ಜೀವಿಸುದಕ್ಕೆ ಬಹಳ ಕಾಲ ಹಿಡಿಯಲಿಲ್ಲ . . ." (MSG). Petersonರ ಕಲ್ಪನೆಯು ತಪ್ಪಿಹೋದ ಕುಮಾರನ ಸಾಮ್ಯದ ಮೇಲೆ ಆಧಾರಿತವಾಗಿದೆ (ಲೂಕ 15:11-32). ತಂದೆಗೆ ತನ್ನ ಕಿರಿಯ ಮಗನು ಮನೆಯನ್ನು ತೊರೆದುಹೋಗುವದು ಇಷ್ಟವಿರಲಿಲ್ಲ. ಆದರೂ, ಅವನು ಆತನನ್ನು ಹೋಗುವದಕ್ಕೆ *ಬಿಟ್ಟನು*, ಹುಡುಗನು ದುರಂತಸ್ಥಿತಿಯೆಡೆಗೆ ಸಾಗಲಿರುವನೆಂದು ಗೊತ್ತಿದ್ದರೂ ಹೋಗಲು

ಬಿಟ್ಟನು. ಪೌಲನ ಮಾತುಗಳಲ್ಲಿ ಹೇಳುವದಾದರೆ, ತಂದೆಯು ಮಗನ ಸ್ವಾರ್ಥ ಇಚ್ಛೆಗಳಿಗೆ "ಅವನನ್ನು ಒಪ್ಪಿಸಿಕೊಟ್ಟನು" ಮತ್ತು ಹಂದಿಗಳ ಗೂಡಿನೆಡೆಗೆ ತಲುಪಿಸುವ ಮಾರ್ಗದಲ್ಲಿ ಹೋಗುವದಕ್ಕೆ ಬಿಟ್ಟನು. ಈ ಮಧ್ಯದಲ್ಲೆಲ್ಲಾ ತಂದೆಯು ತನ್ನ ಮಗನಿಗೆ ಬುದ್ಧಿ ಬಂದು ಮನೆಗೆ ತಿರುಗಿ ಬರುವನೆಂದು ನಿರೀಕ್ಷೆಯಿಂದ ಕಾಯುತ್ತಲೇ ಇದ್ದನು.

ಮಾನವ ಜನಾಂಗವು "ದೇವರನ್ನು ತೊರೆದುಬಿಟ್ಟಿರಬಹುದು" (ABಯಲ್ಲಿ ಅನುವಾದಿಸಲ್ಪಟ್ಟಿರುವ ಹಾಗೆ), ಆದರೆ ಜನರು "ದೇವರಿಂದ ಕೈಬಿಡಲ್ಪಟ್ಟವರಲ್ಲ." ಪಾಪವು ಮನುಷ್ಯನನ್ನು ದೇವರಿಂದ ಬೇರ್ಪಡಿಸುತ್ತಾದರೂ (ಯೆಶಾಯ 59:1, 2), ಈ ಜೀವಿತದಲ್ಲಿ ಪಾಪಿಯು ದೇವರಿಂದ ಎಂದಿಗೂ ಸಂಪೂರ್ಣ ಕೈಬಿಡಲ್ಪಟ್ಟಿರುವದಿಲ್ಲ. ಈ ಪಾಪ ತುಂಬಿದ ಜಗತ್ತು ಅನುದಿನವೂ ಹೇಗೆ ದೇವರ ಕೃಪೆ ಮತ್ತು ಕರುಣೆಗಳ ಮೇಲೆ ಅವಲಂಭಿತವಾಗಿರುತ್ತದೆಂಬದನ್ನು ಗ್ರಹಿಸುವದಿಲ್ಲ (ನೋಡಿರಿ 5:45). ಹೇಗೂ, ಒಂದು ವೇಳೆ, ಒಬ್ಬನು ಮರಣದ ತನಕವೂ ಪಶ್ಚಾತಾಪ ಪಡದೆ ಉಳಿದುಬಿಟ್ಟರೆ, ಆಗ ಅವನು ನಿತ್ಯಕಾಲಕ್ಕೂ "ದೇವರಿಂದ ಕೈಬಿಡಲ್ಪಟ್ಟ" ವನಾಗುವನು (ನೋಡಿರಿ 2 ಥೆಸಲೋನಿಕ 1:9). C. S. Lewis ರವರು ಹೇಳಿದ್ದು ಸರಿಯಾಗಿಯೇ ಇದೆ, ಏನೆಂದರೆ ಕಳೆದುಹೋದವರು "ತಾವು ಕೇಳಿಕೊಂಡ ಭಯಂಕರವಾದ ಸ್ವಾತಂತ್ರವನ್ನು ಸದಾಕಾಲವೂ ಆನಂದಿಸುವರು."[74]

ಅನ್ಯಜನರು ಅವರ "ದುರಾಶೆಗಳಿಗೆ" (ἐπιθυμία, *epithumia*) ಒಪ್ಪಿಸಲ್ಪಟ್ಟಿದ್ದರು. ಈ ಪದವು ಯಾವದೇ ರೀತಿಯ ಬಲವಾದ ಬಯಕೆಗಳನ್ನು ಸೂಚಿಸುತ್ತದೆ. ಇದು ಒಂದು ನಿರ್ಮಲ ಬಯಕೆಯನ್ನು ಸಹ ಸೂಚಿಸಬಹುದು (ನೋಡಿರಿ ಲೂಕ 22:15), ಆದರೆ ಅದು ಸಾಮಾನ್ಯವಾಗಿ ದುರಿಚ್ಛೆಗಳನ್ನು ಸೂಚಿಸುತ್ತದೆ.[75] ರೋಮಾಪುರ 1:24 ರಲ್ಲಿ, ಪೌಲನು "ಹೊಲಸುತನ" ಕ್ಕಾಗಿ ಬಲವಾದ ದುರಾಶೆ ಎಂಬದರ ಬಗ್ಗೆ ಮಾತಾಡುತ್ತಿದ್ದಾನೆ.

"ಹೊಲಸಾದ" (ಅಶುದ್ಧತೆ) ಎಂಬದರ ಅನುವಾದಿತ ಪದ (ἀκαθαρσία, *akatharsia*) "ಶುದ್ಧತೆ" ಎಂಬುದರ ಮುಂದೆ ಒಂದು ನಕಾರಾತ್ಮಕ ಉಪಸರ್ಗವನ್ನು (α, *a*) ಸೇರಿಸುತ್ತದೆ (καθαρός, *katharos*), ಆದ್ದರಿಂದ ಆ ಪದದ ಪ್ರಾಥಮಿಕ ಅರ್ಥವು "ಅಶುಚಿತ್ವ" (ನೋಡಿರಿ KJV) ಎಂದಾಗಿರುತ್ತದೆ. ಈ "ಅಶುಚಿತ್ವ" ಎಂಬುದು ಶಾರೀರಿಕ, ಅಚಾರಗಳು, ಅಥವಾ ನೈತೀಕ ವಿಷಯಗಳಲ್ಲಾಗಿರಬಲ್ಲದು.[76] ವಚನ 24ರ ಸನ್ನಿವೇಶ ಸೂಚಿಸುವದೇನೆಂದರೆ, ಪೌಲನು ಮನಸ್ಸಿನಲ್ಲಿ ನಿರ್ದಿಷ್ಟ ರೀತಿಯ ನೈತಿಕ ಹೊಲಸುತನದ ಬಗ್ಗೆ ಇತ್ತು. NIVಯು ಇದನ್ನು "ಕಾಮಾಭಿಲಾಷೆ" ಎಂದು ಅನುವಾದಿಸಿದೆ.

ಮನುಷ್ಯರು ದೇವರಿಂದ ಬೇರ್ಪಟ್ಟಾಗ, ಅವರು ನೈತೀಕ ಮೀತಿಗಳನ್ನು ಎಸೆದುಬಿಟ್ಟರು. ಅದೋಗತಿಗೆ ಇಳಿಯುತ್ತಿರುವ ಸಮಾಜದ ಲಕ್ಷಣಗಳಲ್ಲಿ ಕೆಲವೊಂದನ್ನು ಹೆಸರಿಸುವದಾದರೆ, (1) ವ್ಯಾಪಕವಾದ ಲೈಂಗಿಕ ಸ್ವೇಚ್ಛಾಘರತೆ ಮತ್ತು (2) "ಲೈಂಗಿಕ ಸ್ವಾತಂತ್ರ" ವನ್ನು ಅಪೇಕ್ಷಿಸುವದು, (3) ಅದಾದ ಮೇಲೆ ವ್ಯಾಪಕವಾಗಿ ಹರಡಿದ ಲೈಂಗಿಕವಾಗಿ ಸ್ವಚ್ಛಂದ ಕಾಮಕ್ರೀಡೆ. ರೋಮಾಪುರದಲ್ಲಿ ವೈಯಕ್ತಿಕವಾಗಿ ಕಾಮಿಚ್ಛೆಗಳನ್ನು ನೆರವೇರಿಸಿಕೊಳ್ಳುವ ಮಹದಾಸೆಯು ಅರಸನಂತೆ ಆಳುತ್ತಿತ್ತು ಎಂದು ಹೇಳಲಾಗುತ್ತದೆ.

24ನೇ ವಚನವು ವಿಗ್ರಹಗಳನ್ನು ಮಾಡಿಕೊಳ್ಳುವದರ ಕುರಿತ ವಾಕ್ಯಭಾಗದ ನಂತರ (1:23) ಬರುತ್ತದೆ ಮತ್ತು ಈಗ ಅದರ ಮುಂದಿನ ವಾಕ್ಯವು ವಿಗ್ರಹಗಳನ್ನು ಆರಾಧಿಸುವದರ

ಕುರಿತಾಗಿರುತ್ತದೆ (1:25). ಈ ಲೈಂಗಿಕ ಅನೈತೀಕತೆಯ ಕುರಿತಾದ ವಚನವು ವಿಗ್ರಹಾರಾಧನೆಯ ಕುರಿತ ಎರಡು ವಚನಗಳ ಮಧ್ಯದಲ್ಲಿರುವದರಲ್ಲಿ ಆಶ್ಚರ್ಯವೇನಿಲ್ಲ. ಅನ್ಯಜನಾಂಗಗಳ ದೇವಾಲಯಗಳು ದೇವದಾಸಿ ಅಥವಾ ದೇವಾಲಯದಲ್ಲಿ ವೇಶ್ಯಾವಾಟಿಕೆಗೆ ಕುಖ್ಯಾತಿ ಹೊಂದಿದ್ದವು—ಪುರುಷ ಮತ್ತು ಸ್ತ್ರೀಯರಿಬ್ಬರೂ ದುಡ್ಡಿಗಾಗಿ ಯಾವ ರೀತಿಯ ತುಚ್ಛ ಕಾಮಕೃತ್ಯಕ್ಕೂ ಸಿದ್ಧರಿರುತ್ತಿದ್ದರು. ಲೈಂಗಿಕ ಅನೈತೀಕತೆಯು ವಿಗ್ರಹಾರಾಧಕರೊಳಗೆ ಅತ್ಯಂಥ ಪ್ರಭಲವಾಗಿತ್ತು, ಅವರ ದೇವಾಲಯ "ಪೂಜೆಗಳಲ್ಲಿ" ಮಾತ್ರವಲ್ಲದೆ ಅವರು ದೈನಂದಿನ ಜೀವಿತಗಳಲ್ಲಿ ಸಹ ಸಹಜವಾಗಿತ್ತು.

ಅನ್ಯಜನರ ಈ ಆಚಾರಗಳು ದೇವರ ಚಿತ್ತಕ್ಕೆ ತದ್ವಿರುದ್ಧವಾಗಿದ್ದವು. ವಿಮೋಚನಕಾಂಡ 20 ರಲ್ಲಿ, ದೇವರು ದಶಾಜ್ಞೆಗಳನ್ನು ದಯಪಾಲಿಸಿದಾಗ, ಏಳನೆಯ ಆಜ್ಞೆಯು "ನೀನು ವ್ಯಭಿಚಾರ ಮಾಡಬಾರದು" ಎಂದಾಗಿತ್ತು (ವಿಮೋಚನಕಾಂಡ 20:14; ನೋಡಿರಿ 13:9). ನಂತರದ ಅದ್ಯಾಯಗಳಲ್ಲಿ, ಪ್ರಾಥಮಿಕ ಆಜ್ಞೆಯಲ್ಲಿ ಸಾಮಾನ್ಯ ಲೈಂಗಿಕ ಪಾಪಗಳನ್ನು ಸೇರ್ಪಡೆಗೊಳಿಸಲಾಯಿತು (ನೋಡಿರಿ ಯಾಜಕಕಾಂಡ 18:6-23). ಹಳೆ ಒಡಂಬಡಿಕೆಯಲ್ಲಿ, ದೇವರಿಂದ ಮಾನ್ಯಮಾಡಲ್ಪಟ್ಟ ಮದುವೆಯ[77] ಹೊರಗಡೆಯಲ್ಲಿ ಲೈಂಗಿಕ ಸಂಬಂಧಗಳನ್ನಿಟ್ಟುಕೊಳ್ಳುವದನ್ನು ಖಂಡಿಸಲಾಗಿತ್ತು ಮತ್ತು ಶಿಕ್ಷೆಗೆ ಅರ್ಹವಾಗಿದ್ದವು (ನೋಡಿರಿ ಧರ್ಮೋಪದೇಶಕಾಂಡ 22:22).

ಅನೇಕ ಅನುವಾದಗಳಲ್ಲಿ "ಕಾಮ" ಎಂಬ ಪದವು ವಿರಳವಾಗಿ ಕಾಣಿಸುತ್ತದೆ, ಆದರೆ ಆ ವಿಷಯದಲ್ಲಿ ಬೈಬಲು ಬಹಳಷ್ಟನ್ನು ಹೇಳುತ್ತದೆ (ಉದಾಹರಣೆಗೆ, ನೋಡಿರಿ ಜ್ಞಾನೋಕ್ತಿ 5:1-6; 7:6-27; ಮತ್ತು ಪರಮಗೀತ ಪೂರ್ತಿ ಪುಸ್ತಕ). ಬಹಳಷ್ಟು ಸಮಯ, ವಾಕ್ಯವು ಲೈಂಗಿಕ ಕ್ರಿಯೆಯನ್ನು ಸೂಚಿಸುವದಕ್ಕೆ ಹೆಚ್ಚು ಸಭ್ಯವಾದ ಅಥವಾ ಸೌಮ್ಯವಾದ ಪದಗಳನ್ನು ಉಪಯೋಗಿಸುತ್ತದೆ (ನಾವು ಸಹ ಹಾಗೆಯೇ ಮಾಡುತ್ತೇವೆ). ಬಹಳ ಸಾಮಾನ್ಯ ಪದಗಳಲ್ಲೊಂದೆಂದರೆ "ಕೂಡಿದರು" —ಉದಾಹರಣೆ "ಆ ಪುರುಷನು ತನ್ನ ಹೆಂಡತಿಯಾದ ಹವ್ವಳನ್ನು ಕೂಡಲು ಆಕೆ ಗರ್ಭಿಣಿಯಾದಳು" (ಆದಿಕಾಂಡ 4:1 KJV; ನೋಡಿರಿ ಮತ್ತಾಯ 1:25; ಲೂಕ 1:34; KJV). ಬೇರೆ ಪದಗಳೆಂದರೆ "ಸೇರಿಕೊಳ್ಳುವನು" ಮತ್ತು "ಒಂದೇ ಶರೀರವಾದರು"[78] (ಆದಿಕಾಂಡ 2:24; ಮತ್ತಾಯ 19:5; ಎಫೆಸ 5:31).

ಹೊಸ ಒಡಂಬಡಿಕೆಯಲ್ಲಿ, ವಾಕ್ಯಾಧಾರಿತ, ದೇವರಿಂದ ಮನ್ನಣೆ ಮಾಡಲ್ಪಟ್ಟ ಮತ್ತು ಪ್ರೋತ್ಸಾಹಿಸಲ್ಪಟ್ಟ ದಾರಿಯಲ್ಲಿ ಮದುವೆಯಾದ ಗಂಡ ಮತ್ತು ಹೆಂಡತಿಯರ ನಡುವೆ ಲೈಂಗಿಕ ಸಂಪರ್ಕಕ್ಕೆ ಅನುಮತಿಯಿದೆ (1 ಕೊರಿಂಥ 7:2-5; ಇಬ್ರಿಯ 13:4). ಆ ಸಂಬಂಧದ ಹೊರಗೆ ನಡೆದರೆ, ಅದು ದೇವರು ಏರ್ಪಡಿಸಿರುವ ವಿವಾಹ ಮತ್ತು ಕುಟುಂಬ ವ್ಯವಸ್ಥೆಯನ್ನು ಕೇಡಿಸಿದಂತೆ ಎಂದು ತೀರ್ಪುಮಾಡಲಾಗಿರುತ್ತದೆ. ವಿವಾಹವಾಗದ ಇಬ್ಬರ ನಡುವಿನ ಲೈಂಗಿಕ ಕ್ರಿಯೆಯನ್ನು ಸಾಮಾನ್ಯವಾಗಿ "ಹಾದರ" ಎನ್ನುತ್ತಾರೆ. ವಿವಾಹವಾಗಿರುವ ಹೆಣ್ಣು ಅಥವಾ ಗಂಡು ತನ್ನ ಸಂಗಾತಿಯಲ್ಲದ ಮತ್ತೊಬ್ಬರ ಸಂಗಡ ಲೈಂಗಿಕ ಸಂಬಂಧವನ್ನಿಟ್ಟುಕೊಂಡರೆ, ಅದನ್ನು "ವ್ಯಭಿಚಾರ" ಎನ್ನುತ್ತಾರೆ[79] (ನೋಡಿರಿ 7:3). ಇವುಗಳನ್ನು ಮತ್ತು ಇದೇ ರೀತಿಯ ಇತರ ಲೈಂಗಿಕ ಪಾಪಗಳನ್ನು ಪ್ರೇರಿತ ಲೇಖಕರಲ್ಲಿ ಅನೇಕರು ಕಠಿಣವಾಗಿ ಖಂಡಿಸಿರುತ್ತಾರೆ (ಲೂಕ 16:18; ಅಪೊಸ್ತಲರ ಕೃತ್ಯಗಳು 15:20; ಗಲಾತ್ಯ 5:19, 21; 1 ಥೆಸ ಲೋನಿಕ 4:2-5).

**ವಚನ 25.** ಪೌಲನು ಅನೈತಿಕತೆಯ ಬಗ್ಗೆ ಚರ್ಚಿಸಿದ ನಂತರ, ಪುನಃ ವಿಗ್ರಹಾರಾಧನೆ ಕುರಿತು ಮಾತಾಡುತ್ತಾನೆ: **ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡರು.** ಇಲ್ಲಿ "ಹಿಡಿದುಕೊಂಡರು ಅಥವಾ (ಬದಲಾಯಿಸಿಕೊಂಡರು)" ಎಂಬ ಪದವು (μεταλλάσσω, *metallassō*) ಪುನಃ 23ನೇ ವಚನದಲ್ಲಿರುವ ಸಂಬಂಧಿತ ಪದದ ಕಡೆಗೆ ನಡಿಸುತ್ತದೆ. NEB ಆವೃತ್ತಿಯಲ್ಲಿ ಹೀಗಿರುತ್ತದೆ, "ಅವರು ಸತ್ಯ ದೇವರನ್ನು ವಿನಿಮಯ ಮಾಡಿಕೊಂಡರು." NASB ಯಲ್ಲಿ ಅವರು "ಒಂದು ಸುಳ್ಳಿ" ಗಾಗಿ ದೇವರನ್ನು ಮಾರಿಕೊಂಡರು ಎಂದಿರುತ್ತದೆ, ಆದರೆ ಗ್ರೀಕ್ ಪ್ರತಿಯ ಅಕ್ಷರಶಃ ಭಾಷಾಂತರವು "ಆ ಸುಳ್ಳಿಗೆ" ಎಂದು ಅರ್ಥವನ್ನು ಕೊಡುತ್ತದೆ, ಪೌಲನ ಮಟ್ಟಿಗಾದರೋ ದೇವರ ಪ್ರಕಟಣೆಯನ್ನು ತಿರಸ್ಕರಿಸುವದು ವಿಗ್ರಹಾರಾಧನೆಯಲ್ಲಿ ಫಲಿತವಾಗುವದು ಜನರು "ಆ ಸುಳ್ಳುಗಳನ್ನು" ಅಂಗೀಕರಿಸಿದಾಗ, ಅವರು **ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತು ಗಳನ್ನೇ ಪೂಜಿಸಿ ಸೇವಿಸುವವರಾದರು.** ಅವರು ಸೃಷ್ಟಿಸಲ್ಪಟ್ಟ ಒಂದನ್ನು ಅದರ ಸೃಷ್ಟಿ ಕರ್ತನಿಗಿಂತ ಉನ್ನತಕ್ಕೇರಿಸಿದರು.

ಮಾನವರು ಹೇಗೆ ದೇವರನ್ನು ನಿರ್ಲಕ್ಷಿಸಿ ಆತನನ್ನು ಘನಪಡಿಸುವದಕ್ಕೆ ವಿಫಲರಾಗಿದ್ದಾರೆಂಬದನ್ನು ಪೌಲನು ಪರಿಗಣಿಸಿದಾಗ, ಆತನಿಗೆ ತನ್ನನ್ನು ನಿರ್ಬಂದಿಸಿಕೊಳ್ಳಲಾಗಲಿಲ್ಲ. ಆತನು ಸೃಷ್ಟಿಕರ್ತನನ್ನು ಬಣ್ಣಿಸುತ್ತಾ 25ನೇ ವಚನವನ್ನು ಮುಕ್ತಾಯಗೊಳಿಸುತ್ತಾನೆ: ಸೃಷ್ಟಿಕರ್ತನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು**.** ಆಮೆನ್**.** ಅನುವಾದಿಸಲ್ಪಟ್ಟ "ಸ್ತುತಿಹೊಂದತಕ್ಕವನು" (εὐλογητός, *eulogētos*) ಎಂಬ ಪದವು "eulogy" ("ಪ್ರಶಂಸೆಯ ನುಡಿ") ಎಂಬ ಅರ್ಥ ಬರುವ ಪದಕ್ಕೆ ಸಂಬಂಧಿಸಿದ್ದು. ಇದರರ್ಥ "ಸ್ತೋತ್ರಕ್ಕೆ ಯೋಗ್ಯನು"[80] ಎಂಬದು. ಹೊಸ ಒಡಂಬಡಿಕೆಯಲ್ಲಿ, ಇದು ದೇವರಿಗೆ ಮಾತ್ರವೇ ಅನ್ವಯವಾಗುತ್ತದೆ. Phillips ಆವೃತ್ತಿಯಲ್ಲಿ ಹೀಗಿದೆ, "ಆತನೊಬ್ಬನೇ ಯುಗಯುಗಾಂತರಗಳಲ್ಲಿಯೂ ಆರಾಧನೆಗೆ ಯೋಗ್ಯನು, ಆಮೆನ್."

## ಅನೈತಿಕತೆಯ ಮೂಲಕ ದೇವರನ್ನು ತಿರಸ್ಕರಿಸುವದು (1:26, 27)

**26ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗೆಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. 27ಅದರಂತೆ ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನ್ನು ನಡಿಸಿ ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವವರಾದರು.**

**ವಚನಗಳು 26, 27.** ಈ ಸಂದರ್ಭದಲ್ಲಿ, ಸಮಾಜವು ಲೈಂಗಿಕ ಪಾಪಗಳಲ್ಲಿ ಎಷ್ಟೊಂದು ಅದೋಗತಿಗೆ ಇಳಿದಿದೆ ಎಂಬದನ್ನು ತೋರಿಸಲು ಪೌಲನು ಒಂದು ನಿರ್ದಿಷ್ಟವಾದ ದೃಷ್ಟಾಂತವನ್ನು ಕೊಡುತ್ತಾನೆ. ಇಲ್ಲಿ ವಿವರಿಸಲಾಗಿರುವ ಪಾಪವನ್ನು ಗುರುತಿಸಲು ಬಹುಪಾಲು ವಾಚಕರಿಗೆ ಕಷ್ಟಕರವಾಗಿರುವದಿಲ್ಲ. ಇದು ಸಲಿಂಗ ಕಾಮದ

ಬಗ್ಗೆ ಬೈಬಲ್.ನಲ್ಲಿ ಬಹಳ ಸ್ಪಷ್ಟವಾದ ಮತ್ತು ಬಲವಾದ ಅಭಿಪ್ರಾಯವನ್ನು ತಿಳಿಸಿದ ವಾಕ್ಯವಾಗಿದೆ (ಸಂಬಂಧಿಸಿದ ವಾಕ್ಯಭಾಗಗಳಿಗಾಗಿ, ನೋಡಿರಿ ಆದಿಕಾಂಡ 19:1-28; ಯಾಜಕಕಾಂಡ 18:22; 20:13; ಧರ್ಮೋಪದೇಶಕಾಂಡ 23:17, 18; 1 ಕೊರಿಂಥ 6:9, 10; 1 ತಿಮೊಥೆ 1:8-10.)

"ಸಲಿಂಗಕಾಮ" ದಲ್ಲಿರುವ "ಸಲಿಂಗ" ಎಂಬುದು ಗ್ರೀಕ್ ὁμός (*homos*) ಎಂಬ ಪದದಿಂದ ಬಂದದ್ದು. ಅದರ ಅರ್ಥವು "ಒಂದೇ ರೀತಿ" ಅಥವಾ "ಅಂತಹ." ಹೀಗೆ "ಸಲಿಂಗಕಾಮ" ವು ಒಂದೇ ರೀತಿಯ ಲಿಂಗದ ಇಬ್ಬರು ವ್ಯಕ್ತಿಗಳ (ಇಬ್ಬರು ಪುರುಷರು ಅಥವಾ ಇಬ್ಬರು ಹೆಂಗಸರು) ನಡುವಿನ ಲೈಂಗಿಕ ಕ್ರಿಯೆಯಾಗಿದೆ. ಇದು "ಭಿನ್ನಲಿಂಗಕಾಮ" (ವಿರುದ್ಧ ಲಿಂಗದವರ ನಡುವಿನ) ಎಂಬ ಪದಕ್ಕೆ ವಿರುದ್ಧವಾಗಿರುತ್ತದೆ, ಅದು ಪುರುಷ ಮತ್ತು ಸ್ತ್ರೀ ನಡುವಿನ ಲೈಂಗಿಕ ಕ್ರಿಯೆಯಾಗಿದೆ; ἕτερος (*heteros*) ಎಂಬುದು ಗ್ರೀಕ್ ಪದವಾಗಿದ್ದು "ಬೇರೆ" ಎಂಬ ಅರ್ಥ ಹೊಂದಿದೆ. ಇಂದು ಪುರುಷ ಸಲಿಂಗ ಕಾಮಿಗಳು "gay" ಎಂಬ ಹೆಸರನ್ನು ಉಪಯೋಗಿಸಿಕೊಳ್ಳುತ್ತಾರೆ, ಮತ್ತು ಸ್ತ್ರೀ ಸಲಿಂಗಕಾಮಿಗಳು ತಮ್ಮನ್ನು "lesbians" ಎಂದು ಕರೆದುಕೊಳ್ಳುತ್ತಾರೆ. ಈ ಕಡೆಯ ಪದವು Lesbos ಎಂಬ Aegean (ಆಯಿಜಿನ) ದ್ವೀಪದಿಂದ ಬಂದಿರುತ್ತದೆ, ಅದು ಪ್ರಸಿದ್ಧ ಕವಿತ್ರಿಯಾಗಿದ್ದ ಸಪ್ಫೋ ಎಂಬವಳ ನಿವಾಸವಾಗಿತ್ತು, ಆಕೆಯು ಸಲಿಂಗಕಾಮದ ಬಗ್ಗೆ ಬಹಳವಾಗಿ ಬರೆಯುತ್ತಿದ್ದರಿಂದ ಈ ದ್ವೀಪವು ಸಲಿಂಗಕಾಮದಿಂದ ಗುರುತಿಸಲ್ಪಡ ಲಾರಂಬಿಸಿತ್ತು.

ರೋಮಾಪುರದವರಿಗೆ 1:26, 27 ರಲ್ಲಿ, ಪೌಲನು ಸಲಿಂಗಕಾಮದ ಬಗ್ಗೆ ಮಾತಾಡುತ್ತಿದ್ದಾನೆಂಬದನ್ನು ಕೆಲವರು ನಿರಾಕರಿಸುತ್ತಾರೆ, ಆದರೆ ಆತನು ಹೇಗೆ ಇಷ್ಟೊಂದು ಸ್ಪಷ್ಟತೆಯನ್ನು ಹೊಂದಿರಲು ಸಾಧ್ಯ ಎಂಬದನ್ನು ತಿಳಿಯುವದು ಕಷ್ಟಕರ. . . **ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು . . . ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನ್ನು ನಡಿಸಿದರು. . . .** CEV ಯಲ್ಲಿ ಹೀಗಿದೆ, "ಸ್ತ್ರೀಯರಿಗೆ ಸ್ವಾಭಾವಿಕವಾದ ಲೈಂಗಿಕತೆ ನಡಿಸಲು ಇಚ್ಛೆಯಿರಲಿಲ್ಲ . . . ಗಂಡಸರು ಸಹ ಅದೇ ರೀತಿಯಲ್ಲಿ ನಡೆದುಕೊಂಡರು. ಅವರು ಸ್ತ್ರೀಯರೊಂದಿಗೆ ಲೈಂಗಿಕ ಸಂಪರ್ಕ ಹೊಂದುವದಕ್ಕೆ ಇಚ್ಛೆಯನ್ನು ನಿಲ್ಲಿಸಿದರು ಮತ್ತು ಬೇರೆ ಗಂಡಸರ ಸಂಗಡ ಕಾಮಕ್ಕಾಗಿ ಬಲವಾದ ವಿರಹವನ್ನು ಅನುಭವಿಸಲಾರಂಭಿಸಿದ್ದರು."

ರೋಮಾಪುರ 1:26, 27 ಸಲಿಂಗಕಾಮದ ಬಗ್ಗೆ ಚರ್ಚಿಸುತ್ತಿದೆಯೆಂಬದು ಸ್ಪಷ್ಟವಾಗಿ ತೋರುವದು ಮಾತ್ರವಲ್ಲ, ಅಂಥ ಸಂಗತಿಯು ದೇವರ ಚಿತ್ತಕ್ಕೆ ವಿರುದ್ಧವಾದದ್ದು ಎಂಬುದು ಸಹ ಬಹಳ ಸ್ಪಷ್ಟತೆಯಿಂದ ಕಾಣುತ್ತದೆ. ಮೊದಲನೆಯದಾಗಿ, ಪೌಲನು ಹೇಳಿದ್ದೇನೆಂದರೆ ಸಲಿಂಗಕಾಮವು **ತುಚ್ಛವಾದ (ಕಾಮಾ)ಭಿಲಾಷೆಯ** ಫಲಿತವಾಗಿದೆ. "ಅಭಿಲಾಷೆ" (πάθος, *pathos*) ಎಂಬದು ಹೊಸ ಒಡಂಬಡಿಕೆಯಲ್ಲಿ ಯಾವಾಗಲೂ ಕೆಟ್ಟ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ.[81] ಅನುವಾದಿಸಲ್ಪಟ್ಟ "ತುಚ್ಛವಾದ" (ἀτιμία, *atimia*) ಎಂಬ ಪದದ ಅರ್ಥವು "ಅಗೌರವವಾದ" ಅಥವಾ "ಅವಮಾನಕರ" ಎಂಬುದು.[82] Phillips ಭಾಷಾಂತರದಲ್ಲಿ ಇದು "ಅವಮಾನಕ್ಕೆ ಯೋಗ್ಯವಾದ ಅಭಿಲಾಷೆಗಳು."

ನಂತರ ಪೌಲನು ಸಲಿಂಗಕಾಮವನ್ನು "ಅಸ್ವಾಭಾವಿಕ" ಎಂದು ಕರೆದನು. ಇದು "ಒಬ್ಬ ಸಂಕುಚಿತ ಮನಸ್ಸಿನ ಬೋಧಕನೊಬ್ಬನು" ತೀರ್ಪುಮಾಡುವದಲ್ಲ, ಆದರೆ ಪ್ರೇರಿಸಲ್ಪಟ್ಟು ಕರ್ತನ ಒಬ್ಬ ಅಪೊಸ್ತಲನು ಘೋಷಿಸಿದ ಮಾತುಗಳಾಗಿವೆ. "ಅಸ್ವಾಭಾವಿಕ" ಎಂಬುದು ಗ್ರೀಕ್ ನ ಎರಡು ಪದಗಳ ಅನುವಾದವಾಗಿದೆ: "ವಿರುದ್ಧವಾದ" ಎಂಬ ಅರ್ಥಬರುವ ಒಂದು ಉಪಸರ್ಗ (παρά, *para*) ಮತ್ತು "ಸ್ವಭಾವ (ಪ್ರಕೃತಿ)" (φύσις, *phusis*) ಎಂಬ ಪದ. ಈ ಪದವು ಅಕ್ಷರಶಃ "ಸ್ವಭಾವಕ್ಕೆ ವಿರುದ್ಧವಾದ" ಎಂಬ ಅರ್ಥಕೊಡುವದಾಗಿದೆ. ABಯು ಇದನ್ನು "ಅಸ್ವಾಭಾವಿಕ ಮತ್ತು ಅಸಹಜವಾದ" ಎಂದು ಅನುವಾದಿಸಿರುತ್ತದೆ. ಮಾನವನ ದೇಹರಚನೆಯ ಬಗ್ಗೆ ತಿಳಿದಿರುವ ಯಾರಿಗೇ ಆಗಲಿ ಗಂಡಸರು ಬೇರೆ ಗಂಡಸರ ಸಂಗಡ ಲೈಂಗಿಕ ಕ್ರಿಯೆ ನಡಿಸುವದು "ಅಸ್ವಾಭಾವಿಕ" ವಾದದ್ದು ಎಂದು ಹೇಳಬಲ್ಲರು.

ಸ್ತ್ರೀ ಸಲಿಂಗಕಾಮಿಗಳು ಸ್ವಾಭಾವಿಕ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು "ಅನುಸರಿಸುವವ ರಾದರು" (ವಿನಿಮಯ ಮಾಡಿಕೊಂಡರು). "ಅನುಸರಿಸಿದರು" ಎಂಬದು 23ನೇ ವಚನದಲ್ಲಿ ಕಂಡುಬರುವ ಪದಕ್ಕೆ ಸಂಬಂಧಪಟ್ಟಿದೆ, ಅಲ್ಲಿ ಹೇಳಲ್ಪಟ್ಟಿದ್ದೇನೆಂದರೆ "ಲಯವಿಲ್ಲದ ದೇವರ ಮಹಿಮೆಗೆ ಬದಲಾಗಿ ಲಯವಾಗುವ ಮೂರ್ತಿಗಳನ್ನು ಮಾಡಿಕೊಂಡರು" (ವಿನಿಮಯ ಮಾಡಿದರು). ಮನುಷ್ಯರು ವಿಗ್ರಹಗಳಿಗಾಗಿ ದೇವರನ್ನು ಬಿಟ್ಟುಬಿಡುವ ಮೂಲಕ ಕೆಟ್ಟ ವ್ಯವಹಾರ ಮಾಡಿದ್ದರು ಮತ್ತು ಸ್ತ್ರೀಯರು ಪುರುಷರೊಂದಿಗಿನ ಸ್ವಭಾವಿಕ ಭೋಗದ ಬದಲಿಗೆ ಇತರ ಸ್ತ್ರೀಯರೊಂದಿಗೆ ಅಸ್ವಾಭಾವಿಕ ಭೋಗವನ್ನು ಆರಿಸಿಕೊಳ್ಳುವ ಮೂಲಕ ಕೆಟ್ಟ ವ್ಯವಹಾರ ಮಾಡಿದ್ದರು.

ಪುರುಷ ಸಲಿಂಗಗಳ ವಿಷಯವಾಗಿ, ಪೌಲನು ಹೇಳಿದ್ದೇನೆಂದರೆ, "ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀಭೋಗವನ್ನು ಬಿಟ್ಟರು"[83] "ಬಿಟ್ಟರು" ಎಂಬುದರ ಅನುವಾದಿತ ಪದ (ἀφίημι, *aphiēmi*) ಯು "ಇಂದ" (ἀπό, *apo*) ಮತ್ತು "ಕಳುಹಿಸು"[84] (ἵημι, *hiēmi*) ಎಂಬ ಪದಗಳ ಸಮ್ಮಿಲನವಾಗಿದೆ. ಅದರರ್ಥವು "ತೊಲಗಿಸಿಬಿಡು, ತಳ್ಳಿಹಾಕು."[85] ಪುರುಷ ಸಲಿಂಗಕಾಮಿಗಳು ಇಚ್ಛಾಪೂರ್ವಕವಾಗಿಯೇ ಸ್ತ್ರೀಯರ ಸಂಗಡದ ಸಂಬಂಧಗಳನ್ನು ತಿರಸ್ಕರಿಸಿದ್ದರು.

ಅವರು ಹೀಗೆ ಏಕೆ ಮಾಡಿದರು? ಯಾಕೆಂದರೆ ಅವರು "ಒಬ್ಬರ ಮೇಲೊಬ್ಬರು ಕಾಮಾತುರದಿಂದ ತಾಪಪಡುತ್ತಿದ್ದರು." "ತಾಪಪಡುತ್ತಿದ್ದರು" ಎಂಬುದು ἐκκαίω (*ekkaiō*) ಎಂಬದರಿಂದ ಬಂದದ್ದು, ಅದರರ್ಥವು "ಉರಿ" (καίω, *kaiō*) ಎಂಬದನ್ನು ತೀವ್ರಗೊಳಿಸುವ ಪದವಾಗಿದೆ, ಅದಕ್ಕೆ ἐκ (*ek*) ಎಂಬ ಉಪಸರ್ಗವಿರುತ್ತದೆ. ಅನುವಾದಿಸಲ್ಪಟ್ಟ "ಬಯಕೆ" (ὄρεξις, *orexis*) ಪದವು "ದುರಾಶೆ" ಎಂಬ ಅರ್ಥವನ್ನು ಕೊಡಬಲ್ಲದು (KJV ನೋಡಿರಿ). AB ತರ್ಜುಮೆಯಲ್ಲಿ ಇದು "ಗಂಡಸರು ಕಾಮಾತುರದಿಂದ ಉರಿಯುತ್ತಿದ್ದರು (ವಿರಹ ಪಡುತ್ತಿದ್ದರು, ತಾಪಪಡುತ್ತಿದ್ದರು)." ತಮ್ಮ ದುರಾಶೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬದಲಾಗಿ, ಈ ಸಲಿಂಗಕಾಮಿಗಳು ಅದನ್ನು ಹತೋಟಿಮೀರಿ ಹೊತ್ತಿ ಉರಿಯುವಂತೆ ಬಿಟ್ಟರು.

ಪುನಃ, ಪೌಲನು ಸಲಿಂಗಕಾಮಿಗಳ ಮೇಲೆ ಅವರು "ಅವಲಕ್ಷಣವಾದದ್ದನ್ನು ನಡಿಸಿದರು" ಎಂದು ಆರೋಪಿಸುತ್ತಾನೆ. "ಅವಲಕ್ಷಣ" (ἀσχημοσύνη, *aschēmosunē*) ಪದವು "ಸಭ್ಯ ಮಾನವ ನಡತೆ[86] ಎಂಬ ಅರ್ಥಕೊಡುವ ಪದದ ನಕಾರಾತ್ಮಕ

ರೂಪವಾಗಿದೆ. ಪೌಲನು ಏಕವಚನದ ರೂಪವನ್ನು ಉಪಯೋಗಿಸಿದನು, ಅದನ್ನು NASBಯ ಕೆಲವೊಂದು ಆವೃತ್ತಿಯಲ್ಲಿನ ಟಿಪ್ಪಣಿಯು ಹೀಗೆ ಅನುವಾದಿಸುತ್ತದೆ "ಅವಲಕ್ಷಣವಾದ ಕ್ರಿಯೆ." ಹೆಮ್ಮೆಪಡುವದರ ಬದಲಾಗಿ, ಸಲಿಂಗಕಾಮಿಗಳು ನಾಚಿಕೆಪಡಬೇಕಿತ್ತು.

ಆಂಗ್ಲದಲ್ಲಿ 27ನೇ ವಚನದ ಕೊನೆಯಲ್ಲಿ, ಪೌಲನು ಸಲಿಂಗಕಾಮವನ್ನು ಸೂಚಿಸುವದಕ್ಕೆ "ತಪ್ಪು" ("error") ಎಂಬ ಮಾತನ್ನು ಉಪಯೋಗಿಸುತ್ತಾನೆ. ಅನುವಾದಿಸಲ್ಪಟ್ಟ "ತಪ್ಪು" (πλάνη, *planē*) ಎಂಬ ಪದದ ಅರ್ಥವು "ಸರಿದಾರಿಯನ್ನು ತೊರೆದುಬಿಟ್ಟು . . . ಸಿದ್ಧಾಂತದಲ್ಲಿ ಅಥವಾ ನೈತಿಕತೆಯಲ್ಲಿ ದಾರಿತಪ್ಪು . . ."[87] ಸಲಿಂಗಕಾಮಿಗಳು ಸರಿಯಾದ ದಾರಿಯಲ್ಲಿರಲಿಲ್ಲ, ಆದರೆ ತಪ್ಪಾದ ದಾರಿಯಲ್ಲಿದ್ದರು.

ಪೌಲನ ಇಂಥ ವಿನಾಶಕಾರಿ ಖಂಡನೆಯ ಹೊರತಾಗಿಯೂ, ತಮ್ಮ ಸಲಿಂಗಕಾಮವನ್ನು ಈಗಲೂ ಸಮರ್ಥಿಸಿಕೊಳ್ಳುವ ಜನರಿದ್ದಾರೆ. ಕೆಲವರು ರೋಮಾಪುರದವರಿಗೆ 1:26, 27 ರಲ್ಲಿರುವ "ಸ್ವಾಭಾವಿಕ" ಮತ್ತು "ಅಸ್ವಾಭಾವಿಕ" ಎಂಬ ಪದಗಳನ್ನು ಹಿಡಿದುಕೊಂಡಿದ್ದಾರೆ. ಸಲಿಂಗಕಾಮವು ಯಾರಿಗೆ "ಸ್ವಾಭಾವಿಕ" ವಾಗಿತ್ತೋ ಅವರನ್ನು ಪೌಲನು ಖಂಡಿಸಲಿಲ್ಲ, ಆದರೆ ಕೇವಲ ಯಾರಿಗೆ ಸಲಿಂಗಕಾಮವು "ಅಸ್ವಾಭಾವಿಕ" ಆಗಿತ್ತೋ ಅವರನ್ನು ಕುರಿತು ಹೇಳುತ್ತಿದ್ದಾನೆ ಎಂದು ವಾದಿಸುತ್ತಾರೆ. ಬೇರೆ ಮಾತುಗಳಲ್ಲಿ (ಅವರು ಹೇಳುವದೇನೆಂದರೆ), ಪೌಲನು ಸಲಿಂಗಕಾಮದಲ್ಲಿ ತೊಡಗಿಸಿಕೊಳ್ಳುವ ಸ್ವಾಭಾವಿಕ ಕಾಮಿಗಳನ್ನು (ವಿರುದ್ಧಲಿಂಗ ಕಾಮಿ) ಖಂಡಿಸುತ್ತಿದ್ದಾನೆ. Moo ಈ ಆರೋಪಕ್ಕೆ ತಕ್ಕ ಉತ್ತರ ಕೊಡುತ್ತಾರೆ:

> ಈ ಅಭಿಪ್ರಾಯದಲ್ಲಿರುವ ಸಮಸ್ಯೆಯೇನೆಂದರೆ ಪೌಲನ "ಸ್ವಾಭಾವಿಕ" ಭಾಷೆಯನ್ನು ಅದರ ಸರಿಯಾದ ಹಿನ್ನಲೆಯೊಂದಿಗೆ ಅರ್ಥಮಾಡಿಕೊಳ್ಳಲು ವಿಫಲವಾಗಿರುವದೇ ಆಗಿದೆ. ದೇವರಿಂದ ನಿಷ್ಕರ್ಷಿಸಲ್ಪಟ್ಟಿರುವ ಕಾರ್ಯಗಳ ಸ್ವಾಭಾವಿಕ ಕ್ರಮವನ್ನು ಸೂಚಿಸುವದಕ್ಕೆ ಇತರ ಯೆಹೂದಿ ಲೇಖಕರ ಉಪಯೋಗಿಸಿದಂತೆಯೇ ಪೌಲನು ಈ ಪದವನ್ನು ಉಪಯೋಗಿಸುತ್ತಿದ್ದಾನೆ. ಉದಾಹರಣೆಗೆ, ಇತಿಹಾಸಕಾರನಾದ ಜೋಸೆಫಸ್ ಬರೆಯುವದೇನೆಂದರೆ "ಮೋಶೆಯ ಧರ್ಮಶಾಸ್ತ್ರದಲ್ಲಿ ಹೆಂಡತಿಯೊಂದಿಗೆ ಲೈಂಗಿಕ ಸಂಪರ್ಕ ಬಿಟ್ಟು ಬೇರಾವ ಸಂಪರ್ಕದ ಬಗ್ಗೆ ತಿಳಿದಿಲ್ಲ" (*Against Apion* 2.24). ವಾಕ್ಯಸಾಲಿನಲ್ಲಿರುವ "ಸ್ವಾಭಾವಿಕ" ಎಂಬುದು ಯಾವದೇ ಒಬ್ಬ ಮನುಷ್ಯನ ಮಾನವ ಸ್ವಭಾವ ಅಥವಾ ಹುಟ್ಟುಗುಣದ ಬಗ್ಗೆ ಸೂಚಿಸುವದಿಲ್ಲ, ಆದರೆ ದೇವರು ಉಂಟುಮಾಡಿದ ಲೋಕವನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ. ಸಲಿಂಗಕಾಮದ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವದೆಂದರೆ ಮಾನವರನ್ನು ಪುರುಷ ಮತ್ತು ಸ್ತ್ರೀಯರನ್ನಾಗಿ ಉಂಟುಮಾಡಿದ ಆತನ ಉದ್ದೇಶವನ್ನು ಉಲ್ಲಂಘಿಸಿದಂತಾಗುವದು.[88]

Moo ಇನ್ನಷ್ಟು ಹೇಳಿದ್ದೇನೆಂದರೆ, "ಪೌಲನು 'ಸ್ತ್ರೀ' (*thelys*) ಎಂಬದಕ್ಕೆ ಮತ್ತು 'ಗಂಡಸು' (*arsen*) ಎಂಬದಕ್ಕೆ ಗ್ರೀಕ್ ಪದಗಳನ್ನು ಉಪಯೋಗಿಸುತ್ತಾನೆ, ಇದರಿಂದ ದೇವರು ಮಾನವ ಜೀವಿಗಳನ್ನು ಎರಡು ವಿಭಾಗಗಳಾಗಿ ಉಂಟುಮಾಡಿದ್ದಾನೆ ಎಂಬದನ್ನು ಮತ್ತು ಆ ವಿಭಿನ್ನತೆಯೊಳಗಿಂದ ಹರಿಯುವ ಸಮರ್ಪಕವಾದ ಲೈಂಗಿಕ ನಡವಳಿಕೆಯ

ಪರಿಣಾಮಗಳನ್ನು ತಿಳಿಸುವವನಾಗಿದ್ದಾನೆ.[89]

Stott ಸಹ "ಸ್ವಾಭಾವಿಕ" ಮತ್ತು "ಅಸ್ವಾಭಾವಿಕ" ಕುರಿತಾದ ಈ ಪ್ರಶ್ನೆಗೆ ತಕ್ಕದಾಗಿ ಉತ್ತರಿಸುತ್ತಾರೆ:

> . . . ನಾಮಪದವಾಗಿರುವ "ಸ್ವಾಭಾವಿಕ" ಎಂಬದನ್ನು "ನನ್ನ" ಸ್ವಭಾವ ಎಂದು ಅರ್ಥಬರುವಂತೆಯಾಗಲಿ, ಅಥವಾ ಗುಣವಾಚಕ "ಸ್ವಭಾವಿಕ" ಎಂಬದನ್ನು "ನನಗೆ ಯಾವದು ಸ್ವಾಭಾವಿಕವಾಗಿ ತೋರುತ್ತದೋ" ಎಂಬ ಅರ್ಥಬರುವಂತೆ ಅನುವಾದಿಸುವ ಸ್ವಾತಂತ್ರ್ಯ ನಮಗಿರುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, *physis* ([ಅಥವಾ ಫೂಸಿಸ್] "ಸ್ವಾಭಾವಿಕ") ಎಂಬುದು ದೇವರ ಸೃಷ್ಟಿಯ ಕ್ರಮವೆಂದು ಅರ್ಥಕೊಡುತ್ತದೆ. "ಸ್ವಾಭಾವಕ್ಕೆ ವಿರುದ್ಧ ನಡೆಯುವದು" ಎಂದರೆ ದೇವರು ಸ್ಥಾಪಿಸಿರುವಂಥ ಕ್ರಮವನ್ನು ಉಲ್ಲಂಘಿಸುವದಾಗಿದೆ, ಅದರೆ ಇನ್ನೊಂದೆಡೆ "ಸ್ವಾಭಾವಕ್ಕನುಗುಣವಾಗಿ ನಡೆಯುವದು" ಎಂದರೆ "ಸೃಷ್ಟಿಕರ್ತನ ಉದ್ದೇಶಗಳ ಪ್ರಕಾರವಾಗಿ" ವರ್ತಿಸುವದು ಎಂಬ ಅರ್ಥವಾಗಿದೆ. . . . ಇದು ಏನಾಗಿತ್ತು, ಆದಿಕಾಂಡ ನಮಗೆ ಹೇಳುತ್ತದೆ ಮತ್ತು ಯೇಸು ದೃಢಪಡಿಸುತ್ತಾನೆ: "ಆದಿಯಲ್ಲಿ ಸೃಷ್ಟಿಕರ್ತನು 'ಅವರನ್ನು ಪುರುಷ ಮತ್ತು ಸ್ತ್ರೀಯಾಗಿ ಉಂಟುಮಾಡಿದನು', ಮತ್ತು ಹೇಳಿದನು 'ಆದದರಿಂದ ಮನುಷ್ಯನು ತನ್ನ ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರು ಒಂದೇ ಶರೀರವಾಗಿರುವರು.' ಹಾಗಾದರೆ ಅವರು ಇನ್ನು ಮೇಲೆ ಇಬ್ಬರಲ್ಲ, ಆದರೆ ಒಬ್ಬರು. . . ." ದೇವರ ಈ . . . ಕಾರ್ಯವು ಸ್ಥಿರಪಡಿಸುವದೇನೆಂದರೆ "ಒಂದೇ ಶರೀರವಾಗುವ" ಈ ಅನುಭವವು ಏಕಸಂಗಾತಿಯುಳ್ಳ ವಿರುದ್ಧಲಿಂಗದ ದಂಪತಿಗಳಿಗಾಗಿಯೇ ಆಗಿದೆ ಎಂಬುದು ಮತ್ತು ಸಲಿಂಗಕಾಮ ಸಂಬಂಧವು (ಅವರು ಎಷ್ಟೇ ಪ್ರೀತಿ ಮತ್ತು ಸಮರ್ಪಣೆಯಿಂದಿದ್ದರೂ ಸಹ) "ಸ್ವಾಭಾವಕ್ಕೆ ವಿರುದ್ಧ" ಆಗಿರುತ್ತದೆ ಮತ್ತು ಅದು ಎಂದಿಗೂ ನ್ಯಾಯಸಮ್ಮತವಾದ ವಿವಾಹಕ್ಕೆ ಪರ್ಯಾಯವಾಗಲು ಸಾಧ್ಯವೇ ಇಲ್ಲ.[90]

ಸತ್ಯವೇನೆಂದರೆ ಪೌಲನು ಸಲಿಂಗಕಾಮದ ಕೃತ್ಯಗಳನ್ನು ಖಂಡಿಸಿದ್ದು ನಿಜ—ಅದು "ವಿರುದ್ಧಲಿಂಗಕಾಮಿಗಳಿಂದ" ನಡೆಯಲಿ ಅಥವಾ "ಸಲಿಂಗಕಾಮಿಗಳಿಂದ" ನಡೆಯಲಿ. ಅಪೊಸ್ತಲನು ಏಕೆ ಅಷ್ಟೊಂದು ಕಠೋರವಾಗಿ ಮತ್ತು ಸ್ಪಷ್ಟವಾಗಿ ಮಾತಾಡಿದನು? ಯಾಕೆಂದರೆ ಆತನ ಕಾಲದಲ್ಲಿ ಸಲಿಂಗಕಾಮ ಮತ್ತು ಇತರ ಲೈಂಗಿಕ ಪಾಪಕೃತ್ಯಗಳು ಅನ್ಯಜನರೊಳಗೆ ಸಾಮಾನ್ಯವಾಗಿದ್ದವು. Barclay ಪ್ರಕಾರವಾಗಿ, ಹದಿನೈದು ರೋಮನ್ ಚಕ್ರವರ್ತಿಗಳಲ್ಲಿ ಹದಿನಾಲ್ಕು ಚಕ್ರವರ್ತಿಗಳು ತಾವೇ ಹೇಳಿಕೊಂಡಂತೆ ಸಲಿಂಗಕಾಮಿಗಳಾಗಿದ್ದರು.[91] ಗ್ರೀಕ್ ತತ್ವಜ್ಞಾನಿಗಳಲ್ಲಿ ಅನೇಕರು ಲೈಂಗಿಕವಾಗಿ ದಾರಿತಪ್ಪಿದ್ದರು.

ದೇವರು ಜನರನ್ನು ಅವರ ದುರಿಚ್ಛೆಗಳನ್ನು ತೃಪ್ತಿಪಡಿಸಿಕೊಳ್ಳುವಂತೆ "ಅವರನ್ನು ಒಪ್ಪಿಸಿಕೊಡುವಾಗ" ಉಂಟಾಗುವ ದುಷ್ಪರಿಣಾಮಗಳನ್ನು ದೃಷ್ಟಾಂತಗೊಳಿಸುವದಕ್ಕೆ ಪೌಲನು ಸಲಿಂಗಕಾಮದ ಕುರಿತು ಹೇಳುವದು ಸೂಕ್ತವೆಂದು ಭಾವಿಸಿದನು. "ಗಂಡಸರು ಗಂಡಸರೊಂದಿಗೆ ಅಸಭ್ಯಕ್ರಿಯೆಗಳನ್ನು ನಡಿಸುವ" ಬಗ್ಗೆ ಮಾತಾಡಿದ ಮೇಲೆ, ಆತನು ಇನ್ನೂ ಹೇಳಿದ್ದೇನೆಂದರೆ **ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವವರಾದರು.** "ತಮ್ಮಲ್ಲಿ" ಎಂಬದು ಅಕ್ಷರಶಃ "ತಮ್ಮೊಳಗೆ" ಎಂದಾಗಿರುತ್ತದೆ (KJV ನೋಡಿರಿ).

ಪೌಲನು "ಅವರ ಭ್ರಾಂತಿಗೆ ತಕ್ಕ ಫಲ" ಎಂದು ಹೇಳಿದಾಗ, ಆತನು ಸಾಮಾನ್ಯ ಜನರಿಗಿಂತಲೂ ಸಲಿಂಗಕಾಮಿಗಳೊಳಗೆ ಅಧಿಕವಾಗಿರುವ ಲೈಂಗಿಕಕ್ರಿಯೆಯ ಮೂಲಕ ಹರಡುವ ವ್ಯಾಧಿಗಳ ಬಗ್ಗೆ ಸುಳುವು ಕೊಟ್ಟನೋ? ನಾವು 27ನೇ ವಚನದ ಕೊನೆಯ ಭಾಗವನ್ನು ಓದುವದಾದರೆ, ಹೀಗೆ ಯೋಚಿಸದಿರುವದಕ್ಕೆ ಆಗುವದಿಲ್ಲ, ಯಾಕೆಂದರೆ ಏಡ್ಸ್ ಮಹಾಮಾರಿಯು, ಕೇವಲ ಸಲಿಂಗಕಾಮಿಗಳಿಗೆ ಮಾತ್ರ ಸಿಮೀತವಾಗಿಲ್ಲವಾದರೂ, ಅದು ಅವರ ಸಮುದಾಯದಲ್ಲಿ ವಿನಾಶಕಾರಿ ಪರಿಣಾಮವನ್ನು ಬೀರಿರುವದಂತೂ ಸತ್ಯ.

ಪೌಲನು ಸಲಿಂಗಕಾಮವನ್ನು ಆಚರಿಸುತ್ತಿರುವ ವ್ಯಕ್ತಿಯ ಮೇಲೆ ಅದು ಬೀರುವ ದುಷ್ಪರಿಣಾಮದ ಬಗ್ಗೆ ಮಾತಾಡುತ್ತಿದ್ದಾನೆಂದು ಅನೇಕ ಲೇಖಕರು ಭಾವಿಸುತ್ತಾರೆ (Phillips ಆವೃತ್ತಿಯನ್ನು ನೋಡಿರಿ). ಅಪೊಸ್ತಲನ ಮಾತುಗಳು "ಒಂದು ಗುರುತಿನ ವಿನಾಶಕರ, ದುರಂತಕರ ನಷ್ಟದ ಬಗ್ಗೆ . . . ಜೀವಿತದಲ್ಲಿ ಒಬ್ಬನ ಪಾತ್ರವೇನು ಎಂಬದರ ಬಗ್ಗೆ ಅನಿಶ್ಚಿತತೆಯ" ಕುರಿತು ತಿಳಿಸುತ್ತವೆ ಎಂದು Charles Swindoll ರವರು ಮುಕ್ತಾಯಗೊಳಿಸಿದರು.[92] ನೀನು ಯಾರು ಎಂಬದನ್ನು ಅರ್ಥಮಾಡಿಕೊಳ್ಳಲು ಬಹುಮುಖ್ಯವೆಂದರೆ ನೀನು "ನಾನೊಬ್ಬ ಪುರುಷನು" ಅಥವಾ "ನಾನೊಬ್ಬ ಸ್ತ್ರೀ" ಎಂದು ಹೇಳುವದಕ್ಕೆ ಶಕ್ತನಾಗಿರಬೇಕು. ಜನರು ದೇವರ ವ್ಯವಸ್ಥೆಯಿಂದ ದೂರವಾಗುವಾಗ, ಆ ವಿಭಿನ್ನತೆಯು ಮಾಯೆಯಾಗುತ್ತದೆ ಮತ್ತು ಮಂದವಾಗುತ್ತದೆ. ಹೀಗೆ ಕೆಲವರು "ನಾನು ಯಾರೆಂದೇ ನನಗೆ ತಿಳಿಯದಾಗಿದೆ!" ಎಂದು ಹೇಳಿಕೊಳ್ಳುವಂಥ ಮಾತುಗಳನ್ನು ಕೇಳಬೇಕಾಗುತ್ತದೆ. F. LaGard Smith ಇದಕ್ಕೆ ಸೇರಿಸಿ ಹೇಳುವದೇನೆಂದರೆ ಸಲಿಂಗಕಾಮದಿಂದ "ಸಹಜವಾಗಿ ಭಯ, ಏಕಾಂಗಿತನ, ತಿರಸ್ಕಾರ, ಮತ್ತು ಅಪರಾಧಭಾವನೆ ಕೂಡಿಬರುತ್ತವೆ."[93]

ಬಹುಶಃ ಪೌಲನು ಸಲಿಂಗಕಾಮಿಗಳು ಅನುಭವಿಸುವ ಯಾವದೇ ಮತ್ತು ಎಲ್ಲಾ "ದಂಡನೆ" ಯನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಿದ್ದಾನೆ, ಅದರಲ್ಲಿ ಅವರ ಜೀವಿತಶೈಲಿಯು ದೇವರಿಗೆ ಅಸಹ್ಯಕರವಾದದ್ದು ಎಂಬದು ಸಹ ಸೇರಿರುತ್ತದೆ. ABಯು 27ನೇ ವಚನದ ಕಡೇ ಭಾಗವನ್ನು ಹೀಗೆ ವಿಸ್ತರಿಸುತ್ತದೆ: ಸಲಿಂಗಕಾಮ ಕ್ರಿಯೆಗಳನ್ನು ನಡಿಸುವವರು "ತಮ್ಮ ದೇಹಗಳಲ್ಲಿ ಮತ್ತು ವ್ಯಕ್ತಿತ್ವಗಳಲ್ಲಿ ಅವರ ತಪ್ಪು ಕ್ರಿಯೆಗಳ ತಪ್ಪಿಸಿಕೊಳ್ಳಲಾಗದ ಪರಿಣಾಮಗಳನ್ನು, ಫಲಿತವನ್ನು ಅನುಭವಿಸುತ್ತಿದ್ದಾರೆ." ಒಬ್ಬರು ಹೀಗೆ ಹೇಳಿದ್ದಾರೆ, "ಪಾಪದ ನಿಖರವಾದ ದುಷ್ಪರಿಣಾಮಗಳು (ಯಾವಾಗಲೂ) ಊಹಿಸುವದಕ್ಕಾಗುವದಿಲ್ಲ ಆದರೆ ಅವುಗಳು ಸಂಭವಿಸುವದು ಅನಿವಾರ್ಯವಾ ಗಿರುತ್ತವೆ."[94]

ಸಲಿಂಗಕಾಮಿಗಳು ಏನೇ ಅನುಭವಿಸುತ್ತಿದ್ದರೂ ಅದೆಲ್ಲವೂ ಅವರಿಗೆ "ತಕ್ಕ ಫಲ(ದಂಡನೆ)" ಆಗಿತ್ತು ಎಂಬದನ್ನು ವಾಚಕರು ಅರ್ಥಮಾಡಿಕೊಳ್ಳಬೇಕೆಂಬದು ಪೌಲನ ಬಯಕೆಯಾಗಿತ್ತು. ಅದು ಸ್ವತಃ ಅವರೇ ಸಂಪಾದಿಸಿಕೊಂಡದ್ದಾಗಿತ್ತು (ನೋಡಿರಿ 6:23), ಅವರ ವಿಕೃತಕ್ಕೆ "ತಕ್ಕದಾದ ಸಂಬಳ" ಆದಾಗಿತ್ತು (1:27; NEB), ಅವರಿಗೆ ಯೋಗ್ಯವಾದ "ಶಿಕ್ಷೆ" (TEV).

**ವಿವಿಧ ಪಾಪಗಳ ಮೂಲಕ ದೇವರನ್ನು ತಿರಸ್ಕರಿಸುವದು (1:28-32)**

**[28]ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದರಿಂದ ಅಲ್ಲದ ಕೃತ್ಯಗಳನ್ನು ನಡಿಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು. [29]ಹೇಗಂದರೆ ಅವರು ಸಕಲವಿಧವಾದ ಅನ್ಯಾಯ ದುರ್ಮಾರ್ಗತನ ಲೋಲುಪ್ತಿ ದುಷ್ಟತ್ವಗಳಿಂದಲೂ ಹೊಟ್ಟೆ ಕಿಚ್ಚು ಕೊಲೆ ಜಗಳ ಮೋಸ ಹಗೆತನಗಳಿಂದಲೂ ತುಂಬಿದವರಾದರು. [30]ಅವರು ಕಿವಿ ಊದುವವರೂ ಚಾಡಿಹೇಳುವವರೂ ದೇವರನ್ನು ದ್ವೇಷಿಸುವವರೂ ಸೊಕ್ಕಿನವರೂ ಅಹಂಕಾರಿಗಳೂ ಬಡಾಯಿಕೊಚ್ಚುವವರೂ ಕೇಡನ್ನು ಕಲ್ಪಿಸುವವರೂ [31]ತಂದೆತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ ಮಾತಿಗೆ ತಪ್ಪುವವರೂ ಮಮತೆಯಿಲ್ಲದವರೂ ಕರುಣೆಯಿಲ್ಲದವರೂ ಆದರು. [32]ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ.**

1:28–32 ರಲ್ಲಿ, ಪೌಲನು ಅನ್ಯಜನರ ಮೇಲಿನ ಆರೋಪವನ್ನು ಮುಂದುವರೆಸಿದನು, ಅವರ ವಿಗ್ರಹಾರಾಧನೆ ಮತ್ತು ಲೈಂಗಿಕ ಅನೈತಿಕತೆಯ ಪಾಪಗಳ (ಸಲಿಂಗಕಾಮವೂ ಸೇರಿದಂತೆ) ಪಟ್ಟಿಗೆ ಸೇರಿಸುತ್ತಾ ಹೋಗುತ್ತಾನೆ. ಈ ವಚನಗಳಲ್ಲಿ Donald Barnhouse ಕರೆಯುವಂತೆ "ದೇವರ ವಾಕ್ಯದಲ್ಲಿಯೇ ಅತ್ಯಂಥ ಆಗಾಧವಾದ ಪಾಪಗಳ ಪಟ್ಟಿ" ಇರುತ್ತದೆ.[95] ಈ ವಾಕ್ಯಭಾಗವು "ಹಾಳಾಗುತ್ತಿರುವ ನಾಗರಿಕತೆಯ ಕುರುಹುಗಳ" ಒಂದು ವಿವರಣಪಟ್ಟಿ (ತಪಶೀಲುಪಟ್ಟಿ) ಎಂದು ಹೇಳಲಾಗುತ್ತದೆ.[96] ದುಃಖಕರವೆಂದರೆ, ಇದು ನಾವು ಜೀವಿಸುತ್ತಿರುವ ಜಗತ್ತನ್ನು ಸಹ ಚಿತ್ರಿಸುವದಾಗಿದೆ.

**ವಚನ 28.** ಇಲ್ಲಿ ಪೌಲನು ಪಟ್ಟಿಯನ್ನು ಪರಿಚಯಗೊಳಿಸುವದಕ್ಕೆ ಮತ್ತೊಮ್ಮೆ "ದೇವರು ಅವರನ್ನು ಒಪ್ಪಿಸಿಕೊಟ್ಟನು" ಎಂಬ ಮಾತನ್ನು ಉಪಯೋಗಿಸುತ್ತಾನೆ: **ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದರಿಂದ ಅಲ್ಲದ ಕೃತ್ಯಗಳನ್ನು ನಡಿಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು.** ಈ ಹೇಳಿಕೆ ಪ್ರಧಾನವಾದದ್ದು, ಆದ್ದರಿಂದ ಪ್ರತಿವಾಕ್ಯವನ್ನು ಜಾಗರೂಕತೆಯಿಂದ ಪರಿಗಣಿಸತಕ್ಕದ್ದು.

"ಅವರಿಗೆ ಇನ್ನು ಮೇಲೆ ದೇವರ ಜ್ಞಾನವು ಇಷ್ಟವಿರಲಿಲ್ಲ." ಅವರು ನಂಬದಿರುವದು ಇಚ್ಛಾಪೂರ್ವಕವಾಗಿತ್ತು ಮತ್ತು ಯೋಚಿಸಿಮಾಡಿದ ತೀರ್ಮಾನವಾಗಿತ್ತು. "ಮಾನವರು ತಮ್ಮಿಷ್ಟದಂತೆ ದೇವರ ಅರ್ಹತೆಗಳನ್ನು ಹೊಂದಿದ್ದಾನೋ ಎಂದು ವಿಚಾರಿಸುವದಕ್ಕೆ ಕುಳಿತುಕೊಂಡರು; ಮತ್ತು ಆತನು ಆ ಅರ್ಹತೆಗಳನ್ನು ಹೊಂದಿಲ್ಲವೆಂದು ತೀರ್ಮಾನಿಸಿ ಆತನನ್ನು ತಮ್ಮ ಜೀವಿತಗಳೊಳಗಿಂದ ತಳ್ಳಿ ಹಾಕಿದರು."[97] Jim McGuiggan ಇದನ್ನು ಹೀಗೆ ವ್ಯಕ್ತಪಡಿಸಿದರು: "ಅವರು ಈ ದೇವರನ್ನು ತಮ್ಮ ನಯವಾದ ತಕ್ಕಡಿಯಲ್ಲಿ ತೂಗಿದರು. ಅವರು ತಮ್ಮ ಜ್ಞಾನವುಳ್ಳ ಬುದ್ಧಿಗಳಿಂದ ಪರೀಕ್ಷಿಸಿದರು; ಅವರು ಅವನನ್ನು ರುಚಿ ನೋಡಿದರು, ವಾಸನೆ ನೋಡಿದರು, ಚಿವುಟಿದರು, ಆತನನ್ನು ಅಧ್ಯಯನ ಮಾಡಿದರು ಮತ್ತು ಆತನನ್ನು ತಮಗೆ ತಕ್ಕವನಲ್ಲ ಎಂಬದಾಗಿ ಪಕ್ಕಕ್ಕೆ ಎಸೆದುಬಿಟ್ಟರು!"[98] ಎಷ್ಟು ಮೂರ್ಖತನ; ಎಷ್ಟು ದುರಂತಕರ! ಜನರು ದೇವರನ್ನು ತಿರಸ್ಕರಿಸಿದಾಗ, ಆತನು "ಅವರನ್ನು ಒಪ್ಪಿಸಿಕೊಟ್ಟನು."

ದೇವರು ಅವರನ್ನು "ಅನಿಷ್ಟಭಾವಕ್ಕೆ ಒಪ್ಪಿಸಿದನು." ಅನುವಾದಿಸಲ್ಪಟ್ಟ "ಅನಿಷ್ಟಭಾವ" ಎಂಬದರ ಮೂಲಪದವು (ἀδόκιμος, *adokimos*) "ಅನುಮೋದನೆ" (ἀδόκιμος, *dokimos*) ಎಂಬದಕ್ಕೆ ಒಂದು ನಕಾರಾತ್ಮಕ (α, *a*) ಪದ ಸೇರಿಸಲ್ಪಟ್ಟು ಬಂದದ್ದಾಗಿದೆ. ಅದು ಅನುಮೋದಿಸಲ್ಪಡದ, ಪರೀಕ್ಷೆಯಲ್ಲಿ ವಿಫಲವಾದ ಸಂಗತಿಗೆ ಎಂಬದನ್ನು ಸೂಚಿಸುತ್ತದೆ.[99] ಗ್ರೀಕ್ ಪ್ರತಿಯಲ್ಲಿ ಪದಗಳು ಚಾಣಕ್ಯದಿಂದ ಉಪಯೋಗಿಸಲ್ಪಟ್ಟಿವೆ: *adokimos* ("ಅನಿಷ್ಟಭಾವ") ಎಂಬುದು ಮೊದಲ ವಚನದಲ್ಲಿರುವ "ಇಷ್ಟವಿಲ್ಲದರಿಂದ . . ." (ἐδοκίμασαν, *edokimasan*) ಎಂಬುದರ ನಕಾರಾತ್ಮ (ನಿಷೇಧಾತ್ಮಕ) ರೂಪಪದವಾಗಿದೆ. Stott ಈ ಅನುವಾದವನ್ನು ನೀಡುತ್ತಾರೆ: "ಅವರು ದೇವರ ಜ್ಞಾನವನ್ನು ಉಳಿಸಿಕೊಳ್ಳಲು ತಕ್ಕದೆಂದು ಭಾವಿಸಿದ್ದರಿಂದ, ಆತನು ಅವರನ್ನು ತಕ್ಕದಲ್ಲದ *ಭಾವಕ್ಕೆ (ಮನಸ್ಸಿಗೆ)* ಒಪ್ಪಿಸಿದನು."[100] Morris ಹೀಗೆ ಪ್ರಸ್ತಾಪಿಸಿದರು, "ಅವರು ದೇವರನ್ನು ತಿಳಿಯಲು 'ಅನುಮೋದಿಸಲಿಲ್ಲ' ಮತ್ತು [ಆದ್ದರಿಂದ] ಅವರು 'ಅನುಮತಿಸದ' ಮನಸ್ಸನ್ನು ಹೊಂದಿದರು."[101]

ದೇವರನ್ನು ತಿರಸ್ಕರಿಸಿದ ಅವರ ಮನಸ್ಸುಗಳು (ಬುದ್ಧಿಗಳು) ವಿಶ್ವಾಸಾರ್ಹ ನೈತಿಕ ತೀರ್ಮಾನಗಳನ್ನು ಮಾಡುವದಕ್ಕೆ ಅಸಮರ್ಥಗೊಂಡವು;[102] ಅವರಿಗೆ ಇನ್ನು ಮೇಲೆ ಯಾವದು ಸರಿ ಮತ್ತು ತಪ್ಪು ಎಂದು ಹೇಳಲಾಗಲಿಲ್ಲ. ಇದರಲ್ಲಿ ಆಶ್ಚರ್ಯವೇನಿಲ್ಲ, ಏನೆಂದರೆ ನಾವು ಸಮಾಜದಲ್ಲಾಗುತ್ತಿರುವ ನೈತಿಕ ಮಾನದಂಡಗಳ ಕುಸಿತಗಳ ಬಗ್ಗೆ ಚಿಂತೆವ್ಯಕ್ತಪಡಿಸಿದರೆ ಅವರು ನಮ್ಮನ್ನು "ಹುಚ್ಚರು" ಎನ್ನುತ್ತಾರೆ. ಪೌಲನ ಪ್ರಕಾರವಾಗಿ, ಅವರ ಮನಸ್ಸುಗಳು ಗೊಂದಲದ ಗೂಡಾಗಿದ್ದವು!

Fyodor Dostoevsky (1821-1881) ಒಮ್ಮೆ ಹೀಗೆ ಬರೆದರು, "ದೇವರು ಇಲ್ಲವಾದರೆ, ಇನ್ನಾವದೂ ಸಹ ನೈತಿಕವಾಗಿ ತಪ್ಪು ಆಗಿರಲಾರದು."[103] ಮಾನವ ಜನಾಂಗವು "ದೇವರ ಜ್ಞಾನವನ್ನು ತಮಗೆ ಇಷ್ಟವಿಲ್ಲದ್ದು" ಎಂದು ಕಂಡಾಗ, ಅವರ ಭಕ್ತಿಹೀನತೆಯು ಎಲ್ಲೆಮೀರಿತ್ತು, ಅದರ ವಿಕೃತಿಗೆ ಮೀತಿಯಿರಲಿಲ್ಲ.

ಒಂದು ತಪ್ಪು ತೀರ್ಮಾನ ("ಇನ್ನು ದೇವರ ಜ್ಞಾನವನ್ನು ತಮಗೆ ಇಷ್ಟವಿಲ್ಲದ್ದು") ತಪ್ಪಾದ ಆಲೋಚನೆಗೆ ("ಅನಿಷ್ಟಭಾವ") ನಡಿಸಿತು. ತಪ್ಪಾದ ಜೀವನಶೈಲಿಗೆ ನಡಿಸಿತು: ಅವರು "ಅಲ್ಲದ ಕಾರ್ಯಗಳನ್ನು ನಡಿಸುವವರಾದರು." "ಅಲ್ಲದ ಕಾರ್ಯಗಳು" ಎಂಬುದು ಒಂದು ಜೋಡುಪದವಾಗಿದ್ದು (καθήκω, *kathēkō)* ಅದರರ್ಥವು "ತಕ್ಕ."[104] "ತಕ್ಕ" ಎಂಬುದು ನಿಖರವಾದ ಅನುವಾದ, ಆದರೆ ಒಂದು ಬಲವಾದ ಪದವಿದ್ದರೆ ಸೂಕ್ತವಾಗಿರುವದು. ಯಾಕೆಂದರೆ "ತಕ್ಕ" ಎಂಬುದು ಯಾವಾಗಲೂ ನೀತಿಗಳ ಬದಲಿಗೆ ರೀತಿಗಳ ವಿಷಯಕ್ಕೆ ಸಂಬಂದಿಸಿ ಹೇಳಲ್ಪಡುತ್ತದೆ. ಇಲ್ಲಿ ಚಿಂತೆಯು ನೈತಿಕತೆಯ ಕುರಿತಾಗಿರುತ್ತದೆ—ದೇವರ ದೃಷ್ಟಿಯಲ್ಲಿ "ತಕ್ಕ" ಅಥವಾ "ಸರಿ" ಆಗಿರುವಂಥದ್ದು. "ಅಲ್ಲದ ಅಥವಾ ತಕ್ಕದಲ್ಲದ ಸಂಗತಿಗಳು" ದೇವರಿಗೆ "ಅಸಹ್ಯಕರ ಅಥವಾ ಹೇಸಿಗೆಕರ" ಆಗಿರುತ್ತವೆ.[105] ಪೌಲನು ಹೇಳಲಿಚ್ಚಿಸಿದ "ಅಸಹ್ಯಕರ" ಮತ್ತು "ಹೇಸಿಗೆಕರ" ಸಂಗತಿಗಳ ಪಟ್ಟಿಯು ಈ ಕೆಳಗಿನ ವಚನಗಳಲ್ಲಿರುತ್ತವೆ.

**ವಚನ 29.** ಪೌಲನು ಮನುಷ್ಯನ ವಿಕೃತಿಯನ್ನು ಇಪ್ಪತ್ತು ಪಾಪಗಳ ಪಟ್ಟಿಯನ್ನು ಮುಂದಿಡುವ ಮೂಲಕ ದೃಷ್ಟಾಂತಪಡಿಸುತ್ತಾನೆ (1:29-31). ಆತನು ತನ್ನ ದಿನಗಳಲ್ಲಿದ್ದ

ಪ್ರತಿಯೊಂದು ಪಾಪವನ್ನು ಪಟ್ಟಿಮಾಡಲಿಲ್ಲ, ಆದರೆ ವಿಶಿಷ್ಟವಾದವುಗಳನ್ನು ಪಟ್ಟಿಮಾಡಿದ್ದಾನೆ. ಪೌಲನ ದಿನಗಳಲ್ಲಿ ಎಲ್ಲರೂ ಈ ಪಾಪಗಳನ್ನು ಮಾಡಿದವರಾಗಿರಲಿಲ್ಲ, ಆದರೆ ಇವುಗಳಲ್ಲಿ ಒಂದು ಅಥವಾ ಹೆಚ್ಚು ಪಾಪಗಳನ್ನಂತೂ ಮಾಡಿದ ದೋಷಿಯಾಗಿದ್ದರು.

ಪೌಲನ ಈ ಪಟ್ಟಿಯನ್ನು ಒಂದು ತಾರ್ಕಿಕ ಕ್ರಮಾನುಸಾರದಲ್ಲಿ ಜೋಡಿಸುವದಕ್ಕೆ ಅನೇಕರು ಪ್ರಯತ್ನಿಸಿದ್ದಾರೆ, ಆದರೆ ಆತನ ಗುರಿಯು ಪಾಪಗಳನ್ನು ನೀಟಾದ ಪಟ್ಟಿ ಮಾಡಿ ಜೋಡಿಸುವದಾಗಿರಲಿಲ್ಲ. ದೇವರು ಅವರನ್ನು "ಒಪ್ಪಿಸಿಕೊಟ್ಟ" ಬಳಿಕ ಮಾನವರು ಎಷ್ಟೊಂದು ಅಧೋಗತಿಗೆ ಸಾಗಿದ್ದಾರೆಂಬದನ್ನು ತೋರ್ಪಡಿಸುವದು ಆತನ ಉದ್ದೇಶವಾಗಿತ್ತು. ಆತ್ಮನಿಂದ ನಡಿಸಲ್ಪಟ್ಟವನಾಗಿ, ಪೌಲನು ಪಾಪಗಳನ್ನು ವಾಕರಿಕೆ ಬರುವಂಥ ಒಂದು ಗುಡ್ಡೆಯಾಗಿ ಮುಂದಿಡುತ್ತಾನೆ.

ಪೌಲನು ತನ್ನ ಪಟ್ಟಿಯನ್ನು ಅನ್ಯಜನರು ಅನ್ಯಾಯ ತುಂಬಿದವರಾದರು ಎಂದು ಹೇಳುವ ಮೂಲಕ ಪ್ರಾರಂಭಿಸುತ್ತಾನೆ. "ಅನ್ಯಾಯ" (ἀδικία, *adikia*) ಎಂಬುದು "ನೀತಿ" ಎಂಬದರ ನಕಾರಾತ್ಮಕ ರೂಪವಾಗಿದೆ. "ನೀತಿ" ಯ ಅರ್ಥಗಳಲ್ಲೊಂದೆಂದರೆ "ಸರಿ–ಜೀವನ." ಇಲ್ಲಿ "ಅನ್ಯಾಯ" ಎಂಬುದು "ತಪ್ಪಾದ ಜೀವನ"–ಯಾವದೇ ರೀತಿಯ–ಎಂಬದನ್ನು ಸೂಚಿಸುವದಕ್ಕೆ ಸಾರ್ವತ್ರಿಕ ಪದವಾಗಿದೆ. "ಸಕಲ ವಿಧವಾದ ಅನೀತಿ" ಎಂಬುದು ಈ ವಾಕ್ಯಭಾಗದಲ್ಲಿರುವ ಮತ್ತು ಇತರ ಎಲ್ಲಾ ಪಾಪಗಳನ್ನು ಒಳಗೊಂಡು ಸೂಚಿಸುವ ಒಂದು ಸಮಗ್ರ ಪದವಾಗಿದೆ. "ಅವರು ಸಕಲ ವಿಧವಾದ ಅನ್ಯಾಯ *ತುಂಬಿದವರಾದರು*" ಎಂದು ಪೌಲನು ಹೇಳಿದನು (ಒತ್ತಿ ಹೇಳಿದ್ದು ನನ್ನದು). ಅವರ ಜೀವಿತಗಳಲ್ಲಿ ಸ್ವಲ್ಪ ಪಾಪವನ್ನು ಹೊಂದಿರಲಿಲ್ಲ; ಅವರಲ್ಲಿ ಅದು ಉಕ್ಕಿಹರಿಯುತ್ತಿತ್ತು. AB ಯಲ್ಲಿ ಹೀಗಿದೆ, "ಅವರು ಪ್ರತಿಯೊಂದು ವಿಧವಾದ ಅನೀತಿಯಿಂದ ತುಂಬಿದ್ದರು (ವ್ಯಾಪಿಸಲ್ಪಟ್ಟಿದ್ದರು ಮತ್ತು ನೆನದು ಹೋಗಿದ್ದರು)."

"ಅನ್ಯಾಯ"ದ ಬಳಿಕ ಪೌಲನು **ದುರ್ಮಾರ್ಗತನ**ವನ್ನು ಪಟ್ಟಿಯಲ್ಲಿ ಸೇರಿಸುತ್ತಾನೆ.[106] "ದುರ್ಮಾರ್ಗತನ" (πονηρία, *ponēria*) ಎಂಬುದು ಮತ್ತೊಂದು ಸಾರ್ವತ್ರಿಕ ಪದವಾಗಿದ್ದು ಅದು ಎಲ್ಲಾ ಕೆಟ್ಟದಾದ ಮತ್ತು ಹಾನಿಕಾರಕವಾದ ಸಂಗತಿಗಳನ್ನು ಸೂಚಿಸುತ್ತದೆ.[107]

ಪೌಲನು ನಂತರ **ಲೋಲುಪ್ತಿ** (πλεονεξία, *pleonexia*) ಯನ್ನು ಉಲ್ಲೇಖಿಸುತ್ತಾನೆ, ಅದು ಇನ್ನಷ್ಟು ಬೇಕು . . . ಇನ್ನಷ್ಟು ಬೇಕು ಎನ್ನುವ ವಿಪರೀತವಾದ ಬಯಕೆಯಾಗಿರುತ್ತದೆ. J. W. McGarvey ಲೋಲುಪ್ತಿಯನ್ನು "ಇತರ ಹಕ್ಕುಗಳನ್ನು ಧಿಕ್ಕರಿಸಿ ವಿಪರೀತವಾದ ಪ್ರಮಾಣದಲ್ಲಿ ಆಸ್ತಿಯನ್ನು ಕೂಡಿಸಿಟ್ಟುಕೊಳ್ಳಬೇಕೆಂಬ ಇಚ್ಛೆ" ಎಂದು ಕರೆದರು. ಆತನು ಗಮನಕ್ಕೆ ತಂದದ್ದೇನೆಂದರೆ ದುರಾಶೆಯನ್ನು ಯಾವ ದೇಶದ ಕಾನೂನು ಸಹ ಖಂಡಿಸುವದಿಲ್ಲ, ಆದರೆ ಎಲ್ಲಾ ದೇಶಗಳಲ್ಲಿ ಸಾರ್ವತ್ರಿಕವಾಗಿ ಅಶಾಂತಿಗೆ ಮೂಲಾಧಾರವಾಗಿರುತ್ತದೆ.[108]

**ದುಷ್ಟತ್ವ** ಎಂಬ ಅನುವಾದಿತ ಪದ (κακία, *kakia*) ವು ಬಹುಶಃ ಕೆಟ್ಟತನ, ದುಷ್ಟತನ, ವಿಕೃತಿಯನ್ನು ಸೂಚಿಸುವ ಗ್ರೀಕ್.ನ ಅತ್ಯಂಥ ಸಾಮಾನ್ಯ ಪದವಾಗಿರುತ್ತದೆ. ಈ ಪದವು ಹೃದಯದ ಕುರಿತಾಗಿರುತ್ತದೆ.[109] ಹೃದಯದಲ್ಲಿರುವ ದುಷ್ಟತ್ವವು ಅನೀತಿ ಮತ್ತು

ಕೆಟ್ಟತನಕ್ಕೆ ದಾರಿ ಮಾಡಿಕೊಡುತ್ತದೆ.

ಇದನ್ನು ಅನುಸರಿಸಿ, ಪೌಲನು ಒತ್ತಿ ಹೇಳಿದ್ದೇನೆಂದರೆ ಅನ್ಯಜನರು **ಹೊಟ್ಟೇಕಿಚ್ಚಿನಿಂದ... ತುಂಬಿದವರಾಗಿದ್ದರು** ಎಂಬುದಾಗಿ. W. J. Conybeare ಈ ಅನುವಾದವನ್ನು ನೀಡಿದರು: "ಅವರು ಹೊಟ್ಟೇಕಿಚ್ಚಿನಿಂದ ತುಂಬಿತುಳುಕುತ್ತಿದ್ದರು."[110] "ಹೊಟ್ಟೇಕಿಚ್ಚು" (φθόνος, *phthonos*) ಎಂಬುದು ಇತರರಿಗೆ ಒಳ್ಳೇದಾಗುವದನ್ನು ಕಂಡು ಉಂಟಾಗುವ ಅಸೂಯೆಯ ಭಾವನೆಯಾಗಿದೆ. Morrris ಪ್ರಕಾರ, "ಹೊಟ್ಟೇಕಿಚ್ಚು" ಎಂಬ ಪದವು ದುಷ್ಟತನ ನಡೆಸುವವರು ಒಂದು ಸಂತೋಷವುಳ್ಳ ಸಹೋದರರ ಕೂಟವಾಗಿರಲು ಸಾಧ್ಯವಿಲ್ಲದವರು ಎಂಬದನ್ನು ನಮಗೆ ಜ್ಞಾಪಿಸುತ್ತದೆ. "ಜನರನ್ನು ಪರಸ್ಪರರಿಂದ ಪ್ರತ್ಯೇಕಗೊಳಿಸುವ ಕೆಟ್ಟತನದ ಕುರಿತು ಒಂದು ಭೇದಭಾವ ನೆಯಿರುತ್ತದೆ."[111] *Divine Comedy* ಎಂಬ ತನ್ನ ಸಾಂಕೇತಿಕ ಪದ್ಯದಲ್ಲಿ, Dante (c.1265-1321) ಹೊಟ್ಟೇಕಿಚ್ಚನ್ನು ಅವರ ಕಣ್ಣುಗಳು ಹೊಲೆದು ಮುಚ್ಚಲ್ಪಟ್ಟಿರುವಂತೆ ಚಿತ್ರಿಸಲಾಗಿದೆ. ಹೊಟ್ಟೇಕಿಚ್ಚು ಸುಂದರ ಮತ್ತು ಉಪಯುಕ್ತವಾದ ಎಲ್ಲವನ್ನೂ ನೋಡದಂತೆ ಒಬ್ಬನ ಕಣ್ಣುಗಳನ್ನು ಮುಚ್ಚಿಬಿಡುವದಾಗಿದೆ ಎಂಬದಾಗಿ ಆತನು ಹೇಳುತ್ತಿದ್ದಾನೆ.[112] Halford E. Luccock ಹೇಳಿದ್ದೇನೆಂದರೆ "ಹೊಟ್ಟೇಕಿಚ್ಚಿನ ಕಣ್ಣುಗಳಿಂದ ಲೋಕವನ್ನು ನೋಡುವವನು ಎಂಥವನೆಂದರೆ ಒಂದು ಸುಂದರ ಪ್ರಕೃತಿ ದೃಶ್ಯವನ್ನು ನೋಡುತ್ತಿರುವ ಆದರೆ ಅದೇ ವೇಳೆಯಲ್ಲಿ ವಿಪರೀತವಾದ ಹಲ್ಲುನೋವಿರುವ ವ್ಯಕ್ತಿಯಂತೆ ಇರುತ್ತಾನೆ."[113]

ಈ ಜನರು ತಾವು ಬಯಸಿದ್ದನ್ನು ಪಡೆದುಕೊಳ್ಳಲು ಯಾವ ಮಟ್ಟಕ್ಕೆ ಹೋಗಲು ಸಿದ್ಧರಿದ್ದರು? **ಕೊಲೆ** (φόνος, *phonos*) ಮಾಡುವಷ್ಟರ ಮಟ್ಟಿಗೆ ಹೋಗಬಲ್ಲವರಾಗಿದ್ದರು! ಅವರು ತಮ್ಮ ನಡುವೆ ಯಾವದನ್ನು ಅಡ್ಡಿಯಾಗಿ ನಿಲ್ಲುವದಕ್ಕೆ ಬಿಡದವರಾಗಿದ್ದರು!

ಅಲ್ಲದೆ ಪೌಲನು ಅನ್ಯಜನರ ಮೇಲೆ **ಜಗಳಕ್ಕೆ** (ἔρις, *eris*) ಇಳಿಯುವ ಆರೋಪವನ್ನು ಸಹ ಮಾಡಿದನು. "ಜಗಳ" ಎಂಬುದಕ್ಕಿರುವ ಇನ್ನೊಂದು ಪದವು "ಕಿತ್ತಾಟ," ಇದರಲ್ಲಿ ಕಲಹ, ವಾಗ್ವಾದ (CEV), "ವ್ಯಾಜ್ಯ" (NCV), "ವಾದವಿವಾದ" (KJV) ಸೇರಿರುತ್ತವೆ.

ಅನುವಾದಿತ **ಮೋಸ** (δόλος, *dolos*) ಎಂಬುದರ ಅಕ್ಷರಶಃ ಅರ್ಥವು "ಗಾಳ" ಎಂಬುದು.[114] ಮೀನುಗಳನ್ನು ಅಥವಾ ಪ್ರಾಣಿಗಳನ್ನು ಬೇಟೆಯಾಡುವದಕ್ಕೆ ಅಹಾರ ಸಿಕ್ಕಿಸಿ ಇಡುವ ಗಾಳದ ಹಾಗೆ. ಇದು ಇತರರನ್ನು ಬಲೆಗೆ ಬೀಳಿಸುವದಕ್ಕೆ ಅಥವಾ ವಂಚಿಸುವದಕ್ಕೆ ಅನುಸರಿಸುವ "ಯಾವದೇ ಕುತಂತ್ರ ಯುಕ್ತಿಗಳ" ನ್ನು ಸೂಚಿಸುತ್ತದೆ.[115] ಪೌಲನು ಅವರನ್ನು ಬಣ್ಣಿಸಲು ಉಪಯೋಗಿಸಿದ ಪದಗಳೇನಂದರೆ ಸುಳ್ಳುಗಾರರು, ಮೋಸಗಾರರು ಮತ್ತು ವಂಚಕರು.

ಅನುವಾದಿಸಲ್ಪಟ್ಟ **ಹಗೆತನ** (κακοήθεια, *kakoētheia*) ಎಂಬುದು "ಕೆಟ್ಟ" (κακός, *kakos*) ಮತ್ತು "ನಡತೆ" ಅಥವಾ "ಗುಣಸ್ವಭಾವ" (ἔθος, *ethos*)[116] ಎಂಬ ಪದಗಳು ಸಮ್ಮಿಲನದಿಂದ ಬಂದದ್ದು. Macknightನು *kakoētheia* ಎಂಬುದನ್ನು "ರೂಢಿಯಾಗಿ ದುರ್ನಡತೆಯನ್ನು ಪ್ರವೃತ್ತಿ ತೋರುವದು" ಎಂದು ಕರೆಯುತ್ತಾನೆ.[117] Vine ಈ ಪದವನ್ನು ಹೀಗೆ ವ್ಯಾಖ್ಯಾನಿಸಿದೆ, ಯಾವದೇ ವಿಷಯವನ್ನು ಬಹಳ ಕೆಟ್ಟದ್ದಾಗಿ ಬಿಂಭಿಸುವ "ಒಂದು ಕೆಟ್ಟ ಪ್ರವೃತ್ತಿ."[118]

ಅನುವಾದಿತ ಪದವಾದ ಕಿವಿ **ಊದುವವರು** (ψιθυριστής, *psithuristēs* ಎಂಬದರ ಬಹುವಚನ**)** ಎಂಬದರ ಅಕ್ಷರಶಃ ಅರ್ಥವು "ಪಿಸುಗುಟ್ಟುವವರು" (KJV ನೋಡಿರಿ). Moses E. Lard ಅವರ ಹೇಸಿಗೆಕರವಾದ ಕೃತ್ಯಗಳನ್ನು ಈ ರೀತಿಯಾಗಿ ಬಣ್ಣಿಸಿದ್ದಾರೆ:

> *ಪಿಸುಗುಟ್ಟುವವರು* . . . ಯಾವಾಗಲೂ ತಮ್ಮನ್ನು ಬಹಳವಾಗಿ ಮುಗ್ಧರಂತೆ ತೋರಿಸಿಕೊಳ್ಳುತ್ತಾರೆ ಮತ್ತು ತಮ್ಮ ನೋವಿನ ಕಥೆಗಳನ್ನು ವಿಷಾಧಕರವಾಗಿ ಹೇಳಿಕೊಳ್ಳುತ್ತಾರೆ. ಅವರು ಹೇಳಿ ಮುಗಿಸಿದ ಬಳಿಕ, ಇದನ್ನು ಯಾರಿಗೂ ಹೇಳಬೇಡಿರಿ, ಇದರಿಂದ ಹಾನಿಯಾಗಬಹುದೆಂದು ಬೇರೆಯರ ಮೇಲೆ ಆದೇಶ ಹೇರುವದಕ್ಕೆ ಮರೆಯುವದಿಲ್ಲ.[119]

**ವಚನ 30.** "ಕಿವಿ ಊದುವವರು" ಮತ್ತು **ಚಾಡಿಹೇಳುವವರೂ** (κατάλαλος, *katalalos* ಎಂಬುದರ ಬಹುವಚನ) ಇವೆರಡೂ ಮತ್ತೊಬ್ಬರ ಗುಣಶೀಲತೆಯನ್ನು ನಾಶಮಾಡುವವರಾಗಿದ್ದಾರೆ; ಆದರೆ ಕಿವಿ ಊದುವವರು ಇದನ್ನು ಮುಚ್ಚಿದ ಬಾಗಲಿನ ಹಿಂದೆ ಮಾಡಿದರೆ, ಚಾಡಿಹೇಳುವವರು ಇದನ್ನು ಬಯಲಲ್ಲಿ (ಮುಕ್ತವಾಗಿ) ಮಾಡುವರು. ಈ ಪಾಪದ ಕುರಿತಾಗಿ, Lardರವರು ಇನ್ನೂ ಬರೆದಿದ್ದೇನೆಂದರೆ,

> ಚಾಡಿಹೇಳುವವರು . . . ತಾವು ಮಾಡಬಾರದೆಂಬ ಎಲ್ಲವನ್ನೂ ಅರಿತವರಾಗಿರುತ್ತಾರೆ, ಮತ್ತು ಅವರು ಹೇಳಬಾರದ ಎಲ್ಲವನ್ನು ಹೇಳಿಬಿಡುತ್ತಾರೆ . . . ಅವರು ಎಂದಿಗೂ ಗುಟ್ಟುಗಳನ್ನು ಹೇಳುವದಿಲ್ಲ, ಆದರೆ ಅಪಖ್ಯಾತಿಯನ್ನುಂಟು ಮಾಡುವ ಸತ್ಯಗಳನ್ನಷ್ಟೇ ಹೇಳುತ್ತಾರೆ! ಹೀಗೆ ಅವರು ಯಾವಾಗಲೂ ತಮ್ಮ ಸುಳ್ಳನ್ನು ಸರಿಯೋ ತಪ್ಪೋ ಎಂದು ಪರೀಕ್ಷಿಸುವಂತೆ ಗುಂಪಿನಲ್ಲೊಬ್ಬರಿಗೆ ಹೇಳುವರು.[120]

ಅನ್ಯಜನರು **ದೇವರನ್ನು ದ್ವೇಷಿಸುವವರು** ಎಂದು ಪೌಲನು ಹೇಳಿದನು, ಆತನು ಇಲ್ಲಿ ಜೋಡುಪದವನ್ನು (θεοστυγής, *theostugēs*) ಉಪಯೋಗಿಸುತ್ತಾನೆ, ಅದು "ದೇವರು" (θεός, *theos*) ಮತ್ತು "ದ್ವೇಷ" (στυγέω, *stugeō*) ಎರಡು ಪದಗಳಿಂದಾಗಿದೆ. ಅದು "ದೇವ-ದ್ವೇಷಿತ" ("ದೇವರಿಂದ ದೂಷಿಸಲ್ಪಟ್ಟವರು") ಅಥವಾ "ದೇವರ ದ್ವೇಷಕರು" ("ದೇವರನ್ನು ದ್ವೇಷಿಸುವವರು") ಎಂಬ ಅರ್ಥವನ್ನು ಕೊಡಬಲ್ಲದು.[121] ಈ ವಾಕ್ಯದ ಸನ್ನಿವೇಶದ ಪ್ರಕಾರ, "ಎಲ್ಲಾ ಪದಗಳು ಸಹ ದೇವರ ಕ್ರಿಯೆಗಳ ಬದಲಿಗೆ ಮಾನವರ ಕೃತ್ಯಗಳನ್ನು ಸೂಚಿಸಿ ಮಾತಾಡುವದರಿಂದ"[122] ಪೌಲನು ಮನಸ್ಸಿನಲ್ಲಿ "ದೇವರ ದ್ವೇಷಕರು" ಎಂಬದನ್ನು ಇಟ್ಟುಕೊಂಡಿದ್ದನೆಂದು ಬಹುಜನರು ಒಪ್ಪುತ್ತಾರೆ. ಅವರು ದೇವರನ್ನು ದ್ವೇಷಿಸಿದರು ಯಾಕೆಂದರೆ ಆತನು ನಿರ್ಮಲ ಮತ್ತು ಇವರು ಹೊಲಸು ಆಗಿದ್ದರು. ಅವರು ದೇವರನ್ನು ದ್ವೇಷಿಸಿದರು ಯಾಕೆಂದರೆ ಆತನು ಪರಿಶುದ್ಧನು ಮತ್ತು ಇವರು ಅಪರಿಶುದ್ಧರಾಗಿದ್ದರು. ಅವರು ದೇವರನ್ನು ದ್ವೇಷಿಸಿದರು ಯಾಕೆಂದರೆ ಆತನು ಒಳ್ಳೇವನು ಮತ್ತು ಇವರು ಕೆಟ್ಟವರಾಗಿದ್ದರು. ದೇವರು ಅವರ ಮತ್ತು ಅವರ ಭೋಗಗಳ ಮಧ್ಯದಲ್ಲಿ ಒಂದು ತಡೆಯಾಗಿದ್ದನು, ಅವರಿಷ್ಟ ಪಟ್ಟದ್ದನ್ನು ಮಾಡದಂತೆ ತಡೆಯುವ ಸರಪಣಿಯಾಗಿದ್ದನು.[123] ಆದ್ದರಿಂದ ಅವರು ಆತನನ್ನು ದ್ವೇಷಿಸಿದರು.

ಅನುವಾದಿತ ಪದ **ಸೊಕ್ಕಿನವರು** (ὑβριστής, *hubristēs*) ಎಂಬುದು ನಿರ್ದಿಷ್ಟವಾಗಿ ಎದುರಿಸುವಿಕೆಯಾಗಿದೆ. ಇದು "ದರ್ಪಿಷ್ಠ" ಮತ್ತು "ಬೇಜವಾಬ್ದಾರಿ ಹಿಂಸಾತ್ಮಕ" ನಾದ ವ್ಯಕ್ತಿಯನ್ನು ಸೂಚಿಸುತ್ತದೆ.[124] Barclay ಬರೆದದ್ದೇನೆಂದರೆ, "*hubris* (ಹುಬ್ರಿಸ್) . . . ಕ್ರೌರ್ಯಪ್ರವೃತ್ತಿ ಆಗಿದೆ, ಅದು ಮತ್ತೊಬ್ಬರಿಗೆ ಕೇವಲ ನೋವುಂಟುಮಾಡಬೇಕೆಂದು ನೋವು ಕೊಟ್ಟು ಸಂತೋಷಪಡುವದಾಗಿದೆ."[125]

**ಅಹಂಕಾರಿಗಳು** (ὑπερήφανος, *huperēphanos*) ಎಂಬುದು "ಮೇಲ್ಗಡೆ" (ὑπέρ, *huper*) ಎಂಬದರ ಉಪಸರ್ಗ ಮತ್ತು "ತೋರು" (φαίνομαι, *phainomai*) ಎಂಬ ಪದದಿಂದ ಬಂದಿದೆ. ಅದರರ್ಥವು "ಒಬ್ಬನು ತನ್ನನ್ನು ಮತ್ತೊಬ್ಬರಿಗಿಂತ ಮೇಲ್ಗಡೆ ತೋರಿಸಿಕೊಳ್ಳುವದು." ಒಬ್ಬ ಪುರಾತನ ಗ್ರೀಕ್ ಲೇಖಕನು ಈ ಪದವನ್ನು "ತನ್ನೊಬ್ಬನನ್ನು ಹೊರತುಪಡಿಸಿ ಬೇರೆ ಎಲ್ಲರ ಬಗ್ಗೆಯೂ ಒಂದು ರೀತಿ ತಿರಸ್ಕಾರ ಹೊಂದಿರುವರು" ಎಂಬದಾಗಿ ವ್ಯಾಖ್ಯಾನಿಸಿದನು."[126]

ಅಹಂಕಾರದ ಒಂದು ಗುರುತು ಎಂದರೆ ಬಡಾಯಿಕೊಚ್ಚಿಕೊಳ್ಳುವದು. ಅನುವಾದಿತ ಪದ **ಬಡಾಯಿಕೊಚ್ಚಿಕೊಳ್ಳುವದು** (ἀλαζών, *alazōn*) ಎಂಬುದು "ಸುತ್ತಾಡುವವನು" (ἄλη, *alē*) ಎಂಬ ಪದದಿಂದ ಬಂದದ್ದು[127] ಮತ್ತು ಅದಕ್ಕೊಂದು ಆಸಕ್ತಿಕರವಾದ ಇತಿಹಾಸವಿದೆ.[128] ಅದು "ಪವಾಡಕರವಾದ" ರೋಗನಿವಾರಣೆ ಅಥವಾ ಸಂಶಯಾಸ್ಪದ ಮೌಲ್ಯದ ಉತ್ಪನ್ನಗಳನ್ನು ಮಾರುತ್ತಿದ್ದ ವ್ಯಾಪಾರಿಗಳನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಡುತ್ತಿತ್ತು. ಅವರು ತಮ್ಮ ಉತ್ಪನ್ನಗಳ ಬಗ್ಗೆ ಬಹಳ ಬಣ್ಣ ಬಣ್ಣದ, ಆಧಾರಹೀನ ಮತ್ತು ಅನೇಕ ವೇಳೆ ಮಿತ್ಯವಾದ ಮಾತುಗಳನ್ನಾಡುತ್ತಿದ್ದರು. *Alazōn* ಎಂಬ ಪದವು ಮುಂದೆ ಅಹಂಕಾರ ಮತ್ತು ತನ್ನ ಬಗ್ಗೆ ಅತಿಶಯೋಕ್ತಿಯಿಂದ ಮಾತಾಡುವದು ಎಂಬ ಅರ್ಥವನ್ನು ಪಡೆದುಕೊಂಡಿತು. ಈ ದಿನವೂ "ಗರ್ವದಿಂದ ಭಂಗ; ಉಬ್ಬಿನಿಂದ ದೊಬ್ಬು" ಎಂಬುದು ಅಷ್ಟೇ ನಿಜವಾಗಿರುತ್ತದೆ (ಜ್ಞಾನೋಕ್ತಿ 16:18).

ಅವರು **ಕೇಡನ್ನು ಕಲ್ಪಿಸುವವರು** ಆಗಿದ್ದರು. "ಕಲ್ಪಿಸುವವರು" ಎಂಬುದು ಗ್ರೀಕ್ (ἐφευρετής, *epheuretēs*) ಪದದಿಂದ ಬಂದಿದೆ. "ಕೇಡು" (κακός, *kakos*) ಎಂಬುದು 29ನೇ ವಚನದಲ್ಲಿನ "ಕೆಟ್ಟ" ಎಂಬದಕ್ಕೆ ಸಂಬಂಧಿತ ಪದವಾಗಿದೆ. ಅಂಥ ಜನರು ಕೇವಲ ಕೆಟ್ಟವರಾಗಿರುವದರಲ್ಲಿ ಮಾತ್ರ ತೃಪ್ತರಾಗಿರಲಿಲ್ಲ; ಅವರು ಕೆಟ್ಟವರಾಗಿರುವದಕ್ಕೆ ಹೊಸ ಹೊಸ ದಾರಿಗಳನ್ನು *ಕಲ್ಪಿಸುವವರಾಗಿದ್ದರು*! ಅವರು ತಮ್ಮ ದುರಾಶೆಯನ್ನು ತೃಪ್ತಿಗೊಳಿಸಲು ಹೊಸ ದಾರಿಗಳನ್ನು ಕಲ್ಪಿಸಿದರು, ತಮ್ಮ ಅಭಿಲಾಷೆಗಳನ್ನು ಪೂರೈಸಿಕೊಳ್ಳಲು, ತಮ್ಮ ಭಕ್ತಿಹೀನತೆಯನ್ನು "ಸಮರ್ಥಿಸಿಕೊಳ್ಳಲು" ಹೊಸ ದಾರಿಗಳನ್ನು ಕಲ್ಪಿಸಿಕೊಂಡರು. Jim Townsend ರವರು, ಅವರಿಗೆ "ಕೇಡಿನ ಎಡಿಸನ್ ಗಳು" (ಕೆಟ್ಟತನದ ಆವಿಷ್ಕಾರರು( ಎಂದು ಹೆಸರಿಟ್ಟನು.[129]

ಈ ಪಟ್ಟಿಯು ದೃಷ್ಟಾಂತಪಡಿಸುವದೇನೆಂದರೆ, ಪಾಪವು ಬಹಳಷ್ಟನ್ನು ವಾಗ್ದಾನ ಮಾಡುತ್ತಾದರೂ, ಕೊನೆಯಲ್ಲಿ ಅದು ತನ್ನ ವಾಗ್ದಾನವನ್ನು ನೆರವೇರಿಸುವದಿಲ್ಲ; ಅದು ಕೇವಲ ಅತೃಪ್ತಿಯನ್ನಷ್ಟೇ ತರುತ್ತದೆ. ಪಾಪಮಾಡುವದರಿಂದ ಅದೇ "ರೋಮಾಂಚನ" ವನ್ನು ಪಡೆಯುವದಕ್ಕಾಗಿ ಪಾಪಿಯು ಹೆಚ್ಚು ಹೆಚ್ಚು ಪಾಪಮಯಿಯಾಗಬೇಕು. ಆತನು ಅದಕ್ಕಾಗಿ ಪಾಪಮಾಡುವದಕ್ಕೆ ಹೊಸ ಹೊಸ ದಾರಿಗಳನ್ನು ಸಹ

ಕಂಡುಹಿಡಿಯಬೇಕಾಗುತ್ತದೆ!

ಈ ಅಪರಾಧ ಪಟ್ಟಿಯಲ್ಲಿ ಮುಂದೆ ಬರುವ ಸಂಗತಿಯು ಬಹಳ ಸಹಜವಾಗಿರುವದರಿಂದ ಕೆಲವರು ಇಂಥ ಭಯಂಕರ ಪಾಪಗಳ ಮಧ್ಯದಲ್ಲಿ ಇದು ಸರಿಹೊಂದದು ಎಂದುಕೊಳ್ಳಬಹುದು: ಪೌಲನು **ತಂದೆತಾಯಿಗಳ ಮಾತನ್ನು ಕೇಳದವರು** ಎಂಬದನ್ನು ಉಲ್ಲೇಖಿಸಿದನು. ಅನುವಾದಿತ ಪದ "ಮಾತನ್ನು ಕೇಳದವರು" (ἀπειθής, *apeithēs*) ಎಂಬುದು "ಮನವೊಲಿಸು" (πείθω, *peithō*) ಎಂಬ ಪದದ ಮುಂದೆ (α *a*) ಎಂಬ ನಕಾರಾತ್ಮಕವನ್ನು ಸೇರಿಸುವದಾಗಿದೆ. ಇದರರ್ಥವು "ಮನವೊಲಿಸುವದಕ್ಕೆ ಮನಸ್ಸಿಲ್ಲದವರು . . . ಅವಿಧೇಯತೆ."[130] ನಾವು ನಮ್ಮ ತಂದೆತಾಯಿಗಳನ್ನು ಗೌರವಿಸಬೇಕು, ಘನಪಡಿಸಬೇಕು ಮತ್ತು ವಿಧೇಯರಾಗಬೇಕು (ಎಫೆಸ 6:1-3), ಮತ್ತು ಅವರು ಮುಪ್ಪಿನವರಾದಾಗ ನೋಡಿಕೊಳ್ಳಬೇಕು (1 ತಿಮೊಥೆ 5:4, 8) ಎಂದು ಬೈಬಲು ಕಲಿಸುತ್ತದೆ. ಹಳೆ ಒಡಂಬಡಿಕೆಯಲ್ಲಿ, ಒಬ್ಬ ತಿರುಗಿ ಬೀಳುವ, ಮೊಂಡ ಮಗನನ್ನು ಕಲ್ಲೇಸೆದು ಕೊಲ್ಲಬೇಕೆಂದು ವಿಧಿಯಿತ್ತು (ಧರ್ಮೋಪದೇಶಕಾಂಡ 21:18-21).

ಮಕ್ಕಳು ತಂದೆತಾಯಿಗಳಿಗೆ ವಿಧೇಯರಾಗಬೇಕು ಮತ್ತು ಗೌರವಿಸಬೇಕು ಎಂಬದಕ್ಕೆ ಅಷ್ಟೊಂದು ಮಹತ್ವವನ್ನು ಬೈಬಲು ಏಕೆ ಕೊಡುತ್ತದೆ? ಹೆತ್ತವರಿಗೆ ಅವಿಧೇಯರಾಗುವದು ಏಕೆ ಪೌಲನ ಪಟ್ಟಿಯಲ್ಲಿರುತ್ತದೆ? ಯಾಕೆಂದರೆ ಮನೆಯಲ್ಲಿ ಗೌರವ ಮತ್ತು ವಿಧೇಯತೆಯನ್ನು ಕಲಿಯದವನು ಮುಂದೆ ಶಾಲೆಯಲ್ಲಿ ಒಬ್ಬ ಭಯೋತ್ಪಾದಕನಾಗುವ, ಉದ್ಯೋಗಸ್ಥಳದಲ್ಲಿ ವಿಶ್ವಾಸರ್ಹತೆಯಿಲ್ಲದವನು, ಸಂಬಂಧಗಳಲ್ಲಿ ಸ್ವಾರ್ಥವನ್ನೇ ನೋಡಿಕೊಳ್ಳುವವನು. ಮತ್ತು (ಇದು ಸಮಸ್ಯೆಯ ಹೃದಯಭಾಗಕ್ಕೆ ನಾಟುತ್ತದೆ) ಕರ್ತನಿಗೆ ಒಳಪಡಲು ಮನಸ್ಸಿಲ್ಲದವನಾಗುವ ಸಾಧ್ಯತೆಯಿರುತ್ತದೆ. ಪೌಲನು ಯಾರನ್ನು ಉದ್ದೇಶಿಸಿ ಮಾತಾಡುತ್ತಿದ್ದಾನೋ ಅವರು ಬಹುಶಃ ದೇವರನ್ನು ಗೌರವಿಸುವದನ್ನು "ಯೋಗ್ಯವೆಂದು" ಎಣಿಸಲಿಲ್ಲ, ಯಾಕೆಂದರೆ ಅವರ ಮನೆಗಳಲ್ಲಿ ಅವರು ತಮ್ಮ ತಂದೆತಾಯಿಗಳನ್ನು ಗೌರವಿಸುವದನ್ನು "ಯೋಗ್ಯವೆಂದು" ಕಂಡಿರಲಿಕ್ಕಿಲ್ಲ.

**ವಚನ 31.** ಪೌಲನು ಮುಂದೆ 21ನೇ ವಚನದಲ್ಲಿರುವ "ವಿವೇಕವಿಲ್ಲದ" (ἀσύνετος, *asunetos*) ಅನುವಾದಿತ ಅದೇ ಪದವನ್ನು ಉಪಯೋಗಿಸುತ್ತಾ ಅವರು **ವಿವೇಕವಿಲ್ಲದವರು** ಎಂದು ಹೇಳುತ್ತಾನೆ. ಇದು "ವಿವೇಚನೆಯಿಲ್ಲದ"[131] ಎಂದರ್ಥವಾಗಿದೆ. ಈ ವಾಕ್ಯದ ಸನ್ನಿವೇಶದಲ್ಲಿ, ಇದು ಬುದ್ಧಿ ಅಥವಾ ವಿದ್ಯೆಯನ್ನು ಸೂಚಿಸುತ್ತಿಲ್ಲ. ಬದಲಾಗಿ, ದೇವರು ನಮಗೊಬ್ಬೊಬ್ಬರಿಗೂ ಅನುಗ್ರಹಿಸಿರುವ ಮೆದುಳನ್ನು ಸರಿಯಾಗಿ ಉಪಯೋಗಿಸದಿರುವದನ್ನು ಇದು ಸೂಚಿಸುತ್ತದೆ. ದೇವರಿಂದ ಒಬ್ಬನು ತನ್ನನ್ನು ಬೇರ್ಪಡಿಸಿಕೊಳ್ಳುವದು ಕೆಟ್ಟದ್ದು ಮಾತ್ರವಲ್ಲದೆ; ಅದು ಮೂರ್ಖತನ ಸಹ ಆಗಿರುತ್ತದೆ (CEV ನೋಡಿರಿ).

ಅನುವಾದಿತ ಪದ ಮಾತಿಗೆ **ತಪ್ಪುವವರು** (ἀσύνθετος, *asunthetos*) ಎಂಬುದು "ಅದಕ್ಕೆ ಒಪ್ಪು" ಅಥವಾ "ಒಂದು ಒಡಂಬಡಿಕೆ ಮಾಡು" (σύν, *sun* ["ಒಂದಿಗೆ" ಅಥವಾ "ಒಟ್ಟಿಗೆ" ] ಎಂಬ ಸಮ್ಮಿಲನ, ಜೊತೆಗೆ τίθημι, *tithēmi* ["ಇಡು"]) ಎಂಬ ಕ್ರಿಯಾಪದಕ್ಕೆ ಒಂದು ನಕಾರಾತ್ಮಕವನ್ನು (α, *a*) ಸೇರಿಸುವದಾಗಿದೆ).[132] ಇದು "ಒಂದು ಒಡಂಬಡಿಕೆ ಅಥವಾ ಒಪ್ಪಂದವನ್ನು ಮುರಿಯುವವನನ್ನು" ಸೂಚಿಸುತ್ತದೆ (KJV ನೋಡಿರಿ). ಬೇರೆ

ಮಾತುಗಳಲ್ಲಿ ಹೇಳುವದಾದರೆ, ಅದು ತನ್ನ ಮಾತನ್ನು ಉಳಿಸಿಕೊಳ್ಳದವನನ್ನು, ತಾನು ಮಾಡುತ್ತೇನೆಂದು ಹೇಳಿ ಅದನ್ನು ಮಾಡದಿರುವವನನ್ನು ಬಣ್ಣಿಸುತ್ತದೆ. ಹೀಗೆ NASB ಇದನ್ನು "ಮಾತಿಗೆ ತಪ್ಪುವವನು" ಎಂದು ಅನುವಾದಿಸಿದೆ, ಮತ್ತು CEVಯು ಅದನ್ನು "ನಂಬಿಕೆಗೆ ಯೋಗ್ಯವಲ್ಲದವನು" ಎನ್ನುತ್ತದೆ.

**ಮಮತೆಯಿಲ್ಲದವರು** (ἄστοργος, *astorgos*) ಎಂಬುದು ವಿಶೇಷವಾಗಿ ಬೇಸರದ ಪದವಾಗಿದೆ. *Astorgos* "ಪ್ರೀತಿ" ಎಂಬುದರ ವಿಶೇಷ ಶಬ್ದದ ಒಂದು ನಕಾರಾತ್ಮಕ ರೂಪವಾಗಿದೆ: στοργή (*storgē*). *Storgē* "ಕುಟುಂಬ ಪ್ರೀತಿ" ಯನ್ನು ಸೂಚಿಸುವದಾಗಿದೆ, "ಅದು ಜನರನ್ನು ಒಂದಾಗಿ ಬೆಸೆಯುವ ಪ್ರೀತಿ."[133] ಇದು "ವಿಶೇಷವಾಗಿ ಹೆತ್ತವರು ಮಕ್ಕಳಿಗೆ ಮತ್ತು ಮಕ್ಕಳು ಹೆತ್ತವರಿಗೆ" ಉಪಯೋಗಿಸಲ್ಪಟ್ಟಿದೆ.[134] ಈ ವಿಧವಾದ ಪ್ರೀತಿಯು *ಸಹಜವಾಗಿರಬೇಕು*; KJV ಯಲ್ಲಿ ಹೀಗಿದೆ "ಸಹಜವಾದ ಮಮತೆಯಿಲ್ಲದವರು." ಯಾರಾದರೂ ಈ "ಸಹಜವಾದ ಮಮತೆ" ಯನ್ನು ಕಳಕೊಳ್ಳುವದು ಸಾದ್ಯವೋ? ಇತಿಹಾಸವು ಹೌದು ಎನ್ನುತ್ತದೆ. Barclay ಇತಿಹಾಸಿಕ ವಿಷಯವನ್ನು ಮುಂದಿಡುತ್ತಾರೆ:

> . . . ಇದು ಕುಟುಂಬ ಪ್ರೀತಿಯು ಕ್ಷೀಣಿಸುತ್ತಿರುವಂಥ ಕಾಲವಾಗಿತ್ತು. ಈ ಕಾಲದಲ್ಲಿರುವಂತೆಯೇ ಆಗ ಮಗುವಿನ ಜೀವನವು ಬಹಳ ಅಸ್ಥಿರವಾಗಿರುತ್ತದೆ. ಮಕ್ಕಳನ್ನು ದೌರ್ಭಾಗ್ಯವೆಂದು ಪರಿಗಣಿಸಲಾಗುತ್ತದೆ. ಮಗುವೊಂದು ಜನಿಸಿದಾಗ, ಅದನ್ನು ತೆಗೆದುಕೊಂಡು ಹೋಗಿ ತಂದೆಯ ಪಾದದ ಹತ್ತಿರವಿಡುತ್ತಾರೆ. ತಂದೆ ಆ ಮಗುವನ್ನು ಎತ್ತಿಕೊಂಡರೆ, ಆತನು ಅದನ್ನು ಒಪ್ಪಿಕೊಂಡಿದ್ದಾನೆಂದು ಅರ್ಥವಾಗುತ್ತದೆ. ಆತನು ತಿರುಗಿಕೊಂಡು ಅದನ್ನು ಬಿಟ್ಟುಬಿಟ್ಟರೆ, ಮಗುವನ್ನು ಅಕ್ಷರಶಃ ಹೊರಗೆ ಎಸೆಯಲ್ಪಡುವದು. ರೋಮಾಪುರದ ವೇದಿಕೆಯಲ್ಲಿ ಪ್ರತಿ ರಾತ್ರಿಯಲ್ಲಿಯೂ ಮೂವತ್ತರಿಂದ ನಾಲ್ವತ್ತು ಕೈಬಿಡಲ್ಪಟ್ಟ ಕೂಸುಗಳಿರುತ್ತಿದ್ದವು. . . .[135]

ಪಟ್ಟಿಯಲ್ಲಿರುವ ಕೊನೆಯ ಪದವು ಕರುಣೆಯಿಲ್ಲದವರು ಎಂಬದು.[136] "ಕರುಣೆಯಿಲ್ಲದವರು" (ἀνελεήμων, *aneleēmōn*) ಪದವು "ಕನಿಕರವುಳ್ಳ" (ἐλεήμων, *eleēmōn*) ಎಂಬದರ ಪದವಾಗಿದ್ದು ಅದಕ್ಕೆ (α[ν], *a*[*n*]), ಎಂಬ ನಕಾರಾತ್ಮಕ ಸೇರಿಸಲ್ಪಟ್ಟಿರುತ್ತದೆ. Weymouth ಹೇಳಿದ್ದೇನೆಂದರೆ ಅವರು "ಮರುಕವಿಲ್ಲದವರು" ಆಗಿದ್ದರು. RSV ಯಲ್ಲಿ "ನಿರ್ದಯಿಗಳು" ಆಗಿದ್ದರು ಎಂದಿದೆ. Barclay ಹೀಗೆ ಬಣ್ಣಿಸುತ್ತಾರೆ:

> ಈ ಕಾಲದಲ್ಲಿ ಮಾನವ ಜೀವ ಅಷ್ಟೊಂದು ಅಗ್ಗವಾಗಿತ್ತು. ಒಬ್ಬ ಗುಲಾಮನನ್ನು ಆತನ ಯಜಮಾನನು ಕೊಲ್ಲಬಹುದಿತ್ತು ಅಥವಾ ಹಿಂಸಿಸಬಹುದಿತ್ತು, ಯಾಕೆಂದರೆ ಆತನು ಒಂದು ವಸ್ತುವಿನ ಸಮಾನವಾಗಿದ್ದನು ಮತ್ತು ಆತನ ಮೇಲೆ ಯಜಮಾನನಿಗೆ ಮೀತಿಯಿಲ್ಲದ ಅಧಿಕಾರವನ್ನು ಕಾನೂನು ಕೊಟ್ಟಿತ್ತು. . . . ನಿರ್ಧಯತೆಯು ಉಚ್ಚಘಟ್ಟದಲ್ಲಿತ್ತು, ಅದು ಸುಖಭೋಗವಾಗಿತ್ತು, ಯಾಕೆಂದರೆ ಆಗ ಗ್ಲಾಡಿಯೆಟರ್ಗಳು ಒಬ್ಬರನ್ನೊಬ್ಬರು ಹೊಡೆದುಕೊಂಡು ಕೊಲ್ಲುತ್ತಿದ್ದ ಕ್ರೀಡೆಯನ್ನು ನೋಡಿ ಜನರೆಲ್ಲಾ ಮನೋರಂಜನೆ ಪಡುತ್ತಿದ್ದರು[137]

ಗ್ರೀಕ್ ಪ್ರತಿಯಲ್ಲಿ, ಪೌಲನ ಪಟ್ಟಿಯಲ್ಲಿನ ಕೊನೆಯ ನಾಲ್ಕು ಪದಗಳು α, a (ಯಿಲ್ಲದವರು) ಎಂಬ ನಕಾರಾತ್ಮಕ ಪೂರ್ವಪ್ರತ್ಯಯಗಳನ್ನು ಹೊಂದಿದವುಗಳಾಗಿವೆ. NASBಯು ಈ ಮೂರು ಪದಗಳನ್ನು "ಯಿಲ್ಲದವರು" ಎಂದು ಪ್ರಾರಂಭಿಸುವದರ ಮೂಲಕ ವ್ಯಕ್ತಪಡಿಸಿರುತ್ತದೆ: "ಮಾತಿಗೆ ತಪ್ಪುವವರು (ವಿಶ್ವಾರ್ಹತೆಯಿಲ್ಲದವರು), ಪ್ರೀತಿಯಿಲ್ಲದವರು, ಕರುಣೆಯಿಲ್ಲದವರು." NIV ಇದನ್ನು "ಇಲ್ಲದ" ಎಂದು ಎಲ್ಲಾ ನಾಲ್ಕು ಪದಗಳನ್ನು ವ್ಯಕ್ತಗೊಳಿಸಿರುತ್ತದೆ: ವಿವೇಕ ಇಲ್ಲದ, ನಂಬಿಕೆಯಿಲ್ಲದ, ಹೃದಯ ಇಲ್ಲದ, ಕನಿಕರ ಇಲ್ಲದ."

ಪೌಲನು ಹೀಗೆ ತನ್ನ ಕಾಲದಲ್ಲಿನ ಪಾಪದ ಪಟ್ಟಿಯನ್ನು ನಮ್ಮ ಮುಂದಿಡುತ್ತಾನೆ. ಇದೊಂದು ಹೃದಯಕ್ಕೆ ವೇದನೆಯುಂಟು ಮಾಡುವ ಪಟ್ಟಿಯಾಗಿದೆ, ಅದು "ಮಾನದಂಡ ಕಾಣೆಯಾದಂತೆ ಮತ್ತು ಸಮಾಜ ಒಡೆದು ಹೋದಂತೆ ಮಾನವ ಸಮುದಾಯ ಕುಸಿತ ಕಾಣುವದನ್ನು" ಬಣ್ಣಿಸುತ್ತದೆ.[138] ಪೌಲನು ಕೊರಿಂಥದಿಂದ ಬರೆಯುತ್ತಿದ್ದಾನೆಂದು ಊಹಿಸಿಕೊಂಡರೆ, ಎಲ್ಲಾ ದುರ್ನಡತೆಗಳ ಉದಾಹರಣೆ ನೋಡುವದಕ್ಕೆ ಆತನಿಗೆ ಕೇವಲ ಒಂದು ಕಿಟಕಿಯು ಇತ್ತಷ್ಟೇ. Charles Hodge ನಮಗೆ ನೆನಪಿಸುವದೇನೆಂದರೆ, "ಇಲ್ಲಿ ಬಿಡಿಸಿರುವ ಚಿತ್ರಣ ಬಹಳ ಕತ್ತಲೆಯಿಂದ ಕೂಡಿದೆ, ಆದರೆ ಅವರ ಸ್ವಂತ ದೇಶದ ಪ್ರಸಿದ್ಧ ಗ್ರೀಕ್ ಮತ್ತು ಲ್ಯಾಟಿನ್ ಲೇಖಕರೇ ಬಣ್ಣಿಸಿರುವಷ್ಟು ಕತ್ತಲೆಯಾಗೇನೂ ಇಲ್ಲ."[139]

**ವಚನ 32.** ಪಟ್ಟಿಯು ಮುಗಿದಿತ್ತು, ಆದರೆ ಪೌಲನು ಪತ್ರಿಕೆಯ ಈ ವಿಭಾಗವನ್ನು ಮುಗಿಸುವದಕ್ಕೆ ಮುಂಚೆ ಇನ್ನೆರಡು ಮಾತುಗಳನ್ನು ಹೇಳುತ್ತಾನೆ. ಮೊದಲನೇಯದಾಗಿ, ಆತನು ಈ ಆಶ್ಚರ್ಯತರುವ ಮಾತುಗಳನ್ನು ಬರೆಯುತ್ತಾನೆ: **ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದದೆ.** "ವಿಧಿ" δικαίωμα (*dikaiōma*) ಯು "ನೀತಿಯುಕ್ತ" (ಸದಾಚಾರ) ಪದಗಳಲ್ಲಿ ಒಂದಾಗಿದೆ; "ದೇವರು ಸರಿ ಎಂಬದಾಗಿ ಪ್ರಕಟಿಸಿದ್ದನ್ನು" ತೋರಿಸಲು ಇದನ್ನು "ವಿಧಿ ಬದ್ಧವಾದ"[140] ಪದವಾಗಿ ಉಪಯೋಗಿಸಲ್ಪಟ್ಟಿದೆ. ಜನರು ಈ ಕೃತ್ಯಗಳನ್ನು ಅಜ್ಞಾನದಿಂದ ಮಾಡಿಲ್ಲ ಎಂಬ ಆಲೋಚನೆಯ ಕಡೆಗೆ ಪೌಲನು ಹಿಂದಿರುಗುತ್ತಾನೆ. ದುಷ್ಕೃತ್ಯ ನಡಿಸುವವರು ತಾವು ಮಾಡುತ್ತಿರುವ ತಪ್ಪಿನ ದುಷ್ಪರಿಣಾಮಗಳನ್ನೆಲ್ಲಾ ತಿಳಿಯದೇ ಇದ್ದಿರಬಹುದು; ಆದರೆ ಅಂತರಾಳದಲ್ಲಿ, ತಾವು ಮಾಡುವ ಕೃತ್ಯಗಳು ತಪ್ಪು ಎಂಬುದು ಅವರಿಗೆ ತಿಳಿದಿತ್ತು.[141]

"ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬದು . . . ಅವರಿಗೆ ತಿಳಿದಿದ್ದರೂ" ಎಂದು ಹೇಳುವ ವಚನದ ಅರ್ಥವೇನು? ತಾವು ಮಾಡಿದ ಪಾಪಗಳ ದೆಸೆಯಿಂದ (ಉದಾಹರಣೆಗೆ ಕೊಲೆ), *ಅವರು ಮರಣ ದಂಡನೆಗೆ ಅರ್ಹರು* (13:4 ರಲ್ಲಿ ಸೂಚಿಸಲ್ಪಟ್ಟಿರುವ ಹಾಗೆ) ಎಂಬ ಅರ್ಥವೋ? ಅವರ ಪಾಪಗಳು ಅವರನ್ನು ದೇವರಿಂದ ಬೇರ್ಪಡಿಸುತ್ತವೆ (6:23 ರಲ್ಲಿರುವ ಪ್ರಕಾರ ಆತ್ಮೀಕ "ಮರಣ")? ಎಂಬುದು ಅವರಿಗೆ ತಿಳಿದಿತ್ತೋ? Hodge ಬಹುಶಃ ಹೀಗೆ ಹೇಳಿರುವದು ಸರಿಯೆಂದು ತೋರುತ್ತದೆ, "ಇಲ್ಲಿ ಮರಣ, ಎಂಬುದು ಯಾವಾಗಲೂ ಇರುವ ಹಾಗೆಯೇ, ದಂಡನೆಯನ್ನು ಸೂಚಿಸುತ್ತದೆ, ಇದು ಆ ಪದದ ಸಾಮಾನ್ಯ ಅರ್ಥ ಆಗಿರುತ್ತದೆ."[142] ಬೇರೆ ಮಾತುಗಳಲ್ಲಿ ಹೇಳುವದಾದರೆ, ತಾವು ಮಾಡುವದು ತಪ್ಪು ಮತ್ತು *ದಂಡನೆಗೆ ಪಾತ್ರರು*—ತಾತ್ಕಲಿಕ ಅಥವಾ ನಿರಂತರ— ಎಂಬುದು ಅವರಿಗೆ ಗೊತ್ತಿತ್ತು.

ಅವರ ಬಂಡಾಯದ ಪರಾಕಾಷ್ಠೆ ಅದಾಗಿರಲಿಲ್ಲ. ಮುಕ್ತಾಯದಲ್ಲಿ ಪೌಲನು ಹೇಳುತ್ತಾನೆ, ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ. "ಹೃದಯ ಪೂರ್ವಕವಾಗಿ ಅನುಮೋದಿ ಸುತ್ತಾರೆ" ಎಂಬುದು συνευδοκέω (*suneudokeō*) ಎಂಬ ಪದದ ಅನುವಾದ ವಾಗಿದೆ, ಇದು σύν (*sun*, "ಯೊಂದಿಗೆ"), ಉಪಸರ್ಗ εὖ (*eu*, "ಉತ್ತಮ") ಮತ್ತು δοκέω (*dokeō,* "ಯೋಚಿಸು") ಎಂಬ ಪದಗಳ ಒಟ್ಟು ಸಮ್ಮಿಲನವಾಗಿರುತ್ತದೆ. ಈ ಒಟ್ಟಾರೆ ಪದವು "ಯೊಂದಿಗೆ ಉತ್ತಮವೆಂದು ಯೋಚಿಸು" ಎಂಬ ಅರ್ಥವನ್ನು ಕೊಡುತ್ತದೆ (ಅಂದರೆ "ಅನುಮೋದಿಸು"), ಆದರೆ ಅದು ಒಂದು ಬಲವಾದ ಸೂಚ್ಯಾರ್ಥವನ್ನು ಹೊಂದಿದೆ. NASBಯು ಇದನ್ನು "ಒಂದು ಕಾರ್ಯಕ್ಕೆ *ಹೃತ್ಪೂರ್ವಕ* ಅನುಮೋದನೆ ಕೊಡು" ಎಂದೂ, AB ಯು ಇದನ್ನು "ಅನುಮೋದಿಸು ಮತ್ತು ಶ್ಲಾಘಿಸು" ಎಂದೂ ಅನುವಾದಿಸಿವೆ.

ಅವರ ಅಧೋಗತಿ ಕಡೆಗಿನ ಪ್ರಯಾಣವು ಪೂರ್ಣವಾಗಿತ್ತು. ಮೊದಲನೆಯದಾಗಿ, ಅವರಿಗೆ ದೇವರನ್ನು ತಿಳಿಯಲು ಇಷ್ಟವಿರಲಿಲ್ಲ. ಈ ಕಾರಣದಿಂದ ಅವರ ಮನಸ್ಸುಗಳು ಭ್ರಷ್ಟಗೊಂಡವು, ಮತ್ತು ಅವರ ಜೀವಿತಗಳು ಸಕಲವಿಧವಾದ ಅನೀತಿಗಳಿಂದ ತುಂಬಿದವು. ಅವರು ಬಹಳವಾಗಿ ಕಠಿಣ ಹೃದಯಿಗಳಾಗಿ ದೇವರ ಎಚ್ಚರಿಕೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಅಂತಿಮವಾಗಿ, ಎಲ್ಲದಕ್ಕಿಂತಲೂ ಅತಿ ದುಃಖಕರವೆಂದರೆ, ಅವರು ಸ್ವತಃ ಪಾಪ ಮಾಡಿದ್ದಲ್ಲದೆ, ಬೇರೆಯವರನ್ನು ಪಾಪ ಮಾಡುವಂತೆ ಪ್ರೋತ್ಸಾಹಿಸಿದರು. Briscoe ಇದನ್ನು ಹೀಗೆ ಹೇಳಿದ್ದಾರೆ:

> ಅವರಲ್ಲಿ ಪಶ್ಚಾತಾಪವಿಲ್ಲದಿರುವ ಮಾತ್ರವೇ ಅಲ್ಲ, ಆದರೆ ಪಾಪವನ್ನು ಕೊಂಡಾಡುವದು ಸಹ ಅಪೊಸ್ತಲನ ಹೃದಯಕ್ಕೆ ವೇದನೆಯುಂಟುಮಾಡುತ್ತಿದೆ. ವಿಫಲತೆ ಮತ್ತು ಜವಾಬ್ದಾರಿಯಿಂದ ಚಿಂತಿತರಾಗುವದಂತೂ ಬಹಳ ದೂರವಾಯಿತು, ಅವರು ಯಾವ ಚಿಂತೆಯಿಲ್ಲದೆ ಹಬ್ಬ ಆಚರಿಸುವದು ಪ್ರಭಲವಾಗಿತ್ತು. . . . ಪರಸ್ಪರರ ಆತ್ಮಗಳನ್ನು ಕಾಯುವವರಾಗಿ ನಡೆದುಕೊಳ್ಳುವ ಬದಲಾಗಿ, ಜನರು ಪರಸ್ಪರರ ನಾಶನವನ್ನು ಪ್ರೋತ್ಸಾಹಿಸುವವರಾಗಿ ವರ್ತಿಸುತ್ತಿದ್ದರು. ಗೋಳಾಟ ಇರಬೇಕೆಂದು ನಿರೀಕ್ಷಿಸುವ ಕಡೆಯಲ್ಲಿ, ಸಂಭ್ರಮ ಕಾಣಬರುತ್ತಿತ್ತು; ಪಾಪವನ್ನು ಒಟ್ಟಾರೆಯಾಗಿ ಅಸಮ್ಮತಿಸುವ ಬದಲಿಗೆ, ಅನೀತಿಯ ಬಗ್ಗೆ ಸಾಮೂಹಿಕವಾದ ಅನುಮೋದನೆ ಇತ್ತು.[143]

ಅನ್ಯಜನಾಂಗವನ್ನು ಕುರಿತ ಪೌಲನ ದೋಷಾರೋಪಣೆಯು ವಿನಾಶಕರವಾಗಿದೆ. R. C. Bell ಗಮನಕ್ಕೆ ತರುವದೇನೆಂದರೆ, "ಎಲ್ಲಾ ಧರ್ಮಗಳಲ್ಲಿ, ಕ್ರೈಸ್ತತ್ವವು ಮಾತ್ರವೇ ಪಾಪವನ್ನು ಕುಗ್ಗಿಸುವದಿಲ್ಲ ,ಯಾಕೆಂದರೆ ಅದು ಮಾತ್ರವೇ ಪಾಪಕ್ಕೆ ನಿರ್ದಿಷ್ಟವಾದ (ಪರಿಹಾರ) ಹೊಂದಿರುತ್ತದೆ."[144] ನ್ಯಾಯವಾಗಿ ಯೋಚಿಸುವ ಯಾರೇ ಆಗಲಿ, ಪೌಲನು ತನ್ನ ವಾದವನ್ನು ನಿರೂಪಿಸಿದ್ದನೆಂಬದನ್ನು ಒಪ್ಪಿಕೊಳ್ಳುವನು: ಎಲ್ಲಾ ಅನ್ಯಜನರು ಪಾಪ ಮಾಡಿದ್ದಾರೆ; ಎಲ್ಲರಿಗೂ ದೇವರಿಂದ ದೊರಕುವ ನೀತಿಯ ಅಗತ್ಯವಿರುತ್ತದೆ.

## ಹೆಚ್ಚಿನ ಅಧ್ಯಯನಕ್ಕಾಗಿ: "ನಂಬಿಕೆ/ವಿಶ್ವಾಸ" ಎಂಬ ಪದದ ಮೇಲಿನ ಅಧ್ಯಯನ (*PISTIS)*

ಅನುವಾದಿತ ಪದ "ನಂಬುವವನು" ಎಂಬುದು πιστεύω (*pisteuō*) ಎಂದಾಗಿದೆ.

17ನೇ ವಚನದಲ್ಲಿನ ಅನುವಾದಿತ ಪದ "ವಿಶ್ವಾಸ" ಎಂಬದು πίστις (*pistis*) ಎಂದಾಗಿದೆ.[145] ಆಂಗ್ಲ ವಾಕ್ಯದಲ್ಲಿ "ನಂಬಿಕೆ" ಎಂಬದರ ಬದಲಾಗಿ "ವಿಶ್ವಾಸ" ಎಂದು ಇದ್ದಿದ್ದರೆ ಈ ಎರಡು ಪದಗಳ ನಡುವಿನ ಸಂಬಂಧವು ಹೆಚ್ಚು ಸ್ಪಷ್ಟವಾಗಿ ತಿಳಿಯುತ್ತಿತ್ತು. (ಆಗಾಗ, ಒಬ್ಬನು "ವಿಶ್ವಾಸ" ಮತ್ತು "ನಂಬಿಕೆ" ನಡುವೆ ವ್ಯತ್ಯಾಸವನ್ನು ಮಾಡುವದಕ್ಕೆ ಪ್ರಯತ್ನಿಸುತ್ತಾರೆ, ಆದರೆ ಎರಡೂ ಸಹ *pistis* ನಿಂದ ಅನುವಾದಿಸಲ್ಪಟ್ಟಿವೆ). ಏಕೆ ಕೆಲವು ಅನುವಾದಕರು *pistis* ಎಂಬ ಪದವನ್ನು ಅನುವಾದಿಸಲು "ವಿಶ್ವಾಸ" ಎಂಬ ಪದವನ್ನು ಮತ್ತು "ಅಪನಂಬಿಕೆ" ಯನ್ನು ಅನುವಾದಿಸಲು ಅದೇ ಪದದ ಒಂದು ನಕಾರಾತ್ಮಕ ರೂಪದ ಪದವನ್ನು (ἀπιστία, *apistia*) ಉಪಯೋಗಿಸಿದ್ದಾರೆ ಎಂಬುದಕ್ಕೆ ಕಾರಣಗಳು ಅವರಿಗೆ ಮಾತ್ರ ಗೊತ್ತು (ನೋಡಿರಿ 3:3; 4:20; 11:20, 23).[146]

ರಕ್ಷಣೆಯುಂಟು ಮಾಡುವ ನಂಬಿಕೆಯು ಮನಸ್ಸು, ಹೃದಯ ಮತ್ತು ಚಿತ್ತವನ್ನೊಳಗೊಂಡಿರುತ್ತದೆ.[147] ಮೊದಲನೆಯದಾಗಿ, ಇದರಲ್ಲಿ *ಮನಸ್ಸು* ಒಳಗೊಂಡಿರುತ್ತದೆ, ಯಾಕೆಂದರೆ ಅದು ಸಾಕ್ಷಿಯ ಮೂಲಕವಾಗಿ ತಿಳುವಳಿಕೆಯನ್ನು ಪಡೆಯುವದರ ಮೇಲೆ ಆಧಾರವಾಗಿರುತ್ತದೆ. ಪೌಲನು, ತಾನು ಸಾರುತ್ತಿದ್ದ "ವಿಶ್ವಾಸ ವಾಕ್ಯದ" ಬಗ್ಗೆ ಮಾತಾಡುತ್ತಾನೆ (10:8), ಮತ್ತು ಬಳಿಕ ಹೇಳಿದನು, "ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ, ಆ ಸುವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" (10:17). ರಕ್ಷಿಸುವ ವಿಶ್ವಾಸವು ಯೇಸುವಿನ ಕುರಿತು ಕಲಿತುಕೊಳ್ಳುವ ಮೂಲಕ ಬರುತ್ತದೆ.

ಎರಡನೆಯದಾಗಿ, ವಿಶ್ವಾಸದಲ್ಲಿ *ಹೃದಯದ* ಪಾತ್ರವಿರುತ್ತದೆ ಯಾಕೆಂದರೆ ವಿಶ್ವಾಸಿಯು ತಾನು ಕೇಳಿದ್ದನ್ನು ಅಂಗೀಕರಿಸಿಕೊಂಡು ಅದರ ಅವಲಂಭಿತನಾಗುವದಕ್ಕೆ ಸಿದ್ಧನಾಗುತ್ತಾನೆ. W. E. Vine ಗಮನಕ್ಕೆ ತಂದದ್ದೇನೆಂದರೆ, ಹೊಸ ಒಡಂಬಡಿಕೆಯಲ್ಲಿ, "ನಂಬುವದು" ಎಂದರೆ "ಭರವಸವಿಡುವದು, ವಿಶ್ವಾಸವಿಡುವದು [ಮತ್ತು] ಅವಲಂಬಿಸುವದನ್ನು . . . ಸೂಚಿಸುತ್ತದೆ"[148] ABಯು 1:16 ರಲ್ಲಿ ಹೇಳುವದೇನೆಂದರೆ "ಒಂದು ವೈಯಕ್ತಿಕ ವಿಶ್ವಾಸದಿಂದ ನಂಬಿಕೆಯಿಡುವ ಮತ್ತು ಒಂದು ದೃಢವಾದ ಶರಣಾಗತಿ ಹಾಗೂ ದೃಢವಾಗಿ ಅವಲಂಬಿತನಾಗುವ ಪ್ರತಿಯೊಬ್ಬರಿಗೂ" ಸುವಾರ್ತೆಯು ರಕ್ಷಣೆಯುಂಟುಮಾಡುವ ದೇವರ ಶಕ್ತಿಯಾಗಿದೆ. ನಾವು ನಿಜವಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವಾಗ, ನಾವು ಮಾಡಿರುವ ಯಾವದೇ ಕಾರ್ಯದ ಮೇಲೆ ಅವಲಂಭಿತರಾಗದೆ ಆತನು ನಮಗಾಗಿ ಮಾಡಿರುವ ಕಾರ್ಯದ ಮೇಲೆ ಅವಲಂಭಿತರಾಗುತ್ತೇವೆ. ನಮ್ಮಲ್ಲಿ ಭರವಸವಿಟ್ಟುಕೊಳ್ಳುವ ಬದಲಾಗಿ ನಾವು ಆತನಲ್ಲಿ ಭರವಸವಿಡುತ್ತೇವೆ.

ಅಂತಿಮವಾಗಿ, ರಕ್ಷಣೆಯುಂಟು ಮಾಡುವ ನಂಬಿಕೆಯಲ್ಲಿ *ಚಿತ್ತದ* ಪಾತ್ರವಿರುತ್ತದೆ. ಸ್ವಂತದ ಬದಲಾಗಿ ಯೇಸುವನ್ನು ಅವಲಂಭಿಸುವದರಲ್ಲಿನ ಪ್ರಮುಖ ಅಂಶವೆಂದರೆ ಒಬ್ಬನು ತನ್ನ ಸ್ವಂತ ಚಿತ್ತಕ್ಕಿಂತಲೂ ಯೇಸುವಿನ ಚಿತ್ತವನ್ನು ಮುಂದೆ ಇಡುವ ತೀರ್ಮಾನಮಾಡುವದು. ಪೌಲನ ಪರಿಭಾಷೆಯನ್ನೇ ಉಪಯೋಗಿಸುವದಾದರೆ, ವಿಶ್ವಾಸಿಗಳು "ದೇವರ ನೀತಿಗೆ ಅಧೀನರಾಗಲಿಲ್ಲ" (10:3). ಸರಳವಾಗಿ ಹೇಳುವದಾದರೆ, ರಕ್ಷಣೆಯುಂಟು ಮಾಡುವ ವಿಶ್ವಾಸವು ಹೃದಯದಿಂದ ವಿಧೇಯತೆಯನ್ನು ಒಳಗೊಂಡಿರುತ್ತದೆ (ನೋಡಿರಿ 6:17). ವಾಸ್ತವವೇನೆಂದರೆ, ವಿಶ್ವಾಸಿಯು

ವಿಧೇಯನಾಗುವದಕ್ಕೆ ಸಿದ್ಧವಿಲ್ಲದಿದ್ದರೆ ಅದು ರಕ್ಷಣೆಯುಂಟುಮಾಡುವ ನಂಬಿಕೆಯೇ ಆಗಿರುವದಿಲ್ಲ. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನ ಮುಖ್ಯ ಒತ್ತು ವಿಶ್ವಾಸದ ಮೇಲಾಗಿದ್ದರೂ, ಆತನು ವಿಧೇಯತೆಯ ವಿಷಯವನ್ನು ನಿರ್ಲಕ್ಷಿಸಲಿಲ್ಲ (ನೋಡಿರಿ 1:5; 2:8; 5:19; 6:16, 17; 15:18; 16:19, 26).

*ಹೊಸ ಒಡಂಬಡಿಕೆಯ ದೈವಶಾಸ್ತ್ರದ ನಿಘಂಟಿನಲ್ಲಿ,* Rudolf Bultmann ಒತ್ತಿ ಹೇಳುವದೇನೆಂದರೆ *pisteuō* "ವಿಧೇಯವಾಗು" ಎಂದಾಗಿದೆ. ಈ ಸತ್ಯದ ಕುರಿತು ವಿವರಿಸುತ್ತಾ ಆತನು ಹೇಳಿದ್ದೇನೆಂದರೆ, "ಹಳೆ ಒಡಂಬಡಿಕೆಯಲ್ಲಿ ಇರುವಂತೆಯೇ ಇಬ್ರಿಯ 11 ನೇ ಅಧ್ಯಾಯವು, ನಂಬುವದೆಂದರೆ ವಿಧೇಯವಾಗುವದು ಎಂದು ಒತ್ತಿ ಹೇಳುತ್ತದೆ. ಪೌಲನು . . . ಸಹ ನಿರೂಪಿಸುತ್ತಾನೆ, ಏನೆಂದರೆ ನಂಬಿಕೆಯಿಡುವದೆಂದರೆ ವಿಧೇಯರಾಗುವದು." Bultmann ಪ್ರಕಾರ, *pistis* "ನಂಬುವದು, ವಿಧೇಯವಾಗುವದು, ವಿಶ್ವಾಸಿಸುವದು, ನಿರೀಕ್ಷಿಸುವದು, ಮತ್ತು ನಂಬಿಗಸ್ತರಾಗಿರುವದು" ಇವುಗಳನ್ನೊಳ ಗೊಂಡಿದೆ, ಮತ್ತು ನಂಬಿಕೆಯು "ಶಿಲುಬೆಯ ಮೇಲಿನ ದೇವರ ಕೃಪೆ ಮತ್ತು ನ್ಯಾಯತೀರ್ಪಿನ ಕ್ರಿಯೆಯನ್ನು ಅಂಗೀಕರಿಸಿದ ವಿಧೇಯತೆಯನ್ನು ಒಳಪಡಿಸುತ್ತದೆ."[149]

"ನಂಬು" ಮತ್ತು "ವಿಧೇಯವಾಗು" ಎಂಬ ಪದಗಳ ನಿಕಟ ಸಂಬಂಧವನ್ನು ನೋಡುವದಾದರೆ, ಅವುಗಳು ಕೆಲವು ಸಾರಿ ಪರ್ಯಾಯವಾಗಿ ಉಪಯೋಗಿಸಲ್ಪಟ್ಟಿರುತ್ತವೆ. ಹಲವಾರು ಉದಾಹರಣೆಗಳನ್ನು ಕೊಡಬಹುದು,[150] ಆದರೆ ರೋಮಾಪುರದವರಿಗೆ ಬರೆದ ಪತ್ರಿಕೆಯಿಂದ ಎರಡು ಉದಾಹರಣೆಗಳು ಸಾಕಾಗುತ್ತದೆ. 1:8 ರಲ್ಲಿ, ಪೌಲನು ರೋಮಾಪುರದಲ್ಲಿದ್ದ ಕ್ರೈಸ್ತರ ವಿಶ್ವಾಸವು ಲೋಕದಲ್ಲೆಲ್ಲಾ ಪ್ರಸಿದ್ಧಿಯಾಗಿತ್ತು ಎಂದು ಬರೆಯುತ್ತಾನೆ, ಅದೇ ವೇಳೆ 16:19 ರಲ್ಲಿ, ಆತನು ಅವರ *ವಿಧೇಯತ್ವ*ವು ಪ್ರಸಿದ್ಧವಾಗಿತ್ತು ಎನ್ನುತ್ತಾನೆ. 10:16 ರಲ್ಲಿ, ಎಲ್ಲರೂ ಸಹ ಸುವಾರ್ತೆಗೆ *ವಿಧೇಯರಾಗಲಿಲ್ಲ* ಎಂಬ ಸುಳುವು ಕೊಟ್ಟಿರುತ್ತಾನೆ. NASB ಯಲ್ಲಿ "ಕಿವಿಗೊಡು" ಎಂದಿರುತ್ತದೆ, ಅದು ὑπακούω (*hupakouō*) ಎಂಬದರ ಅನುವಾದವಾಗಿದೆ, ಅದರರ್ಥವು "ವಿಧೇಯವಾಗು" (ನೋಡಿರಿ KJV). ಇದು ಯೆಶಾಯನು ಅವರು *ನಂಬುವದಿಲ್ಲ* ಎಂದು ಹೇಳಿದ ಮಾತುಗಳ ನೆರವೇರಿಕೆಯಾಗಿದೆ ಎಂಬದಾಗಿ ಪೌಲನು ಒತ್ತಿ ಹೇಳಿದನು.

ರಕ್ಷಣೆಯುಂಟು ಮಾಡುವ ವಿಶ್ವಾಸದಲ್ಲಿ ಮನಸ್ಸು, ಹೃದಯ, ಮತ್ತು ಚಿತ್ತದ ಪಾತ್ರಗಳಿರುತ್ತವೆ. ಯಾವದೇ ವಾಕ್ಯವನ್ನು ತೆಗೆದುಕೊಂಡರೂ, ಒಂದು ಅಥವಾ ಮೂರು ಸಂಗತಿಗಳ ಮೇಲೆ ಹೆಚ್ಚು ಒತ್ತು ಕೊಡಲಾಗಿರುತ್ತದೆ. ಆ ನಿರ್ದಿಷ್ಟವಾದ ವಾಕ್ಯಭಾಗದಲ್ಲಿ ನಂಬಿಕೆಯ ಯಾವ ಆಯಾಮದ ಬಗ್ಗೆ ಮಾತಾಡಲಾಗುತ್ತಿದೆಯೆಂಬುದು ಆಯಾ ಸಂದರ್ಭದ ತಕ್ಕಂತಿರುತ್ತದೆ.[151]

ರಕ್ಷಣೆಯುಂಟು ಮಾಡುವ ವಿಶ್ವಾಸದ ಮೂರು ಆಯಾಮಗಳ ಬಗ್ಗೆ ರೂಪರೇಖೆ ಮಾಡಿದ ಬಳಿಕ, ಕೆಲವು ಹೆಚ್ಚುವರಿ ಆಲೋಚನೆಗಳನ್ನು ಅರ್ಥಮಾಡಿಕೊಳ್ಳತಕ್ಕದ್ದು. (1) "ವಿಶ್ವಾಸ" ಎಂಬದನ್ನು ಸ್ವಲ್ಪ ಹೆಚ್ಚು ಮತ್ತು ಕಡಿಮೆ ಒತ್ತು ಕೊಟ್ಟು ವಿವಿಧ ವಾಕ್ಯಭಾಗಗಳಲ್ಲಿ ಉಪಯೋಗಿಸಬಹುದಾದರೂ, ಮೊದಲು, ಕಡೆಗೆ ಮತ್ತು ಯಾವಾಗಲೂ ವಿಶ್ವಾಸವೆ ಆಗಿದೆ. *Pistis* "ನಂಬುವದು, ವಿಧೇಯವಾಗುವದು, ವಿಶ್ವಾಸಿಸುವದು, ನಿರೀಕ್ಷಿಸುವದು, ಮತ್ತು ನಂಬಿಗಸ್ತರಾಗಿರುವದು" ಇವುಗಳನ್ನೊಳ ಗೊಂಡಿದೆ ಎಂದು ಹೇಳಿದ ಬಳಿಕ,

Bultmann ಇನ್ನು ಹೇಳಿದ್ದೇನೆಂದರೆ "ಆದರೆ ಕ್ರಿಸ್ತನಲ್ಲಿ ವಿಶ್ವಾಸವಿಡುವದೇ ಪ್ರಾಥಮಿಕ."[152] (2) ಆದುದರಿಂದ, ರಕ್ಷಣೆಯುಂಟು ಮಾಡುವ ವಿಶ್ವಾಸ ಮುಖ್ಯ ಗಮನವು ಅದನ್ನು ಹೊಂದಿರುವ ವ್ಯಕ್ತಿಯ ಮೇಲಾಗಲಿ, ಅಥವಾ ಅದರಿಂದ ಉಂಟಾದ ಸಾಕ್ಷಿಯ ಮೇಲಾಗಲಿ ಇರುವದಿಲ್ಲ. ಬದಲಾಗಿ, ಮುಖ್ಯ ಗಮನವು *ಯೇಸುವಿನ* ಮೇಲೆಯೇ. ವಿಶ್ವಾಸವು "ಸಂದೇಶದ ಮೇಲಿರುತ್ತದೆ, ಆದರೆ ಸಂದೇಶದಲ್ಲಿನ ವಿಶ್ವಾಸವು ಹಾಗೆಯೇ ಸಂದೇಶ ಯಾರಿಗೆ ಮಧ್ಯಸ್ಥಿಕೆ ವಹಿಸುತ್ತದೋ ಆ ವ್ಯಕ್ತಿಯಲ್ಲಿನ ವಿಶ್ವಾಸ ಇದಾಗಿದೆ."[153]

## ಹೆಚ್ಚಿನ ಅಧ್ಯಯನಕ್ಕಾಗಿ: "ನೀತಿ" ಎಂಬ ಪದದ ಮೇಲಿನ ಅಧ್ಯಯನ (*DIKAIOSUNE*)

"ದೇವರ ನೀತಿ" ಎಂದು ಪೌಲನು ಹೇಳಿದ್ದರ ಅರ್ಥವೇನಾಗಿತ್ತು? ಪೌಲನು "ನೀತಿ" ಎಂದು ಉಪಯೋಗಿಸಿದ್ದರಿಂದ ಮತ್ತು ಅದಕ್ಕೆ ಸಂಬಂಧಿತ ಪದಗಳು ಈ ಪತ್ರಿಕೆಯಲ್ಲಿ ಎಪ್ಪತ್ತರಷ್ಟು ಇರುವದರಿಂದ, ಈ ಪದಗಳನ್ನು ವ್ಯಾಖ್ಯಾನಿಸುವದು ಪ್ರಾಮುಖ್ಯವಾಗಿರುತ್ತದೆ. ಈ ಪದದ ಕುಟುಂಬದಲ್ಲಿ, ಬಹಳಷ್ಟು ಸಾರಿ ಕಾಣಿಸಿಕೊಳ್ಳುವ ನಾಮಪದ ಇರುತ್ತದೆ (δικαιούνη, *dikaiosunē*), ಅಲ್ಲದೆ ಸಂಬಂಧಿತ ನಾಮಪದದ ರೂಪ (δικαίωμα, *dikaiōma*) ಇರುತ್ತದೆ; ಎರಡೂ ಸಹ "ನೀತಿ" ಎಂಬ ಅರ್ಥವನ್ನು ಕೊಡುತ್ತವೆ. ಒಂದು ಕ್ರಿಯಾ ಪದರೂಪ (δικαιόω, *dikaioō*) ಇರುತ್ತದೆ, ಅದು "ನೀತಿವಂತನೆಂದು ನಿರ್ಣಯಿಸು" ಎಂಬ ಅರ್ಥವನ್ನು ಕೊಡಬಲ್ಲದು. ನಂತರ ಇನ್ನೊಂದು ರೂಪವಿದ್ದು ಅದು ಒಂದು ವಿಶೇಷಣ (δικαίος, *dikaios*) ಆಗಿರಬಹುದು ಅಥವಾ ಕ್ರಿಯಾ ವಿಶೇಷಣ (δικαίως, *dikaiōs*) ಆಗಿರಬಲ್ಲದು, ಇದು "ನೀತಿ" ಅಥವಾ "ನೀತಿಯಿಂದ" ಎಂಬ ಅರ್ಥವನ್ನು ಕೊಡುತ್ತದೆ. ಇತರ ರೂಪಗಳಲ್ಲಿ ಒಂದು ನಕಾರಾತ್ಮಕ ರೂಪ (ἀδικία, *adikia*) ಎಂದಿರುತ್ತದೆ, ಅದು "ಅನೀತಿ" ಎಂದರ್ಥವಾಗಿದೆ. ಈ ಎಲ್ಲಾ ರೂಪಗಳು ಸಹ δίκη (*dikē*) ಎಂಬುದರಿಂದ ತೆಗೆದುಕೊಳ್ಳಲ್ಪಟ್ಟಿವೆ, "ಸರಿ" ಎಂಬುದು ಅದರ ಒಂದು ಅರ್ಥವಾಗಿದೆ.[154]

ಈ ಗ್ರೀಕ್ ಪದಗಳು ಅನೇಕ ಸಾರಿ "ನ್ಯಾಯವಾದ," "ನೀತಿಗೊಳಿಸು," "ನ್ಯಾಯವಾಗಿ," ಅಥವಾ "ನ್ಯಾಯ" ಎಂಬ ಅರ್ಥಗಳನ್ನು ಕೊಡುತ್ತವೆ. A. W. Tozer ಈ ಪದಗಳನ್ನು ಅನುವಾದಿಸುವದಕ್ಕಿರುವ ಕಠಿಣತೆಯ ಬಗ್ಗೆ ಹೇಳುತ್ತಾರೆ, "ಮೂಲಪ್ರತಿಯಲ್ಲಿನ ಅದೇ ಪದವು ಆಂಗ್ಲದಲ್ಲಿ *ನ್ಯಾಯ ಅಥವಾ ನೀತಿ* ಎಂದಾಗುತ್ತದೆ," ಮತ್ತು ಆತನು ಇನ್ನೂ ಹೇಳಿದ್ದೇನೆಂದರೆ ಇದು "ಒಬ್ಬನು ಸಂಶಯಿಸುವ ಹಾಗೆ, ಅನುವಾದಕನ ಚಿತ್ತದಂತೆ ನಡೆಯುತ್ತದೆ."[155] ಉದಾಹರಣೆಗೆ, KJVಯು "ದೇವರ ನೀತಿ" ಎಂದು ಹೇಳಿದ ಬಳಿಕ, "*ನೀತಿವಂತನು* ನಂಬಿಕೆಯಿಂದಲೇ ಬದುಕುವನು" ಎನ್ನುತ್ತದೆ (ರೋಮಾಪುರ 1:17; ಒತ್ತಿ ಹೇಳಿದ್ದು ನನ್ನದು). ಉದಾಹರಣೆಗೆ, NASB ರೋಮಾಪುರ 3 ರಲ್ಲಿ, "ನೀತಿವಂತ" ಎಂದು ಆರು ಸಾರಿ, "ಅನೀತಿವಂತ" ಎಂದು ಒಂದು ಸಾರಿ, "ನ್ಯಾಯ" ಒಂದು ಸಾರಿ, "ನೀತಿವಂತನಾಗಿಸು" ಒಂದು ಸಾರಿ, "ನೀತಿನಿರ್ಣಯ" ನಾಲ್ಕು ಸಾರಿ, ಮತ್ತು "ನೀತಿವಂತಗೊಳಿಸುವವನು" ಒಂದು ಸಾರಿ ಇರುತ್ತದೆ. ಈ ಎಲ್ಲಾ ಪದಗಳು ಒಂದೇ ಗ್ರೀಕ್ ಮೂಲ ಪದದಿಂದ ಬಂದಿರುತ್ತವೆ.

"ಸರಿ" ಎಂಬ ಪದವನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಸಹಾಯವಾಗಬಹುದು. "ನೀತಿವಂತಿಕೆ" ಎಂಬ ಪದವನ್ನು ಕೆಲವು ಸಾರಿ ದೇವರ ಗುಣಸ್ವಭಾವವನ್ನು ಕುರಿತು ಮಾತಾಡುವಾಗ ಉಪಯೋಗಿಸಲಾಗಿದೆ (3:25, 26). ದೇವರಿಗೆ ಅನ್ವಯಿಸಿದಾಗ, "ನೀತಿವಂತಿಕೆ" ಎಂಬುದು *ಸರಿ–ಇರುವದು* ಎಂಬದನ್ನು ಸೂಚಿಸುತ್ತದೆ. ಇದೊಂದು *ಸಂಪೂರ್ಣವಾದ ನೀತಿ*. ದೇವರು ತಾನು ಮಾಡುವದರಲ್ಲೆಲ್ಲಾ ಸಂಪೂರ್ಣವಾಗಿ ಮತ್ತು ಪರಿಪೂರ್ಣನಾಗಿರುತ್ತಾನೆ. ಆತನ ನೀತಿಯು ಆತನ ಪರಿಶುದ್ಧತೆಯ ಸಂಕೇತವಾಗಿದೆ. ಆತನು ಪರಿಶುದ್ಧನಾದ್ದರಿಂದ, ಆತನು ಪಾಪವನ್ನು ನಿರ್ಲಕ್ಷಿಸಲಾರನು ಅಥವಾ ಅದನ್ನು ಹಗುರವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ.[156] ಆತನ ನೀತಿಯ ಸ್ವಭಾವವು ಪಾಪಕ್ಕೆ ದಂಡನೆಯಾಗಬೇಕೆಂದು ಕೋರುತ್ತದೆ.

"ನೀತಿ" ಎಂಬ ಪದವನ್ನು ಈ ಎರಡರಲ್ಲಿ ಯಾವ ಅರ್ಥದಲ್ಲಾದರೂ *ಮಾನವರಿಗೆ* ಸಹ ಅನ್ವಯಿಸಬಹುದಾಗಿದೆ. ಮೊದಲನೆಯದಾಗಿ, *ಸರಿಯಾದ–ಜೀವನ* ನಡಿಸುವ ಅರ್ಥದಲ್ಲಿ ಈ ಪದವನ್ನು ಉಪಯೋಗಿಸಬಹುದು. ಮೊದಲ ಯೋಹಾನ 2:29 ಮತ್ತು 3:7, 10 ವಚನಗಳು ನೀತಿಯನ್ನು ಆಚರಿಸುವ ಕುರಿತು ಮಾತಾಡುತ್ತವೆ, ಅದೇ ವೇಳೆ ಪ್ರಕಟಣೆ 19:8 "ದೇವಜನರ ಸತ್ಕಾರ್ಯ (ನೀತಿಕಾರ್ಯ)ಗಳು" ಎಂದು ಸೂಚಿಸುತ್ತದೆ. ಹಾಗಾದರೆ, ಒಂದು ಅರ್ಥದಲ್ಲಿ, ಸರಿಯಾಗಿ ಜೀವಿಸಬೇಕೆಂದು ಹಂಬಿಸುವದನ್ನು "ನೀತಿ" ಎಂದು ಕರೆಯಬಹುದು.[157] ಹೇಗೂ, ಒಬ್ಬನೂ ಪರಿಪೂರ್ಣವಾಗಿ ಜೀವಿಸಲು ಸಾಧ್ಯವಿಲ್ಲವಾದ್ದರಿಂದ, ಈ "ನೀತಿವಂತಿಕೆಯು" ಒಂದು *ಸಂಬಂಧಿತ ಸರಿತನ* (*ಸದಾಚಾರ*) ಆಗಿದೆ. ನಾವು ನಮ್ಮ ಶಕ್ತಿಮೀರಿ ಸದಾಚಾರದಿಂದ ಜೀವಿಸಲು ಪ್ರಯತ್ನಿಸಿದಾಗ್ಯೂ ನಾವು ಪಾಪಮಾಡುತ್ತೇವೆ ಮತ್ತು "ದೇವರ ಮಹಿಮೆಯನ್ನು ಕಳಕೊಳ್ಳುತ್ತೇವೆ" (3:23). ಪೌಲನ ಮಾತುಗಳಲ್ಲಿ, "ನೀತಿವಂತನು ಇಲ್ಲ (ಪರಿಪೂರ್ಣವೆಂಬ ಅರ್ಥದಲ್ಲಿ), ಒಬ್ಬನೂ ಇಲ್ಲ" (3:10).

ದೇವರ ನೀತಿ ಮತ್ತು ಮಾನವರ ಅನೀತಿ ನಡುವಿನ ವಿರುದ್ಧತೆಯು ರೋಮಾಪುರದವರಿಗೆ ಬರೆದ ಪತ್ರಿಕೆಯ ಪ್ರಾಥಮಿಕ ಸಂದೇಶಕ್ಕೆ ಉದ್ವೇಗವನ್ನು ಒದಗಿಸುತ್ತದೆ. ಆ ಉದ್ವೇಗವನ್ನು 3:26ರ ಮಾತುಗಳಲ್ಲಿ ವ್ಯಕ್ತಪಡಿಸಬಹುದಾಗಿದೆ: ದೇವರು ಹೇಗೆ "ನೀತಿ" (ಸರಿ) ಆಗಿದ್ದು ಅದೇ ಸಮಯದಲ್ಲಿ *ಸರಿಯಿಲ್ಲದವರನ್ನು* "ನೀತಿವಂತಗೊಳಿಸುವವನು" ಆಗಿರಲು (ಅಂದರೆ, ಅವರನ್ನು ಸರಿ *ಆಗಿದ್ದರೇನೋ* ಎಂಬಂತೆ ನಡಿಸಿಕೊಳ್ಳಲು) ಸಾಧ್ಯ?

ಈ ಸಮಸ್ಯೆಯ ಪರಿಹಾರವು "ನೀತಿವಂತಿಕೆ" ಎಂಬದನ್ನು ಮಾನವರಿಗೆ ಅನ್ವಯಿಸಬಹುದಾದ ಎರಡನೆಯ ರೀತಿಯಲ್ಲಿ ಪ್ರತಿಬಿಂಭಗೊಂಡಿದೆ. ಇದು ರೋಮಾಪುರದಲ್ಲಿ ಈ ಪದವನ್ನು ಉಪಯೋಗಿಸಿದ ಅತ್ಯಂಥ ಪ್ರಾಮುಖ್ಯವಾದ ಸಂದರ್ಭವಾಗಿದೆ. ಈ ಅರ್ಥದಲ್ಲಿ ಉಪಯೋಗಿಸಿದಾಗ, ಈ ಪದವು ಕರ್ತನ ಸಂಗಡ *ಸರಿಯಾದ ಸಂಬಂಧದಲ್ಲಿರುವದು* ಎಂಬದನ್ನು ಸೂಚಿಸುತ್ತದೆ. ಈ ಅರ್ಥವು 1:17 ರಲ್ಲಿ ವ್ಯಕ್ತಪಡಿಸಲಾಗಿರುವ ಪರಿಕಲ್ಪನೆಯಾಗಿದೆ.

ಒಬ್ಬನು ಸರಿಯಲ್ಲದವನಾಗಿದ್ದಾಗ್ಯೂ, ಆತನು ನಂಬಿಕೆಯಿಡುವಾಗ ದೇವರು ಅವನನ್ನು ಸರಿ ಎಂಬಂತೆ ಪರಿಗಣಿಸುವನು. ಇದರ ಪ್ರಧಾನ ಉದಾಹರಣೆಯು 4:3 ರಲ್ಲಿ ಸಿಕ್ಕುತ್ತದೆ: "ಅಬ್ರಹಾಮನು ದೇವರನ್ನು ನಂಬಿದನು ಮತ್ತು ಆ ನಂಬಿಕೆ *ಅವನ ಲೆಕ್ಕಕ್ಕೆ*

ನೀತಿಯೆಂದು ಎಣಿಸಲ್ಪಟ್ಟಿತು" (ಒತ್ತಿ ಹೇಳಿದ್ದು ನನ್ನದು). ಅಬ್ರಹಾಮನು ದೇವರನ್ನು ನಂಬಿದಾಗ, ಆತನು ನಿಜತ್ವದಲ್ಲಿ ನೀತಿವಂತನಾಗಿದ್ದಿಲ್ಲವಾದರೂ, ದೇವರು ಆ ನಂತರ ಆತನನ್ನು ನೀತಿವಂತನೋ ಎಂಬಂತೆ ಕಂಡನು. NASB ಯಲ್ಲಿ "ಲೆಕ್ಕಕ್ಕೆ ಸೇರಿಸು" ಅಥವಾ "ಲೆಕ್ಕಕ್ಕೆ ಪರಿಗಣಿಸು" ಎಂದಿರುತ್ತದೆ (4:4-6, 9, 10, 22-24), KJV ಯಲ್ಲಿ "ಎಣಿಸಲ್ಪಟ್ಟನು" (4:3, 5), "ಪರಿಗಣಿಸಲ್ಪಟ್ಟನು" (4:9, 10), ಮತ್ತು "ಆರೋಪಿಸು" (4:6, 22-24) ಎಂದಿದೆ. ಈ "ನೀತಿವಂತಿಕೆ" ಯನ್ನು ಅನೇಕ ವೇಳೆ ಲೇಖಕರು *ಆರೋಪಿಸಲ್ಪಟ್ಟ ನೀತಿ* ಎಂದು ಹೆಸರಿಸಲ್ಪಟ್ಟಿದೆ.

## ಅನ್ವಯಿಸುವಿಕೆ

### ಉನ್ನತಕ್ಕೇರಿಸಲ್ಪಟ್ಟ ಕ್ರಿಸ್ತನು (1:1-7)

ರೋಮಾಪುರದವರಿಗೆ ಬರೆದ ಪತ್ರಿಕೆಯ ಪ್ರಾರಂಭಿಕ ವಚನಗಳಲ್ಲಿ ಪೌಲನು ನಮಗೆ ಕ್ರಿಸ್ತನ ಕುರಿತ ಬಲವಾದ ವರ್ಣನೆಯನ್ನು ನೀಡುತ್ತಾನೆ. ಯೇಸು ಯಾರೆಂದರೆ:

ವಾಕ್ಯಗಳ ನೆರವೇರಿಕೆ (1:1, 2).
ದೇವರ ಕುಮಾರನು (1:3, 4).
ದಾವೀದನ ಸಂತತಿಯವನು (1:3).
ಪುನರುತ್ಥಾನಗೊಂಡ ಕರ್ತನು (1:4).
ಕೃಪೆಯನ್ನು ತನ್ನ ಜನರಿಗೆ ತಲುಪಿಸುವಾತನು (1:5-7).

### ಯೇಸುವಿನ ಪುನರುತ್ಥಾನದ ದೇಹ(1:4)

ಪುನರುತ್ಥಾನದ ಸುತ್ತ ಅನೇಕ ರಹಸ್ಯಗಳು ಇರುತ್ತವೆ. ಅಂಥ ರಹಸ್ಯಗಳಲ್ಲೊಂದೆಂದರೆ ಯೇಸುವಿನ ಪುನರುತ್ಥಾನಗೊಂಡ ದೇಹದ ಸ್ವಭಾವ.

ಮೊದಲನೆಯದಾಗಿ, ನಾವು *ಅದೊಂದು ದೇಹವಾಗಿತ್ತು* ಎಂಬದನ್ನು ಅರ್ಥಮಾಡಿಕೊಳ್ಳಬೇಕು. ಪುನರುತ್ಥಾನಗೊಂಡ ಕರ್ತನು ಅವರ ಊಹಾಪೋಹಗಳ ಕಲ್ಪನೆಯಲ್ಲ ಎಂಬದನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕೆಂಬುದು ಅಪೊಸ್ತಲನ ಇಚ್ಛೆಯಾಗಿತ್ತು. ಅವರು ಕನಸು ಕಾಣಲಿಲ್ಲ ಅಥವಾ ಅದರ ದರ್ಶನ ಹೊಂದಲಿಲ್ಲ. ಅವರು ಒಂದು ಆತ್ಮ ಅಥವಾ ಭೂತವನ್ನು ನೋಡಲಿಲ್ಲ. ಪುನರುತ್ಥಾನದ ನಂತರ, ಯೇಸು ಎಲ್ಲರಿಗೆ ಕಾಣಬಹುದಾದ ದೇಹವನ್ನು ಹೊಂದಿದ್ದನು (ಯೋಹಾನ 20:14, 20; ಅಪೊಸ್ತಲರ ಕೃತ್ಯಗಳು 10:40). ಆತನಿಗೆ "ಮಾಂಸ ಮತ್ತು ಎಲುಬುಗಳುಳ್ಳ" ಒಂದು ದೇಹವಿತ್ತು (ಲೂಕ 24:39). ಆತನಿಗೆ ಭೂಮಿಯ ಮೇಲೆ ನಡೆದಾಡಿದಂಥ ದೇಹವಿತ್ತು (ಲೂಕ 24:15) ಮತ್ತು ಅದನ್ನು ಮುಟ್ಟಬಹುದ್ದಾಗಿತ್ತು (ಮತ್ತಾಯ 28:9; ಲೂಕ 24:39). ಆತನಿಗೆ ಮಾತಾಡಬಲ್ಲ ದೇಹವಿತ್ತು (ಲೂಕ 24:17) ಮತ್ತು ಆಹಾರವನ್ನು ಸೇವಿಸಬಲ್ಲದಾಗಿತ್ತು (ಲೂಕ 24:41-43; ಅಪೊಸ್ತಲರ ಕೃತ್ಯಗಳು 10:41). ಆತನು ಶಿಲುಬೆಯ ಮೇಲೆ ಅನುಭವಿಸಿದ ಗಾಯಗಳ ಗುರುತುಗಳನ್ನು ಉಳಿಸಿಕೊಂಡಿರಬಲ್ಲ ದೇಹವಿತ್ತು (ಯೋಹಾನ 20:20, 25, 27).

ಈ ಸಂದರ್ಭದಲ್ಲಿ ಅದು ಒಂದು *ಅಸಹಜವಾದ* ದೇಹವಾಗಿತ್ತು. ಶಿಷ್ಯರು ಒಂದು ಮುಚ್ಚಿದ, ಬೀಗ ಹಾಕಲ್ಪಟ್ಟ ಮನೆಯೊಳಗೆ ಅಡಗಿರುವ ವೇಳೆ, ಯೇಸು ಒಮ್ಮೇಲೆ "ಅವರ ನಡುವೆ ನಿಂತನು" (ಯೋಹಾನ 20:19, 26). ಇಲ್ಲಿ ಕಂಡುಬರುವದೇನೆಂದರೆ ಆತನು ದೇಹವು ಗಟ್ಟಿಯಾದ ಕಟ್ಟಿಗೆಯನ್ನು ನುಸುಳಿ ನಡೆದುಬರಬಲ್ಲದ್ದಾಗಿತ್ತು![158] ಯೋಹಾನ 20:19, 26 ರಲ್ಲಿ "ಬಾಗಲುಗಳನ್ನು" ಬಣ್ಣಿಸುವ "ಮುಚ್ಚಿದ" (κλείω, *kleiō*) ಎಂಬ ಪದದ ಅರ್ಥವು "ಸಂಧಿಗಳಿಲ್ಲದಂತೆ ಮಾಡಲು" "ಮುಚ್ಚು," "ಭದ್ರಪಡಿಸು," ಅಥವಾ "ಪ್ರತಿಬಂಧ ಹಾಕು" ಎಂಬದಾಗಿದೆ.[159] ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಮುಚ್ಚಿದ ಮತ್ತು ತೆರೆಯಲ್ಪಡಲಿಕ್ಕಾಗದ ಒಂದನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ (ಮತ್ತಾಯ 25:10; ಲೂಕ 11:7; ಅಪೊಸ್ತಲರ ಕೃತ್ಯಗಳು 21:30; ಪ್ರಕಟಣೆ 3:7, 8; 20:3; 21:25). Homer Hailey ಈ ಅನಿಸಿಕೆ ವ್ಯಕ್ತಪಡಿಸಿದ್ದಾರೆ, "ಇಲ್ಲಿ ಹೇಳಲ್ಪಟ್ಟ ವಿವರಣೆಯು ಯೇಸು ಕೋಣೆಯಲ್ಲಿ ಫಕ್ಕನೇ ಕಾಣಿಸಿಕೊಂಡನೆಂಬದನ್ನು ತೋರ್ಪಡಿಸುತ್ತದೆ, ಆದರೂ ಆತನು ಯಾವದೇ ಬಾಗಲುಗಳ ಮೂಲಕ ಬಂದಿರಲಿಲ್ಲ."[160]

Cleopas ಮತ್ತು ಆತನ ಸ್ನೇಹಿತನು ಯೇಸುವನ್ನು ಗುರುತು ಹಿಡಿದ ತಕ್ಷಣ "ಆತನು ಅವರ ಕಣ್ಣಿಗೆ ಮಾಯವಾದನು" (ಲೂಕ 24:31). John Franklin Carter ಹೀಗೆ ಹೇಳಿದ್ದು ಸರಿಯಾಗಿಯೇ ಇದ್ದಿರಬಹುದು: "ಆತನ ಪುನರುತ್ಥಾನದ ಬಳಿಕ, ಆತನ ದೇಹವು ಆತನು ಮರಣಿಸುವ ಮುಂಚೆ ಹೊಂದಿರದ ಅಥವಾ ಚಲಾಯಿಸದೆ ಇದ್ದ ಕೆಲವು ಗುಣವಿಶೇಷಗಳನ್ನು ಹೊಂದಿತ್ತು ಮತ್ತು ಚಲಾಯಿಸಲ್ಪಟ್ಟವು."[161] ಈ ಎಲ್ಲಾ ಉದಾಹರಣೆಗಳ ಜೊತೆಯಲ್ಲಿ, Carter ಸೇರಿಸಿ ಹೇಳಿದ್ದೇನೆಂದರೆ, "ಆತನು ವ್ಯಕ್ತಿಗಳಿಗೆ ಅಥವಾ ಗುಂಪುಗಳಿಗೆ ಸ್ವಲ್ಪ ಸಮಯಕ್ಕೆ ಕಾಣಿಸಿಕೊಳ್ಳುತ್ತಿದ್ದ ಮತ್ತು ಆತನು ಮತ್ತೊಬ್ಬರಿಗೆ ಕಾಣಿಸಿಕೊಳ್ಳುವದಕ್ಕೆ ಮುಂಚೆ ಹಲವಾರು ದಿನಗಳ ವರೆಗೆ ಅದೃಶ್ಯನಾಗಿ ಉಳಿಯುತ್ತಿದ್ದನು."[162]

ಅಲ್ಲದೆ ಯೇಸುವಿನ ದೇಹವು ಒಂದು ರೀತಿ ವ್ಯತ್ಯಾಸವಾದ ತೋರಿಕೆ ಹೊಂದಿತ್ತು ಅಥವಾ ಅದು ಆತನ ಉದ್ದೇಶವನ್ನು ಮಾಡಿಮುಗಿಸಿದ ಬಳಿಕ, ಆತನು ಅದರ ತೋರಿಕೆಯನ್ನು ಬದಲಾಯಿಸುತ್ತಿದ್ದನು ಎಂದು ಹೇಳಬಹುದು. ಮಾರ್ಕ 16:12ರ ಪ್ರಕಾರ, ಎಮ್ಮಾಹುವಿನ ಮಾರ್ಗದಲ್ಲಿ ಹೋಗುತ್ತಿದ್ದ ಇಬ್ಬರು ಮನುಷ್ಯರಿಗೆ "ಆತನು ಅವರಿಗೆ ರೂಪಾಂತರದಿಂದ (ಬೇರೆ ರೂಪದಲ್ಲಿ) ಕಾಣಿಸಿಕೊಂಡನು." ಕೆಲವು ಭಾಷಾಂತರಗಳಲ್ಲಿ ಇದನ್ನು "ಬೇರೆ ರೂಪದಲ್ಲಿ" ಎಂದಿದೆ (RSV). NCVಯಲ್ಲಿ "ಯೇಸು ಮುಂಚಿನ ರೂಪದಲ್ಲಿ ಕಾಣಿಸಲಿಲ್ಲ" ಎಂದಿದೆ. ಯಾವ ಮಟ್ಟದಲ್ಲಿಯಾದರೂ, ಯೇಸುವನ್ನು ಆತನ ಮರಣದ ಮುಂಚೆ ಬಲ್ಲವರು ಆತನು ಪುನರುತ್ಥಾನಗೊಂಡ ಅನಂತರ ನೋಡಿದ ತಕ್ಷಣವೇ ಆತನನ್ನು ಗುರುತಿಸದೆ ಹೋದರು (ಲೂಕ 24:16; ಯೋಹಾನ 20:14).

ಕೊನೆಯಲ್ಲಿ Carter ಹೇಳಿದ್ದೇನೆಂದರೆ, ಪುನರುತ್ಥಾನ ದೇಹವನ್ನು ಹೊಂದಿಕೊಂಡ ಬಳಿಕ ಕ್ರಿಸ್ತನು "ಈ ಜೀವನದಲ್ಲಿ ಪುರುಷ ಮತ್ತು ಸ್ತ್ರೀಯರಿಗಿರುವಂತೆ—ಮರಣದ ಮುಂಚೆ ಆತನು ಸಹ ಹಾಗೆಯೇ ಇದ್ದನು—ಇತಿಮೀತಿಗಳಿಗೆ ಒಳಪಟ್ಟಿರಲಿಲ್ಲ."[163] Robert Duncan Culver ವಾದಿಸಿದ್ದೇನೆಂದರೆ "ಆತನ ದೇಹವು *eschatological* (ಅಂತಿಮಗತಿ ಶಾಸ್ತ್ರದಲ್ಲಿನ)[164] ರೂಪವನ್ನು ಅಂದರೆ ಮಹಿಮೆಗೊಂಡ ಶರೀರವನ್ನು ಹೊಂದಿತ್ತು."[165]

Culver ಉಪಯೋಗಿಸಿದ ಪದವು ಫಿಲಿಪ್ಪಿ 3:21 ರಿಂದ ಬಂದಿರಬಹುದು, "ಆತನ ಪ್ರಭಾವವುಳ್ಳ ದೇಹ." Carter ಮನವರಿಕೆಯಿಂದ ಹೇಳಿದ್ದೇನೆಂದರೆ, "ಆ (ಕ್ರಿಸ್ತನ ಪುನರುತ್ಥಾನಗೊಂಡ ದೇಹದ) ಗುಣವಿಶೇಷಣಗಳು ಮತ್ತು ಶಕ್ತಿಗಳು ಪೌಲನು ಕರೆಯುವಂಥ ಆತ್ಮೀಕ ದೇಹದ ಗುರುತುಗಳು ಎಂಬದರಲ್ಲಿ ಸಂಶಯವಿಲ್ಲ" (1 ಕೊರಿಂಥ 15:44).[166]

ಯೇಸುವಿನ ಪುನರುತ್ಥಾನಗೊಂಡ ದೇಹ ಮತ್ತು ನಮ್ಮ ಪುನರುತ್ಥಾನದ ಬಳಿಕ ನಮಗೆ ಸಿಕ್ಕುವ ಆತ್ಮೀಕ ದೇಹಗಳ ನಡುವೆ ಒಂದು ನಿಕಟವಾದ ಸಂಬಂಧವಿರುತ್ತದೆ. ಪೌಲನು ಆತ್ಮೀಕ ದೇಹದ ಕುರಿತು ನೋಡುವ ಉಪದೇಶದ ಒಂದು ಚಿಕ್ಕ ಸಾರಾಂಶ ಇಲ್ಲಿದೆ: ನಾವು ಮರಣದಿಂದ ಎಬ್ಬಿಸಲ್ಪಡುವಾಗ, ನಾವು ದೇಹತೊರೆದ ಆತ್ಮಗಳಾಗಿರುವದಿಲ್ಲ, ಆದರೆ ನೂತನ ದೇಹಗಳನ್ನು ಹೊಂದಿರುತ್ತೇವೆ (2 ಕೊರಿಂಥ 4:16-5:4).[167] ಪೌಲನು ಪುನರುತ್ಥಾನ ದೇಹದ ಬಗ್ಗೆ 1 ಕೊರಿಂಥ 15 ರಲ್ಲಿ ಬಣ್ಣಿಸುತ್ತಾನೆ. ನೂತನ "ಆತ್ಮೀಕ" ದೇಹವು ಒಂದು ರೀತಿಯಲ್ಲಿ ಹಳೆಯ "ಪ್ರಾಕೃತಿಕ" ದೇಹದೊಂದಿಗೆ ಸಂಬಂಧ ಹೊಂದಿರುತ್ತದೆ (1 ಕೊರಿಂಥ 15:38-41). ಬೀಜವನ್ನು ಬಿತ್ತುವ ಸಾದೃಶ್ಯವನ್ನು ಉಪಯೋಗಿಸುತ್ತಾ ಪೌಲನು ಹೇಳಿದ್ದೇನೆಂದರೆ,

> ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು. ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದು ಬರುವದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಬಲಾವಸ್ಥೆಯಲ್ಲಿ ಎದ್ದುಬರುವದು; ಪ್ರಾಕೃತದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮೀಕದೇಹವಾಗಿ ಎದ್ದು ಬರುವದು. ಪ್ರಾಕೃತದೇಹವಿರುವದಾದರೆ ಆತ್ಮೀಕ ದೇಹವೂ ಇರುವದು (1 ಕೊರಿಂಥ 15:42-44).

ಕ್ರಿಸ್ತನು ತಿರುಗಿ ಬರುವಾಗ, ನಮ್ಮ ದೇಹಗಳು "ಮಾರ್ಪಡುವವು," ನಾವು ಜೀವಂತವಾಗಿದ್ದರೂ ಸರಿಯೇ, ಅಥವಾ ಸತ್ತಿದ್ದರೂ ಸರಿಯೇ (1 ಕೊರಿಂಥ 15:51-54). ಆ ವೇಳೆಯಲ್ಲಿಯೇ ನಾವು *ನಮ್ಮ* ಪುನರುತ್ಥಾನದ ದೇಹಗಳನ್ನು ಪಡೆಯುತ್ತೇವೆ.

ನಾವು ಪಡೆಯಲಿರುವ ಆತ್ಮೀಕ ದೇಹ ಮತ್ತು ಯೇಸುವಿನ ಪುನರುತ್ಥಾನಗೊಂಡ ದೇಹಗಳ ನಡುವಿನ ಸಮಾನತೆಗಳನ್ನು ಗುರುತಿಸುವುದು ಕಷ್ಟವಲ್ಲ—ಆದರೆ ಒಂದು ಸ್ಪಷ್ಟ ವ್ಯತ್ಯಾಸವನ್ನು ಗಮನಕ್ಕೆ ತಂದುಕೊಳ್ಳಲೇ ಬೇಕು. ಯೇಸು ತನ್ನ ದೇಹವು "ಮಾಂಸ ಮತ್ತು ಎಲುಬುಗಳನ್ನು" ಹೊಂದಿದೆಯೆಂಬುದನ್ನು ಒತ್ತಿ ಹೇಳಿದನು (ಲೂಕ 24:39), ಅದೇ ವೇಳೆಯಲ್ಲಿ, "ರಕ್ತಮಾಂಸಗಳು ದೇವರರಾಜ್ಯಕ್ಕೆ ಬಾಧ್ಯವಾಗುವದಿಲ್ಲ" (ಅಂದರೆ ಪರಲೋಕದೊಳಗೆ ಪ್ರವೇಶಿಸುವದಿಲ್ಲ) ಎಂದು ಪೌಲನು ಹೇಳಿದನು (1 ಕೊರಿಂಥ 15:50). ಯೇಸು "ಮಾಂಸ ಮತ್ತು ಎಲುಬುಗಳು" ಎಂಬ ಮಾತುಗಳನ್ನು "ದೇಹ" ಎಂದು ಸೂಚಿಸುವದಕ್ಕಾಗಿ ಹೊಂದಾಣಿಕೆಯ ಅರ್ಥದಲ್ಲಿ ಹೇಳಿರುವ ಸಾಧ್ಯತೆ ಯಿರುತ್ತದೆ.[168] ಅಲ್ಲದೆ ನಾಲ್ವತ್ತು ದಿನಗಳ ವರೆಗೆ ಯೇಸು ಉಪಯೋಗಿಸಿದ ದೇಹವು ಆತನ ಅಂತಿಮ ಪ್ರಭಾವಗೊಂಡ ದೇಹ—ಒಂದು *ಹೊಂದಾಣಿಕೆಯಂತೆ ಮಾರ್ಪಡಿಸಿ ಕೊಂಡು* ರೂಪಾಂತರವಾಗಿರುವ ಸಾಧ್ಯತೆಯಿದೆ—ತನ್ನ ಶಿಷ್ಯರನ್ನು ತಾನು ಪರಲೋಕಕ್ಕೆ ಆರೋಹನಗೊಳ್ಳುವ ದಿನಕ್ಕಾಗಿ ಸಿದ್ಧಗೊಳಿಸುತ್ತಾ ಅವರೊಂದಿಗೆ ಸಂವಾಹನ ನಡಿಸಲು

ಶಕ್ತವಾಗುವ ರೀತಿಯಲ್ಲಿ ದೇಹವನ್ನು ಹೊಂದಾಣಿಕೆ ಮಾಡಿಕೊಂಡಿರಬೇಕು. ಅದು ನಿಜವಾಗಿದ್ದರೆ, ಆತನು ತನ್ನ ತಂದೆಯ ಬಳಿಗೆ ಏರಿಹೋಗುತ್ತಿರುವ ವೇಳೆಯಲ್ಲಿ ಆತನ ದೇಹಕ್ಕೆ ಅಂತಿಮ ಮತ್ತು ಸಂಪೂರ್ಣವಾದ ಮಾರ್ಪಾಡುಗಳು ಬಂದಿರಬೇಕು.

ಹೀಗೆ ಹೇಳಿದ ಮೇಲೆ, ಯೇಸುವಿನ ಪುನರುತ್ಥಾನಗೊಂಡ ದೇಹದ ಕುರಿತು ನಾವು ಏನು *ತಿಳುಕೊಳ್ಳಬಹುದು*? ಅದೊಂದು *ಅಸಹಜವಾದ* ದೇಹವಾಗಿತ್ತು ಆದರೆ ಅದೊಂದು *ನಿಜವಾದ* ದೇಹವಾಗಿತ್ತು. ಆತನು *ನಿಜವಾಗಿಯೂ* ಸತ್ತವರಿಂದ ಎಬ್ಬಿಸಲ್ಪಟ್ಟನೆಂದು ನಾವು ನಂಬಿಕೆಯಿಂದ ಬಲ್ಲೆವು. ಅದಷ್ಟೇ ಮಹತ್ವವಾದದ್ದು.

## ಪುನರುತ್ಥಾನವು ಏನನ್ನು ಘೋಷಿಸುತ್ತದೆ (1:4)

ಯೇಸುವಿನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳು ನಮ್ಮ ನಂಬಿಕೆಗೆ ಮತ್ತು ದೇವರೊಂದಿಗಿನ ಸಂಬಂಧಕ್ಕೆ ಹೃದಯಭಾಗವಾಗಿರುತ್ತದೆ (1 ಕೊರಿಂಥ 15:1-4). ವಾರದ ಮೊದಲ ದಿನದಂದು ನಾವು ಕರ್ತನ ಭೋಜನವನ್ನು ತೆಗೆದುಕೊಳ್ಳಲು ಕೂಡಿಕೊಳ್ಳುತ್ತೇವೆ,[169] ಆಗ ನಾವು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳನ್ನು ಜ್ಞಾಪಕಮಾಡಿಕೊಳ್ಳುತ್ತೇವೆ. ಈಗ ಸಧ್ಯಕ್ಕೆ, ನಾವು ನಮ್ಮ ಆಲೋಚನೆಗಳನ್ನು ಪುನರುತ್ಥಾನದ ಸುತ್ತ ಕೇಂದ್ರೀಕರಿಸೋಣ. ನಾವು "ಪುನರುತ್ಥಾನದ ಮಹತ್ವವಾದರೂ ಏನು?" ಮತ್ತು "ಈ ಮಹತ್ವದ ಘಟನೆಯು ಏನನ್ನು ಘೋಷಿಸುತ್ತದೆ?" ಎಂಬ ಪ್ರಶ್ನೆಗಳಿಗೆ ನಾವು ಉತ್ತರಿಸುವದಕ್ಕೆ ಬಯಸುತ್ತೇವೆ. ಅದರ ಕೆಲವೊಂದು ಪ್ರಾಥಮಿಕ ಸಂದೇಶಗಳು ಇಂತಿವೆ.

1. *ಯೇಸು ದೇವರ ಕುಮಾರನು.* ಪುನರುತ್ಥಾನವು ಯೇಸುವಿನ ದೈವತ್ವವನ್ನು ಪ್ರಕಟಗೊಳಿಸುತ್ತದೆ. ರೋಮಾಪುರ 1:3, 4 ರಲ್ಲಿ, ಪೌಲನು ಆತನ ಕುರಿತು ಹೀಗೆ ಹೇಳಿದನು "ನಮ್ಮ ಕರ್ತನೂ ಆಗಿರುವ ಯೇಸು ಕ್ರಿಸ್ತನ...ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದ ಮಹಾತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನು." ಪುನರುತ್ಥಾನವು ಯೇಸು ದೇವಕುಮಾರ ನೆಂಬದನ್ನು ಖಚಿತಗೊಳಿಸುತ್ತದೆ.

ಮುಂಜಾನೆಯಲ್ಲಿ ಸಮಾಧಿಯ ಬಳಿಗೆ ಹೋದವರಲ್ಲಿ ಮೊದಲಿಗರಾದ ಸ್ತ್ರೀಯರು ಕ್ರಿಸ್ತನ ಅಭಿಷೇಕಿಸಲ್ಪಟ್ಟ ದೇಹಕ್ಕೆ ಸಂಸ್ಕಾರ ಮಾಡಲು ಬಂದರು. ಮಗ್ದಲದ ಮರಿಯಳು ಮಿಕ್ಕವರನ್ನು ಅಲ್ಲಿಯೇ ಬಿಟ್ಟು ಹೋಗಿ ಪೇತ್ರ ಮತ್ತು ಯೋಹಾನರನ್ನು ಸಂಧಿಸಿದಳೆಂದು ತೋರುತ್ತದೆ. ಮರಿಯಳ ಕಳವಳವನ್ನು ಕೇಳಿದ ಕೂಡಲೇ ವಿಷಯವೇನೆಂದು ವಿಚಾರಿಸುವದಕ್ಕೆ ಸಮಾಧಿಯ ಕಡೆಗೆ ಓಡಿಹೋದರು. ಯೋಹಾನನು ನಂತರದಲ್ಲಿ, ತಾನು ಸಮಾಧಿಯೊಳಗೆ ನೋಡಿದಾಗ ನಂಬಿದನು ಎಂದು ಹೇಳಿಕೊಂಡನು. ಆತನು ಏನು ನಂಬಬೇಕೆಂಬುದನ್ನು ತಿಳಿಯದವನಾಗಿ ಪೇತ್ರನ ಸಂಗಡ ಸಮಾಧಿಯೊಳಗೆ ಪ್ರವೇಶಿಸಿದನು. ನಂತರ ಸಮಾಧಿಯಲ್ಲಿ ಏನಿತ್ತೋ ಅದನ್ನು ನೋಡಿದನು. ಯೋಹಾನನ ಸಾಕ್ಷಿಯು ಹೀಗಿದೆ:

> ಸಿಮೋನ ಪೇತ್ರನು ಅವನ ಹಿಂದೆ ಬಂದು ಸಮಾಧಿಯೊಳಕ್ಕೆ ಹೋಗಿ ಆ ನಾರು

> ಬಟ್ಟೆಗಳು ಬಿದ್ದಿರುವದನ್ನೂ ಆತನ ತಲೆಯ ಮೇಲಿದ್ದ ಕೈಪಾವುಡವು ಆ ನಾರುಬಟ್ಟೆಗಳ ಕೂಡ ಇರದೆ ಸುತ್ತಿ ಒಂದು ಕಡೆಯಲ್ಲಿ ಬೇರೇ ಇರುವದನ್ನೂ ನೋಡಿದನು. ಆಗ ಸಮಾಧಿಯ ಬಳಿಗೆ ಮೊದಲು ಬಂದಿದ್ದ ಆ ಮತ್ತೊಬ್ಬ ಶಿಷ್ಯನು [ಅದು, ಯೋಹಾನನು[170]] ಸಹ ಒಳಕ್ಕೆ ಹೋಗಿ ನೋಡಿ[171] ನಂಬಿದನು (ಯೋಹಾನ 20:6-8).

ನಂಬಿಕೆಯನ್ನು ಉಂಟುಮಾಡಿದಂಥ ಯಾವ ಸಂಗತಿಯನ್ನು ಯೋಹಾನನು ನೋಡಿದನು? ಆತನು ಅಲ್ಲಿ "ನಾರು ಬಟ್ಟೆಗಳು ಬಿದ್ದಿರುವದನ್ನು ಕಂಡನು, . . . ಮತ್ತು ತಲೆಯ ಮೇಲಿದ್ದ ಪಾವುಡವು . . . ಸುತ್ತಿ ಒಂದು ಕಡೆಯಲ್ಲಿ ಬೇರೇ ಇರುವದನ್ನೂ ನೋಡಿದನು." ಒಂದು ವೇಳೆ ಅವಸರವಾಗಿ ಮನುಷ್ಯರು ಯೇಸುವಿನ ದೇಹವನ್ನು ಎತ್ತಿಕೊಂಡು ಹೋಗಿದ್ದರೆ,[172] ಅವರು ಸಮಯ ತೆಗೆದುಕೊಂಡು ಸುತ್ತಿರುವ ಬಟ್ಟೆಗಳನ್ನು ತೆಗೆಯುತ್ತಿರಲಿಲ್ಲ ಮತ್ತು ತಲೆಯ ಪಾವುಡವನ್ನು ಸುತ್ತಿ ನೀಟಾಗಿ ಇಡುತ್ತಿರಲಿಲ್ಲ. ಯೋಹಾನನು ನೋಡಿದ ಕಾರ್ಯಗಳು ಮಾನವ ಶ್ರಮದಿಂದ ಅಸಾಧ್ಯವಾಗಿಯೂ ಆದರೆ ದೇವರಿಂದ ಮಾತ್ರ ಮಾಡುವದಕ್ಕೆ ಸಾಧ್ಯವೆಂದೂ ಕಂಡಿದ್ದವು. ಅಲ್ಲದೆ ಯೇಸು ಮುಂಚೆ ಅನೇಕ ಸಾರಿ ಹೇಳಿದ ಮುಂತಿಳಿಸಿದ್ದ ಪುನರುತ್ಥಾನವನ್ನು ಅದು ಪುಷ್ಠಿಮಾಡುವಂತಿತ್ತು (ಮತ್ತಾಯ 16:21; 17:23; 20:19; ಮಾರ್ಕ 8:31; 9:31; 10:34; ಲೂಕ 9:22; ಯೋಹಾನ 2:19).

ನಾವು ಸ್ವಲ್ಪ ಸಮಯ ತೆಗೆದುಕೊಂಡು ಆಧಾರವನ್ನು ಜಾಗರೂಕತೆಯಿಂದ ಅವಲೋಕಿಸಿದರೆ, ಯೋಹಾನನಲ್ಲಿ ಉಂಟಾದಂತೆಯೇ ನಮ್ಮೊಳಗೆ ಸಹ ನಂಬಿಕೆ ಉಂಟಾಗುತ್ತದೆ. ಯೇಸು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಎಂಬದನ್ನು ನಂಬುವದಕ್ಕೆ ಸಾಕಷ್ಟು ಕಾರಣಗಳಿರುತ್ತವೆ. ಉದಾಹರಣೆಗೆ, ಆತನನ್ನು ಪುನರುತ್ಥಾನದ ಬಳಿಕ ಕಣ್ಣಾರೆ ಕಂಡಂಥ ನೂರಾರು ವಿಶ್ವಾಸಾರ್ಹ ಸಾಕ್ಷಿಗಳು ನಮಗಿದ್ದಾರೆ (1 ಕೊರಿಂಥ 15:4-8).

ಒಂದು ಪುರಾವೆಯೆಂದರೆ ಯೇಸುವಿನ ಶಿಷ್ಯರಲ್ಲಾದ ಬದಲಾವಣೆ. ಕ್ರಿಸ್ತನ ಬಂಧನ ಮತ್ತು ವಿಚಾರಣೆ ನಡೆಯುವ ಸಂದರ್ಭದಲ್ಲಿ ಕ್ರಿಸ್ತನ ಶಿಷ್ಯರು ನಡೆದುಕೊಂಡ ರೀತಿಗಳು ಯಾರಿಗೂ ಇಷ್ಟವಾಗುತ್ತಿರಲಿಲ್ಲ. ಅವರು ಬರೀ ಹೆದರಿಕೆಯಿಂದ ತುಂಬಿದ್ದರು. ಅವರು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಪಲಾಯನ ಮಾಡಿದ್ದರು, ಅಥವಾ ಅವರು ಅಪಾಯದಿಂದ ಆದಷ್ಟು ದೂರವಿರಲು ಪ್ರಯತ್ನಿಸಿದ್ದರು. ಪೇತ್ರನು ತನಗೆ ಯೇಸುವು ಗೊತ್ತಿಲ್ಲ ಎಂದು ಸಹ ಹೇಳಿದ್ದನು. ಹೀಗಿದ್ದರೂ, ಪುನರುತ್ಥಾನದ ಬಳಿಕ, ಅದೇ ವ್ಯಕ್ತಿಗಳು ಯೇಸುವಿನ ಕುರಿತು ಜನರೆಲ್ಲರ ಎದುರು ಧೈರ್ಯದಿಂದ ಸಾರಿದರು. ಅವರಿಗಾದ ಮನವರಿಕೆ ಎಂಥದ್ದೆಂಬದು ಹೊಸ ಒಡಂಬಡಿಕೆಯ ಪುಟಗಳಲ್ಲೆಲ್ಲಾ ಫಣಫಣಿಸುತ್ತದೆ.

ಅವರಿಗೆ ಯಾವದರ ಬಗ್ಗೆ ಖಚಿತವಿತ್ತು? ಯೇಸು *ಜೀವಂತವಾಗಿದ್ದಾನೆ* ಎಂಬದರ ಬಗ್ಗೆ. ಈ ಖಚಿತತೆಯು ಅಪೊಸ್ತಲರ ಜೀವಿತಗಳನ್ನೇ ಮಾರ್ಪಡಿಸಿತು. ಅವರ ನಂಬಿಕೆ ಅಚಲವಾಗಿತ್ತು—ಅವರನ್ನು ಸೆರೆಮನೆಗೆ ಹಾಕಿದರೂ, ಹೊಡೆದರೂ, ಕಲ್ಲೆಸೆಯಲ್ಪಟ್ಟರೂ ಮತ್ತು ಕೊಲ್ಲಲ್ಪಟ್ಟರೂ ಸಹ ಅಚಲವಾಗಿದ್ದರು. ಬಲವಿಲ್ಲದ, ಅಂಜುಬುರುಕ, ನಂಬಿಕೆಯಿಲ್ಲದ ವ್ಯಕ್ತಿಗಳು ಲೋಕವು ಎಂದೆಂದೂ ಕಂಡಿರದಂಥ ಅತಿ ಬಲಾಢ್ಯ ವ್ಯಕ್ತಿಗಳಾದರು. ಅವರ ಉಪದೇಶಗಳು ರೋಮ್ ಸಾಮ್ರಾಜ್ಯವನ್ನೇ ಅಲುಗಾಡಿಸಿದವು, ಎಲ್ಲಿಯವರೆಗೆ ಎಂದರೆ

ಅದು ಕೊನೆಗೆ ಬಿದ್ದು ಹೋಗುವವರೆಗೂ ಅಲುಗಾಡಿಸಿದವು. ಈ ವ್ಯಕ್ತಿಗಳಲ್ಲಾದ ಬದಲಾವಣೆಗೆ ಪುನರುತ್ಥಾನವಲ್ಲದೆ ಬೇರಾವ ಕಾರಣವನ್ನೂ ಕಾಣುವದಕ್ಕೆ ಸಾಧ್ಯವಿಲ್ಲ. ಅವರು ಪುನರುತ್ಥಾನಗೊಂಡ ಕರ್ತನನ್ನು ನೋಡಿದರು ಮತ್ತು ಅದು ಅವರ ಜೀವಿತವನ್ನೇ ಎಂದೆಂದಿಗೂ ಮಾರ್ಪಡಿಸಿತು.

ಪುನರುತ್ಥಾನವು ದೀರ್ಘಕಾಲದ ಹಿಂದೆಯೇ ಯೇಸು ದೇವಕುಮಾರನೆಂಬದನ್ನು ಸಾಬೀತುಪಡಿಸಿತು, ಮತ್ತು ಈಗಲೂ ಆ ಸತ್ಯವನ್ನು ಪ್ರಕಟಿಸುವದಾಗಿದೆ.

2. *ಯೇಸುವಿನ ಯಜ್ಞವು ಅಂಗೀಕರಿಸಲ್ಪಟ್ಟಿತು.* ದೇವರು ಶಿಲುಬೆಯ ಮೇಲಿನ ಯೇಸುವಿನ ಯಜ್ಞವನ್ನು ಅಂಗೀಕರಿಸಿದ್ದಾನೆ ಎಂಬದನ್ನು ಪುನರುತ್ಥಾನವು ಸಾರಿಹೇಳಿತು. ಕ್ರೈಸ್ತತ್ವವು ಶಿಲುಬೆಯ ಮೇಲೆ ಕೇಂದ್ರಿಕೃತವಾಗಿದೆ. ನಾವು “ಶಿಲುಬೆಯ ಮೂಲಕವಾಗಿ ದೇವರೊಂದಿಗೆ” ಸಮಾಧಾನಗೊಳಿಸಲ್ಪಟ್ಟಿದ್ದೇವೆ (ಎಫೆಸ 2:16). ಯೇಸುವಿನ ಯಜ್ಞದ ಮೂಲಕವಾಗಿ, ದೇವರ ನೀತಿಯು ತೃಪ್ತಿಗೊಳಿಸಲ್ಪಟ್ಟಿತು,[173] ಮತ್ತು ನಮಗೆ ನಿತ್ಯವಾದ ಜೀವಿತದ ನಿರೀಕ್ಷೆಯಿರುತ್ತದೆ. ಆದುದರಿಂದ ಪೌಲನು ಹೇಳಿದ್ದೇನೆಂದರೆ, “ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ . . . ಇರುವೆನೆಂದು ತೀರ್ಮಾನಿಸಿಕೊಂಡೆನು” (1 ಕೊರಿಂಥ 2:2). ನಾವು ವಾರದ ಪ್ರತಿಯೊಂದು ಮೊದಲ ದಿನದಂದು ಕರ್ತನ ಭೋಜನಕ್ಕೆ ಕೂಡಿಬರುವಾಗ, ಅದು “ಕರ್ತನ ಮರಣವನ್ನು ಸಾರಿಹೇಳುವದಕ್ಕಾಗಿಯೇ” ಆಗಿರುತ್ತದೆ (1 ಕೊರಿಂಥ 11:26).

ಹೇಗೂ, ಯೇಸು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿಲ್ಲವಾಗಿದ್ದರೆ, ಶಿಲುಬೆಯು ತನ್ನ ಉದ್ದೇಶವನ್ನು ನೆರವೇರಿಸಿತೋ ಇಲ್ಲವೋ ಎಂಬದು ನಮಗೆ ಖಚಿತವಾಗಿ ತಿಳಿಯುತ್ತಿರಲಿಲ್ಲ. ಪುನರುತ್ಥಾನವು ನಮಗೆ ದೇವರು ನಮ್ಮ ಪಾಪಗಳಿಗಾಗಿ ಯೇಸುವಿನ ಯಜ್ಞವನ್ನು ಖಂಡಿತ ಅಂಗೀಕರಿಸಿದ್ದಾನೆ ಎಂದು ಸಾರಿ ಹೇಳುತ್ತದೆ. ಈ ಅರ್ಥದಲ್ಲಿ, ನಾವು ಯೇಸುವಿನ ಮರಣದಿಂದ ಮಾತ್ರವಲ್ಲದೆ, ಆತನ ಪುನರುತ್ಥಾನದ ಮೂಲಕ ಸಹ ರಕ್ಷಿಸಲ್ಪಟ್ಟಿದ್ದೇವೆ. ಹೀಗೆ, ಪೌಲನು ಯೇಸುವನ್ನುದ್ದೇಶಿಸಿ ಹೇಳಿದ್ದೇನೆಂದರೆ, “ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ *ನೀತಿವಂತರೆಂಬ ನಿರ್ಣಯವು* ಉಂಟಾಗುವ ನಿಮಿತ್ತ ಜೀವದಿಂದ *ಎಬ್ಬಿಸಿದನು*” (4:25; ಒತ್ತಿ ಹೇಳಿದ್ದು ನನ್ನದು).

3. *ನಾವು ರಕ್ಷಣೆ ಹೊಂದಬಹುದು.* ಯೇಸುವಿನ ಯಜ್ಞವನ್ನು ದೇವರು ಅಂಗೀಕಾರ ಮಾಡಿದ್ದರ ಒಂದು ಉತ್ಸಾಹಕರ ಫಲಿತಾಂಶವೆಂದರೆ ನಾವು ರಕ್ಷಿಸಲ್ಪಡಬಹುದು! ನಾವು ಪಾಪದಲ್ಲಿ ಸತ್ತ ಸ್ಥಿತಿಯಿಂದ ಹೊಸ ಜೀವಿತಕ್ಕೆ ಎಬ್ಬಿಸಲ್ಪಡಬಲ್ಲೆವು ಎಂಬದನ್ನು ಪುನರುತ್ಥಾನ ಸಾರಿಹೇಳುತ್ತದೆ.

ಯೇಸು ಒಮ್ಮೆ ತನಗೆ *ಆತ್ಮೀಕವಾಗಿ* ಸ್ವಸ್ಥಪಡಿಸಲು ಶಕ್ತಿಯಿದೆ ಎಂಬದನ್ನು ಸಾಭಿತುಗೊಳಿಸುವದಕ್ಕೆ *ಶಾರೀರಿಕ* ಸ್ವಸ್ಥತೆಯನ್ನು ಉಪಯೋಗಿಸಿದನು (ನೋಡಿರಿ ಮತ್ತಾಯ 9:6). ಹಾಗಿದ್ದರೂ, ಬೈಬಲು ಯೇಸುವಿನ *ಶಾರೀರಿಕ* ಪುನರುತ್ಥಾನ ಮತ್ತು ಹೊಸ ಜೀವಿತಕ್ಕಾಗಿ ಆಗುವ ನಮ್ಮ *ಆತ್ಮೀಕ* ಪುನರುತ್ಥಾನ ನಡುವಿನ ಸಂಬಂಧದ ಬಗ್ಗೆ ಒತ್ತು ಕೊಡುತ್ತದೆ. ಪೌಲನು ರೋಮಾಪುರದಲ್ಲಿದ್ದ ಕ್ರೈಸ್ತರಿಗೆ ಬರೆದದ್ದೇನೆಂದರೆ,

> ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡಾ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶ್ಯವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ (6:4-6).

ಪೌಲನು ಎಫೆಸದವರಿಗೆ ಬರೆಯುವಾಗ, ಅವರ ಮಾನಸಾಂತರದ ಅನುಭವವನ್ನು ಹೀಗೆ ಸಾರಾಂಶಗೊಳಿಸಿದನು: "ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು (ದೇವರು) *ಕ್ರಿಸ್ತನೊಂದಿಗೆ* ಬದುಕಿಸಿದನು" (ಎಫೆಸ 2:5; ಒತ್ತಿ ಹೇಳಿದ್ದು ನನ್ನದು). ದೇವರ ಆಶೀರ್ವಾದಗಳು "ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬುದನ್ನೂ ನೀವು ತಿಳುಕೊಳ್ಳು ವಂತೆ ಅನುಗ್ರಹಿಸಲಿ. ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂದು ಕ್ರಿಸ್ತನಲ್ಲಿ ತೋರಿಬಂದಿದೆ. ಹೇಗಂದರೆ ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ ..." (ಎಫೆಸ 1:19, 20).

4. *ನಮಗೊಬ್ಬ ಜೀವಿಸುವ ರಕ್ಷಕನಿದ್ದಾನೆ.* ಒಮ್ಮೆ ನಾವು ನಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟ ಮೇಲೆ, ನಮಗೆ ಕ್ರೈಸ್ತಜೀವಿತವನ್ನು ನಡಿಸುವದಕ್ಕೆ ಸಹಾಯದ ಅಗತ್ಯವಿರುತ್ತದೆ. ನಮಗೊಬ್ಬ ರಕ್ಷಕನಿದ್ದು ನಮಗೋಸ್ಕರ "ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕವವನಾಗಿದ್ದಾನೆ" ಎಂಬದಾಗಿ ಪುನರುತ್ಥಾನವು ಘೋಷಿಸುತ್ತದೆ (ಇಬ್ರಿಯ 7:25). ನಮ್ಮ ಭಕ್ತಿಯು ಸತ್ತ ಉಪದೇಶವೊಂದರಲ್ಲಿ ಅಲ್ಲ, ಆದರೆ ಒಬ್ಬ ಜೀವಿಸುವ ವ್ಯಕ್ತಿಯಲ್ಲಿಯೇ.

ಯೇಸು ಸದಾಕಾಲವೂ ನಮ್ಮ ಸಂಗಡ ಇರುತ್ತೇನೆಂದು ವಾಗ್ದಾನ ಮಾಡಿದ್ದಾನೆ (ಮತ್ತಾಯ 28:20). ನಾವು ಒಟ್ಟಾಗಿ ಕೂಡಿಬರುವ ವೇಳೆ ಆತನು ನಮ್ಮ ಮಧ್ಯದಲ್ಲಿ ಇರುತ್ತೇನೆಂದು ಮಾತುಕೊಟ್ಟಿದ್ದಾನೆ (ಮತ್ತಾಯ 18:20). ಇಬ್ರಿಯ ಪುಸ್ತಕವು ಆತನು ನಮ್ಮ "ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕ"ನಾಗಿದ್ದು "ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ" ನಮಗೆ ಶೋದನೆಯಾದಾಗ ನಮ್ಮ ಸಹಾಯಕ್ಕೆ ಬರುತ್ತಾನೆಂದು ಹೇಳುತ್ತದೆ (ಇಬ್ರಿಯ 2:17; 4:15; 2:18). ಆತನ ಮೂಲಕವಾಗಿ, ನಾವು "ಕರುಣೆಯನ್ನೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವನ್ನೂ" ಪಡೆಯುತ್ತೇವೆ (ಇಬ್ರಿಯ 4:16).

ರೋಮಾಪುರದವರಿಗೆ ಬರೆದ ಪತ್ರಿಕೆಯ ಪ್ರಕಾರವಾಗಿ, ನಾವು ಯೇಸುವಿನ "ಮರಣದ ಮೂಲಕವಾಗಿ ದೇವರೊಂದಿಗೆ ಸಮಾಧಾನ ಮಾಡಲ್ಪಟ್ಟಿರುವದು" ಮಾತ್ರವಲ್ಲದೆ ನಮಗೆ "ಆತನ ಜೀವದಿಂದ ರಕ್ಷಣೆಯಾಯಿತು" (5:10). ಜೀವಿಸುವ ಮತ್ತು ನಮಗಾಗಿ ಕಾಳಜಿ ಹೊಂದಿರುವ ರಕ್ಷಕನಿಗಾಗಿ ದೇವರಿಗೆ ಸ್ತೋತ್ರವಾಗಲಿ!

5. *ಒಂದು ದಿನವು ಪ್ರತ್ಯೇಕಿಸಿಡಲ್ಪಟ್ಟಿದೆ.* ಒಂದು ವಿಶೇಷ ಉದ್ದೇಶಕ್ಕಾಗಿ ಒಂದು

ದಿನವನ್ನು ಪ್ರತ್ಯೇಕಿಸಿಡಲಾಗಿದೆ ಎಂದು ಪುನರುತ್ಥಾನವು ಘೋಷಿಸುತ್ತದೆ. ನಾನು "ಒಂದು ದಿನವು ವಿಶೇಷ ಉದ್ದೇಶಕ್ಕಾಗಿ ಪ್ರತ್ಯೇಕಿಸಿಡಲ್ಪಟ್ಟಿದೆ" ಎಂದು ನಾನು ಹೇಳಿದಾಗ, ನನ್ನ ತಾತ್ಪರ್ಯವು ವಿಭಿನ್ನವಾದ ಕ್ರೈಸ್ತ ಹಬ್ಬಕ್ಕಾಗಿ ವರ್ಷದಲ್ಲಿ ಒಂದು ಅಥವಾ ಎರಡು ದಿನಗಳನ್ನು ಪ್ರತ್ಯೇಕಿಸಿ ಇಡಲಾಗಿದೆ ಎಂಬುದಲ್ಲ (ನೋಡಿರಿ ಗಲಾತ್ಯ 4:10). ಅಲ್ಲದೆ ಹಳೆ ಒಡಂಬಡಿಕೆಯಲ್ಲಿ ಪ್ರತ್ಯೇಕಿಸಿಡಲ್ಪಟ್ಟ ವಾರದ ಏಳನೆಯ ದಿನವನ್ನು (ಸಬ್ಬತ್ ದಿನವನ್ನು) ಸಹ ಮನಸ್ಸಿನಲ್ಲಿಟ್ಟುಕೊಂಡು ಈ ಮಾತುಗಳನ್ನು ಹೇಳಲಿಲ್ಲ (ವಿಮೋಚನಕಾಂಡ 20:8-11; ಧರ್ಮೋಪದೇಶಕಾಂಡ 5:12-15).

ಬದಲಾಗಿ, ನಾನು ವಾರದ ಮೊದಲನೆಯ ದಿನವನ್ನು ಸೂಚಿಸಿ ಹೇಳಿದೆನು, ಆ ದಿನವನ್ನು ಭಾನುವಾರ ಎನ್ನುತ್ತೇವೆ. ವಾರದ ಮೊದಲ ದಿನದಂದು, ಆದಿ ಸಭೆಯು ಆರಾಧನೆಗಾಗಿ—ಕರ್ತನ ಭೋಜನವನ್ನು ಆಚರಿಸುವದಕ್ಕಾಗಿ (ಅಪೊಸ್ತಲರ ಕೃತ್ಯಗಳು 20:7) ಮತ್ತು ತಮ್ಮ ಕಾಣಿಕೆಗಳನ್ನು ಕೊಡುವದಕ್ಕೆ (1 ಕೊರಿಂಥ 16:2) ಕೂಡಿಬರುತ್ತಿದ್ದರು. ಅಪೊಸ್ತಲನಾದ ಯೋಹಾನನು ಮೊದಲ ದಿನವನ್ನು "ಕರ್ತನ ದಿನ" ಎಂದು ಕರೆದನು (ಪ್ರಕಟಣೆ 1:10).

ವಾರದ ಮೊದಲ ದಿನವು ಕ್ರೈಸ್ತರಿಗೆ ವಿಶೇಷವಾಗಿತ್ತು (ಮತ್ತು ಆಗಿದೆ)? ಯಾಕೆಂದರೆ ಕರ್ತನು ಮೊದಲ ದಿನದಂದು *ಎದ್ದು ಬಂದನು.*[174] ಮಾರ್ಕನು ನಮಗೆ ಹೇಳುವದೇನೆಂದರೆ, "*ವಾರದ ಮೊದಲನೆಯ ದಿನದ* ಬೆಳಿಗ್ಗೆ ಹೊತ್ತು ಮೂಡುವಾಗ ಅವರು [ಸ್ತ್ರೀಯರು] ಸಮಾಧಿಯ ಬಳಿಗೆ ಬಂದರು" (ಮಾರ್ಕ 16:2; ಒತ್ತಿ ಹೇಳಿದ್ದು ನನ್ನದು). ಅಲ್ಲಿದ್ದ ಒಬ್ಬ ದೇವದೂತನು ಹೀಗೆ ಹೇಳಿದನು, "ಬೆರಗಾಗಬೇಡಿರಿ. ಶಿಲುಬೆಗೆ ಹಾಕಲ್ಪಟ್ಟ ನಜರೇತಿನ ಯೇಸುವನ್ನು ಹುಡುಕುತ್ತಿರಲ್ಲವೇ. ಆತನು ಜೀವಿತನಾಗಿ ಎದ್ದಿದ್ದಾನೆ; ಇಲ್ಲಿ ಇಲ್ಲ. ಆತನನ್ನು ಇಟ್ಟಿದ್ದ ಸ್ಥಳವು ಇದೇ, ನೋಡಿರಿ" (ಮಾರ್ಕ 16:6). ಕ್ರೈಸ್ತರಿಗೆ, ಪ್ರತಿಯೊಂದು ಸೂರ್ಯೋದಯವು "ಪುನರುತ್ಥಾನದ ಮುಂಜಾನೆ" ಆಗಿರುತ್ತದೆ.

6. *ನಾವು ಸಹ ಎಬ್ಬಿಸಲ್ಪಡುವೆವು.* ನಾವು ಈಗ ಮುಂದೆ ಪುನರುತ್ಥಾನ ಸಂದೇಶಗಳಲ್ಲಿಯೇ ಅತ್ಯಂತ ರೋಮಾಂಚನಕಾರಿಯಾದ ಒಂದು ಸಂದೇಶಕ್ಕೆ ಬರುತ್ತೇವೆ: ಅದು ಮುಂದೊಂದು ದಿನ ನಮ್ಮ ದೇಹಗಳು ಸಹ ಸತ್ತವರೊಳಗಿಂದ ಎಬ್ಬಿಸಲ್ಪಡುತ್ತವೆ! ಬಹಳ ಕಾಲದ ಹಿಂದೆ, ಯೋಬನು ಹೀಗೆ ಕೇಳಿದ್ದನು, "ಒಬ್ಬ ಮನುಷ್ಯನು ಸತ್ತು ಪುನಃ ಬದುಕಾನೇ?" (ಯೋಬ 14:14). ದೇವರ ಉತ್ತರವು "ಹೌದು, ಯಾಕೆಂದರೆ ಯೇಸು ಎಬ್ಬಿಸಲ್ಪಟ್ಟನು!" ಎಂದಿರುತ್ತದೆ. ಈ ಸತ್ಯವು 1 ಕೊರಿಂಥ 15:20-26 ರಲ್ಲಿ ಖಚಿತಪಡಿಸಲ್ಪಡುತ್ತದೆ:

> ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮಫಲವಾದನು. ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು . . . . ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವದು

ನಾವು “ಒಳ್ಳೇದನ್ನು” ಮಾಡಿದ್ದರೆ “ಜೀವಕ್ಕಾಗಿ ಪುನರುತ್ಥಾನವಾಗುವದು” ; “ಕೆಟ್ಟದ್ದನ್ನು” ನಡಿಸಿದವರಿಗೆ “ತೀರ್ಪಿಗಾಗಿ ಪುನರುತ್ಥಾನವಾಗುವದು” (ಯೋಹಾನ 5:29)—ಆದರೆ ನಾವೆಲ್ಲರೂ ಎಬ್ಬಿಸಲ್ಪಡುವೆವು. ಮರಣವು ಇನ್ನು ಮೇಲೆ ಒಂದು ಗೋಡೆಯಾಗಿರುವದಿಲ್ಲ, ಆದರೆ ಒಂದು ಬಾಗಲು ಆಗಿರುವದು. ಇದು ನಿಜ ಎಂಬದನ್ನು ಪುನರುತ್ಥಾನವು ನಮಗೆ ನಿಶ್ಚಯಗೊಳಿಸುವದು!

7. *ದೇವರು ತನ್ನ ಮಾತಿನಂತೆ ನಡೆದುಕೊಳ್ಳುತ್ತಾನೆ.* ಗಮನಿಸತಕ್ಕ ಇನ್ನೊಂದು ಸಂದೇಶವೆಂದರೆ, ಎಲ್ಲಾ ಮನುಷ್ಯರು ಸಹ ತಿಳಿದುಕೊಳ್ಳಬೇಕಾದ ಸಾಮಾನ್ಯ ಸತ್ಯ: ದೇವರು ತನ್ನ ಮಾತಿನಂತೆ ನಡೆದುಕೊಳ್ಳುತ್ತಾನೆಂಬದನ್ನು ಪುನರುತ್ಥಾನವು ಘೋಷಿಸುತ್ತದೆ. ಕೆಲವು ಬೋಧಕರು ಹೇಳುವಂತೆ, “ದೇವರು ನುಡಿದಂತೆ ನಡೆಯುತ್ತಾನೆ ಮತ್ತು ನಡೆದಂತೆಯೇ ನುಡಿಯುತ್ತಾನೆ!”

ಯೇಸು ತನ್ನ ಪುನರುತ್ಥಾನದ ಕುರಿತು ಮುಂಚೆಯೇ ತಿಳಿಸಿದ್ದು ಆತನನ್ನು ಕೇಳಿಸಿಕೊಳ್ಳುವವರ ಮೇಲೆ ಪ್ರಭಾವಬೀರಿತು, ವಿಶೇಷವಾಗಿ ದೇವಾಲಯದ ಕುರಿತು ಆತನು ಹೇಳಿದ ಅಂತರಾರ್ಥದ ಮಾತುಗಳು: “ಯೇಸು—ಈ ದೇವಾಲಯವನ್ನು ಕೆಡವಿರಿ; ನಾನು ಮೂರು ದಿನದಲ್ಲಿ ಅದನ್ನು ಎಬ್ಬಿಸುವೆನು ಅಂದನು” ; “ಆದರೆ ಆತನು ತನ್ನ ದೇಹವೆಂಬ ದೇವಾಲಯದ ವಿಷಯವಾಗಿ ಈ ಮಾತನ್ನು ಹೇಳಿದ್ದನು” (ಯೋಹಾನ 2:19, 21). ಯೇಸು ಕಾಯಫನ ಮುಂದೆ ವಿಚಾರಣೆಯಲ್ಲಿರುವಾಗ, ಒಬ್ಬ ಸುಳ್ಳು ಸಾಕ್ಷಿಗಾರನು ಆ ಭವಿಷ್ಯವನ್ನು ಉಲ್ಲೇಖಿಸಿದ್ದನು (ಮತ್ತಾಯ 26:61). ಯೇಸು ಶಿಲುಬೆಯ ಮೇಲಿದ್ದಾಗ, ಭಕ್ತಿಹೀನರು ಕೂಗಿದರು, “ದೇವಾಲಯವನ್ನು ಕೆಡವಿ ಮೂರು ದಿನಗಳಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ; ನೀನು ದೇವರ ಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ!” (ಮತ್ತಾಯ 27:40; ನೋಡಿರಿ ಅಪೊಸ್ತಲರ ಕೃತ್ಯಗಳು 6:14).

ಯೆಸುವಿನ ವೈರಿಗಳು ಆತನು ಮುಂತಿಳಿಸಿದ್ದನ್ನು ನಂಬಲಿಲ್ಲ; ಹಾಗಿದ್ದರೂ, ಅದು ನೆರವೇರಿತು. ಆತನ ದೇಹವು—ಆತನ ಶಾರೀರಿಕ ದೇವಾಲಯ—ಶಿಲುಬೆಯ ಮೇಲೆ ಸತ್ತಿತು, ಮತ್ತು ಮೂರನೆಯ ದಿನದಲ್ಲಿ, ಆ ದೇಹವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿತು. ಕರ್ತನು ಒಂದು ಸಂಗತಿಯು ಹೀಗೆಂದು ಹೇಳಿದರೆ, ಅದು ಹಾಗೆಯೇ. ನೀನು ಅದನ್ನು ನಂಬಬಹುದು!

*ಮುಕ್ತಾಯ.* ಕೆಲವರು ತಾವು ಪುನರುತ್ಥಾನದಲ್ಲಿ ನಂಬುತ್ತೇವೆ ಎಂದು ಹೇಳುತ್ತಾರೆ—ಮತ್ತು ಅದರ ಮೇಲೆ ಹೆಚ್ಚಿನ ಮಹತ್ವವನ್ನು ವರ್ಷಕ್ಕೊಂದು ಬಾರಿ ನೀಡುತ್ತಾರೆ. ಅದೇ ಸಮಯದಲ್ಲಿ ಅವರು ಪುನರುತ್ಥಾನದಿಂದ ಘೋಷಿಸಲ್ಪಟ್ಟ ಮಹತ್ವದ ಸತ್ಯಗಳನ್ನು ಅಲ್ಲಗಳೆಯುತ್ತಾರೆ:

> ಪುನರುತ್ಥಾನವು ಯೇಸುವನ್ನು ದೇವಕುಮಾರನೆಂದು ಘೋಷಿಸುತ್ತದೆ—ಆದರೆ ಅನೇಕರು ಆತನ ದೈವತ್ವವನ್ನು ಅಲ್ಲಗಳೆಯುತ್ತಾರೆ.
>
> ಪುನರುತ್ಥಾನವು ದೇವರ ಕೋಪಾಗ್ನಿಯನ್ನು ಶಿಲುಬೆಯು ಸಂತೃಪ್ತಗೊಳಿಸಿತು ಎಂದು ಘೋಷಿಸುತ್ತದೆ—ಆದರೆ ಅನೇಕರು ಪಾಪದ ವಾಸ್ತವಿಕತೆಯನ್ನು ಮತ್ತು ದೇವರು ಪಾಪವನ್ನು ದಂಡಿಸಲೇಬೇಕು ಎಂಬ ಸತ್ಯವನ್ನು

ಅಲ್ಲಗಳೆಯುತ್ತಾರೆ.

ಪುನರುತ್ಥಾನದ ಮೂಲಕ ನಾವು ರಕ್ಷಣೆ ಹೊಂದಬಲ್ಲೆವು, ನಮ್ಮ ನಂಬಿಕೆಯು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಲ್ಲಿ ಭಾಗಿಯಾಗುವಂತೆ ನಮ್ಮನ್ನು ದೀಕ್ಷಾಸ್ನಾನದಲ್ಲಿ ನಡಿಸುತ್ತದೆಂದು ಘೋಷಿಸುತ್ತದೆ (6:3, 4; ಗಲಾತ್ಯ 3:26, 27)—ಆದರೆ ಕೆಲವರು ದೀಕ್ಷಾಸ್ನಾನದ ಅವಶ್ಯಕತೆಯನ್ನು ಅಲ್ಲಗಳೆಯುತ್ತಾರೆ, ಇನ್ನು ಕೆಲವರು ದೀಕ್ಷಾಸ್ನಾನದಲ್ಲಿ ಯೇಸುವನ್ನು ಧರಿಸಿಕೊಳ್ಳಲು ನಿರಾಕರಿಸುತ್ತಾರೆ.

ಪುನರುತ್ಥಾನವು ನಮಗೊಬ್ಬ ಜೀವಿಸುವ ರಕ್ಷಕನಿದ್ದಾನೆ, ಆತನು ನಮಗಾಗಿ ವಿಜ್ಞಾಪನೆ ಮಾಡುತ್ತಾನೆ ಎಂದು ಘೋಷಿಸುತ್ತದೆ—ಆದರೆ ದೇವರು ಜೀವಿತಕ್ಕಾಗಿ ವೈಯಕ್ತಿಕ ಬಲಕೊಡುತ್ತಾನೆಂಬ ವಿಚಾರವನ್ನು ಅನೇಕರು ಅಲ್ಲಗಳೆಯುತ್ತಾರೆ.

ಪುನರುತ್ಥಾನವು ಆರಾಧನೆಗಾಗಿ ಒಂದು ವಿಶೇಷ ದಿನ, ವಾರದ ಮೊದಲ ದಿನವನ್ನು ಪ್ರತ್ಯೇಕಿಸಡಲಾಗಿದೆ ಎಂದು ಘೋಷಿಸುತ್ತದೆ-ಆದರೆ ಅನೇಕರು ವರ್ಷದಲ್ಲಿ ಕೆಲವೇ ದಿನಗಳಿಗೆ ಮಾತ್ರ ಹಾಜರಾಗುತ್ತಾರೆ.

ಪುನರುತ್ಥಾನವು ಒಂದು ದಿನ ನಾವು ಎಬ್ಬಿಸಲ್ಪಡುವೆವು ಎಂದು ಘೋಷಿಸುತ್ತದೆ— ಆದರೆ ಅನೇಕರು ದೇಹದ ಪುನರುತ್ಥಾನವನ್ನು ಅಲ್ಲಗಳೆಯುತ್ತಾರೆ.

ಪುನರುತ್ಥಾನವು ದೇವರು ತನ್ನ ಮಾತನ್ನು ಕಾಪಾಡಿಕೊಳ್ಳುತ್ತಾನೆಂದು ಘೋಷಿಸುತ್ತದೆ—ಆದರೆ ದೇವರ ವಾಕ್ಯದ ಉಪದೇಶವನ್ನು ಅಣಕಿಸುತ್ತಾರೆ.

ವರ್ಷಗಳ ಹಿಂದೆ, ಬ್ರಿಟನ್.ನಲ್ಲಿರುವ 760 ವರ್ಷಗಳಷ್ಟು ಹಳೆದಾದ ಅತ್ಯಂಥ ಬೃಹತ್ wing of York Minster ಎಂಬ Gothic cathedral ಬೆಂಕಿ ಬಿದ್ದು ನಾಶಮಾಡಿದ್ದು ಇಡೀ ಇಂಗ್ಲೆಂಡ್.ನ್ನು ಶೋಕದಲ್ಲಿ ಮುಳುಗಿಸಿತ್ತು. ಈ ಪ್ರಾಚೀನ ಕ್ಯಾಥಡ್ರೆಲ್ ಪ್ರತಿ ವರ್ಷವೂ ಅಸಂಖ್ಯಾತ ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು. ಈ ಬೆಂಕಿ ಬಿದ್ದದ್ದು ದುರಂತವಾಗಿತ್ತೆಂಬುದು ನಿಜವೇ, ಆದರೆ ಅದಕ್ಕೆ ಸ್ವಲ್ಪ ದಿನಗಳ ಮುಂಚೆ ಏನು ಸಂಭವಿಸಿತೆಂಬುದು ಇನ್ನೂ ದುರಂತಕರವಾಗಿತ್ತು: ಆ ಕಟ್ಟಡದಲ್ಲಿ, ಆಡಂಭರದ ಬಿರುದುಳ್ಳ "Rev. David Jenkins" ಎಂಬವನು ಪ್ರತಿಷ್ಠಿಸಲ್ಪಟ್ಟಿದ್ದ "Bishop of Durham" ಆಗಿದ್ದನು—ಆತನು ಸಾರ್ವಜನಿಕವಾಗಿಯೇ ತಾನು ಯೇಸು ಕನ್ಯೆಯಲ್ಲಿ ಹುಟ್ಟಿದನೆಂಬದನ್ನು ಮತ್ತು ಆತನು ನಿಜವಾಗಿಯೂ ಸತ್ತವರೊಳಗಿಂದ ಎದ್ದನು ಎಂಬದನ್ನು ನಂಬುವದಿಲ್ಲ ಎಂದು ಹೇಳಿದ ಬಳಿಕವೂ ಈ ಸ್ಥಾನದಲ್ಲಿದ್ದನು![175]

ನೀವು ಪುನರುತ್ಥಾನದಲ್ಲಿ ನಂಬುತ್ತೀರಾ? ಹಾಗಾದರೆ ಅದನ್ನು ಸಾರಿರಿ! ನಂತರ ಅದರಂತೆಯೇ ಜೀವಿಸಿರಿ!

ನೀವು ಪುನರುತ್ಥಾನದಲ್ಲಿ ನಂಬುವದಾದರೆ ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾಗಿದ್ದಲ್ಲಿ, ಸಂಕೋಚಪಡಬೇಡಿರಿ. ದೇವರ ಶಕ್ತಿಯು ಹೋಗಿ ತನ್ನ

ಮಗನ ಜೀವವಿಲ್ಲದ ದೇಹದಲ್ಲಿ ಜೀವವನ್ನು ತುಂಬಿ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ಹಾಗೆಯೇ, ದೇವರ ಶಕ್ತಿ ಮತ್ತು ಪ್ರೀತಿ ನಿಮಗೆ ಹೊಸ ಜೀವವನ್ನು ಕೊಡಬಲ್ಲದು—ಒಂದು ವೇಳೆ ನೀನು ಆತನ ಚಿತ್ತಕ್ಕೆ ಒಳಗಾಗುವದಕ್ಕೆ ಸಿದ್ಧನಿರುವದಾದರೆ.

## "ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧನಾಗಿದ್ದೇನೆ" (1:8-15)

ವಾಚಕರಿಗಾಗಿ ಕೃತಜ್ಞತೆ ಅರ್ಪಿಸಿದ ಕೊನೆಯಲ್ಲಿ, ಆತನು ಈ ಬಲವಾದ ಹೇಳಿಕೆಯನ್ನು ನೀಡಿದನು: "ಹೀಗಿರುವದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧವಾಗಿದ್ದೇನೆ" (1:15). ವಾಕ್ಯಭಾಗವನ್ನೊಮ್ಮೆ ನೆನಪಿಸಿಕೊಳ್ಳುವದಾದರೆ, ಪೌಲನು ಏಕೆ ರೋಮಾಪುರಕ್ಕೆ ಹೋಗಬೇಕೆಂದು ಬಯಸಿದನೆಂಬದಕ್ಕೆ ಹಲವಾರು ಪ್ರಮುಖ ಕಾರಣಗಳಿರುತ್ತವೆ.[176]

ಯಾಕೆಂದರೆ ಆತನು ಪ್ರಶಂಸಿಸಿದ *ನಂಬಿಕೆ* ನಿಮಿತ್ತ (1:8–10).
ಯಾಕೆಂದರೆ ಆತನು ಒದಗಿಸಬಹುದಾಗಿದ್ದ *ದೃಢತೆಯ* ನಿಮಿತ್ತ (1:11).
ಯಾಕೆಂದರೆ ಆತನಿಗೆ ಅಗತ್ಯವಿದ್ದ *ಅನ್ಯೋನ್ಯತೆಯ* ನಿಮಿತ್ತ (1:12).
ಯಾಕೆಂದರೆ ಆತನು ಇಚ್ಛಿಸಿದ *ಫಲದ* ನಿಮಿತ್ತ (1:13).
ಯಾಕೆಂದರೆ ಆತನಿಗಿದ್ದ *ಗುರಿಯ* ನಿಮಿತ್ತ (1:14).

ಇವುಗಳು ಸಾಮ್ರಾಜ್ಯದ ನಗರದಲ್ಲಿ ಸುವಾರ್ತೆಯನ್ನು ಸಾರಬೇಕೆಂದು ಆತನಿಗೆ ದೃಢಸಂಕಲ್ಪವನ್ನು ನೀಡಿದ್ದವು.

ರೋಮಾಪುರಕ್ಕೆ ಹೋಗಬೇಕೆಂಬ ಪೌಲನ ಬಲವಾದ ಹಂಬಲದ ಬಗ್ಗೆ ನಾವು ಓದುವಾಗ, ನಾವು ನಮ್ಮನ್ನು ಕೇಳಿಕೊಳ್ಳತಕ್ಕದ್ದೇನೆಂದರೆ, "ಆತನಿಗಿದ್ದ ಹಾಗೆಯೇ ಸುವಾರ್ತೆಯನ್ನು ಸಾರಬೇಕೆಂಬ ಹಂಬಲ ನಮಗೆ ಇರುತ್ತದೋ?" ಇತರರಿಗೆ ಉಪದೇಶಿಸುವದನ್ನು ಪೌಲನು ತನ್ನ *ಕರ್ತವ್ಯವೆಂದು* ಪರಿಗಣಿಸಿದ್ದನೆಂದು ಹೇಳಲಾಗುತ್ತದೆ, ಆದರೆ ನಮ್ಮಲ್ಲಿ ಅನೇಕರಿಗೆ ಅದು *ಆಯ್ಕೆಯ ವಿಷಯವಾಗಿದೆ.*

*ನಮಗಿರುವ ಋಣದ ಬಗ್ಗೆ ನಮಗೆ ಗೊತ್ತಿದೆಯೋ?* ನಾವು ಸಹ ಕಳೆದು ಹೋಗಿರುವವರಿಗೆ ಈ ಋಣವನ್ನು ಹೊಂದಿದ್ದೇವೆಂಬದನ್ನು ಅರ್ಥಮಾಡಿಕೊಳ್ಳಬೇಕಿದೆ. ಪೌಲನ ಹಾಗೆ, ನಾವು ಬಹಳಷ್ಟು ಜನರಿಗೆ ಬಹಳಷ್ಟು ಸಾಲಗಾರರಾಗಿದ್ದೇವೆ: ನಮಗೆ ಉಪದೇಶಿಸಿದ ಮತ್ತು ನಮ್ಮನ್ನು ಈ ಸ್ಥಿತಿಗೆ ತಂದಿರುವವರೆಲ್ಲರಿಗೆ ಸಾಲಗಾರರು! ಎಲ್ಲಕ್ಕಿಂತ ಮೇಲಾಗಿ, "[ನಮ್ಮನ್ನು] ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ಸಮರ್ಪಿಸಿಕೊಂಡಾತನಿಗೆ" ನಾವು ನಿತ್ಯಕಾಲಕ್ಕೂ ಋಣಸ್ಥರಾಗಿದ್ದೇವೆ (ಎಫೆಸ 5:2). ಆತನೇ ನಮ್ಮ ವಶದಲ್ಲಿ ಸುವಾರ್ತೆಯನ್ನು ಒಪ್ಪಿಸಿರುತ್ತಾನೆ—ಲೋಕಕ್ಕೆಲ್ಲಾ ಅದನ್ನು ಸಾರಬೇಕೆಂಬುದಕ್ಕಾಗಿ (ಮತ್ತಾಯ 28:18–20; ಮಾರ್ಕ 16:15, 16). ನಮ್ಮ ನೆರೆಯವನು ಹಸಿವೆಯಿಂದ ಬಳಲುತ್ತಿದ್ದರೆ ಮತ್ತು ನಮ್ಮಲ್ಲಿ ಆಹಾರವಿದ್ದರೆ, ಆತನೊಂದಿಗೆ ಹಂಚಿಕೊಳ್ಳುವದು ನಮ್ಮ ಕರ್ತವ್ಯವಲ್ಲವೋ? ನಮ್ಮ ಬಳಿಯಲ್ಲಿ ಒಂದು ಭಯಂಕರವಾದ ವ್ಯಾಧಿಗೆ ಪರಿಹಾರದ ಮದ್ದು ಇರುವದಾದರೆ, ಬಾಧೆಪಡುತ್ತಿರುವ ಜಗತ್ತಿಗೆ ಅದನ್ನು ಕೊಡುವ ಜವಾಬ್ದಾರಿ ನಮಗಿರುವದಿಲ್ಲವೋ? ಮನುಷ್ಯರ ಆತ್ಮಗಳನ್ನು ರಕ್ಷಿಸಬಲ್ಲಂಥದ್ದನ್ನು

ಅವರಿಗೆ ಸಾರುವ ಹೊಣೆಗಾರಿಕೆ ಇನ್ನು ಎಷ್ಟೋ ಅಧಿಕವಾಗಿರಬೇಕಲ್ಲವೇ!

ನನ್ನ ಮೊದಲ ಪೂರ್ಣಾವದಿ ಪ್ರಸಂಗ ಸೇವೆಯು Oklahoma Cityಯ ಒಂದು ಗ್ರಾಮದಲ್ಲಿ ಆಗಿತ್ತು. ಆ ದಿನಗಳಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ಇಬ್ಬರಲ್ಲಿ ಒಬ್ಬನು ಡಾಕ್ಟರ್ ಮತ್ತು ಆತನ ಹೆಂಡತಿ, ಅವರ ಹೆಸರು Bakers. ಅವರ ಸ್ವರಗಳಲ್ಲಿ ಆಶ್ಚರ್ಯವುಳ್ಳವರಾಗಿ ನನಗೆ ಹೇಳಿದ್ದೇನೆಂದರೆ, "ನಮಗೆ ಬಹಳ ಆಶ್ಚರ್ಯವುಂಟು ಮಾಡುವ ಸಂಗತಿಯೆಂದರೆ ಸತ್ಯವನ್ನು ತಿಳಿಯುವ ಅವಕಾಶವನ್ನೇ ಕಾಣದ ಎಷ್ಟೋ ಜನರಿರುವಾಗ, ನಮಗೆ ಈ ಅವಕಾಶ ಸಿಕ್ಕಿರುತ್ತದೆ." ಆವರು ಇನ್ನೂ ಹೇಳಿದ್ದೇನೆಂದರೆ, "ನಾವು ಇಷ್ಟೊಂದು ಆಶೀರ್ವದಿಸಲ್ಪಟ್ಟಿದ್ದರಿಂದ, ನಮಗೆ ಸಾದ್ಯವಾದಷ್ಟು ಇತರ ಜನರಿಗೆ ಇದನ್ನು ಸಾರುವ ದೊಡ್ಡ ಜವಾಬ್ದಾರಿ ಇರುತ್ತದೆ."

ನಮ್ಮ ಋಣವು *ಎಲ್ಲಾ* ಜನರಡೆಗೆ ಇರುತ್ತದೆಂಬದನ್ನು ನಾವು ನೆನಪಿಟ್ಟುಕೊಳ್ಳತಕ್ಕದ್ದು. ನಾವು ಸಹಜವಾಗಿ "ನಮ್ಮ ಹಾಗೆ ಇರುವವರ" ಸುತ್ತಲು ಇರುವದಕ್ಕೆ ಹೆಚ್ಚು ಆರಾಮದಾಯಕತೆ ಕಾಣುತ್ತೇವೆ, ಆದರೆ ನಮ್ಮ ಕಾಳಜಿ ಅಷ್ಟಕ್ಕೆ ಮಾತ್ರವೇ ನಿಲ್ಲಲು ಸಾಧ್ಯವಿಲ್ಲ—ನಿಲ್ಲಕೂಡದು. ನಾವು "ಗ್ರೀಕರಿಗೂ ಇತರ ಜನಗಳಿಗೂ ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ" ನಮ್ಮ ಮೇಲೆ ಇದೆ ಎಂಬುದರ ದೃಷ್ಟಿಯನ್ನು ಕಳೆದುಕೊಳ್ಳಬಾರದು (1:14).

ಸಾಲ ತೀರಿಸಲ್ಪಡತಕ್ಕದ್ದು ಎಂಬದಕ್ಕೆ ಜಾಗತಿಕ ಒಪ್ಪಂದವಿರುತ್ತದೆ. USAಯಲ್ಲಿ, ತಮ್ಮ ಸಾಲವನ್ನು ತೀರಿಸುವದರಿಂದ ತಪ್ಪಿಸಿಕೊಳ್ಳುವವರಿಗಾಗಿ ಮಾನ ಕಳೆಯುವಂಥ ಹೆಸರುಗಳಿರುತ್ತವೆ—ಉದಾಹರಣೆ, "deadbeats." Ian MacLaren ಹೇಳಿದ್ದೇನೆಂದರೆ, "ನಮ್ಮ ಸಾಲಗಳನ್ನು ತೀರಿಸುವದು ನಮಗೆ ಬಹಳ ಘನ ತರುವ ಗುಣವಲ್ಲ. ನಾವು ಅದಕ್ಕಾಗಿ ಸ್ತುತಿಯನ್ನು ಎದುರು ನೋಡಬಾರದು. ಮತ್ತು ಸಾಲ ತೀರಿಸುತ್ತೇವೋ ಇಲ್ಲವೋ ಎಂಬದನ್ನು ತೀರ್ಮಾನಿಸುವ ಸ್ವಾತಂತ್ರ್ಯವೂ ನಮಗಿಲ್ಲ. ನಾವು ತೀರಿಸದಿದ್ದರೆ ಅಪ್ರಾಮಾಣಿಕರಾಗಿದ್ದೇವೆಂದು ಅರ್ಥವಷ್ಟೆ."[177] ಕಳೆದುಹೋಗಿರುವ ವರಿಗೆ ನಾವು ಋಣಸ್ಥರಾಗಿದ್ದೇವೆಂದು ಭಾವಿಸುತ್ತೇವೋ? ಆ ಸಾಲವನ್ನು ತೀರಿಸುವದಕ್ಕೆ ನಾವು ಶ್ರಮಿಸುತ್ತಿದ್ದೇವೋ?

*ನಾವು ಸುವಾರ್ತೆಯನ್ನು ಸಾರುವುದಕ್ಕೆ ಸಿದ್ಧರಾಗಿದ್ದೇವೋ?* ನಾವು ಋಣಸ್ಥರಾಗಿದ್ದೇವೆಂದು ಅರಿತವರಾಗಿರಬಹುದು; ನಾವು ಇತರರಿಗೆ ಉಪದೇಶಿಸುವದಕ್ಕೆ ಜವಾಬ್ದಾರರೆಂದು ಭಾವಿಸಬಹುದು. ಹೇಗೂ, ಪೌಲನ ಹಾಗೆ, ಅದನ್ನು ಮಾಡುವದಕ್ಕೆ ನಾವು ಸಿದ್ಧರಿದ್ದೇವೋ? ಅನೇಕ ವೇಳೆ ಹೆಚ್ಚು ಜವಾಬ್ದಾರಿರುವವರೇ ಕಡಿಮೆ ಹಂಬಲವುಳ್ಳವರಾಗಿ ಕಾಣುತ್ತಾರೆ. ನಾವು ಸಂಕೋಚ, ಅಂಜಿಕೆ ಇರಬಹುದು, ಅಥವಾ ನಿರ್ಲಕ್ಷದಿಂದ ಇರಬಹುದು—ಹಂಬಲವೊಂದನ್ನು ಬಿಟ್ಟು ಬೇರೆಲ್ಲಾ ಆಗಿರುತ್ತೇವೆ.

ನಾವು ಅನೇಕ ಕಾರಣಗಳಿಗಾಗಿ ಇತರರಿಗೆ ಕಲಿಸಲು ಹಂಬಲವುಳ್ಳವರಾಗಿರಬೇಕು. ಸುವಾರ್ತೆಯು *ಬೇರೆಯವರಿಗೆ ಏನು* ಮಾಡಬಲ್ಲದು ಎಂಬದಕ್ಕೋಸ್ಕರ ಅದನ್ನು ಸಾರುವ ಹಂಬಲ ನಮಗಿರಬೇಕು. ಅದು ಅವರ ಆತ್ಮಗಳನ್ನು ರಕ್ಷಿಸುವದು. ಅದು ಅವರಿಗೆ ಈ ಜೀವನದಲ್ಲಿ ಶಕ್ತಿಯನ್ನು ಕೊಡುವದು. ಮತ್ತು ಅವರನ್ನು ಮುಂಬರುವ ಜೀವಿತಕ್ಕೆ ಸಿದ್ಧಗೊಳಿಸುವದು.

ಒಬ್ಬ ಬೋಧಕನು ಒಂದು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದನು. ಆಗ ಒಬ್ಬ ವ್ಯಕ್ತಿಯು ರೋಗಿಯ ಹಾಸಿಗೆ ಬಳಿಯಿಂದ ಚಿಕಿತ್ಸೆಯ ಚಾರ್ಟ್ ಹಿಡಿದುಕೊಂಡು ಆಸ್ಪತ್ರೆಯ ಆವರಣದೊಳಗೆ ಓಡಿ ಬಂದನು. ಆತನು ಬೋಧಕನ ಕೈಯನ್ನು ಎಳೆದು ಅವನಿಗೆ ಚಾರ್ಟ್ ತೋರಿಸಿ ಹೀಗೆ ಹೇಳಿದನು, "ನೋಡಿಲ್ಲಿ! ಆಕೆಯ ಜ್ವರವು ಕಡಿಮೆಯಾಗುತ್ತಿದೆ!" ಆ ಮನುಷ್ಯನು ಯಾರು ಅಥವಾ ರೋಗಿಯು ಯಾರೆಂಬುದು ಈ ಬೋಧಕನಿಗೆ ಗೊತ್ತೇ ಇರಲಿಲ್ಲ. ಆತನು ಪುನಃ ಎಂದೂ ಆ ಮನುಷ್ಯನನ್ನು ನೋಡಲೇ ಇಲ್ಲ ಆದರೆ ಆ ಮನುಷ್ಯನು ಎಷ್ಟೊಂದು ಮೈಮರೆತವನಾಗಿ, ದಾರಿಯಲ್ಲಿ ಸಿಕ್ಕ ಮೊದಲ ವ್ಯಕ್ತಿಯು ಯಾರೆಂಬ ಪರಿಚಯವೇ ಇಲ್ಲದಿದ್ದರೂ ಆ ಶುಭವಾರ್ತೆಯನ್ನು ತಿಳಿಸುವ ಆತುರದ ಆ ದೃಶ್ಯವಂತೂ ಬೋಧಕನ ಮನಸ್ಸಿನಿಂದ ಮರೆಯುವದಕ್ಕೆ ಸಾಧ್ಯವಾಗಲಿಲ್ಲ.[178]

ಅದೇ ರೀತಿ ನಾವು ಸಹ ಸುವಾರ್ತೆಯು ನಮಗೆ ಮಾಡುವ ಕಾರ್ಯವು ಎಂತಹದ್ದೆಂಬುದಾಗಿ ಬೇರೆಯವರಿಗೆ ಅದನ್ನು ಹಂಚಿಕೊಳ್ಳುವದಕ್ಕೆ ಅಷ್ಟೇ ಹಂಬಲಿಸಬೇಕು. ನಮ್ಮಲ್ಲಿ ಉಂಟಾಗುವ ಸಂಗತಿಗಳೆಂದರೆ . . .

> . . . ಕರ್ತನು ಮಾಡಿರುವ ಕಾರ್ಯಕ್ಕಾಗಿ ಹೆಚ್ಚು ಕೃತಜ್ಞತೆಯುಳ್ಳವರಾಗುತ್ತೇವೆ.
>
> . . . ಆತ್ಮಗಳು ರಕ್ಷಿಸಲ್ಪಡುವದನ್ನು ಮತ್ತು ಬಲಗೊಳ್ಳುವದನ್ನು ಕಂಡು ಆನಂದವಾಗುತ್ತದೆ.
>
> . . . ಕರ್ತನು ನಮಗೆ ಆಜ್ಞಾಪಿಸಿದ್ದನ್ನು ಮಾಡುತ್ತಿದ್ದೇವೆಂಬ ದೊಡ್ಡ ತೃಪ್ತಿ ನಮ್ಮಲ್ಲುಂಟಾಗುವದು.
>
> . . . ಪೌಲನು ಮತ್ತು ಇತರರ ಹೃದಯಗಳು ಕಳೆದುಹೋದವರಿಗಾಗಿ ವೈರಾಗ್ಯದಿಂದ ಉರಿದವು.

## ಒಂದು ಕ್ರಾಂತಿಕಾರಿ ಪುಸ್ತಕ (1:8-15)

ಇಬ್ಬರು ಚಿಕ್ಕ ಹುಡುಗಿಯರು ಬೈಬಲ್.ನಲ್ಲಿ ಯಾವದು ಕಡೇ ಪುಸ್ತಕ ಎಂಬದಾಗಿ ವಾಗ್ವಾದ ಮಾಡುತ್ತಿದ್ದರು. ಒಬ್ಬಳು ಹೇಳಿದಳು, "ತಿಮೊಥೆ ಪುಸ್ತಕವು ಕೊನೆಯದ್ದೆಂದು ಅನ್ನಿಸುತ್ತದೆ." ಮತ್ತೊಬ್ಬ ಹುಡುಗಿ ತನ್ನ ತಲೆಯನ್ನು ಅಲ್ಲಾಡಿಸಿ, "ಅದು ತಿಮೊಥೆ ಪುಸ್ತಕದೊಂದಿಗೆ ಅಂತ್ಯಗೊಳ್ಳುವದಿಲ್ಲ. Revolutions (ಕ್ರಾಂತಿಗಳು) ಪುಸ್ತಕದೊಂದಿಗೆ ಅಂತ್ಯವಾಗುತ್ತದೆ"[179] ಅಂದಳು. ಬೈಬಲ್. Revolutions (ಕ್ರಾಂತಿಗಳು) ಪುಸ್ತಕದಿಂದ ಅಂತ್ಯವಾಗದಿರಬಹುದು ಆದರೆ ಅದೊಂದು ಕ್ರಾಂತಿಕಾರಿ ಪುಸ್ತಕವಂತೂ ಹೌದು! ರೋಮಾಪುರ ಪುಸ್ತಕವು ಸಹ ಒಂದು ಕ್ರಾಂತಿಕಾರಿ ಪುಸ್ತಕ. ಒಮ್ಮೆ ನಾವು ಅದರ ಸಂದೇಶವೇನೆಂದು ಗ್ರಹಿಸಿಕೊಂಡು ಅದನ್ನು ನಮ್ಮ ಹೃದಯಗಳಿಗೆ ಅನ್ವಯಿಸಿಕೊಂಡರೆ, ನಾವು ಸಹ, ಇತರರಿಗೆ ಸುವಾರ್ತೆಯನ್ನು ಕಲಿಸಬೇಕೆಂಬ ಹಂಗಿನವರಾಗಿದ್ದೇವೆಂದು ಭಾವಿಸಿಕೊಳ್ಳುವೆವು ಮತ್ತು ನಾವು ಆ ಕೆಲಸವನ್ನು ಉತ್ಸಾಹದಿಂದ ಮಾಡುವವ ರಾಗುತ್ತೇವೆ!

## ಸುವಾರ್ತೆಯನ್ನು ಸಾರುವದು (1:8-15)

ಈ ವಾಕ್ಯಭಾಗವು ಸ್ವತಃ ವಿವಿಧ ಅನ್ವಯಿಕೆಗಳನ್ನು ಒದಗಿಸುತ್ತದೆ. ನಾನು ಅನೇಕ ಸಂದರ್ಭಗಳಲ್ಲಿ ಸುವಾರ್ತಿಕ ಸೇವಾಕಾರ್ಯಗಳನ್ನು ಪ್ರೋತ್ಸಾಹಿಸುವದಕ್ಕಾಗಿ ಈ ವಾಕ್ಯಭಾಗವನ್ನು ಉಪಯೋಗಿಸಿದ್ದೇನೆ. ಅಲ್ಲದೆ ಒಂದು ಹೊಸ ಸಭೆಗೆ ಸೇವೆಗಾಗಿ ಹೋಗುವ ವೇಳೆಯಲ್ಲಿ ಸಹ ಇದು ಪರಿಚಯ ಸಂದೇಶವನ್ನು ನೀಡುವದಕ್ಕೆ ಉತ್ತಮ ಆಧಾರವಾಗಿರುತ್ತದೆ.

ರೋಮಾಯದಲ್ಲಿರುವ ಸಭೆಯ ಪ್ರಖ್ಯಾತವಾದ ನಂಬಿಕೆಯ ಬಗ್ಗೆ ಮಾತಾಡುವಾಗ, ನಾನು ಸಭೆಯ ಇತಿಹಾಸವನ್ನು ಪುನರಾವಲೋಕಿಸಬಲ್ಲೆನು. ನಾವು ಒಟ್ಟಾಗಿ ಕಳೆಯುವ ಸಮಯ ಅವರಿಗೆ ಆಶೀರ್ವಾದವನ್ನುಂಟು ಮಾಡಬಲ್ಲದು ಮತ್ತು ಅದು ನನಗೆ ಸಹ ಆಶೀರ್ವಾದ ತರುವದೆಂಬ ನನ್ನ ನಿರೀಕ್ಷೆಯನ್ನು ವ್ಯಕ್ತಗೊಳಿಸಬಹುದು. ನಾನು ಸಭಿಕರಿಗೆ ಸಹಾಯವಾಗುವಂತೆ ಯಾವದನ್ನಾದರೂ ಮಾಡುವೆನೆಂಬ ವಾಗ್ದಾನವನ್ನು ಮಾಡಬಲ್ಲೆನು, ಅದೇ ವೇಳೆಯಲ್ಲಿ ನನ್ನ ಮೊದಲ ಬದ್ಧತೆಯು ಸುವಾರ್ತೆಯನ್ನು ಸಾರುವದೇ ಎಂಬುದನ್ನು ಅವರ ಗಮನಕ್ಕೆ ತರುವದನ್ನು ಮರೆಯುವದಿಲ್ಲ. ನಾನು ಕೊನೆಯಲ್ಲಿ, ಪೌಲನಿಗೆ ಅವನ ಮುಂದಿನ ಯೋಜನೆಗಳ ಬಗ್ಗೆ ಖಚಿತತೆ ಇರಲಿಲ್ಲವೆಂಬುದನ್ನು ತಿಳಿಸಿ ಮುಕ್ತಾಯಗೊಳಿಸುವೆನು: ಆತನು ವಿಷಯವನ್ನು ದೇವರ ಕೈಗಳಲ್ಲಿ ಒಪ್ಪಿಸಬೇಕಾಯಿತು. “ಅದೇ ರೀತಿ, ಮುಂದೆ ಈ ಸಭೆಯ ಭವಿಷ್ಯ ಹೇಗಿರುತ್ತದೆಂದು ನಮಗೆ ಗೊತ್ತಿಲ್ಲವಾದರೂ ನಮ್ಮ ಭವಿಷ್ಯ ಯಾರ ಕೈಗಳಲ್ಲಿರುತ್ತ ದೆಂಬುದು ಮಾತ್ರ ನಮಗೆ ಗೊತ್ತಿದೆ. ಆತನ ಚಿತ್ತವನ್ನು ಮಾಡುವದಕ್ಕೆ ನಮ್ಮನ್ನು ಒಪ್ಪಿಸಿಕೊಳ್ಳೋಣ.”

ಸಭಿಕರಿಗೆ ನಮ್ಮ ಬಯಕೆಗಳೇನೆಂಬದನ್ನು ತಿಳಿಸುವದಕ್ಕೆ ಸಹಾಯವಾಗಲು ಪೌಲನಿಗಿದ್ದ ಬಯಕೆಗಳು ನಮಗೊಂದು ಉತ್ತಮ ವಾಕ್ಯಭಾಗವನ್ನು ಒದಗಿಸುತ್ತದೆ.

## ಉತ್ತರ ಸಿಕ್ಕದ ಪ್ರಾರ್ಥನೆಗಳು? (1:8-10, 13)

ದೇವರು “ಇಲ್ಲ” ಎಂದು ಉತ್ತರಿಸುವಂತೆ ತೋರಿದಾಗ್ಯೂ ಪೌಲನು ರೋಮಾಪುರಕ್ಕೆ ಭೇಟಿಕೊಡಬೇಕೆಂದು ದೇವರನ್ನು ಪ್ರಾರ್ಥಿಸುತ್ತಲೇ ಇದ್ದನು. ನಾವು ದೇವರಿಗೆ ಏನನ್ನಾದರೂ ಕೇಳಿಕೊಂಡಾಗ ಮತ್ತು ಅದು ತಕ್ಷಣ ಸಿಕ್ಕದಿದ್ದಲ್ಲಿ, ನಾವು ಪ್ರಾರ್ಥಿಸುವದನ್ನು ನಿಲ್ಲಿಸಬಾರದು. ಅಲ್ಲದೆ ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳಲಿಲ್ಲವೆಂದಂತೂ ನಾವು ಖಂಡಿತವಾಗಿಯೂ ಭಾವಿಸಿಕೊಳ್ಳಬಾರದು. “ಇಲ್ಲ” ಅಥವಾ “ಇಗೋ, ಅದಕ್ಕಿಂತ ಉತ್ತಮವಾದದ್ದನ್ನು ತೆಗೆದುಕೊ” ಅಥವಾ “ಸ್ವಲ್ಪ ತಾಳು” ಎಂಬ ಉತ್ತರಗಳು ಸಹ “ಹೌದು” ಎಂಬ ಉತ್ತರದಷ್ಟೇ ಖಚಿತವಾದವುಗಳು. ಪೌಲನ ವಿಷಯದಲ್ಲಾದರೋ, ದೇವರ ಉತ್ತರವು “ಸ್ವಲ್ಪ ತಾಳು” ಎಂದಾಗಿತ್ತು.

## ಪರಸ್ಪರ ಪ್ರೋತ್ಸಾಹ (1:11, 12)

ಕ್ರೈಸ್ತರಾಗಿ ನಮಗೆ ಒಬ್ಬರಿಗೊಬ್ಬರ ಅಗತ್ಯತೆಯಿದೆ. ನಾವು ಒಟ್ಟಾಗಿ ಆರಾಧಿಸುವ ಅಗತ್ಯವಿದೆ, ಕೆಲಸ ಮಾಡುವ ಅಗತ್ಯವಿದೆ, ಒಟ್ಟಾಗಿ ಒಡನಾಟವಿಟ್ಟುಕೊಳ್ಳಬೇಕಾಗಿದೆ.

ಇದರಿಂದ ನಮಗೆ ಬೇರೆಯವರ ಸಂಗಡ ನಮ್ಮ ಸ್ತೋತ್ರ ಸ್ವರಗಳನ್ನು ಎತ್ತುವದಕ್ಕೆ ಸಹಾಯವಾಗುತ್ತದೆ. ಇದು ನಮಗೆ ಬೇರೆಯವರು ನಂಬಿಗಸ್ತರಾಗಿ ಕರ್ತನ ಸೇವೆ ಮಾಡುವದನ್ನು ನೋಡಲು ಸಹಾಯ ಮಾಡುತ್ತದೆ. ಇತರರು ದೇವರ ಸಹಾಯದೊಂದಿಗೆ ಹೇಗೆ ಸಂಕಟಗಳನ್ನು ಸಂಧಿಸುತ್ತಿದ್ದಾರೆಂಬುದನ್ನು ಆಲಿಸುವಾಗ ಅದು ನಮ್ಮನ್ನು ಬಲಗೊಳಿಸುತ್ತದೆ.

ನೀವು ಎಂದಾದರೂ ದಹಿಸುವ ಬೆಂಕಿಯ ಮುಂದೆ ನಿಂತಿರುವಿರಾ? ನೀವು ಉರಿಯುವ ಕೆಂಡವನ್ನು ಬೆಂಕಿಯಿಂದ ತೆಗೆದರೆ ಏನಾಗುತ್ತದೆ? ಆ ಕೆಂಡವು ಶೀಘ್ರವೇ ಕಪ್ಪಗಾಗಿ, ತಣ್ಣಗಾಗುವದು. ಒಬ್ಬನು ತನ್ನನ್ನು ಜೊತೆ ಕ್ರೈಸ್ತರ ಸಹವಾಸದಿಂದ ದೂರಮಾಡಿಕೊಳ್ಳುವಾಗ ಅವನ ಜೀವಿತಕ್ಕೆ ಇದೇ ರೀತಿಯಾಗುತ್ತದೆ. ದೇವರು ಸಭೆಯನ್ನು ಸ್ಥಾಪಿಸಿದ್ದಕ್ಕೆ ಒಂದು ಕಾರಣವೇನೆಂದರೆ ,ನಮ್ಮ ಕ್ರೈಸ್ತ ಜೀವಿತವನ್ನು ನಡಿಸುವದಕ್ಕಾಗಿ ನಮಗೆ ಇತರರ ಬೆಂಬಲ ಎಷ್ಟೊಂದು ಅಗತ್ಯವಿದೆಯೆಂದು ಆತನಿಗೆ ಗೊತ್ತಿತ್ತು.

## ಪೌಲನ, "ನಾನು" ಹೇಳಿಕೆಗಳು (1:14-16)

1:14-16 ರಲ್ಲಿ ಸಿಕ್ಕುವ "ನಾನು" ಅಥವಾ "ನನ್ನ" ಎಂಬ ಹೇಳಿಕೆಗಳಿಂದ "ಬೋಧಿಸಬಹುದಾದ" ಮತ್ತು "ಉಪದೇಶಿಸಬಹು ದಾದ" ಅಂಶಗಳನ್ನು ನೋಡಿರಿ. ಪೌಲನು ಈ ಕೆಳಗಿನ ಹೇಳಿಕೆಗಳನ್ನು ನೀಡಿದನು:

"ತೀರಿಸಬೇಕಾದ [ಎಲ್ಲಾ ಮಾನವರಿಗೂ] ಒಂದು ಋಣ ನನ್ನ ಮೇಲೆ ಇದೆ" (1:14).
"ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧವಾಗಿದ್ದೇನೆ" (1:15).
"ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ" (1:16).

## ಸುವಾರ್ತೆ (1:16, 17)

ಈ ವಚನಗಳಿಗಾಗಿ Warren W. Wiersbe ಯು ಈ ಕೆಳಗಿನ ಸಂಕ್ಷೇಪ್ತ ವಿವರಣೆಗಳನ್ನು ಸೂಚಿಸುತ್ತಾರೆ:

ಸುವಾರ್ತೆಯ ಮೂಲ: ಅದು ಕ್ರಿಸ್ತನ ಸುವಾರ್ತೆ (1:16a).
ಸುವಾರ್ತೆಯ ಕಾರ್ಯ: ಅದು ದೇವರ ಶಕ್ತಿ (1:16b).
ಸುವಾರ್ತೆಯ ಫಲ: ಅದು ರಕ್ಷಣೆಯುಂಟುಮಾಡುವ ದೇವರ ಶಕ್ತಿ (1:16c).
ಸುವಾರ್ತೆಯ ಸಂಧಿಸುವಿಕೆ: ಅದು ನಂಬುವ ಪ್ರತಿಯೊಬ್ಬನಿಗಾಗಿಯೂ (1:16d,17).[180]

## ಒಂದು ಅನಿವಾರ್ಯವಾದ ಸುವಾರ್ತೆ (1:16, 17)

ಈ ಪುಸ್ತಕದಲ್ಲಿ ಪೌಲನು ಯಾವ ರೀತಿಯ ಸಂದೇಶವನ್ನು ಮುಂದಿಡುತ್ತಿದ್ದಾನೆ. ಇದು ಶಾಂತವಾದ, ಧೈರ್ಯತುಂಬುವ ಬುಧವಾರ ರಾತ್ರಿ ಸಂಭಾಷಣೆಯೋ ಅಥವಾ ಜೀವ ಅಥವ ಮರಣಗಳ ಚರ್ಚೆಯೋ? ಮೇಲ್ಗಡೆ ಕಾಣಿಸಿಕೊಳ್ಳುವ ದೊಡ್ಡ ಪದ ಮತ್ತು ಗಮನವನ್ನು ಸೆಳೆಯುವ ಪದವೆಂದರೆ "ಅನಿವಾರ್ಯತೆ."

ಅನಿವಾರ್ಯವಾದ ಪರಿಹಾರ: ಸುವಾರ್ತೆ (1:16, 17).
ಅನಿವಾರ್ಯವಾದ ಬೇಡಿಕೆ: ನಂಬಿಕೆ (1:16b, 17).
ಅನಿವಾರ್ಯವಾದ ಫಲ: ನೀತಿ (1:17).

## ಸುವಾರ್ತೆಯ ಶಕ್ತಿ (1:16)

ರೋಮಾಯರ ಸಾಮ್ರಾಜ್ಯವು ಅಧಿಕಾರದ (ಶಕ್ತಿಯ) ಹುಚ್ಚಿನಿಂದ ತುಂಬಿತ್ತು, ಅದೇ ರೀತಿ ಇಂದಿನ ಜಗತ್ತು ಸಹ ಇರುತ್ತದೆ. ನಾವು ಬಲಿಷ್ಠರಾಗಿರಲು, ವೇಗವಾಗಿ ಸಾಗಲು ಮತ್ತು ದೊಡ್ಡದಾಗಿ ಕಟ್ಟಲು ಇಚ್ಛಿಸುತ್ತೇವೆ—ಆದರೆ ಸುಮಾರು ಹೆಚ್ಚುಕಡಿಮೆ ಎರಡು ಸಾವಿರ ವರ್ಷಗಳ ನಂತರವೂ, ಸುವಾರ್ತೆಗೆ ಹೋಲಿಕೆಮಾಡಬಹುದಾದ ಇನ್ಯಾವ ಶಕ್ತಿಯೂ ಇರುವದಿಲ್ಲ. ಶಿಲುಬೆಯ ಕಥೆಯು ಇಂದಿಗೂ "ದೇವರ ಶಕ್ತಿಯೂ ಮತ್ತು ದೇವರ ಜ್ಞಾನವೂ" ಆಗಿ ಉಳಿದಿರುತ್ತದೆ (1 ಕೊರಿಂಥ 1:24). James Meadows ಇದನ್ನು ಹೀಗೆ ಕರೆದನು, "ಪಾಪ, ಸಂಪ್ರದಾಯ, ವಿಗ್ರಹಾರಾಧಕ ನಂಬಿಕೆಗಳನ್ನು ಮತ್ತು ಮನುಷ್ಯರ ಹೃದಯಗಳೊಳಗಿಂದ ಅಸಹಾಯಕತೆಯನ್ನು ಸ್ಫೋಟಿಸಿ ಹಾಕುವ (dynamite) ಡೈನಾಮೈಟ್ ಆಗಿದೆ."[181]

ಸುವಾರ್ತೆಯು ಕ್ಷಮಾಪಣೆಯನ್ನುಂಟು ಮಾಡುವದಕ್ಕೆ ದೇವರ ಶಕ್ತಿಯಾಗಿರುವದು ಮಾತ್ರವಲ್ಲದೆ, ಅದು ಕಡ್ಡಾಯಗೊಳಿಸುವ ಶಕ್ತಿ ಸಹ ಆಗಿದೆ. ಯೇಸು ಹೇಳಿದನು, "ನಾನು ಭೂಮಿಯಲ್ಲಿಂದ (ಶಿಲುಬೆಯ ಮೇಲೆ) ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" (ಯೋಹಾನ 12:32). ಅಲ್ಲದೆ ಸುವಾರ್ತೆಯು ದೇವರ ಮರು—ರೂಪಿಸುವ ಶಕ್ತಿಯಾಗಿದೆ. ಪುರುಷ ಮತ್ತು ಸ್ತ್ರೀಯರು ದೇವರ ಪ್ರೀತಿಯ ಕಥೆಗೆ ಪ್ರತಿಕ್ರಿಯೆ ತೋರುವದರ ಮೂಲಕ ಲಕ್ಷಾನುಗಟ್ಟಲೆ ಜೀವಿತಗಳು ಮಾರ್ಪಟ್ಟಿರುತ್ತವೆ (ನೋಡಿರಿ 2 ಕೊರಿಂಥ 5:17). ಒಬ್ಬ ವ್ಯಕ್ತಿಯ ಕಥೆಯು ಹೇಳಲ್ಪಡುತ್ತದೆ, ಆತನ ಜೀವಿತವು ಎಷ್ಟೊಂದು ಬದಲಾಗಿತ್ತೆಂದರೆ ಅವನ ಮಾಲೀಕನು ಒಮ್ಮೆ ಅವನಿಗೆ, "ಆತನು ಮುಂಚಿನ ಮನುಷ್ಯನಾಗಿಯೇ ಇಲ್ಲ! ಅದೇ ಚರ್ಮ, ಆದರೆ ಅವನೊಳಗೆ ಹೊಸ ಮನುಷ್ಯನಿದ್ದಾನೆ!" ಎಂದು ಹೇಳಿದನು.[182]

ಸುವಾರ್ತೆಯು ಅತ್ಯಂಥ ಪ್ರಾಮುಖ್ಯವಾಗಿರುವದರಿಂದ ನಾವು ಅದನ್ನು "ನಿರ್ಲಕ್ಷಿಸುವದಕ್ಕೆ, ಅಲಕ್ಷ್ಯ ಮಾಡುವದಕ್ಕೆ, ಕೇಡಿಸುವದಕ್ಕಾಗಲಿ . . . ಅಥವಾ ಅದನ್ನು ಆಲಿಸುವದಕ್ಕೆ ತಿರಸ್ಕಾರ ಮಾಡುವದಕ್ಕಾಗಲಿ ಧೈರ್ಯಮಾಡಬಾರದು." ಎಲ್ಲಕ್ಕಿಂತ ಮೇಲಾಗಿ, ಕ್ರೈಸ್ತರಾಗಿರುವ ನಾವು, ಅದನ್ನು "ಸಾರುವದಕ್ಕೆ ವಿಫಲರಾಗಲು" ಧೈರ್ಯ ಮಾಡಬಾರದು.[183] ಅದು ಈಗಲೂ ರಕ್ಷಣೆಯುಂಟು ಮಾಡುವದಕ್ಕೆ ದೇವರ ಶಕ್ತಿಯಾಗಿದೆ—ಆತನ ಏಕೈಕ ಶಕ್ತಿ. ಇಂದು, ಕೆಲವರು ತಮ್ಮ "ಸಭೆಗಳಿಗೆ ಜನರನ್ನು ಆಕರ್ಷಿಸುವದಕ್ಕೆ" ಹೊಸ ಹೊಸ ಉಪಾಯ ಕಂಡುಹಿಡಿಯುವದರಲ್ಲಿ ತಲ್ಲೀನರಾಗಿದ್ದಾರೆ. Coy Roper ಹೀಗೆ ಒತ್ತಿ ಹೇಳುತ್ತಾನೆ, "ಜನರನ್ನು ಸಭೆಗೆ ಏನೆಲ್ಲಾ ಆಕರ್ಷಿಸಿದರೂ, ನಾವು ಎಲ್ಲಿಯ ವರೆಗೆ *ಸುವಾರ್ತೆಯನ್ನು* ಸಾರುವದಿಲ್ಲವೋ, ಎಲ್ಲಿಯ ವರೆಗೆ ಅವರು ಅದಕ್ಕೆ ವಿಧೇಯರಾಗುವದಿಲ್ಲವೋ ಅಲ್ಲಿಯ ವರೆಗೆ ಯಾರೊಬ್ಬರೂ ರಕ್ಷಣೆ ಹೊಂದುವದಕ್ಕಾಗುವದಿಲ್ಲ."[184] ಪಾಪದಿಂದ ರೋಗಗ್ರಸ್ಥರಾಗಿರುವ ಜನರಿಗೆ ಸುವಾರ್ತೆಯು

ಈಗಲೂ ದೇವರಿಂದ ದೊರಕುವ ಪರಿಹಾರವಾಗಿದೆ. ನಮಗೆ ಗೊತ್ತಿರುವವರಿಗೆಲ್ಲಾ ಇದನ್ನು ಸಾರದಿದ್ದಲ್ಲಿ, ಅವರು ಕಳೆದು ಹೋಗುವರು!

ಪೌಲನಂತಿರದೆ, ನಾವು ಸುವಾರ್ತೆಯ ವಿಷಯದಲ್ಲಿ ನಾಚಿಕೊಳ್ಳುವ ಸಾಧ್ಯತೆಯಿದೆಯೋ? ನಮ್ಮಲ್ಲಿ ಬಹಳ ಮಂದಿ ಅದರ ಬಗ್ಗೆ ನಾಚಿಕೊಂಡಿದ್ದೇವೆಂಬದನ್ನು ಎಂದಿಗೂ ಒಪ್ಪಿಕೊಳ್ಳುವದಿಲ್ಲ, ಆದರೆ ನಾವು ಯೇಸುವಿನಲ್ಲಿ ಇಟ್ಟಿರುವ ನಂಬಿಕೆಯ ಕುರಿತು ನಮ್ಮ ಮಿತ್ರರಿಗೆ ಹೇಳಿಕೊಳ್ಳಲು ಸಂಕೋಚಪಡುತ್ತೇವೋ? ಅವರ ಸ್ನೇಹವನ್ನು ಕಳಕೊಳ್ಳುತ್ತೇವೆಂದು ಹೆದರಿ ಅವರಿಗೆ ಸಾರುವದಕ್ಕೆ ಅಂಜುತ್ತೇವೋ? CEV ಆವೃತ್ತಿಯು ರೋಮಾ 1:16 ವಚನವನ್ನು ಹೀಗೆ ವಿವರಿಸುತ್ತದೆ: "ನಾನು ಸುವಾರ್ತೆಯ ವಿಷಯದಲ್ಲಿ *ಹೆಮ್ಮೆ* ಪಡುತ್ತೇನೆ!" (ಒತ್ತಿ ಹೇಳಿದ್ದು ನನ್ನದು). ನಾವು ಸುವಾರ್ತೆಯ ವಿಷಯದಲ್ಲಿ ಯಾವಾಗಲೂ ಹೆಮ್ಮೆ ಪಡುವಂತೆ– ಮತ್ತು ಅದೇ ರೀತಿ ನಡೆದುಕೊಳ್ಳುವಂತೆ ದೇವರು ನಮಗೆ ಸಹಾಯ ಮಾಡಲಿ!

**ದೇವರ Dynamite (ಸ್ಫೋಟಕ ಶಕ್ತಿ) (1:16)**

Richard C. Halverson ಹೀಗೆ ಬರೆಯುತ್ತಾನೆ,

> ಶಕ್ತಿ.
> ಇದು ಈ ದಿನಕ್ಕೆ ಪ್ರಸ್ತುತವಾಗಿರುವ ಪದ!
> ಅದು ನಮ್ಮ ಸಂಸ್ಕೃತಿಯು ಗಂಭೀರವಾಗಿ ತೆಗೆದುಕೊಳ್ಳುವಂತಹ ಎಲ್ಲದರಲ್ಲಿಯೂ ರಾರಾಜಿಸುತ್ತದೆ.
> ಶಕ್ತಿಯು ತಂತ್ರಜ್ಞಾನವಾಗಿರಬಹುದು, ಸಾಮಾಜಿಕ, ರಾಜಕೀಯ, ಮಿಲಿಟರಿ, ಆರ್ಥಿಕ, ಆಡಳಿತಾತ್ಮಕ, ಧಾರ್ಮಿಕ ಅಥವಾ ವೈಯಕ್ತಿವಾಗಿರಬಹುದು. ಮಾನವ ಗಮ್ಯತೆಯನ್ನು (ಧ್ಯೇಯವನ್ನು) . . . ಸಾಧಿಸುವದಕ್ಕೆ, ನೆರವೇರಿಸುವದಕ್ಕೆ ಅದೇ ಮುಖ್ಯ ಎಂದು ಭಾವಿಸಿಕೊಳ್ಳಲಾಗುತ್ತದೆ.[185]

ದುರದೃಷ್ಟಕರವಾಗಿ, ಮನುಷ್ಯನು ತನ್ನ ಕೈಗಳಲ್ಲಿ ಕೊಡಲಾದ ಶಕ್ತಿಯನ್ನು ಇಷ್ಟು ವರ್ಷಗಳ ಕಾಲ ದುರುಪಯೋಗ ಪಡಿಸಿಕೊಂಡಿರುತ್ತಾನೆ.

ಮನುಷ್ಯನು ಉಪಾಯ ಹೂಡಬಹುದಾದ ಯಾವದೇ ಸಾಧನಕ್ಕಿಂತಲೂ ಹೆಚ್ಚು ಶಕ್ತಿಶಾಲಿ ಸಂಗತಿಯೊಂದು ಇರುತ್ತದೆಂಬದಕ್ಕಾಗಿ ದೇವರಿಗೆ ಸ್ತೋತ್ರ, ಅದನ್ನು ಪೌಲನು ದೇವರ "dynamite (ಶಕ್ತಿ)" ಎನ್ನುತ್ತಾನೆ: "ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟು ಮಾಡುವಂಥದಾಗಿದೆ" (1:16). "ಶಕ್ತಿ" ಎಂದು ಅನುವಾದಿಸಲ್ಪಟ್ಟ ಗ್ರೀಕ್ ಪದವಾದ δύναμις (*dunamis*), ಈ ಪದದಿಂದಲೇ "dynamic, ಶಕ್ತಿಯುತ," "*dynamo*, ಕ್ರಿಯಾಶಾಲಿ," ಮತ್ತು "dynamite, ಸ್ಫೋಟಕ ಶಕ್ತಿ" ಎಂಬ ಪದ ಬಂದಿರುತ್ತದೆ. *ಸುವಾರ್ತೆಯು* ರಕ್ಷಣೆಯುಂಟು ಮಾಡುವದಕ್ಕೆ ದೇವರ (dynamite) ಸ್ಫೋಟಕ ಶಕ್ತಿ ಆಗಿದೆ!

ಮೂಲಪ್ರತಿಯಲ್ಲಿ "power" ಎಂಬ ಪದದ ಮುಂಚೆ "the" ಎಂಬ ನಿಖರಾತ್ಮಕ ಅನುಚ್ಛೇದವು ಇರುವದಿಲ್ಲವೆಂಬದನ್ನು ಗಮನಿಸತಕ್ಕದ್ದು.[186] ಪೌಲನು ಅಕ್ಷರಶಃ ಹೇಳಿದ್ದೇನೆಂದರೆ ಸುವಾರ್ತೆಯು "*ರಕ್ಷಣೆಯುಂಟು* ಮಾಡುವದಕ್ಕೆ ದೇವರ ಶಕ್ತಿಯಾಗಿದೆ" ಎಂಬದಾಗಿ. ಪ್ರಕೃತಿಯಲ್ಲಿ ದೇವರ ಶಕ್ತಿಯು ತೋರ್ಪಡುತ್ತದೆ; ಅಮೋಘವಾದ ಸಿಡಿಲುಗುಡುಗು ಮತ್ತು ಶಕ್ತಿಶಾಲಿ ಬಿರುಗಾಳಿಯನ್ನು ಕಾಣುತ್ತೇವೆ. ಹೊಸ ಒಡಂಬಡಿಕೆಯ ಕಾಲದಲ್ಲಿ, ಆತನ ಶಕ್ತಿಯು ಅದ್ಭುತಗಳಲ್ಲಿ ತೋರಿಬಂದಿತು. ಹಾಗೆಯೇ, ರಕ್ಷಣೆಯ ವಿಷಯದಲ್ಲಿ ನೋಡುವದಾದರೆ, ದೇವರ ಶಕ್ತಿಯು ಸುವಾರ್ತೆಯಲ್ಲಿ ಕಾಣಿಸುತ್ತದೆ.

*ಸುವಾರ್ತೆ: ಸಂಕಲ್ಪ.* ಯೇಸು ಮಹಾ ಆಜ್ಞೆಯನ್ನು ಕೊಡುವ ವೇಳೆ ಆತನು ಸುವಾರ್ತೆಯು ಸರ್ವರಿಗಾಗಿಯೂ ಇರುತ್ತದೆ ಎಂಬದನ್ನು ಒತ್ತಿಹೇಳಿದನು: "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15). ಪುನಃ, ಆತನು ಹೇಳಿದನು, "ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ" (ಮತ್ತಾಯ 28:19). ಆತನ ಈ ಮಾತುಗಳ ತಾತ್ಪರ್ಯವೇನೆಂದರೆ, "ನೀವು ಇದ್ದ ಕಡೆಯಲ್ಲಿಯೇ ಇರದಿರಿ, ಆದರೆ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಗೆಲ್ಲಾ ಹೋಗಿ ಸುವಾರ್ತೆಯನ್ನು ಪ್ರಸರಿಸಿರಿ."

ಯೇಸು ಪರಲೋಕಾರೋಹಣ ಆಗುವದಕ್ಕೆ ಮುಂಚೆ, ಆತನು ತನ್ನ ಶಿಷ್ಯರಿಗೆ, "ನೀವು . . . ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯ ವರೆಗೂ ನನಗೆ ಸಾಕ್ಷಿಗಳಾಗಿರಬೇಕು" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:8). ಅವರು ಯೆರೂಸಲೇಮಿನಲ್ಲಿ ಆರಂಭಿಸಿ ಅಲ್ಲಿಂದ ಎಲ್ಲಾ ದಿಕ್ಕುಗಳಿಗೆ ಹರಡಬೇಕಿತ್ತು. ರಾಜ್ಯವನ್ನು/ಸಭೆಯನ್ನು ಸ್ಥಾಪಿಸಿದ ಬಳಿಕ, ಕ್ರಿಸ್ತನ ಹಿಂಬಾಲಕರು ಆತನ ಉಪದೇಶಗಳನ್ನು ಮುಂದುವರೆಸಿದರು: ಶಿಷ್ಯರು "ಎಲ್ಲಾ ಕಡೆಗಳಿಗೆ ಹೋಗಿ ಸುವಾರ್ತೆಯನ್ನು ಸಾರುತ್ತಿದ್ದರು" (ಅಪೊಸ್ತಲರ ಕೃತ್ಯಗಳು 8:4; KJV). ಐಥಿಯೋಪ್ಯದ ಕಂಚುಕಿಯು ಸುವಾರ್ತೆಯನ್ನು ಆಲಿಸಿ ಅದಕ್ಕೆ ವಿಧೇಯನಾದ ಮೇಲೆ ದಕ್ಷಿಣದ ಕಡೆಗೆ ಪ್ರಯಾಣಿಸಿದನು (ಅಪೊಸ್ತಲರ ಕೃತ್ಯಗಳು 8). ಪೌಲನು ಉತ್ತರಕ್ಕೆ ಸಾಗಿ ಗಲಾತ್ಯ ಮತ್ತು ಪಶ್ಚಿಮದಲ್ಲಿ ಗ್ರೀಸ್‌.ಗೆ ಹಾಗೂ ರೋಮಾಪುರಕ್ಕೆ (ಮತ್ತು ಬಹುಶಃ ಸ್ಪೇನ್‌.ಗೆ ಸಹ) ಪ್ರಯಾಣಿಸಿದನು.

ಶಿಷ್ಯರು ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳೆಡೆಗೆ ಹೋದ ಹಾಗೆ, ಅವರು ವಿರೋಧವನ್ನು ಎದುರಿಸಿದರು, ಆದರೆ ಅವರಿಗೆ ಸಂದೇಶವನ್ನು ಕೇಳಲು ಆಸಕ್ತಿಯುಳ್ಳ ಸಾಕಷ್ಟು ಜನಸಮೂಹವು ಸಹ ಸಿಕ್ಕಿತು, ಪುರುಷರು ಮತ್ತು ಸ್ತ್ರೀಯರು ಸುವಾರ್ತೆ ಸಾರಲ್ಪಡುವದನ್ನು ಆಲಿಸಿ ಆನಂದಿಸಿದರು. ಏಕೆ? ಸುವಾರ್ತೆಯಾದರೂ ಏನಾಗಿದೆ?

"ಸುವಾರ್ತೆ" ಎಂಬುದು ಗ್ರೀಕ್‌.ನ εὐαγγέλιον (*euangelion*) ಎಂಬದರ ಅನುವಾದವಾಗಿದೆ, ಅದು "ಶುಭ" (εὖ, *eu*) ಎಂಬ ಉಪಸರ್ಗವನ್ನು ಮತ್ತು "ಸಂದೇಶ" ಕ್ಕೆ (αγγελία, *angelia*) ಎಂಬ ಪದವನ್ನು ಒಳಗೊಂಡಿರುತ್ತದೆ. ಈ ಗ್ರೀಕ್ ಪದದ ಅಕ್ಷರಶಃ ಅರ್ಥವು "ಶುಭವಾರ್ತೆ" ಎಂಬುದಾಗಿದೆ.

ಆಂಗ್ಲ ಭಾಷೆಯ "gospel" (ಗಾಸ್ಪೆಲ್) ಎಂಬದು ಎರಡು ಪದಗಳಿಂದ ಬಂದಿರುತ್ತದೆ,

“ದೇವರು” ಮತ್ತು “ವಾರ್ತೆ,” ಹಾಗೂ ಅದರ ಪ್ರಾಥಮಿಕ ಅರ್ಥವು *euangelion* ಎಂಬ ಅದೇ ಪದದ ಅರ್ಥವನ್ನೇ ಹೊಂದಿರುತ್ತದೆ: ಇದು ದೇವರಿಂದಲೇ ಉಚ್ಚರಿಸಲ್ಪಟ್ಟ ಶುಭವಾರ್ತೆಯಾಗಿದೆ!

ಲೋಕವು ಶುಭವಾರ್ತೆಗಾಗಿ ಹಸಿದಿರುತ್ತದೆ. ಹಲವಾರು ವರ್ಷಗಳ ಹಿಂದೆ ಒಬ್ಬರು ಕೇವಲ ಶುಭವಾರ್ತೆಗಳಷ್ಟೆ ಇರುವಂತ ಒಂದು ಸುದ್ದಿಪತ್ರಿಕೆಯನ್ನು ಮುದ್ರಿಸಲು ನಿರ್ಧರಿಸಿದರು. ಆದರೆ ಅತಿ ಕ್ಲುಪ್ತಕಾಲದಲ್ಲಿಯೇ ಇತರ ಸುದ್ದಿಪತ್ರಿಕೆಗಳಲ್ಲಿ ಒಂದು ಪ್ರಕಟಣೆಯು ಮಾಡಲ್ಪಟ್ಟಿತು: “ಕ್ಯಾಲಿಫೋರ್ನಿಯಾದಲ್ಲಿನ ‘ಶುಭವಾರ್ತೆ’ ಪತ್ರಿಕೆಯು ಇತ್ತಿಚೆಗೆ ಮುಚ್ಚಿಹೋಯಿತು ಯಾಕೆಂದರೆ ಅಲ್ಲಿ ಅವರಿಗೆ ಪತ್ರಿಕೆಯಲ್ಲಿ ಪ್ರಕಟಿಸಲು ಸಾಕಷ್ಟು ಶುಭಸುದ್ದಿಗಳೇ ಸಿಕ್ಕದಂತಾಗಿದ್ದವು. ಆ ಪತ್ರಿಕೆಯು ತನ್ನ ಸ್ವಂತ ಮರಣಸುದ್ಧಿಯನ್ನು ಪ್ರಕಟಿಸಲು ಸಹ ಇಚ್ಚಿಸಲಿಲ್ಲ ಯಾಕೆಂದರೆ ಅದೊಂದು ಕೆಟ್ಟವಾರ್ತೆಯಲ್ಲವೆ.”

William Taylor ಎಂಬ ಬೋಧಕನು ಶುಭವಾರ್ತೆಗಾಗಿ ಲೋಕಕ್ಕಿರುವ ಹಸಿವೆಯನ್ನು ಅರ್ಥಮಾಡಿಕೊಂಡಿದ್ದನು. California (ಕ್ಯಾಲಿಫೋರ್ನಿಯಾ) ದಲ್ಲಿ ಬಂಗಾರವನ್ನು ಆರಿಸಿಕೊಳ್ಳಲು ಜನಜಂಗುಳಿ ಅಧಿಕವಾಗಿ ದೌಡಾಯಿಸುತ್ತಿದ್ದ ವೇಳೆಯಲ್ಲಿ, ಆತನು San Francisco (ಸ್ಯಾನ್.ಪ್ರಾನ್ಸಿಸ್ಕೊ) ಎಂಬ ಗುಡಾರ ನಗರಕ್ಕೆ ಬಂದು ತಲುಪಿದನು. ಅಲ್ಲಿ ಯಾವದೇ ಸಭಾಕಟ್ಟಡವಿರಲಿಲ್ಲವಾದ್ದರಿಂದ, ಚಿನ್ನದ ಬೊಕ್ಕಸ ಸಿಕ್ಕುತ್ತದೆಂಬ ಅದೃಷ್ಟಶೋಧನೆಯಲ್ಲಿ ತೊಡಗಿದ್ದ ಗುಂಪುಗಳೇ ತನ್ನ ಸಭಿಕರೆಂದು ತೀರ್ಮಾನಿಸಿದನು. ಪ್ರತಿ ಭಾನುವಾರ ಆತನು ಜನಜಂಗುಳಿಯಿಂದ ಕೂಡಿದ ಬೀದಿಯಲ್ಲಿ ಒಂದು ಪಿಪಾಯಿಯ ಮೇಲೆ ನಿಂತು “ಏನು ಸಮಾಚಾರ?” ಎಂದು ಕೂಗುತ್ತಿದ್ದನು. ಜನರು ಸೇರಿಬಂದಾಗ ಆತನು, “ಸಹೋದರರೇ, ದೇವರಿಗೆ ಸ್ತೋತ್ರ, ಈ ಬೆಳಿಗ್ಗೆ ನಿಮಗಾಗಿ ನನ್ನಲ್ಲೊಂದು ಶುಭವಾರ್ತೆಯಿದೆ!” ಎನ್ನುತ್ತಿದ್ದನು.

ಯೇಸುವಿನ ಸುವಾರ್ತೆಯನ್ನು ಮುಂದಾಗಿ ಕಾಣುವವನಾಗಿ ಯೆಶಾಯನು ಹೀಗೆ ಬರೆದನು, “ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ! ಒಳ್ಳೆಯ ಶುಭವಾರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ—ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆಂದು ಚೀಯೋನಿಗೆ ತಿಳಿಸುವವನಾ ಗಿದ್ದಾನೆ!” (ಯೆಶಾಯ 52:7; NKJV). ರಕ್ಷಣೆಯ ಕಥೆಯು ಪ್ರಮುಖ ಶೀರ್ಷಿಕೆಯಲ್ಲಿ ಇರಬೇಕಾದ ಸಂಗತಿಯಾಗಿದೆ. ನಮ್ಮ ಮಹಾನಗರದ ಸುದ್ದಿಪತ್ರಿಕೆಗಳ ಮುಖಪುಟದಲ್ಲಿ ಪ್ರಕಟಿಸಲಾಗುವ ಕಳಾಹೀನ ಸುದ್ಧಿಯ ಶಿರೋನಾಮೆಗೆ ತದ್ವಿರುದ್ಧವಾಗಿ, ಸುವಾರ್ತೆಯ—*ಶುಭವಾರ್ತೆ*ಯು—ಕಥೆಯು ಹೇಗೆ ಹೇಳಲ್ಪಡಬಹುದೆಂದು ಊಹಿಸಿಕೊಳ್ಳಿರಿ.

ಪ್ರಥಮ ಆವೃತ್ತಿಯಲ್ಲಿ ಮಾನವ ಜನಾಂಗದ ದುಃಖಕರವಾದ ದುರವಸ್ಥೆಯನ್ನು ತಿಳಿಸಬಹುದು: “ಮಾನವನು ಪಾಪದಲ್ಲಿ ಕಳೆದುಹೋಗಿದ್ದಾನೆ—ಚೇತರಿಸಿಕೊಳ್ಳಲು ಯಾವ ನಿರೀಕ್ಷೆಯೂ ಇರುವದಿಲ್ಲ.” ಕೀರ್ತನೆಗಾರನು ಹೀಗೆ ಹೇಳಿದನು, “ಒಳ್ಳೆಯದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ. ಪ್ರತಿಯೊಬ್ಬನು ದಾರಿತಪ್ಪಿದವನು, ಎಲ್ಲರೂ ಕೆಟ್ಟುಹೋದವರೇ” (ಕೀರ್ತನೆ 14:3). ಯೆಹೆಜ್ಕೇಲನು ದುಃಖಕರ ದುಷ್ಪರಿಣಾಮದ ಬಗ್ಗೆ ತಿಳಿಸಿದನು: “ಪಾಪಮಾಡುವವನು ಸಾಯುವನು” (ಯೆಹೆಜ್ಕೇಲ 18:20).

ಅಪಾಯದಲ್ಲಿರುವ ಜೀವಗಳ ಕುರಿತ ಕಥೆಗೆ ಒಂದು ದೇಶದ ಹೃದಯವನ್ನು ಸ್ಪರ್ಶಿಸುವ ಶಕ್ತಿಯಿರುತ್ತದೆ: ಬಾವಿಯಲ್ಲಿ ಬಿದ್ದಿರುವ ಒಂದು ಮಗು, ಗಣಿ ಕೆಲಸಗಾರರು ಸುರಂಗದಲ್ಲಿ ಸಿಕ್ಕಿಕೊಂಡಿರುವದು, ಬೆಟ್ಟ ಹತ್ತುವವರು ಕಾಡಿನ ಮಧ್ಯದಲ್ಲಿ ಸಿಕ್ಕಿಕೊಂಡಿರುವದು. ಹಾಗೆಯೇ, ಚೇತರಿಸಿಕೊಳ್ಳುವದಕ್ಕೆ ಯಾವ ನಿರೀಕ್ಷೆಯೂ ಇಲ್ಲದೆ ಪಾಪದಲ್ಲಿ ಕಳೆದು ಹೋಗಿರುವ ಲೋಕದ ವಿಚಾರವು ನಮ್ಮ ಹೃದಯವನ್ನು ಇನ್ನೂ ಹೆಚ್ಚಾಗಿ ಸ್ಪರ್ಶಿಸಬೇಕಲ್ಲವೆ!

ಈ ದುಃಖದ ಸ್ಥಿತಿಯೊಳಗೆ ಒಂದು ನಿರೀಕ್ಷೆಯ ಕಿರಣವು ಮೂಡಿತು: ಒಬ್ಬ ಮೆಸ್ಸೀಯನು—ಒಬ್ಬ ರಕ್ಷಕನು—ವಾಗ್ದಾನಮಾಡಲ್ಪಟ್ಟನು. ಎರಡನೆಯ ಆವೃತ್ತಿಯು ಮುಖಪುಟದ ಲೇಖನವು ಹೀಗಿರಬಹುದಾಗಿದೆ: "ಮೆಸ್ಸೀಯನು ಬಂದಿದ್ದಾನೆ—ರಕ್ಷಣೆಯು ಸಾಧ್ಯವಿದೆ." ದೇವರು ದುರಂತ ಸ್ಥಿತಿಯಲ್ಲಿರುವ ಮನುಷ್ಯನನ್ನು ಕಂಡು ಆತನನ್ನು ಬಹಳವಾಗಿ ಪ್ರೀತಿಸಿ ಅವನು ರಕ್ಷಣೆ ಹೊಂದುವಂತಾಗಲು ತನ್ನ ಒಬ್ಬನೇ ಮಗನನ್ನು ಕೊಟ್ಟನು (ಯೋಹಾನ 3:16). ಇದು ಏಕೆ ಶುಭವಾರ್ತೆ ಎಂಬದು ಈಗ ನಿಮಗೆ ಅರ್ಥವಾಗಲಾರಂಭಿಸಿದೆಯಾ, ಹಸಿವೆಯಿಂದಿದ್ದ ಆತ್ಮಗಳಿಂದ ಇದು ಏಕೆ ಆಸಕ್ತಿಯಿಂದ ಸ್ವೀಕರಿಸಲ್ಪಟ್ಟಿತೆಂಬದು ನಿಮಗೆ ತಿಳಿಯಲಾರಂಭಿಸಿದೆಯಾ? ಆದಿ ಕ್ರೈಸ್ತರು ಎಲ್ಲೆಡೆಯೂ ಹೋಗಿ, "ನೋಡಿರಿ, ಲೋಕವು ಎಂಥಾ ಸ್ಥಿತಿಗೆ ಬರುತ್ತಿದೆ" ಎಂದು ಹೇಳಲಿಲ್ಲ, ಬದಲಾಗಿ, "ನೋಡಿರಿ, ಯಾರು ಲೋಕಕ್ಕೆ ಬಂದಿದ್ದಾರೆ" ಎಂದು ಸಾರಿದರು!

ಕೊನೆಗೂ, ಮೆಸ್ಸೀಯನು—ಯೇಸುಕ್ರಿಸ್ತನು—ಇಡೀ ಲೋಕದ ಪಾಪಗಳಿಗಾಗಿ ಕಲ್ವಾರಿ ಶಿಲುಬೆಯ ಮೇಲೆ ಸತ್ತನು (1 ಕೊರಿಂಥ 15:1-4). ಯೇಸು ತನ್ನ ಪುನರುತ್ಥಾನದ ಬಳಿಕ, ಮನುಷ್ಯರಿಗೆ ಆತನ ಯಜ್ಞದ ಬಗ್ಗೆ ಅರ್ಥವಾಗುವ ಹಾಗೆ ಸರಳ ಪದಗಳಲ್ಲಿ ವಿವರಿಸಿದನು (ಮತ್ತಾಯ 28:18-20; ಮಾರ್ಕ 16:15, 16). ಆದುದರಿಂದ ಕಡೇ ಆವೃತ್ತಿಯ ಮುಖಪುಟದ ಶಿರೋನಾಮೆಯು ಹೀಗಿರಬಹುದಾಗಿದೆ: "ಎಲ್ಲರೂ ರಕ್ಷಿಸಲ್ಪಡಬಹುದು! ಸರಳ ಕರಾರುಗಳು ಪ್ರಕಟಿಸಲ್ಪಟ್ಟಿದೆ." ಯೇಸು ನಮ್ಮೊಬ್ಬೊಬ್ಬರಿಗಾಗಿಯೂ ಸತ್ತನು ಮತ್ತು ನಾವೆಲ್ಲರೂ ಆತನ ಮರಣದಿಂದ ಪ್ರಯೋಜನವನ್ನು ಪಡೆಯಬಹುದು. ಇದು ಲೋಕದಲ್ಲೆಲ್ಲಾ ಪ್ರತಿಧ್ವನಿಸಬೇಕಾದಂಥ ಸುದ್ದಿಯಾಗಿರುತ್ತದೆ!

*ಸುವಾರ್ತೆ: ಭಾಗಗಳು.* ಬೈಬಲ್‌ನಲ್ಲಿ ಕೆಲವು ಸಾರಿ "ಸುವಾರ್ತೆ" ಎಂಬ ಪದವು ಸಾಮಾನ್ಯ ಅರ್ಥದಲ್ಲಿ, ಕರ್ತನಿಂದ ಬರುವ ಯಾವದೇ ಶುಭವಾರ್ತೆಯನ್ನು ಸೂಚಿಸುವದಕ್ಕಾಗಿ ಉಪಯೋಗಿಸಲ್ಪಟ್ಟಿದೆ.[187] ಈ ಪದವನ್ನು ಹೆಚ್ಚು ನಿರ್ದಿಷ್ಟವಾದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಾಗ, ಅದು ಮುಖ್ಯವಾಗಿ ಯೇಸುವಿನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳ ಸುತ್ತ ಕೇಂದ್ರಿಕೃತವಾಗಿರುತ್ತದೆ (1 ಕೊರಿಂಥ 15:1-4)—ಮತ್ತು ಅದನ್ನು ವಿವಿಧ ಭಾಗಗಳಾಗಿ ವಿಭಾಗಿಸಬಹುದು. ವರ್ಷಗಳ ಹಿಂದೆ, ಒಂದು ಸರಳ ಸಾರಾಂಶವನ್ನು ಒದಗಿಸುವ ಕಥೆಯೊಂದನ್ನು ಕೇಳಿದೆನು:

ಒಬ್ಬ ಬೋಧಕನು ಪಟ್ಟಣದಿಂದ ಪಟ್ಟಣಕ್ಕೆ ಹೋಗಿ ಸುವಾರ್ತೆಯನ್ನು ಸಾರುತ್ತಿದ್ದನು. ಆತನು ಒಂದು ಶಾಲೆಯ ಆವರಣದಲ್ಲಿ ಪ್ರಸಂಗಿಸುವದಕ್ಕೆ ಅನುಮತಿಯನ್ನು ಪಡೆದ ಮೇಲೆ ಪಟ್ಟಣದಲ್ಲೆಲ್ಲಾ ಸುತ್ತಾಡಿ ಈ ರಾತ್ರಿ ತಾನು ಅಲ್ಲಿ ಬೋಧಿಸಲಿದ್ದಾನೆಂದು ಜನರಿಗೆಲ್ಲಾ ಹೇಳುತ್ತಾ ಬರುತ್ತಿದ್ದನು. ಒಂದು ದಿನ ಆತನು ದಾರಿಯಲ್ಲಿ ಒಬ್ಬ ಬಾಲಕನನ್ನು

ಭೇಟಿಯಾದನು.

ಆ ಹುಡುಗನು, “ಹಲೋ, ನೀವು ಯಾರು?” ಎಂದು ಆತನನ್ನು ಕೇಳಿದನು.

“ನಾನು ಸುವಾರ್ತೆಯ ಬೋಧಕನು” ಎಂದನು ಈ ವ್ಯಕ್ತಿ. “ಮನೆಗೆ ಹೋಗಿ ಈ ರಾತ್ರಿ ಶಾಲೆಯ ಆವರಣದಲ್ಲಿ ಸುವಾರ್ತೆಯನ್ನು ಸಾರಲಾಗುತ್ತದೆಂದು ನಿನ್ನ ತಾಯಿಗೆ ತಿಳಿಸು.”

ಬಾಲಕನು ಗೊಂದಲಕ್ಕೊಳಗಾದವನಂತೆ ತೋರಿದನು, “ಸುವಾರ್ತೆ ಸಾರುವದಾ? ಸುವಾರ್ತೆ ಅಂದರೇನು?” ಎಂದು ಕೇಳಿದನು.

ಅದಕ್ಕೆ ಬೋಧಕನು ಮೂರು ಬೆರಳುಗಳನ್ನು ಎತ್ತಿ ತೋರಿಸಿದನು. “ಸುವಾರ್ತೆಯು ಮೂರು ಭಾಗಗಳನ್ನು ಹೊಂದಿದೆ.” ಆತನು ತನ್ನ ಮೂರು ಬೆರಳುಗಳನ್ನು ಗುರುತಿಸಿ ಮುಂದುವರಿಸಿ ಹೇಳಿದನು: “ನಂಬಬೇಕಾದ ವಾಸ್ತವಾಂಶಗಳು, ವಿಧೇಯರಾಗಬೇಕಾದ ಆಜ್ಞೆಗಳು, ಮತ್ತು ಅನುಭವಿಸಬೇಕಾದ ವಾಗ್ದಾನಗಳು.” ಆತನು ಇನ್ನು ತಿಳಿಸಿ ಹೇಳಿದ್ದೇನೆಂದರೆ, “ನಂಬಬೇಕಾದ ಮೂರು ವಾಸ್ತವಾಂಶಗಳಿರುತ್ತವೆ:” -ಪುನಃ ಆತನು ತನ್ನ ಬೆರಳುಗಳನ್ನು ತಟ್ಟುತ್ತಾ ಹೇಳಿದನು—“ಯೇಸುವಿನ ಮರಣ, ಹೂಣಲ್ಪಡುವಿಕೆ ಹಾಗೂ ಪುನರುತ್ಥಾನ.” ಆತನು ಮಾತಾಡುತ್ತಾ ಸಾಗಿದಂತೆ ತನ್ನ ಮೂರು ಬೆರಳುಗಳನ್ನು ಉಪಯೋಗಿಸುತ್ತಲೇ ಇದ್ದನು: “ವಿಧೇಯವಾಗಬೇಕಾದ ಮೂರು ಆಜ್ಞೆಗಳಿರುತ್ತವೆ: ನಂಬು, ಪಶ್ಚಾತ್ತಾಪಪಡು, ಮತ್ತು ದೀಕ್ಷಾಸ್ನಾನಹೊಂದು. ಮತ್ತು ಅನುಭವಿಸುವದಕ್ಕೆ ಮೂರು ವಾಗ್ದಾನಗಳಿರುತ್ತವೆ: ಪಾಪಗಳ ಪರಿಹಾರ, ಪವಿತ್ರಾತ್ಮನ ವರ ಮತ್ತು ಪರಲೋಕದ ವಾಗ್ದಾನ.”

ಉತ್ಸಾಹಗೊಂಡ ಬಾಲಕನು ಮನೆಗೆ ಓಡಿ ಹೋದನು. “ಅಮ್ಮಾ, ನಾನು ಈಗಷ್ಟೇ ಒಬ್ಬ ಸುವಾರ್ತಾಬೋಧಕನನ್ನು ಸಂಧಿಸಿದೆನು, ಮತ್ತು ಆತನು ಈ ರಾತ್ರಿ ಶಾಲೆಯ ಕೋಣೆಯಲ್ಲಿ ಸುವಾರ್ತೆಯನ್ನು ಸಾರಲಿದ್ದಾನೆಂದು ಹೇಳಿದನು!” ಎಂಬದಾಗಿ ತಾಯಿಗೆ ತಿಳಿಸಿದನು.

ತಾಯಿಗೆ ಏನೆಂದು ತೋಚದೆ, “ಯಾವ ಸುವಾರ್ತಾ ಬೋಧಕ?” ಎಂದಳು.

“ಅಯ್ಯೋ ಅಮ್ಮಾ” ಎಂದು ಬಾಲಕನು ತನ್ನ ಮೂರು ಬೆರಳುಗಳನ್ನು ಎತ್ತಿ ಹಿಡಿದು ಮಾತಿಗಿಳಿದನು, ಆತನು ಮೂರು ಬೆರಳನ್ನು ತೋರಿಸುತ್ತಾ, “ಸುವಾರ್ತೆಯಲ್ಲಿ ಮೂರು ಭಾಗಗಳಿವೆ . . . ಮತ್ತು ಮೂರು . . . ಮತ್ತು ಮೂರು. . . .” ಎಂದು ಕಥೆಯನ್ನು ಆರಂಭಿಸಿದನು. ಅಂತಿಮವಾಗಿ, ಆತನಿಗೆ ಏನು ಹೇಳಬೇಕೆಂದು ತೋಚದೆ ಹೀಗೆ ಹೇಳಿದನು, “ಆ ಸುವಾರ್ತೆ ಬೋಧಕನು ತನ್ನ ಬೆರಳುಗಳಲ್ಲೇ ಮಾತಾಡುತ್ತಾನೆಂದು ನನಗನ್ನಿಸುತ್ತದೆ,” ಎಂದನು.

ಬೋಧಕನಿಂದ ಕೊಡಲ್ಪಟ್ಟ ಸಾರಾಂಶವು ಸುವಾರ್ತೆಯಲ್ಲಿರುವ ಅಂಶಗಳ ಒಂದು ಅತ್ಯಂಥ ಸರಳವಾದ ವಿವರಣೆಯಾಗಿರುವದು, ಆದರೆ ಯುಗಯುಗಳಿಂದಲೂ ಜನರ ಹೃದಯಗಳಲ್ಲಿ ರೋಮಾಂಚನವನ್ನುಂಟು ಮಾಡುತ್ತಾ ಬಂದಿರುವ ಈ ಶುಭವಾರ್ತಮಾನವನ್ನು ಅರ್ಥಮಾಡಿಕೊಳ್ಳಲು ಅದು ನಮಗೆ ಸಹಾಯ ಮಾಡಬಹುದಾಗಿದೆ.

1. ನಂಬಬೇಕಾದ ವಾಸ್ತವಾಂಶಗಳು. 1 ಕೊರಿಂಥ 15:1-4 ರಲ್ಲಿ, ಪೌಲನು ಮೂರು ಪ್ರಾಥಮಿಕ ಸತ್ಯಾಂಶಗಳ ಬಗ್ಗೆ ಮಾತಾಡುತ್ತಾನೆ:

> ಸಹೋದರರೇ, ನಾನು ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ ತರುತ್ತೇನೆ; ನೀವು ಅದನ್ನು ಸ್ವೀಕರಿಸಿದಿರಿ, ಅದರಲ್ಲಿ ನಿಂತಿದ್ದೀರಿ. ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದೆನೋ ನೀವು ಅದನ್ನು ಭಟ್ಟಿಯಾಗಿ ಹಿಡುಕೊಂಡರೆ ಮತ್ತು ನಿಮ್ಮ ನಂಬಿಕೆಯು ನಿರಾಧಾರವಾಗದ ಪಕ್ಷಕ್ಕೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ. ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನೆಂದರೆ ಶಾಸ್ತ್ರದಲ್ಲಿ ತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು.

ಸುವಾರ್ತೆಯು ಯೇಸುವಿನ ಮರಣ, ಹೂಣಲ್ಪಡುವಿಕೆ ಹಾಗೂ ಪುನರುತ್ಥಾನಗಳ ಸುತ್ತ ಕೇಂದ್ರಿಕೃತವಾಗಿರುತ್ತದೆ. ಅದೇ ನಮ್ಮ ನಂಬಿಕೆಯ ಕೇಂದ್ರ ಮತ್ತು ಹೊಸ ಒಡಂಬಡಿಕೆಯ ಇತರ ಬೋಧನೆಗಳೆಲ್ಲವು ನಿಂತಿರುವಂಥ ಅಸ್ತಿವಾರವಾಗಿರುತ್ತದೆ.

2. ವಿಧೇಯರಾಗಬೇಕಾದ ಆಜ್ಞೆಗಳು. ಸುವಾರ್ತೆಯಲ್ಲಿ ನಂಬಬೇಕಾಗಿರುವ ವಾಸ್ತವಾಂಶಗಳಿರುತ್ತವೆಂದು ಅನೇಕರಿಗೆ ಗೊತ್ತಿದೆ ಆದರೆ ಅದರಲ್ಲಿ ವಿಧೇಯರಾಗಬೇಕಾದ ಆಜ್ಞೆಗಳಿರುತ್ತವೆಂಬುದು ಅನೇಕರಿಗೆ ತಿಳಿಯದು. ಸುವಾರ್ತೆಗೆ *ವಿಧೇಯರಾಗುವ* ಬಗ್ಗೆ ಮಾತಾಡುವಂಥ ಈ ವಚನಗಳನ್ನೊಮ್ಮೆ ಗಮನಿಸಿರಿ:

> . . . ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ *ಸುವಾರ್ತೆಗೆ ಒಳಪಡದವರಿಗೂ* (ವಿಧೇಯರಾಗದವರಿಗೂ) ಪ್ರತೀಕಾರವನ್ನು ಸಲ್ಲಿಸುವನು (2 ಥೆಸಲೋನಿಕ 1:7,8; ಒತ್ತಿ ಹೇಳಿದ್ದು ನನ್ನದು).

> ನ್ಯಾಯವಿಚಾರಣೆಯ ಸಮಯ ಬಂದದೆ; ಆ ವಿಚಾರಣೆಯು ದೇವರ ಮನೆಯಲ್ಲಿಯೇ ಪ್ರಾರಂಭವಾಯಿತಲ್ಲಾ. ಅದು ನಮ್ಮಲ್ಲಿ ಪ್ರಾರಂಭವಾಗಲು ದೇವರ ಸುವಾರ್ತೆಯನ್ನು ನಂಬಲೊಲ್ಲದವರ ಗತಿ ಏನಾಗಬಹುದು? (1 ಪೇತ್ರ 4:17).

*ವಾಸ್ತವಾಂಶ*ಗಳಿಗೆ ವಿಧೇಯರಾಗಲು ಆಗದು ಆದ್ದರಿಂದ, ಸಹಜವಾಗಿಯೇ ಸುವಾರ್ತೆಯು *ಆಜ್ಞೆಗಳನ್ನು* ಸಹ ಹೊಂದಿದೆ. ಹಾಗಾದರೆ ಒಂದು ಪ್ರಶ್ನೆಯು ಉದ್ಭವವಾಗುತ್ತದೆ: ಸುವಾರ್ತೆಯು ಪ್ರಾಥಮಿಕವಾಗಿ ಯೇಸುವಿನ ಮರಣ, ಹೂಣಲ್ಪಡುವಿಕೆ ಹಾಗೂ ಪುನರುತ್ಥಾನಗಳ ಕುರಿತಾಗಿದ್ದಲ್ಲಿ, ಒಬ್ಬನು ಹೇಗೆ ಅದಕ್ಕೆ ವಿಧೇಯನಾಗಲು ಸಾಧ್ಯ? ರೋಮಾಪುರ 6:17, 18 ಹೇಳುತ್ತದೆ, ". . . ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ *ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನ* (ವಿಧೇಯ)*ರಾದದರಿಂದಲೂ* ಪಾಪದಿಂದ ಬಿಡುಗಡೆಹೊಂದಿ ನೀತಿಗೆ ದಾಸರಾದದರಿಂದಲೂ . . ." (ಒತ್ತಿ ಹೇಳಿದ್ದು ನನ್ನದು). ರೋಮಾಪುರದಲ್ಲಿನ ಕ್ರೈಸ್ತರು ಅಕ್ಷರಶಃ ಯೇಸುವಿನ ಮರಣ, ಹೂಣಲ್ಪಡುವಿಕೆ ಹಾಗೂ ಪುನರುತ್ಥಾನಗಳಲ್ಲಿ

ಭಾಗಿಯಾಗಿರಲಿಲ್ಲ, ಆದರೆ ಅದರ "ಕಲಿಸಲ್ಪಟ್ಟ ಬೋಧನೆ" ಗೆ (ನಮೂನೆಗೆ) ವಿಧೇಯರಾಗಿದ್ದರು. ಅವರು ಅದನ್ನು ಹೇಗೆ ಮಾಡಿದರು? ಆ ಅಧ್ಯಾಯದಲ್ಲಿನ ಮುಂಚಿನ ವಚನಗಳು ಅದನ್ನು ನಮಗೆ ತಿಳಿಸುತ್ತವೆ:

> ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ *ಆತನೊಂದಿಗೆ ಹೂಣಲ್ಪಟ್ಟೆವು.* ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ *ಎಬ್ಬಿಸಲ್ಪಟ್ಟಂತೆಯೇ* ನಾವು ಕೂಡ *ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು* (6:3, 4; ಒತ್ತಿ ಹೇಳಿದ್ದು ನನ್ನದು).

ಆ ಕ್ರೈಸ್ತರು ಪ್ರಾಯಶ್ಚಿತ್ತಗೊಂಡ ವಿಶ್ವಾಸಿಗಳಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ (ನೀರಿನಲ್ಲಿ ಮುಳುಗಿ) ಸುವಾರ್ತೆಯ ಒಂದು "ಕಲಿಸಲ್ಪಟ್ಟ ಬೋಧನೆ" ಗೆ (ನಮೂನೆಗೆ) ವಿಧೇಯರಾಗಿದ್ದರು.

ನಾವು ಸುವಾರ್ತೆಯ ಆಜ್ಞೆಗಳನ್ನು ಈ ತಲೆಬರಹದಲ್ಲಿ ಸಾರಾಂಶಗೊಳಿಸಬಹುದು: (1) ನಾವು ಸುವಾರ್ತೆಯ ಸತ್ಯವನ್ನು ನಂಬಬೇಕು ಮತ್ತು ಆ ನಂಬಿಕೆಯನ್ನು ಅರಿಕೆಮಾಡಲು ಮನಸ್ಸುಳ್ಳವರಾಗಿರಬೇಕು (10:9, 10). (2) ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡಬೇಕು, ಮತ್ತು ಹೀಗೆ ನಮ್ಮ ಪಾಪದ "ಪೂರ್ವಸ್ವಭಾವ" ವನ್ನು ಶಿಲುಬೆಗೆ ಹಾಕಬೇಕು (ಲೂಕ 13:3). (3) ನಮ್ಮ ಪಾಪಗಳು ತೊಳೆದುಹಾಕಲ್ಪಡುವಂತೆ ನಾವು ದೀಕ್ಷಾಸ್ನಾನದಲ್ಲಿ ಹೂಣಲ್ಪಡಬೇಕು (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; 22:16). ನೀರಿನ ಸಮಾಧಿಯಿಂದ ಎದ್ದು ಬರುವವರಾಗಿ, ನಾವು ಇನ್ನು ಮೇಲೆ ದೇವರ ವಾಕ್ಯ ಉಪದೇಶಗಳ ಪ್ರಕಾರ ಹೊಸ ಜೀವನವನ್ನು ನಡಿಸಬೇಕು.

3. ಅನುಭವಿಸುವದಕ್ಕೆ ವಾಗ್ದಾನಗಳು. ಅಂತಿಮವಾಗಿ, ಸುವಾರ್ತೆಯು ಶುಭಸುದ್ಧಿಯಾಗಿದೆ ಯಾಕೆಂದರೆ ಅದರೊಳಗೆ ನಮಗಾಗಿ ಅನುಭವಿಸಲು ವಾಗ್ದಾನಗಳು ತುಂಬಿರುತ್ತವೆ. ಉದಾಹರಣೆಗೆ, ಪೌಲನು ಸುವಾರ್ತೆಯನ್ನು "ಸಮಾಧಾನ ಸುವಾರ್ತೆ" ಎಂದು ಕರೆದನು (ಎಫೆಸ 6:15).

ಸುವಾರ್ತೆಯ ಎರಡು ವಿಶೇಷ ವಾಗ್ದಾನಗಳು "ವಿಧೇಯವಾಗಬೇಕಾದ ಅಜ್ಞೆಗಳೊಂದಿಗೆ" ನೇರವಾಗಿ ಜೋಡಣೆಯಾಗಿರುತ್ತವೆ. ಪೇತ್ರನು ಯೇಸುವಿನ ಬಗ್ಗೆ ಬೋಧಿಸಿದ್ದನ್ನು ಕೇಳಿ "ಹೃದಯಕ್ಕೆ ಅಲಗು ನೆಟ್ಟಂತಾದ ಜನರು" (ಅಪೊಸ್ತಲರ ಕೃತ್ಯಗಳು 2:36, 37), "ಸಹೋದರರರೇ, ನಾವೇನು ಮಾಡಬೇಕು?" ಎಂದು ಕೂಗಿಕೇಳಿದರು (ಅಪೊಸ್ತಲರ ಕೃತ್ಯಗಳು 2:37). ಪೇತ್ರನು ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). ನಮ್ಮ ಹಿಂದಿನ ಪಾಪಗಳು ಕ್ಷಮಿಸಲ್ಪಡುವವು, ಮತ್ತು ದೇವರ ಆತ್ಮನು ನಮಗೆ ಕ್ರೈಸ್ತ ಜೀವನವನ್ನು ನಡಿಸುವದಕ್ಕೆ ಸಹಾಯ ಮಾಡುವನು—ಎಂಥಾ ಅದ್ಭುತವಾದ ವಾಗ್ದಾನಗಳು!

ಸುವಾರ್ತೆಯ ಅತ್ಯಂತ ಅದ್ಭುತವಾದ ವಾಗ್ದಾನಗಳಲ್ಲೊಂದು 1 ಯೋಹಾನ 2:25 ರಲ್ಲಿ ಸಿಕ್ಕುತ್ತದೆ: "ಕ್ರಿಸ್ತನು ತಾನು ಕೊಡುತ್ತೇನೆಂದು ನಮಗೆ ವಾಗ್ದಾನಮಾಡಿದ್ದು *ನಿತ್ಯಜೀವವು*" (ಒತ್ತಿ ಹೇಳಿದ್ದು ನನ್ನದು). ನಾವು "ಜೀವದಿಂದೆದ್ದು ಹೊಸಬರಾಗಿ" ನಡಕೊಳ್ಳುವದನ್ನು ಮುಂದುವರೆಸುವದಾದರೆ, ಕೊನೆಗೆ ನಾವು ದೇವರ ಸಂಗಡ ಪರಲೋಕದಲ್ಲಿರುವೆವು!

ಇದು ಎಂದೆಂದೂ ಹೇಳಲ್ಪಟ್ಟ ಅತ್ಯಂಥ ಅದ್ಭುತವಾದ ಕಥೆ ಮತ್ತು ಪ್ರಕಟಗೊಂಡ ಅತ್ಯಂಥ ಶಕ್ತಿಶಾಲಿ ಸತ್ಯಗಳಲ್ಲೊಂದಾಗಿದೆ. ರೂಪರೇಖೆಯು ಸರಳವಾಗಿರಬಹುದು ಆದರೆ ಅದರಲ್ಲಿನ ಪರಿಕಲ್ಪನೆಗಳು ಭೂಮಿಯನ್ನು ಅಲುಗಾಡಿಸುವಂಥವುಗಳಾಗಿವೆ, ಯಾಕೆಂದರೆ ಇದರಲ್ಲಿಯೇ ರಕ್ಷಣೆಯುಂಟು ಮಾಡುವದಕ್ಕೆ ದೇವರ ಶಕ್ತಿಯು ಅಡಗಿರುತ್ತದೆ!

*ಸುವಾರ್ತೆ: ಶಕ್ತಿ.* ಬರ್ಲಿನ್ ಗೋಡೆಯು ಇನ್ನು ನಿಂತಿರುವ ವೇಳೆಯಲ್ಲಿ, ಬೈಬಲ್.ಗಳನ್ನು ತುಂಬಿಸಿಕೊಂಡ ಒಂದು ಲಾರಿಯು East Berlin (ಪೂರ್ವ ಬರ್ಲಿನ್ ( ಕಡೆಗೆ ಹೊರಟಿತ್ತು ,ಅದನ್ನು ಗಡಿರೇಖೆಯಲ್ಲಿಯೇ ತಡೆದು ನಿಲ್ಲಿಸಿ ಮುಂದಕ್ಕೆ ದಾಟಲು ಅನುಮತಿಸಲಿಲ್ಲ. ಸತ್ಯವೇದದ ವಾಕ್ಯಗಳು "ವಿಧ್ವಂಸಕತೆಯನ್ನು ಉಂಟುಮಾಡುವಂಥ ವುಗಳು" ಎಂದು ಅಧಿಕಾರಿಗಳು ವಾದಿಸಿದರು. ಅವುಗಳು ಆ ಉದ್ದೇಶಕ್ಕಾಗಿ ಆಗಿರಲಿಲ್ಲವಾದರೂ, ಅವರು ಸುವಾರ್ತೆಯ ಶಕ್ತಿಗೆ ಸಾಕ್ಷಿ ಹೇಳಿದ್ದರು.

ಕರ್ತನು *ನುಡಿದ* ಮಾತುಗಳಿಗೆ ಶಕ್ತಿಯಿದೆ ಎಂದು ನಮ್ಮಲ್ಲಿ ಬಹುಮಂದಿಗೆ ತಿಳಿದದೆ. ಆದಿಯಲ್ಲಿ, ಆತನು ಮಾತಿನಿಂದ ಲೋಕಗಳನ್ನು ಅಸ್ತಿತ್ವಕ್ಕೆ ತಂದನು. "ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು; ಆತನು ಆಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು" (ಕೀರ್ತನೆ 33:9). ಯೇಸು ಭೂಮಿಯ ಮೇಲಿರುವ ವೇಳೆ, ಆತನ ನುಡಿದ ಮಾತುಗಳಿಗೆ ಶಕ್ತಿಯಿತ್ತು: "ಆತನು ಎದ್ದು ಗಾಳಿಯನ್ನು ಗದರಿಸಿ ಸಮುದ್ರಕ್ಕೆ 'ಸುಮ್ಮನಿರು, ಮೊರೆಯಬೇಡ' ಎಂದು ಅಪ್ಪಣೆ ಕೊಟ್ಟನು. ಅಪ್ಪಣೆ ಕೊಡುತ್ತಲೇ ಗಾಳಿ ನಿಂತುಹೋಗಿ ಎಲ್ಲವೂ ಶಾಂತವಾಯಿತು" (ಮಾರ್ಕ 4:39). "ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ ಲಾಜರನೇ, ಹೊರಗೆ ಬಾ ಎಂದು ಕೂಗಿದನು" (ಯೋಹಾನ 11:43), ಮತ್ತು ಲಾಜರನು ಸಮಾಧಿಯಿಂದ ಹೊರಗೆ ಬಂದನು. ದೇವರ ಲಿಖಿತ ವಾಕ್ಯವು, ಉದ್ದೇಶಗಳಿಗಾಗಿ, ಆತನ ನುಡಿದ ವಾಕ್ಯಗಳಿಗಿಂತ ಅಲ್ಪ ಬಲವುಳ್ಳದ್ದೇನಲ್ಲ .ಇಂದು ಒಬ್ಬ ವ್ಯಕ್ತಿಯು ಬರೆದ ಮಾತುಗಳನ್ನು—ಒಂದು ಸಹಿ ಹಾಕಿದ ದಸ್ತಾವೇಜು—ನುಡಿದ ಮಾತುಗಳಿಗಿಂತಲೂ ಹೆಚ್ಚು ಕರಾರುಬದ್ಧವೆಂದು ಪರಿಗಣಿಸುತ್ತೇವೆ. ಅದೇ ಪ್ರಕಾರದಲ್ಲಿ, ಸುವಾರ್ತೆಯ ಲಿಖಿತ ದಾಖಲೆಯು ನುಡಿದ ಸುವಾರ್ತೆಯ ಮೂಲ ಸ್ವರೂಪದ ಶಕ್ತಿಯನ್ನೇ ಒಳಗೊಂಡಿರುತ್ತದೆ.

1. ಪ್ರಕಟಿಸುವ ಶಕ್ತಿ**.** ಸುವಾರ್ತೆಗೆ ಯಾವ ಶಕ್ತಿಯಿದೆ? ಅದಕ್ಕೆ ಪ್ರಕಟಗೊಳಿಸುವ ಶಕ್ತಿಯಿದೆ. ಪೌಲನು ಸುವಾರ್ತೆಯನ್ನು "ದೇವರ ಶಕ್ತಿ" ಎಂದು ಹೇಳಿದ ಬಳಿಕ, ಆತನು ಮುಂದುವರೆದು ಹೇಳಿದ್ದೇನೆಂದರೆ, "ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲಿತವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥ ದಾಗಿದೆ" (1:16, 17). ನಮ್ಮನ್ನು ನೀತಿವಂತರೆಂದು ಎಣಿಸುವ ದೇವರ ಸಂಕಲ್ಪದ ವಿಷಯದಲ್ಲಿ,

ಆತನು ತನ್ನ ಚಿತ್ತವನ್ನು ಬೇರೆ ಯಾವದೇ ರೀತಿಯಲ್ಲಿ ಪ್ರಕಟಿಸಿರುವದಿಲ್ಲ.

2. ರಕ್ಷಿಸುವ ಶಕ್ತಿ**.** ಸುವಾರ್ತೆಗೆ ರಕ್ಷಿಸುವ ಶಕ್ತಿಯಿದೆ ಎಂಬದನ್ನು ನಾವು ಈಗಾಗಲೇ ಒತ್ತಿಹೇಳಿದ್ದೇವೆ: "ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ, ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ" (1:16). ಪೌಲನು ಕೊರಿಂಥದವರಿಗೆ ಬರೆದಾಗ, ಆತನು ". . . ನಾನು ನಿಮಗೆ ಸಾರಿದ ಸುವಾರ್ತೆಯು. . . ಅದರ ಮೂಲಕ ನೀವು ರಕ್ಷಿಸಲ್ಪಟ್ಟೀರಿ. . ." ಎಂಬ ಬಗ್ಗೆ ಮಾತಾಡುತ್ತಾನೆ (1 ಕೊರಿಂಥ 15:1, 2).

3. ರೂಪಾಂತರಗೊಳಿಸುವ ಶಕ್ತಿ**.** ಸುವಾರ್ತೆಗೆ *ರೂಪಾಂತರಗೊಳಿಸು* ಶಕ್ತಿ ಸಹ ಇರುತ್ತದೆ. ಪಂಚಾಶತ್ತಮ ದಿನದಂದು ದೈವಿಕ ಶಕ್ತಿಯು[188] ಅತ್ಯಂಥ ದೊಡ್ಡದಾಗಿ ತೋರಿಬಂದಿದ್ದು "ಬಿರುಗಾಳಿ ಬೀಸುತ್ತದೋ ಎಂಬಂತಹ ಮಹಾಶಬ್ಧ" ದಲ್ಲಿಯಾಗಲಿ ಅಥವಾ "ಅಗ್ನಿ ನಾಲಿಗೆಗಳು" ಆಗಲಿ ಆಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 2:2, 3), ಆದರೆ ಸುವಾರ್ತೆಯು ಸಾರಲ್ಪಟ್ಟಾಗ ಸಾವಿರಾರು ಜನರ ಜೀವಿತಗಳಲ್ಲಾದ ಬದಲಾವಣೆಯಲ್ಲಿಯೇ ಅದು ತೋರಿಬಂದಿತು (ಅಪೊಸ್ತಲರ ಕೃತ್ಯಗಳು 2:6-47). ಸುವಾರ್ತೆಯ ಸಂದೇಶವನ್ನು ಆಲಿಸಿದ ಬಳಿಕ ಯಾವ ವ್ಯಕ್ತಿಯು ಸಹ ಮುಂಚಿನಂತೆ ಇರುವದಕ್ಕೆ ಆಗುವದಿಲ್ಲ. ಪೌಲನು ನಮಗೆಲ್ಲಾ ಸವಾಲುಗೊಸುತ್ತಾನೆ: "ಕ್ರಿಸ್ತನ ಸುವಾರ್ತೆಗೆ ಯೋಗ್ಯರಾಗಿ ನಡೆದುಕೊಳ್ಳಿರಿ" (ಫಿಲಿಪ್ಪಿ 1:27).

4. ಬೆಳೆಯುವ ಶಕ್ತಿ**.** ಸುವಾರ್ತೆಯನ್ನು ಕೇಳಿದ ತಕ್ಷಣವೇ ಅದು ನಮ್ಮನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿರುವದು ಮಾತ್ರವಲ್ಲದೆ, ನಾವು *ನಿರಂತರವಾಗಿ ಬದಲಾಗುವಂತೆ* ಮಾಡುವ ಶಕ್ತಿಯನ್ನು ಸಹ ಹೊಂದಿದೆ. ಕ್ರಮೇಣವಾಗಿ, ಅದು ನಮ್ಮನ್ನು "ಮಹಿಮೆಯಿಂದ ಮಹಿಮೆಗೆ" ಬದಲಾಯಿಸುತ್ತಾ ಕರ್ತನ ಸ್ವಾರೂಪ್ಯವುಳ್ಳವರಾಗುವಂತೆ ಮಾರ್ಪಡಿಸುವದು (2 ಕೊರಿಂಥ 3:18). ಸುವಾರ್ತೆಯು ನಮ್ಮ ಭಕ್ತಿವೃದ್ಧಿಗೊಳಿಸಲು ಶಕ್ತವಾದ ವಾಕ್ಯದ ಹೃದಯಭಾಗವಾಗಿದೆ (ಅಪೊಸ್ತಲರ ಕೃತ್ಯಗಳು 20:32). [ನಾವು] ವಾಕ್ಯದಿಂದ" *ಬೆಳೆಯುತ್ತಾ*" ಸಾಗುವ ಹಾಗೆ ಆ ವಾಕ್ಯಕ್ಕಾಗಿ ಹಂಬಲಿಸಬೇಕು (1 ಪೇತ್ರ 2:2; ಒತ್ತಿ ಹೇಳಿದ್ದು ನನ್ನದು).

5. ಸಂತೈಸುವ **(**ಸಂರಕ್ಷಿಸುವ**)** ಶಕ್ತಿ. ಸುವಾರ್ತೆ-ಕೇಂದ್ರಿಕೃತ ವಾಕ್ಯಕ್ಕೆ ನಮ್ಮನ್ನು ಸಂತೈಸುವ ಶಕ್ತಿ ಸಹ ಇದೆ (1 ಥೆಸಲೋನಿಕ 4:18) ಮತ್ತು ನಮ್ಮನ್ನು ಸಂರಕ್ಷಿಸುತ್ತದೆ. ಪೌಲನು ಕೊರಿಂಥದವರಿಗೆ, "ನಾನು ನಿಮಗೆ ಸಾರಿದ ಸುವಾರ್ತೆ. . . ನೀವು ಅದನ್ನು ಅಂಗೀಕರಿಸಿದಿರಿ ಮತ್ತು ಅದರಲ್ಲಿ ನಿಂತಿದ್ದೀರಿ" ಎಂದು ಜ್ಞಾಪಿಸಿದನು (1 ಕೊರಿಂಥ 15:1). "ಸುವಾರ್ತೆಯಿಂದುಂಟಾದ ನಿರೀಕ್ಷೆ" ಯು (ಕೊಲೊಸ್ಸೆ 1:23) ನಮಗೆ ಕಠಿಣ ಸಮಯಗಳಲ್ಲಿ ಸೈರಿಸಿಕೊಳ್ಳಲು ಸಹಾಯಮಾಡುತ್ತದೆ.

6. ತೀರ್ಪುಮಾಡುವ ಶಕ್ತಿ**.** ಕ್ರಿಸ್ತನ ಸುವಾರ್ತೆಗೆ *ತೀರ್ಪುಮಾಡುವ ಶಕ್ತಿ* ಸಹ ಇದೆ ಎಂಬದನ್ನು ಅರ್ಥಮಾಡಿ ಕೊಳ್ಳಬೇಕು. ಯೇಸು ಹೇಳಿದನು, "ನನ್ನನ್ನು ಲಕ್ಷ್ಯ ಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪು ಮಾಡುವಂಥದು ಒಂದು ಇದೆ, ಅದು ಯಾವದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪುಮಾಡುವದು" (ಯೋಹಾನ 12:48). ಬೈಬಲಿನ ಕುರಿತಾಗಿ Napoleon ಹೀಗೆ

ಹೇಳಿದನು, "ಅದೊಂದು ಬರೀ ಪುಸ್ತಕವಲ್ಲ, ಆದರೆ ಜೀವವುಳ್ಳ ಪ್ರಾಣಿ, ತನ್ನನ್ನು ವಿರೋಧಿಸುವದನ್ನೆಲ್ಲಾ ಜಯಿಸುವಂಥ ಶಕ್ತಿಯುಳ್ಳದ್ದು." ಸುವಾರ್ತೆಯನ್ನು ಆಲಿಸಿ, ಆಮೇಲೆ ಅದನ್ನು ತಿರಸ್ಕರಿಸುವದೆಂದರೆ ಆತ್ಮೀಕವಾಗಿ ಆತ್ಮಹತ್ಯೆಮಾಡಿಕೊಳ್ಳುವದಕ್ಕೆ ಸಮ!

*ಮುಕ್ತಾಯ:* ನಿಮ್ಮ ಜೀವಿತವನ್ನು ಮಾರ್ಪಡಿಸುವದಕ್ಕೆ ಸುವಾರ್ತೆಯ ಶಕ್ತಿಗೆ ನೀವೊಂದು ಅವಕಾಶ ಕೊಡುವಿರೆಂದು ನಿರೀಕ್ಷಿಸುತ್ತೇನೆ. ನೀವು ವಾಸ್ತವಾಂಶಗಳನ್ನು ನಂಬಬೇಕು, ಆಜ್ಞೆಗಳಿಗೆ ವಿಧೇಯರಾಗಬೇಕು, ಮತ್ತು ಹೀಗೆ ವಾಗ್ದಾನಗಳನ್ನು ಅನುಭವಿಸುವದಕ್ಕೆ ಶಕ್ತರಾಗುವಂತಾಗಬೇಕೆಂದು ಪ್ರಾರ್ಥಿಸುತ್ತೇನೆ.

ನೀವು ಅನೇಕ ಕಾರಣಗಳಿಗಾಗಿ ಕರ್ತನಿಗೆ ವಿಧೇಯರಾಗುವದಕ್ಕೆ ಸ್ಫೂರ್ತಿಗೊಳಿಸಲ್ಪಡಬೇಕು. ನಿಶ್ಚಯವಾಗಿ, ನೀವು ಆತನಿಂದ ವಾಗ್ದಾನ ಮಾಡಲ್ಪಟ್ಟ ಆಶಿರ್ವಾದಗಳನ್ನು ಪಡೆದುಕೊಳ್ಳಲು ಬಯಸುವಿರಿ. ನೀವು ವಿಧೇಯವಾಗಬೇಕೆಂದು ಕೇಳಲಾಗಿರುವ ಆಜ್ಞೆಗಳು ಎಷ್ಟು ಸರಳವಾಗಿವೆಯೆಂಬದು ನಿಮ್ಮನ್ನು ಪ್ರಭಾವಿತಗೊಳಿಸಿರುತ್ತದೆಂಬದರಲ್ಲಿ ಸಂಶಯವಿಲ್ಲ. ಎಲ್ಲಕ್ಕಿಂತ ಮೇಲಾಗಿ, ನಿಮಗಾಗಿ ಮರಣಿಸಿ, ಹೂಣಲ್ಪಟ್ಟು, ಪುನರುತ್ಥಾನಗೊಂಡವನ ಮೇಲೆ *ಪ್ರೀತಿಯಿಂದ* ಸ್ಪಂದಿಸುವಿರೆಂದು ನಾನು ನಿರೀಕ್ಷಿಸುತ್ತೇನೆ!

ನಾವು ಮುಕ್ತಾಯದಲ್ಲಿ ಸುವಾರ್ತೆಗೆ ಸಂಬಂಧಿಸಿದ ಎರಡು ವಾಕ್ಯಭಾಗಗಳನ್ನು ನೋಡೋಣ: ಒಂದು ಪ್ರೇರಿತ ಪ್ರಶ್ನೆ ಮತ್ತು ಪ್ರೇರಿತ ಉತ್ತರ. ಪ್ರಶ್ನೆ ಹೀಗಿದೆ: "ದೇವರ ಸುವಾರ್ತೆಗೆ ವಿಧೇಯರಾಗದವರಿಗೆ ಏನಾಗುವದು?" (1 ಪೇತ್ರ 4:17). ಇದಕ್ಕೆ ಉತ್ತರವು 2 ಥೆಸಲೋನಿಕ 1:7, 8 ರಲ್ಲಿ ಕೊಡಲ್ಪಟ್ಟಿದೆ: ಯೇಸು "ದೇವರನ್ನರಿಯದವರಿಗೂ ಕರ್ತನಾದ ಯೇಸುವಿನ ಸುವಾರ್ತೆಗೆ ಒಳಪಡದವರಿಗೂ (ವಿಧೇಯರಾಗದವರಿಗೂ) ಪ್ರತೀಕಾರವನ್ನು ಸಲ್ಲಿಸುವನು." ನೀವು ಸುವಾರ್ತೆಗೆ ವಿಧೇಯರಾಗಬೇಕಾದ ಅಗತ್ಯವಿದ್ದಲ್ಲಿ, ಮತ್ತೊಂದು ದಿನಕ್ಕಾಗಿ ಕಾಯದಿರಿ!

## ಮೊದಲು ಕೆಟ್ಟ ಸುದ್ದಿ (1:18-3:20)

ಒಂದು ಸಂದರ್ಭದಲ್ಲಿ, ಒಬ್ಬರು ನನಗೆ ಹೀಗೆ ಹೇಳಿದರು, "ನನ್ನಲ್ಲಿ ಶುಭವಾರ್ತೆ ಹಾಗೂ ಕೆಟ್ಟವಾರ್ತೆ ಇರುತ್ತದೆ. ನಿನಗೆ ಮೊದಲು ಯಾವ ಸುದ್ದಿ ಬೇಕು?" ಪೌಲನು ತನ್ನ ವಾಚಕರಿಗಾಗಿ "ಶುಭವಾರ್ತೆ" ಹಾಗೂ "ಕೆಟ್ಟ ವಾರ್ತೆ" ಹೊಂದಿದ್ದನು. ಶುಭವಾರ್ತೆ ಏನೆಂದರೆ ಅವರು ನಂಬಿಕೆಯ ಮೂಲಕ ಕೃಪೆಯಿಂದ ರಕ್ಷಿಸಲ್ಪಡಬಹುದು. ಹೇಗೂ, ಮೊದಲು, ಆತನು ಅವರಿಗೆ ಕೆಟ್ಟ ವಾರ್ತೆಯನ್ನು ತಿಳಿಸಿದನು: ದೇವರಿಲ್ಲದೆ ಅವರು ಇನ್ನು ಹೆಚ್ಚೆಚ್ಚಾಗಿ ಬಿಡುಗಡೆಯ ಯಾವ ನಿರೀಕ್ಷೆಯೇ ಇಲ್ಲದೆ ಪಾಪದೊಳಗೆ ಆಳವಾಗಿ ಮುಳುಗಿಹೋಗುವದಕ್ಕೆ ನೇಮಿಸಲ್ಪಟ್ಟಿದ್ದರು. ಈ ಸತ್ಯವು ಅತ್ಯಂಥ ಮಹತ್ವದ್ದಾಗಿದ್ದದರಿಂದ ಇದನ್ನು ವಿವರಿಸುವದಕ್ಕೆ ಆತನು ಎರಡು ಅಧ್ಯಾಯಗಳನ್ನು ಬರೆದನು (1:18–3:20).

ಪೌಲನು ಏಕೆ ಸುಮ್ಮನೆ, "ನಾವೆಲ್ಲರೂ ಪಾಪಿಗಳಾಗಿದ್ದೇವೆ" ಎಂದು ಹೇಳಿಬಿಟ್ಟು ಸುವಾರ್ತೆಗೆ ಸಾಗಲಿಲ್ಲ? ಯಾಕೆಂದರೆ ತಾವು ಪಾಪಿಗಳೆಂಬದು ಬಹಳಷ್ಟು ಜನರಿಗೆ ಗೊತ್ತೇ ಇರುವದಿಲ್ಲ.

> ಬಹಳಷ್ಟು ಜನರು ಭಾವಿಸಿಕೊಳ್ಳುವದೇನೆಂದರೆ ತಾವು ಒಟ್ಟಾರೆಯಾಗಿ ಸಭ್ಯ ಜನರು. ತಾವು ದೋಷವಿಲ್ಲ ದವರಾಗಿರದೆ ಇರಬಹುದು ಆದರೆ ಯಾವದೇ ದೊಡ್ಡ ತಪ್ಪು ಮಾಡದವರಾಗಿದ್ದೇವೆ. ಅವರು ಯಾರನ್ನೂ ಕೊಂದಿಲ್ಲ ಅಥವಾ ಬ್ಯಾಂಕ್ ದರೋಡೆ ಮಾಡಿಲ್ಲ. ಅವರು ಮಾಲೀಕರಿಗೆ ಮೋಸಮಾಡಿಲ್ಲ ಅಥವಾ ಮಕ್ಕಳನ್ನು ಶೋಷಣೆ ಮಾಡಿಲ್ಲ. ಅವರು ಪ್ರಾಮಾಣಿಕ ಮತ್ತು ಶ್ರಮ ಜೀವಿಗಳು, ಮತ್ತು ಅವರು ನೆರೆಯವರೊಂದಿಗೆ ಉತ್ತಮರಾಗಿರಲು ಪ್ರಯತ್ನಿಸಿದ್ದಾರೆ. ಅವರಿಗೆ ಯಾವದೇ ವಿನಾಶಕಾರಿ ಪಾಪ ಮಾಡಿರುವ ಜ್ಞಾಪಕವಿಲ್ಲ ವಾದ್ದರಿಂದ ತಾವು ದೇವರೊಂದಿಗೆ ಸರಿ ಇದ್ದೇವೆಂದು ಭಾವಿಸಿಕೊಳ್ಳುತ್ತಾರೆ. ಅವರು ತಮ್ಮ *ಸ್ವಂತ* ಮಾನದಂಡಗಳ ಪ್ರಕಾರ ಸರಿಯಾಗಿ ಇದ್ದಾರೆ ಹೊರತು ದೇವರ ಮಾನದಂಡಗಳ ಪ್ರಕಾರ ಅಲ್ಲ ಎಂಬದನ್ನು ಗ್ರಹಿಸಿಕೊಳ್ಳುವದಿಲ್ಲ.[189]

ಊಹಿಸಿಕೊಳ್ಳಿರಿ, ಒಬ್ಬನು ತನ್ನ ತಲೆನೋವಿಗಾಗಿ ವೈದ್ಯರ ಬಳಿಗೆ ಹೋಗಿ ತನಗೊಂದು ಮಾತ್ರೆ ಕೊಡಲ್ಪಡುತ್ತದೆಂಬ ನಿರೀಕ್ಷೆಯಲ್ಲಿರುತ್ತಾನೆ. ಅದಕ್ಕೆ ಬದಲಾಗಿ, ವೈದ್ಯನು ಅವನಿಗೆ ತಕ್ಷಣವೇ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎನ್ನುತ್ತಾನೆ. ಆ ಮನುಷ್ಯನು ಆಘಾತದಿಂದ ಎಚ್ಚರಗೊಂಡ ಬಳಿಕ, ಬಹುಶಃ ಆತನು ತನಗೆ ಏಕೆ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರಿಂದ ವಿವರಣೆಯನ್ನು ಬಯಸಬಹುದು. ಪೌಲನು ತನ್ನ ವಾಚಕರಿಗೆ ಒಂದು ಸಂಗತಿ ಅರ್ಥವಾಗಬೇಕೆಂದು ಇಚ್ಛಿಸಿದನು, ಏನೆಂದರೆ ಮಾನವ ಜನಾಂಗವು ಒಂದು ಭಯಂಕರವಾದ ಆತ್ಮೀಕ "ವ್ಯಾಧಿ" ಗೆ ತುತ್ತಾಗಿದ್ದು ಅದು ಅಂತಿಮ ಹಂತವನ್ನು ತಲುಪಿದ್ದು ಅದನ್ನು ಯಾವದೇ "ನೈತಿಕ" ಮದ್ದು ಸಹ (ಉದಾಹರಣೆಗೆ: "ಒಳ್ಳೆ ಜೀವನ ನಡಿಸುವದು" ಅಥವಾ "ಹೆಚ್ಚು ಒಳ್ಳೆ ಕ್ರಿಯೆಗಳನ್ನು ಮಾಡುವದು") ಗುಣಪಡಿಸಲಾರದು. "ತೀವ್ರವಾದ ಆತ್ಮೀಕ ಶಸ್ತ್ರಚಿಕಿತ್ಸೆ" (ಯೇಸುವಿನಲ್ಲಿ ತೋರಿ ಬಂದ ದೇವರ ಕೃಪೆ) ಯನ್ನು ಮಾಡುವ ಹೊರತು ಮಾನವರು ನಾಶನಕ್ಕೆ ನೇಮಿಸಲ್ಪಟ್ಟಿದ್ದರು.

## ಆರೋಪಿಸಲ್ಪಟ್ಟ ಅಪರಾಧಿ (1:18-32)

ಚಿಕಾಗೋದಲ್ಲಿ ಒಂದು ಬೇಸಿಗೆ ದಿನದಂದು, ಒಬ್ಬ ಕಠಿಣ ಮುಖದ ವ್ಯಕ್ತಿಯು ಜನಜಂಗುಳಿಯ ವೃತ್ತದಲ್ಲಿ ನಿಂತಿದ್ದನು. ಪಾದಚಾರಿಗಳು ಅವಸರದಿಂದ ಹಾದು ಹೋಗುತ್ತಿರುವಾಗ, ಆತನು ಪ್ರತಿಯೊಬ್ಬರ ಕಡೆಗೆ ಬೆರಳು ತೋರಿಸಿ ಗಟ್ಟಿಯಾದ ಧ್ವನಿಯಲ್ಲಿ "ಅಪರಾಧಿ!" ಎಂದು ಹೇಳುತ್ತಿದ್ದನು. ಅನೇಕರು ನಿಂತು ದಿಟ್ಟಿಸಿ ನೋಡುತ್ತಿದ್ದರು. ಆ ಮೇಲೆ ಅವರು ಬೇರೆಡೆ ನೋಡುತ್ತಾ ತಮ್ಮ ದಾರಿಯಲ್ಲಿ ಅವಸರದಿಂದ ಸಾಗುತ್ತಿದ್ದರು. ಒಬ್ಬ ವ್ಯಕ್ತಿಯು ತನ್ನ ಜೊತೆಗಾರನಿಗೆ "ಅವನಿಗೆ ಈ ವಿಷಯ ಹೇಗೆ ಗೊತ್ತಾಯಿತು?" ಎಂದು ಪ್ರಶ್ನಿಸಿದ್ದು ಕೇಳಿಸಿತು.[190]

ನಮಗೆ ಒಬ್ಬ ಕಠಿಣ ಮುಖದ ವ್ಯಕ್ತಿಯು ಬೆರಳು ತೋರಿಸುತ್ತಾ ನೀನು ಅಪರಾಧಿ ಎಂದು ಹೇಳುವ ಸಂದರ್ಭ ಬಾರದಿರಬಹುದು ಆದರೆ ನಾವು ಸ್ವತಃ ರೋಮಾ 1:18-32ನ್ನು ಅಧ್ಯಯನ ಮಾಡುತ್ತಾ ಪ್ರಮಾಣಿಕವಾಗಿ ಪರೀಕ್ಷಿಸಿಕೊಂಡರೆ ನಾವು ಸಹ ಅಪರಾಧಿಗಳೆಂದು ಗ್ರಹಿಸಿಕೊಳ್ಳುವೆವು. ದೇವರು ನಮಗೆ ಕೊಟ್ಟಿರುವ ಸತ್ಯಗಳಿಗೆ ನಾವು ಯಾವಾಗಲೂ ವಿಧೇಯರಾಗಿಲ್ಲ. ನಾವು ಕೆಲವು ಸಾರಿ ದೇವರನ್ನು ನಮ್ಮ

ಆಲೋಚನೆಗಳಿಂದಲೂ ನಮ್ಮ ಜೀವಿತಗಳಿಂದಲೂ ಹೊರಕ್ಕೆ ಇಟ್ಟಿರುತ್ತೇವೆ. ನಾವು ನಮ್ಮ ಸೃಷ್ಟಿಕರ್ತನಿಗಿಂತ ಹೆಚ್ಚಾಗಿ ನಮ್ಮ ಸ್ವಾರ್ಥಕ್ಕೆ ಆದ್ಯತೆ ನೀಡಿದ್ದೇವೆ. ನಾವು ಸಹ "ಆರೋಪಿಸಲ್ಪಟ್ಟ ಅಪರಾಧಿಗಳು" ಆಗಿದ್ದೇವೆ!

ಇದು ಹತ್ತೊಂಬತ್ತು ನೂರು ವರ್ಷಗಳ ಹಿಂದೆ ಇದ್ದಂತೆಯೇ ಈಗಲೂ ಸಹ ಅಷ್ಟೇ ಸತ್ಯವಾಗಿದೆ, ಏನೆಂದರೆ, "ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ" (1:18). ಅಲ್ಲದೆ ಈಗಲೂ ಸಹ "ಜೀವಸ್ವರೂಪನಾದ ದೇವರ ಕೈಗಳಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು" ಎಂಬುದು ಸತ್ಯ (ಇಬ್ರಿಯ 10:31). ನಿಮಗೆ ದೇವರ ಕೃಪೆಯ ಅಗತ್ಯತೆಯಿದೆ ಎಂದು ಗ್ರಹಿಸಿಕೊಳ್ಳುವದಾದರೆ, ಈ ದಿನವೇ ಪ್ರೀತಿ, ವಿಶ್ವಾಸ ಮತ್ತು ವಿಧೇಯತೆಯುಳ್ಳ ನಂಬಿಕೆಯೊಂದಿಗೆ ಆತನ ಕಡೆಗೆ ತಿರುಗಿಕೊಳ್ಳಿರಿ (ಅಪೊಸ್ತಲರ ಕೃತ್ಯಗಳು 2:36-38).

## ನೈಸರ್ಗಿಕ ದೈವಶಾಸ್ತ್ರ (1:20)

ಕೆಲವರು ರೋಮಾ 1:20 ಮತ್ತು ಸಂಬಂಧಿತ ವಾಕ್ಯಭಾಗಗಳನ್ನು ದುರುಪಯೋಗಪಡಿಸಿಕೊಂಡು ಒಂದು "ನೈಸರ್ಗಿಕ ದೈವಶಾಸ್ತ್ರ" ದ ಸಿದ್ಧಾಂತವನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುತ್ತಾರೆ. ನಮಗೆ ದೇವರ ಬಗ್ಗೆಯೂ ಆತನ ಚಿತ್ತದ ಬಗ್ಗೆಯೂ ತಿಳಿದುಕೊಳ್ಳಬೇಕಾದ ಎಲ್ಲವೂ ಪ್ರಕೃತಿಯಲ್ಲಿಯೇ ಸಿಕ್ಕುತ್ತದೆ ಎಂದು ವಾದಿಸುತ್ತಾರೆ. ಅಂಥ ನಿರ್ಧಾರಕ್ಕೆ ಬರುವದು ಪೌಲನ ಬೋಧನೆಗೆ ಒಂದು ನಿಂದನೆಯಾಗುತ್ತದೆ. ಪೌಲನು ಹೇಳಿದ್ದೇನೆಂದರೆ ನಾವು ದೇವರ ಸೃಷ್ಟಿಯನ್ನು ನೋಡುವ ಮೂಲಕ ಆತನ ಬಗ್ಗೆ ಸ್ವಲ್ಪ ಸಂಗತಿಗಳನ್ನು ತಿಳಿದುಕೊಳ್ಳಬಹುದೇ ಹೊರತು ಎಲ್ಲವನ್ನೂ ಅಲ್ಲ. ಆಫ್ರಿಕಾದ ಒಬ್ಬ ಯುವಕನು ತಾನು ರಕ್ಷಣೆ ಹೊಂದಿದ ಕಥೆಯನ್ನು ಹಂಚಿಕೊಂಡನು:

> ನಾನು ಚಿಕ್ಕ ಬಾಲಕನಾಗಿದ್ದಾಗ, ನೈಜೇರಿಯಾದ ಕುಗ್ರಾಮದಲ್ಲಿ ಓಡಾಡಿಕೊಂಡಿದ್ದೆನು, ಆಗ ನನಗೆ ದೇವರು ಎಲ್ಲಿದ್ದಾನೆಂದು ಗೊತ್ತಿತ್ತು. ನಾನು ಮರಗಳ ಮಧ್ಯದಲ್ಲಿ ನಿಂತು ರಾತ್ರಿಯ ವೇಳೆ ಆಕಾಶವನ್ನು ದೃಷ್ಟಿಸುತ್ತಾ ಈ ಲೋಕವನ್ನು ಯಾರೋ ನಿರ್ಮಿಸಿದ್ದಾರೆಂದು ತಿಳಿದುಕೊಳ್ಳುತ್ತಿದ್ದೆನು ಆದರೆ ಆತನನ್ನು ಏನೆಂದು ಕರೆಯಬೇಕೆಂಬದಾಗಿ ಅರಿಯದವನಾಗಿದ್ದೆನು. ಒಂದು ದಿನ ಒಬ್ಬ ಮಿಶನರಿಯು ಮಕ್ಕಳಿಗೆ ಓದು ಕಲಿಸಿಕೊಡಲು ನಮ್ಮ ಗ್ರಾಮಕ್ಕೆ ಬಂದರು. ಆಕೆಯು ನಮಗೆ ಬೈಬಲ್ ಓದುವದನ್ನು ಕಲಿಸಿದಳು. ಆಗ ನನಗೆ ಮರಗಳು ಮತ್ತು ನಕ್ಷತ್ರಗಳ ಮೂಲಕ ತನ್ನನ್ನು ಪ್ರಕಟಿಸಿಕೊಂಡ ದೇವರ ಹೆಸರು ಏನೆಂದು ಗೊತ್ತಾಯಿತು.[191]

ಅನೇಕ ದೈವಿಕ *ಸತ್ಯಗಳನ್ನು* ಪ್ರಕೃತಿಯಿಂದ ಮಾತ್ರವೇ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ.[192] ಇವುಗಳೊಳಗೆ ಅತ್ಯಂಥ ಅದ್ಭುತವಾದ ಸತ್ಯವು ಯಾವದೆಂದರೆ "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು" (ಯೋಹಾನ 3:16a). ಒಬ್ಬರು ಹೀಗೆ ಹೇಳಿದ್ದಾರೆ, "ಪ್ರಕೃತಿಯಲ್ಲಿ ನಾವು ದೇವರ ಬೆರಳಚ್ಚುಗಳನ್ನು ಕಾಣುತ್ತೇವೆ . . . ಆದರೆ ಪಾಪಿಗಳಾದ ನಾವು

ಕಾಣಬೇಕಾಗಿರುವದೇನೆಂದರೆ ಕ್ರಿಸ್ತನ ಮೊಳೆಯ ಗುರುತುಗಳನ್ನಾಗಿದೆ."[193] ಒಬ್ಬನು ಪ್ರಕೃತಿಯಿಂದ ತಾನು ಪಾಪಿ ಎಂಬದಾಗಿ ಮನವರಿಕೆಯಾಗುವಷ್ಟರ ಮಟ್ಟಿಗೆ ಕಲಿತುಕೊಳ್ಳಬಹುದೇ ಹೊರತು ಪಾಪದಿಂದ ರಕ್ಷಿಸಲ್ಪಡುವಷ್ಟರ ಮಟ್ಟಿಗೆ ಅಲ್ಲ.

ಪೌಲನು ಅಥೇನೆಯಲ್ಲಿ ಮಾಡಿದ ವಾದದಲ್ಲಿ ಒಂದು "ಪ್ರಾಕೃತಿಕ ಪ್ರಕಟಣೆ" ಯನ್ನು ಉಪಯೋಗಿಸಿದ ವೇಳೆ, ಆತನು ಅಲ್ಲಿ "ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನೂ ಉಂಟುಮಾಡಿದ ದೇವರು" ಅವರು "ಒಂದು ವೇಳೆ ತಡವಾಡಿ ಕಂಡುಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು" ಎಂಬದಾಗಿ ಹೇಳಿದನು (ಅಪೊಸ್ತಲರ ಕೃತ್ಯಗಳು 17:24, 27). ಜನರು ಪ್ರಕೃತಿಯ ಮೂಲಕ ದೇವರ ಕುರಿತು ತಿಳಿದುಕೊಳ್ಳುವ ಸಂಗತಿಗಳು ಅವರನ್ನು ಮತ್ತಷ್ಟು ಸ್ಫೂರ್ತಿಗೊಳಿಸಿ ಆತನನ್ನು ಹೆಚ್ಚಾಗಿ ತಿಳಿದುಕೊಳ್ಳುವಂತೆ ನಡಿಸತಕ್ಕದ್ದು. ಅಂಥ ಬಯಕೆಯು ಅವರನ್ನು ಅಂತಿಮವಾಗಿ ದೇವರ ಸ್ವಭಾವಿಕ ಪ್ರಕಟಣೆಯಾದ, ಬೈಬಲ್.ನ ಕಡೆಗೆ ನಡಿಸುವದಾಗಿರಬೇಕು. ಇಬ್ರಿಯ ಪುಸ್ತಕದ ಬರಹಗಾರನು ಹೇಳಿದ್ದೇನೆಂದರೆ, ದೇವರು "ತನ್ನನ್ನು ಹುಡುಕುವವರಿಗೆ ಪ್ರತಿಫಲ ಕೊಡುವಾತನು" (ಇಬ್ರಿಯ 11:6). ಯೇಸು ಹೇಳಿದನು, "ಹುಡುಕಿರಿ, ಆಗ ನಿಮಗೆ ಸಿಕ್ಕುವದು" (ಮತ್ತಾಯ 7:7).

## ವಿಶ್ವಾಸಿಸುವಂತೆ ಸವಾಲು (1:20)

ಲೂಕ 18:8 ರಲ್ಲಿ, ಯೇಸು ಈ ಯೋಚನೆಮಾಡಬೇಕಾದ ಪ್ರಶ್ನೆಯನ್ನು ಕೇಳಿದನು: "ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ?"

ಇದೊಂದು ಅಶಾಂತಿ, ಗಲಭೆಗಳ ದಿನವಾಗಿರುತ್ತದೆ. ನಾವು ಸುದ್ಧಿಪತ್ರಿಕೆ ಓದಿದರೂ, ರೆಡಿಯೋ ಆಲಿಸಿದರೂ ಅಥವಾ ಟಿವಿ ನೋಡಿದರೂ ಈ ಸಂಗತಿ ನಮಗೆ ಮನದಟ್ಟಾಗುತ್ತದೆ. ಜಗತ್ತಿನಲ್ಲೆಲ್ಲಾ ಕ್ರಾಂತಿಗಳು, ಗಲಭೆಗಳು ಸಂಭವಿಸುತ್ತಲೇ ಇವೆ. ಎಲ್ಲರಲ್ಲಿಯೂ ಪ್ರಶ್ನೆಗಳಿರುವಂತೆ ತೋರುತ್ತದೆ, ಆದರೆ ಕೆಲವರಿಗೆ ಮಾತ್ರವೆ ಉತ್ತರ ತಿಳಿದದೆ. ಅನೇಕ ವೇಳೆ "ಹಳೆಯ" ದನ್ನು ಬದಿಗಿಡಲಾಗುತ್ತಿದೆ ಮತ್ತು ಅದರ ಸ್ಥಳವನ್ನು ತುಂಬುವದಕ್ಕೆ ಯಾವ ಶಾಶ್ವತವಾದದ್ದೂ ಬರುತ್ತಿಲ್ಲ, ಈ ಕಾರಣದಿಂದ ಅಸ್ತವ್ಯಸ್ತವಾದ ಶೂನ್ಯತೆಯುಂಟಾಗುತ್ತಿದೆ.

ಇಂಥ ಒಂದು ಯುಗದಲ್ಲಿ, ಜನರು ತಮಗೆ ಯಾವದು ಅಮೂಲ್ಯ ಮತ್ತು ನೆಚ್ಚಿನದೆಂದು ನಂಬಿದ್ದರೋ ಅದೆಲ್ಲವೂ—ಅವರ ಧಾರ್ಮಿಕ ನಂಬಿಕೆ ಸಹ—ದಾಳಿಗೆ ತುತ್ತಾಗುವದು ಅನಿವಾರ್ಯವಾಗುತ್ತದೆ. ದೇವರಲ್ಲಿನ ನಂಬಿಕೆಯ ಮೇಲೆ ನೇರವಾದ ದಾಳಿಯಾಗುತ್ತಿರುವದನ್ನು ಕಾಣುತ್ತಿದ್ದೇವೆ. ಅನೇಕರಿಗೆ ಇನ್ನು ಮೇಲೆ ದೇವರ ದೊಡ್ಡ ಅಗತ್ಯತೆಯಿಲ್ಲ ಎಂಬ ನಿರ್ಧಾರಕ್ಕೆ ಮಾನವರು ಬಂದಿರುವಂತೆ ತೋರುತ್ತಿದೆ. ಉದಾಹರಣೆಗೆ, ಒಂದು ಸಮೀಕ್ಷೆಯ ಪ್ರಕಾರ, *ನಾಸ್ತಿಕತೆಯು* "ಅಸ್ಟ್ರೇಲಿಯಾದಲ್ಲಿ ಅತ್ಯಂಥ ವೇಗವಾಗಿ ಬೆಳೆಯುತ್ತಿರುವ ಧರ್ಮ" ಎಂದು ವರದಿಯಾಗಿದೆ.

ಬೈಬಲಿನ ನಂಬಿಕೆಯ ಮೇಲೆ ನಿರಂತರವಾಗಿ ದಾಳಿಯಾಗುತ್ತಿದೆ. ಆಧುನಿಕ ಟೀಕೆಕಾರರು ಬೈಬಲ್.ನ ಬಗ್ಗೆ ಇನ್ನೇನೂ ಉಳಿದಿಲ್ಲ ಎನ್ನುವವರೆಗೂ ದಾಳಿ ಮಾಡುತ್ತಾ ಸಾಗುತ್ತಾರೆ. ಅವರು ನಿಸರ್ಗಾತೀತ ಪ್ರೇರಣೆಯ ಬಗ್ಗೆ ಕುಚೋದ್ಯ ಮಾಡುತ್ತಾರೆ.

ಯೇಸುವಿನ ದೈವತ್ವದ ಕುರಿತು ಸಹ ದಾಳಿ ಮುಂದುವರೆಯುತ್ತದೆ. ಅವರ ಮಾತುಗಳು ಬಹಳ ಮಾರ್ಮಿಕವಾಗಿರುತ್ತವೆ ಯಾಕೆಂದರೆ ಅವರಲ್ಲಿ ಅನೇಕರು ಬಾಯಿ ಮಾತಿನಿಂದ ಯೇಸುವಿನ ಕುರಿತು ಅತನೊಬ್ಬ ಜ್ಞಾನಿ, ದೊಡ್ಡ ಪ್ರವಾದಿ, ಅಥವಾ ಜ್ಞಾನೋದಯವಾದ ಉಪದೇಶಕ ಎಂಬದಾಗಿ ಹೇಳುತ್ತಾರೆ. ಎಲ್ಲವನ್ನೂ ಹೇಳಿ ಮುಗಿಸಿದ ಬಳಿಕ, ಆ ರೀತಿ ಭಾವಿಸುವವರು ಯೇಸು ಕ್ರಿಸ್ತನು ಕರ್ತನಾಗಿದ್ದು ಆತನ ಪಾದಗಳ ಮುಂದೆ ಎಲ್ಲಾ ಮೊಣಕಾಲುಗಳು ಬಾಗಬೇಕು ಎಂಬದನ್ನು ಗುರುತಿಸದವರಾಗಿದ್ದಾರೆ (ನೋಡಿರಿ ಫಿಲಿಪ್ಪಿ 2:9-11).

ಈ ರೀತಿಯ ಸಂದೇಹವಾದದ ಒಂದು ಕಾರ್ಯರೂಪದ ಫಲಿತವೇನೆಂದರೆ ಒಳ್ಳೇದು ಮತ್ತು ಕೆಟ್ಟದ್ದರ ಯಾವದೇ ಮಾನದಂಡವನ್ನು ಕುಚೋದ್ಯಮಾಡುವದು. ಜನರು "ಪರಿಸ್ಥಿತಿಗೆ ತಕ್ಕ ನೈತಿಕತೆಗಳನ್ನು" ಆವಿಷ್ಕರಿಸಿದ್ದಾರೆ. ಸರಿ ಅಥವಾ ತಪ್ಪು ಯಾವದೆಂಬ ವಿಚಾರ ಬಂದಾಗ, ಈಗೆಲ್ಲಾ ನಾವು ದೇವರಿಂದ ನುಡಿಯಲ್ಪಟ್ಟ ಮಾತುಗಳು, ಬೈಬಲ್ ಅಥವಾ ಕ್ರಿಸ್ತನ ಮೇಲೆ ಆಧಾರಗೊಳ್ಳುವದಿಲ್ಲ. ಮನುಷ್ಯನು *ತನ್ನನ್ನೇ* ನ್ಯಾಯಾಧಿಪತಿಯಾಗಿ ಮಾಡಿಕೊಂಡಿದ್ದಾನೆ, ಮತ್ತು ಆತನ ಏಕೈಕ "ಕಾನೂನು" ಅಂದರೆ "ಪ್ರೀತಿಯ ಕಾನೂನು."

ಹಾಗಾದರೆ, ನಮ್ಮ ಯುಗದಲ್ಲಿ ಕ್ರಿಸ್ತನ ಮಾತುಗಳು ಎಷ್ಟು ಸೂಕ್ತವಾಗಿರುತ್ತವೆ! "ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ" ಅಂದನು (ಲೂಕ 18:8). ಇದು ನಮ್ಮನ್ನು ಒಂದು ಪ್ರಶ್ನೆ ಕೇಳುವಂತೆ ಮಾಡುತ್ತದೆ: "ಒಬ್ಬನು ಈ ಇಪ್ಪತ್ತೊಂದನೆಯ ಶತಮಾನದಲ್ಲಿ ಕ್ರಿಸ್ತನು, ದೇವರು ಮತ್ತು ಬೈಬಲ್.ನ್ನು ನಂಬಬಹುದೋ?" ನನ್ನ ಉದ್ದೇಶದ ಪ್ರಕಾರ, ನಂಬಿಕೆಯು ಕಾಲ ಮೀತಿಯಿಲ್ಲದ್ದು ಮತ್ತು ಒಬ್ಬನು ಇಪ್ಪತ್ತೊಂದನೆಯ ಶತಮಾನದಲ್ಲಿ ಸಹ ಬೈಬಲ್.ನ ಉಪದೇಶಗಳಲ್ಲಿ ನಂಬಿಕೆಯಿಡ*ಬಹುದು* ಎಂಬದನ್ನು ದೃಢಪಡಿಸುವದಾಗಿದೆ!

ಇದನ್ನು ಅನೇಕ ರೀತಿಗಳಲ್ಲಿ ತೋರಿಸಿಕೊಡಬಹುದು, ಆದರೆ ನಾನು ನಿಮ್ಮನ್ನು ಒಂದು ವಿಚಾರಧಾರೆಯೆಡೆಗೆ ನಡಿಸಲಿಚ್ಚಿಸುತ್ತೇನೆ. ಇಪ್ಪತ್ತೊಂದನೆಯ ಶತಮಾನದಲ್ಲಿ ನಂಬಕೆಯಿಡುವದು *ತಾರ್ಕಿಕವಾದದ್ದು*. ಸತ್ಯವು ಎಂದಿಗೂ ಕೇವಲ ತರ್ಕದಿಂದ ಮಾತ್ರವೇ ಕಂಡುಕೊಳ್ಳಲು ಸಾಧ್ಯವಿಲ್ಲ; ಅದೇ ವೇಳೆಯಲ್ಲಿ, ಒಬ್ಬನು ಕ್ರೈಸ್ತನಾದಾಗ, ಆತನು ತಾರ್ಕಿಕವಾಗಿ ಮತ್ತು ಬುದ್ಧಿಯಿಂದ ಆಲೋಚಿಸುವದನ್ನು ನಿಲ್ಲಿಸಬೇಕೆಂದು ದೇವರು ನಿರೀಕ್ಷಿಸುವದಿಲ್ಲ.

ನಮ್ಮ ಅಧ್ಯಯನವು ಒಂದು ಸರಪಣಿಯಂತೆ, ಒಂದು ಸರಣಿಯಾಗಿ ಒಂದಕ್ಕೊಂದು ಜೋಡಿಸಲ್ಪಟ್ಟು ಸಾಗುವದು. ಮುಕ್ತಾಯದಲ್ಲಿ, ನೀವು ಆ ಸ್ಪಷ್ಟವಾಗಿ ಬಣ್ಣಿಸಲ್ಪಟ್ಟ ಜೋಡಣೆಗಳನ್ನು ಒಮ್ಮೆ ಆಲೋಚಿಸಿ ನೋಡಿ ನಿಮ್ಮ ನಂಬಿಕೆಯನ್ನು ಪರೀಕ್ಷಿಸಿಕೊಳ್ಳಬಹುದು.

*ಮೊದಲನೆಯದಾಗಿ, ದೇವರು ಇದ್ದಾನೆಂದು ನಂಬುವದು ತಾರ್ಕಿಕವಾದದ್ದು.* ಕೀರ್ತನೆ 14:1 ಮತ್ತು 53:1 ಹೇಳುವದೇನೆಂದರೆ, "*ಮೂರ್ಖನು* 'ದೇವರು ಇಲ್ಲವೆಂದು' ತನ್ನ ಹೃದಯದಲ್ಲಿ ಅಂದುಕೊಂಡಿದ್ದಾನೆ" (ಒತ್ತಿ ಹೇಳಿದ್ದು ನನ್ನದು). ಕೀರ್ತನೆಗಾರನು ಇಲ್ಲಿ ಬುದ್ಧಿಯಿಲ್ಲದಿರುವಿಕೆ ಬಗ್ಗೆ ಅಲ್ಲ, ಆದರೆ ತನ್ನ ಸುತ್ತಲಿರುವ ಸಾಕ್ಷಿಗಳನ್ನು ನೋಡುವದಕ್ಕೆ

ತನ್ನ ಕಣ್ಣುಗಳನ್ನು ತೆರೆಯದಿರುವಂಥ ಮನುಷ್ಯನ ಮೂರ್ಖತನದ ಬಗ್ಗೆ ಹೇಳುತ್ತಿದ್ದಾನೆ. ಕೀರ್ತನೆ 19:1 ಹೇಳುತ್ತದೆ, "ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ; ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ." ರೋಮ 1:20 ಹೇಳುತ್ತದೆ, " ಹೇಗೆಂದರೆ ಗುಣಲಕ್ಷಣಗಳೂ ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲ್ಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತದೆ . ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ."

ನಾನು ಬಾಲಕನಾಗಿದ್ದಾಗ, ಬೋಧಕರು ಯಾವಾಗಲೂ ಒಂದು ಸರಳ ದೃಷ್ಟಾಂತವನ್ನು ಉಪಯೋಗಿಸುತ್ತಿದ್ದರು. ಅವರು ತಮ್ಮ ಕೈಗಡಿಯಾರಗಳನ್ನು ತೆಗೆದು ಅವುಗಳನ್ನು ಎಲ್ಲರಿಗೆ ತೋರಿಸಿ, ಈ ಗಡಿಯಾರವು ತನ್ನನ್ನು ಮಾಡಿದವನೊಬ್ಬನಿದ್ದಾನೆ ಎಂಬದನ್ನು ತಿಳಿಸುತ್ತದೆ, ಆದ್ದರಿಂದ ಈ ಜಗತ್ತು ಒಬ್ಬ ಸೃಷ್ಟಿಕರ್ತನಿದ್ದಾನೆಂಬದನ್ನು ಸಾರುತ್ತದೆ. ಈ ದೃಷ್ಟಾಂತವು ಹಳೆಯದು ಎಂದು ತೋರುವಷ್ಟರ ಮಟ್ಟಿಗೆ ವಿಪರೀತವಾಗಿ ಉಪಯೋಗಿಸಲ್ಪಟ್ಟಿರಬಹುದು—ಆದರೆ ಇದು ಜನರು ಗ್ರಹಿಸಿಕೊಳ್ಳಬಹುದಾದಕ್ಕಿಂತಲೂ ಹೆಚ್ಚು ಗಾಢವಾದ ಅರ್ಥ ಹೊಂದಿದೆ. ನಾನು ದೇವರ ಅಸ್ತಿತ್ವದ ಕುರಿತಾಗಿ ಒಂದು ವಿಸ್ತಾರವಾದ ವಾದವನ್ನು ಬೆಳೆಸಬೇಕಾದಲ್ಲಿ, ನಾನು ಮೂರು ಹಂತಗಳುಳ್ಳ ವಾದವನ್ನು ಕಟ್ಟುತ್ತೇನೆ. ನಾನು ಈ ಹಂತಗಳಿಗೆ ಈ ಹೆಸರುಗಳನ್ನು ಕೊಡುವೆನು (1) *ಅಸ್ತಿತ್ವ*. ಇದರ ಮೇಲಿನ ಹಂತವು (2) *ಕ್ರಮ*, ಮತ್ತು ಅದರ ಮೇಲ್ಗಡೆಯಲ್ಲಿ (3) *ವಿನ್ಯಾಸ* ಅಥವಾ ಉದ್ದೇಶ. ನಾನು ಗಡಿಯಾರದ ದೃಷ್ಟಾಂತವನ್ನು ಉಪಯೋಗಿಸಿ ಈ ಪ್ರತಿಯೊಂದು ಹಂತವನ್ನು ಕ್ಲುಪ್ತವಾಗಿ ವಿವರಿಸುವೆನು.

*ಅಸ್ತಿತ್ವ:* ಗಡಿಯಾರ ಅಸ್ತಿತ್ವದಲ್ಲಿದೆ. ಅದು ಕಣ್ಣುಗಳ ಮುಂದಿರುವದು ನಿಜವಾಗಿದೆ. ಅದು ಎಲ್ಲಿಂದಲೋ ಬಂದದ್ದಾಗಿದೆ.

*ಕ್ರಮ:* ಗಡಿಯಾರವು ಅಸ್ತಿತ್ವದಲ್ಲಿರುವದು ಮಾತ್ರವಲ್ಲದೆ, ಅದು ಕ್ರಮವಾದ ರೂಪದಲ್ಲಿ ಕ್ರಿಯೆಮಾಡುತ್ತದೆ. ಅದು ವಿವಿಧ ಬಿಡಿ ಭಾಗಗಳಿಂದ ರೂಪಿಸಲ್ಪಟ್ಟು ಒಂದೇ ಸಾಧನವಾಗಿ ಕ್ರಿಯೆಮಾಡುತ್ತಿದೆ. ಎಲ್ಲಾ ಭಾಗಗಳು ಸಮಂಜಸವಾಗಿ ಕೆಲಸ ಮಾಡುವವರೆಗೂ ಅದು ಕ್ರಮಬದ್ಧವಾಗಿ ಲೆಕ್ಕಾಚಾರದಂತೆ ಕ್ರಿಯೆ ಮಾಡುತ್ತಲಿರುತ್ತದೆ.

*ವಿನ್ಯಾಸ:* ಗಡಿಯಾರವು ಕ್ರಮಬದ್ಧವಾದ ರೀತಿಯಲ್ಲಿ ಕೆಲಸ ಮಾಡುವದು ಮಾತ್ರವಲ್ಲದೆ, ಅದು ಹಾಗೆ ಮಾಡುವ ಮೂಲಕ ಅದು ತನ್ನನ್ನು ಉಂಟುಮಾಡಿದ ಉದ್ದೇಶವನ್ನು ನೆರವೇರಿಸುತ್ತದೆ. ಅದನ್ನು ಮಾಡಿದವನು ಯಾರೇ ಆಗಿದ್ದರೂ ಆತನು ಒಂದು ನಿಖರವಾದ ಕ್ರಿಯೆಯನ್ನು ಮನಸ್ಸಿನಲ್ಲಿಟ್ಟು ರೂಪಿಸಿರುತ್ತಾನೆ ಮತ್ತು ಅದು ಸಾಮಾನ್ಯವಾಗಿ ಆತನ ಈ ಉದ್ದೇಶವನ್ನು ನೆರವೇರಿಸುತ್ತದೆ: ಅದು ಸಮಯವನ್ನು ತಿಳಿಸುತ್ತದೆ.

ಅದೇ ರೀತಿಯಲ್ಲಿ, ನಾವು ಈ ವಿಶ್ವವನ್ನೊಮ್ಮೆ ನೋಡುವಾಗ, ಅದರ ಸೃಷ್ಟಿಕರ್ತನಲ್ಲಿ ನಂಬಿಕೆಯಿಡಲು ಈ ಮೂರು ವಾದಗಳನ್ನೇ ಅನುಸರಿಸಬಹುದು: (1) ವಿಶ್ವವು *ಅಸ್ತಿತ್ವದಲ್ಲಿದೆ.* (2) ಅಷ್ಟು ಮಾತ್ರವಲ್ಲದೆ, ಅದು ಒಂದು *ಕ್ರಮಬದ್ಧ* ರೀತಿಯಲ್ಲಿ ಕೆಲಸಮಾಡುತ್ತದೆ; ನಾವು ನಮ್ಮ ಗಡಿಯಾರದ ಸಮಯಗಳನ್ನು ದೇವರು ಉಂಟು ಮಾಡಿರುವ ಮಹಾ ಆಕಾಶದ ಗಡಿಯಾರದ ಪ್ರಕಾರವಾಗಿ ನಿಗದಿ ಪಡಿಸಿಕೊಳ್ಳುತ್ತೇವೆ.

(3) ಪ್ರತಿಯೊಂದು ಹುಲ್ಲಿನಲ್ಲಿ, ಮರದಲ್ಲಿ ಈ *ವಿನ್ಯಾಸವು (ಉದ್ದೇಶವು)* ಕಂಡುಬರುತ್ತದೆ.

ದೇವರ ಅಸ್ತಿತ್ವದ ವಿರುದ್ಧವಾಗಿ ಅತ್ಯಂಥ ಸಾಮಾನ್ಯವಾದ ವಾಗ್ವಾದವು ವಾಸ್ತವದಲ್ಲಿ ಮೇಲಿನ ಎರಡು ಹಂತಗಳ ವಿಷಯದಲ್ಲಾಗಿದೆ: *ವಿನ್ಯಾಸ* ಮತ್ತು *ಉದ್ದೇಶ.* ಕೆಲವರು ಪ್ರವಾಹ, ಬಿರುಗಾಳಿ, ಭೂಕಂಪಗಳು, ಅಥವಾ ಬಹುಶಃ ಒಬ್ಬನ ವೈಯಕ್ತಿಕ ಜೀವನದಲ್ಲಾದ ಯಾವದಾದರೂ ದುರಂತವನ್ನು ಎತ್ತಿ ತೋರಿಸಬಹುದು. ಇವೆಲ್ಲಾ ನಡೆಯುತ್ತಿರುವದರಿಂದ ದೇವರೇ ಇಲ್ಲ ಎಂಬ ನಿರ್ಧಾರಕ್ಕೆ ಆ ವ್ಯಕ್ತಿಯು ಬರಬಹುದು. ಹೇಗೂ, ಇದು ಹೀಗೆಯೇ ನಡೆಯುತ್ತಿರಬೇಕಾದ ಅವಶ್ಯಕತೆಯಿಲ್ಲ.[194]

ಈ ಪ್ರತಿಯೊಂದು ಸಾಲುಗಳನ್ನು ಸವಿಸ್ತಾರವಾಗಿ ಅಧ್ಯಯನಮಾಡಲು ನಮಗೆ ಸಮಯವಿರುವದಿಲ್ಲ. ಆದ್ದರಿಂದ, ನಾವು ಮುಖ್ಯವಾಗಿ ತ್ರಿಕೋನ ಅಸ್ತಿವಾರದ (pyramid)—ಅಸ್ತಿತ್ವ—ಮೇಲೆ ಗಮನವನ್ನು ಹರಿಸೋಣ. ನಾವು ಪುನಃ ಗಡಿಯಾರದ ದೃಷ್ಟಾಂತಕ್ಕೆ ಬರೋಣ. ನಮಗೆ ದಾರಿ ಬದಿಯಲ್ಲಿ ಒಂದು ಕೆಟ್ಟುಹೋಗಿರುವ ಗಡಿಯಾರ ಸಿಕ್ಕರೆ ಹೇಗಿರುತ್ತದೆ? ಅದು ಬಿದ್ದು ಹೋಗಿದೆ—ಬಹುಶಃ ತುಳಿದಾಡಲ್ಪಟ್ಟಿದೆ ಸಹ ಎಂದು ಊಹಿಸಿಕೊಳ್ಳಿರಿ. ಈಗ ಅದು ಪರಿಪೂರ್ಣ ಸಮಯವನ್ನು ತೋರಿಸುವ ಸ್ಥಿತಿಯಲ್ಲಿಲ್ಲ; ಅದು ಚಲಿಸದೇ ಸಹ ಇರಬಹುದು. *ಹಾಗಾದರೆ ಈಗ ಒಬ್ಬ ಗಡಿಯಾರ ನಿರ್ಮಾಣಿಕನು ಇಲ್ಲವೇ ಇಲ್ಲವೆಂದು ಅರ್ಥವಾಗುತ್ತದೋ?* ಇಲ್ಲ, ಈಗಲೂ ಆ ಮುರಿದು ಹೋದ ಸ್ಥಿತಿಯಲ್ಲಿಯೂ ಸಹ ಸಾಕ್ಷಿಯಿರುತ್ತದೆ—ಸ್ಪಷ್ಟ ಹಾಗೂ ಅಪಾರ್ಥಕ್ಕೆ ಅವಕಾಶವಿಲ್ಲದ ಹಾಗೆ. ಗಡಿಯಾರ ಈಗಲೂ *ಅಸ್ತಿತ್ವ*ದಲ್ಲಿದೆ. ಅದು ಅಸ್ತಿತ್ವದಲ್ಲಿರುವದಾದರೆ, ಅದು ಎಲ್ಲಿಂದ ಬಂದಿತು?

ಅಸ್ತಿತ್ವದಲ್ಲಿ ಕೇವಲ ಎರಡು ರೀತಿಗಳಿರುತ್ತವೆಂದು ಹೇಳಲಾಗುತ್ತದೆ: ಮನಸ್ಸು ಮತ್ತು ವಸ್ತು. ಯಾವದೂ ಶೂನ್ಯದಿಂದ ಬರಲು ಸಾಧ್ಯವಿಲ್ಲವಾದ್ದರಿಂದ, ಅದರಲ್ಲಿ ಒಂದು ನಿತ್ಯಕಾಲದಿಂದ್ದಿರಬೇಕು ಮತ್ತು ಮತ್ತೊಂದನ್ನು ಉಂಟು ಮಾಡಿರಬೇಕು. ಮನಸ್ಸು ಸದಾಕಾಲದಿಂದಲೂ ಇದ್ದದ್ದಾಗಿ ವಸ್ತುವನ್ನು ಉಂಟು ಮಾಡಿರಬಹುದು, ಅಥವಾ ವಸ್ತು ಸದಾಕಾಲದಿಂದ ಇದ್ದದ್ದಾಗಿ ಮನಸ್ಸನ್ನು ಉಂಟು ಮಾಡಿರಬಹುದಾಗಿದೆ. ಜೀವವಿಲ್ಲದ, ಯೋಚನೆ ಮಾಡಲಾಗದ, ನೀತಿ ಪ್ರಜ್ಞೆಯಿಲ್ಲದ ಒಂದು ಸಂಗತಿಯು ನೀತಿಯ ಮನಃಸಾಕ್ಷಿಯಿಂದ ತುಂಬಿರುವ ಒಂದು ಜೀವಿಸುವಂಥ, ಭಾವನೆಯುಳ್ಳಂಥ ಮನಸ್ಸನ್ನು ಉಂಟು ಮಾಡಲು ಸಾಧ್ಯವೆಂಬದನ್ನು ಯೋಚಿಸಲೂ ಅಸಾಧ್ಯವಾದದ್ದು, ಈ ಕಾರಣದಿಂದ ಅದು ತದ್ವಿರುದ್ಧವಾಗಿರುವ ಸಾದ್ಯತೆಯಿದೆ: ನಿತ್ಯವಾದ ಮನಸ್ಸು ವಸ್ತುವನ್ನು ಉಂಟು ಮಾಡಿರುವ ಸಾಧ್ಯತೆಯಿದೆ.

ನನ್ನ ಸ್ನೇಹಿತನಾದ, Jim Waldron ಈ ಪರಿಕಲ್ಪನೆಯನ್ನು ದೃಷ್ಟಾಂತಗೊಳಿಸಿದನು. ಆತನು ಪಾಕಿಸ್ತಾನಕ್ಕೆ ಹೋಗುವ ವಿಮಾನದಲ್ಲಿ ಪ್ರಯಾಣಿಸುತ್ತಿದ್ದನು ಮತ್ತು ಆತನ ಪಕ್ಕದ ಆಸನದಲ್ಲಿ ಒಬ್ಬ ರಷ್ಯಾ ದೇಶದವನಿದ್ದನು. ಅವರು ಮಾತಾಡಲಾರಂಭಿಸಿದ ಸಂಭಾಷಣೆಯು ಶೀಘ್ರದಲ್ಲಿಯೇ ಧಾರ್ಮಿಕ ಸಂಗತಿಯೆಡೆಗೆ ತಿರುಗಿತು. ದೇವರು ಈ ಜಗತ್ತನ್ನು ಉಂಟು ಮಾಡಿದ್ದಾನೆಂಬುದನ್ನು ರಷ್ಯಾ ದೇಶದವನಿಗೆ ನಂಬುವದಕ್ಕೆ ಆಗಲಿಲ್ಲ. ಅಂತಿಮವಾಗಿ, ಜಿಮ್ ಆತನಿಗೆ ಕೇಳಿದನು, "ರಷ್ಯಾ ದೇಶದಲ್ಲಿ ಮಕ್ಕಳು ಆಟವಾಡುವಾಗ ಮಣ್ಣಿನ ಹೋಳಿಗೆಗಳನ್ನು ಮಾಡುತ್ತಾರಾ?" ಆ ವ್ಯಕ್ತಿಯು ಮುಗುಳ್ನಕ್ಕು, ಹೌದು ರಷ್ಯಾದಲ್ಲಿ ಚಿಕ್ಕ ಮಕ್ಕಳು ಮಣ್ಣಿನಲ್ಲಿ ಹೋಳಿಗೆ ಮಾಡಿ

ಆಟವಾಡುತ್ತಾರೆ ಎಂದು ಒಪ್ಪಿಕೊಂಡನು.

Jim ಹೇಳಿದನು, "ಇದು ನಿಜಕ್ಕೂ ಆಸಕ್ತಿಕರವಾದದ್ದು. ನನ್ನ ಸ್ವಂತ ದೇಶದಲ್ಲೂ ಸಹ ಮಕ್ಕಳು ಮಣ್ಣಿನಿಂದ ಹೋಳಿಗೆಗಳನ್ನು ಮಾಡುತ್ತಾರೆ. ನಾನು ಜಗತ್ತಿನಲ್ಲಿ ಹೋದ ಎಲ್ಲಾ ದೇಶಗಳಲ್ಲಿಯೂ ಮಕ್ಕಳು ಮಣ್ಣಿನಿಂದ ಹೋಳಿಗೆಗಳನ್ನು ಮಾಡುತ್ತಾರೆ ಆದರೆ ನಾನಂತೂ ಒಂದು ಸಂಗತಿಯನ್ನು ಎಲ್ಲಿಯೂ ನೋಡಿಲ್ಲ: *ಒಂದು ಮಣ್ಣಿನ ಹೋಳಿಗೆಯು ಒಬ್ಬ ಚಿಕ್ಕ ಮಗುವನ್ನು ಉಂಟು ಮಾಡುವದನ್ನು ಎಲ್ಲಿಯೂ ನಾನು ಕಂಡಿಲ್ಲ."*

ಆಗ ಶೀಘ್ರವೇ "ಮನಸ್ಸು" ಮತ್ತು "ವಸ್ತು" ಗಳ ಕುರಿತು ಒಂದು ಅಂಶವು ಸ್ಪಷ್ಟಗೊಂಡಿತು. ಮನಸ್ಸಿಗೆ ವಸ್ತುವನ್ನು ತನ್ನಿಚ್ಛೆಯಂತೆ ನಡಿಸಿಕೊಂಡು ಬಳಸುವ ಸಾಮರ್ಥ್ಯವಿದೆ ಆದರೆ ತದ್ವಿರುದ್ಧವಾಗಿ ನಡೆಯುವದಕ್ಕೆ ಸಾಧ್ಯವಿಲ್ಲ. Jim ನಸುನಗೆಯೊಂದಿಗೆ ಮುಕ್ತಾಯಗೊಳಿಸಿದನು :"ವೈಯಕ್ತಿಕವಾಗಿ, ನನಗೆ ಮಣ್ಣಿನ ಹೋಳಿಗೆಯು ಮಕ್ಕಳನ್ನು ಮಾಡುತ್ತದೆಂಬದಕ್ಕಿಂತಲೂ ಮಕ್ಕಳು ಮಣ್ಣಿನ ಹೋಳಿಗೆಯನ್ನು ಮಾಡುತ್ತಾರೆಂಬುದನ್ನು ನಂಬುವದು ಅತ್ಯಂಥ ಸುಲಭವಾಗಿ ತೋರುತ್ತದೆ."

ಏನೋ ಒಂದು ಇರುವದರಿಂದ, ಯಾವದೋ ಒಂದು ಯಾವಾಗಲೂ ಇದ್ದಿರಲೇಬೇಕು—ಏಕೆಂದರೆ ಇರುವದು ಎಂದಿಗೂ ಶೂನ್ಯದಿಂದ ಬರುವದಕ್ಕೆ ಸಾಧ್ಯವಿಲ್ಲ. ಈ ಜಗತ್ತು ಯಾವಾಗಲೂ ಇತ್ತೋ ಅಥವಾ ಯಾವದೋ ಒಂದು ಸಂದರ್ಭದಲ್ಲಿ ಸೃಷ್ಟಿಸಲ್ಪಟ್ಟಿತೋ?

ಕೆಲವು ವರ್ಷಗಳ ಹಿಂದೆ, ನಾನು *The Evidence of God in an Expanding Universe* ಎಂಬ ಪುಸ್ತಕವನ್ನು ಓದಿ ಆನಂದಿಸಿದೆನು, ಅದು ವಿವಿಧ ಕ್ಷೇತ್ರಗಳಿಗೆ ಸೇರಿದ ನಾಲ್ವತ್ತು ವಿಜ್ಞಾನಿಗಳಿಂದ ಬರೆಯಲ್ಪಟ್ಟ ಪುಸ್ತಕ. ಅವರಲ್ಲಿ ಅನೇಕರು "ವಿಶ್ವವು ಕ್ಷೀಣಿಸುತ್ತಿದೆ" ಎಂಬ ಅಂಶವನ್ನು ನಿರೂಪಿಸುವದಕ್ಕೆ ಮತ್ತೊಬ್ಬರ ಸಂಶೋಧನೆಯ ಸಂಗತಿಗಳನ್ನು ಉಪಯೋಗಿಸಿದ್ದು ನನ್ನಲ್ಲಿ ಆಸಕ್ತಿ ಕೇರಳಿಸಿತ್ತು. ಅದನ್ನು ವಿವಿಧ ರೀತಿಯಲ್ಲಿ ಉರಿಯುವ ಬೆಂಕಿಯು ಆರುತ್ತಾ ಹೋಗುವದಕ್ಕೆ, ತುದಿಯು ಕ್ಷಿಣಿಸುವದಕ್ಕೆ ಹೋಲಿಸಲಾಗಿದೆ ಮತ್ತು ಇತರ ದೃಷ್ಟಾಂತಗಳನ್ನು ನೀಡಲಾಗಿತ್ತು. ನೀವು ಅದನ್ನು ಯಾವ ರೀತಿಯಲ್ಲಿಯಾದರೂ ವಿವರಿಸಿರಿ, ಎರಡು ಸತ್ಯಗಳಂತೂ ಖಚಿತವಾದವುಗಳು (1) ವಿಶ್ವವು ಎಂದಿಗೂ ಶಾಶ್ವತವಾಗಿರಲಿಲ್ಲ, ಮತ್ತು (2) ಅದು ಯಾವದೋ ಒಂದು ಸಂದರ್ಭದಲ್ಲಿ *ಆರಂಭವನ್ನು* ಹೊಂದಿತ್ತು.[195]

ಯಾವದೂ ಶೂನ್ಯದಿಂದ ಬರಲಾರದಾದ್ದರಿಂದ, ಇಲ್ಲಿ ಪುನಃ ನಮಗೆ ಒಂದು ವಿಶ್ವವನ್ನು ರೂಪಿಸುವದಕ್ಕೆ ಸಾಕಾಗುವಂಥ ಒಂದು ಶಕ್ತಿಯು ಇದೆ ಎಂಬದನ್ನು ತೋರಿಸುತ್ತದೆ. ಅದು ಒಂದು ರೀತಿಯ ನಿತ್ಯವಾದ ಮನಸ್ಸು—ಅಂದರೆ ದೇವರು ಎಂದಾಗಿರಲೇಬೇಕು.

ನಿಮ್ಮ ಸುತ್ತಲೂ ನೋಡಿರಿ. ನೀವು ಜೀವಿಸುವ ಮನೆಯು ಹಾಗೆ ಸುಮ್ಮನೆ ಉಂಟಾಯಿತೋ? ಇಬ್ರಿಯ 3:4 ಈ ಅಂಶವನ್ನು ಉತ್ತಮವಾಗಿ ಸಾರಾಂಶಿಸುತ್ತದೆ: " ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು; ಆದರೆ ಸಮಸ್ತವನ್ನು ಕಟ್ಟಿದಾತನು ದೇವರೇ."[196]

*ಎರಡನೆಯದಾಗಿ, ದೇವರು ಸಮಸ್ತವನ್ನೂ ಉಂಟುಮಾಡಿದನೆಂಬದನ್ನು ನಂಬುವದು*

*ಸಮಂಜಸವಾದದ್ದು.* ಒಬ್ಬ ನಿರ್ಮಾಣಿಕನು ಇದ್ದಾನೆಂಬುದನ್ನು ನಂಬುವದು ಸಮಂಜಸವಾದದ್ದು ಎಂಬದನ್ನು ತೋರಿಸಿಕೊಡುವದಕ್ಕಾಗಿಯೇ ಈ ವಿಶ್ವವು *ರೂಪಿಸಲ್ಪಟ್ಟಿದೆ* ಎಂಬ ನಿಖರವಾದ ಸೂಚನೆಗಳನ್ನು ನಾವು ಗಮನಕ್ಕೆ ತಂದುಕೊಳ್ಳುತ್ತಲಿದ್ದೇವೆ. ಸರಿ, ಈಗ ಆಲೋಚನೆಯನ್ನು ತಿರುಗಿಸಿ ಅದನ್ನು ಇನ್ನೊಂದು ದಿಕ್ಕಿನಿಂದ ನೋಡೋಣ: ಈ *ನಿರ್ಮಾಣಿಕನು* ವಾಸ್ತವದಲ್ಲಿ ವಿಶ್ವವನ್ನು ಉಂಟುಮಾಡಿದನು. ಅದು ತನ್ನಿಂದ ತಾನೇ ಆಕಸ್ಮಿಕವಾಗಿ ಉಂಟಾಗಲಿಲ್ಲ. ಅದು ಸೃಷ್ಟಿಸಲ್ಪಟ್ಟಿತು; ಅದು ಕ್ರಮಗೊಳಿಸಲ್ಪಟ್ಟಿತು; ಅದು ರೂಪಿಸಲ್ಪಟ್ಟಿತು.

ಈಗ ನಾವು ವಿಷಯದ ಹೃದಯಭಾಗಕ್ಕೆ ಬರೋಣ. ದೇವರು ಸಮಸ್ತವನ್ನು ಉಂಟು ಮಾಡಿದನೆಂದು ನಂಬುವದು ಸಮಂಜಸವಾಗಿದೆಯಾದ್ದರಿಂದ, *ದೇವರು ಮನುಷ್ಯನನ್ನು ಉಂಟು ಮಾಡಿದನೆಂಬದನ್ನು ನಂಬುವದು ಸಹ ಸಮಂಜಸವಾದದ್ದು*—ಅಂದರೆ ದೇವರು *ನಿಮ್ಮನ್ನು* ಮತ್ತು *ನನ್ನನ್ನು* ಸೃಷ್ಟಿಸಿದನು. ನಾನು ಈ ಮುಂಚೆ pyramid (ಮೂರು ಅಂಶಗಳನ್ನು) ಪರಿಚಯಿಸಿದಾಗ, ನಾನು "ಸಾಕ್ಷ್ಯಾಧಾರಗಳನ್ನು" ಮನುಷ್ಯನ ವಿಷಯದಲ್ಲಿ ಅನ್ವಯಿಸುವದಕ್ಕೆ ಮುಂದಾಗಲಿಲ್ಲ. ಹೇಗೂ, ನಾನು ಏನು ಮಾತಾಡುತ್ತಿದ್ದೇನೋ ಅದನ್ನು ದೃಷ್ಟಾಂತಪಡಿಸುವದಕ್ಕೆ ಮಾನವನು ಒಂದು ಉತ್ತಮ ಉದಾಹರಣೆಯೆಂದು ನಾನು ಪರಿಗಣಿಸುತ್ತೇನೆ. ಕೆಲವು ಕ್ಷಣಗಳನ್ನು ತೆಗೆದುಕೊಂಡು ನಿಮ್ಮನ್ನು ನೋಡಿಕೊಳ್ಳಿರಿ. ಮಾನವ ಶರೀರದಂಥ ಯಂತ್ರವು ಮತ್ತೊಂದಿಲ್ಲ. ಮಾನವನ ಕೈಗಳಂತಹ ಯಾಂತ್ರಿಕವಾದ ಸಾಧನ ಬೇರೊಂದಿಲ್ಲ.[197] ಮನುಷ್ಯನ ಕಣ್ಣುಗಳಂಥ (camera) ಕ್ಯಾಮರಾ ಮತ್ತೊಂದಿಲ್ಲ. ಮಾನವನ ಹೃದಯದಂತ (pump) ಪಂಪ್ ಮತ್ತೊಂದಿಲ್ಲ. ಸ್ವಯಂ-ತಂಪುಗೊಳ್ಳುವ, ಸ್ವಯಂ-ಶಮನಗೊಳ್ಳುವ ಮಾನವ ಚರ್ಮದಂತೆ ಬೇರೊಂದಿಲ್ಲ. ಮಾನವ ಶರೀರದೊಳಗಿನ ಅಂಗಾಂಗಗಳ ರೀತಿಯ ಕಾರ್ಖಾನೆ ಮತ್ತೊಂದಿಲ್ಲ. ದಾವೀದನ ಮಾತುಗಳಲ್ಲಿ ನೋಡುವದಾದರೆ, "ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ" (ಕೀರ್ತನೆ 139:14).

ಮಾನವ ಬುದ್ಧಿಯನ್ನು ಉದಾಹರಣೆಗೆ ತೆಗೆದುಕೊಳ್ಳಿರಿ. ನಾವು ವಿಸ್ಮಯಕರವಾದ ಗಣಕಯಂತ್ರಗಳ ಯುಗದಲ್ಲಿ ಜೀವಿಸುತ್ತಿದ್ದೇವೆ; ಆದರೆ ನೀವು New York ಪಟ್ಟಣದಲ್ಲಿರುವ ಅತ್ಯಂಥ ಮುಗಿಲೆತ್ತರದ ಕಟ್ಟಡಗಳನ್ನು ತುಂಬುವಷ್ಟರ ಮಟ್ಟಿಗೆ ದೊಡ್ಡ ಒಂದು ಗಣಕಯಂತ್ರವನ್ನು ನಿರ್ಮಿಸಿದರೂ ಅದು ಒಬ್ಬ ಚಿಕ್ಕ ಬಾಲಕನ ಮೆದುಳಿನ ಸಾಮರ್ಥ್ಯಕ್ಕೆ, ಚಾತುರ್ಯತೆಗೆ, ಅಥವಾ ಸೃಜನಶೀಲತೆಗೆ ಸಹ ಸಮವಾಗಲಾರದು! ನಾವು ಕೀಳು ಜೀವಿಯಿಂದ ಅಥವಾ ಅತಿಚಿಕ್ಕ ಕೋಶಗಳಿಂದ ವಿಕಾಸವಾಗುತ್ತಾ ಬಂದಿದ್ದೇವೆಂದು ವಿಕಾಸವಾದ ಹೇಳುತ್ತದೆ. ಆ ಸಿದ್ಧಾಂತದ ಪ್ರಕಾರ, ನಾವು ಈಗಷ್ಟೇ ಬುದ್ಧಿ ಅಭಿವೃದ್ಧಿಗೊಂಡಿದ್ದೇವೆ ಯಾಕೆಂದರೆ ನಮಗೆ ಈ ಮಟ್ಟದಲ್ಲಿರುವ ಇತರ ಪ್ರಾಣಿಗಳೊಂದಿಗೆ ಪೈಪೋಟಿ ನಡಿಸುವಷ್ಟು ಬಲ ಅಥವಾ ವೇಗ ಅಥವಾ ದೊಡ್ಡ ಗಾತ್ರ ಇರುವದಿಲ್ಲ—ಹೀಗಿದ್ದರೂ, ಸತ್ಯವೇನೆಂದರೆ ನಮ್ಮ ಮೆದುಳಿಗಿರುವ ಸಾಮರ್ಥ್ಯದಲ್ಲಿ *ಅತಿ ಚಿಕ್ಕ ಪ್ರಮಾಣದಷ್ಟೇ* ನಾವು ಬೆಳವಣಿಗೆಗೊಂಡಿದ್ದೇವೆ. ಮಾನವನ ಅಭಿವೃದ್ಧಿಯನ್ನು ಯಾವದೇ ಒಂದು "ಬದುಕುಳಿಯುವ" ಸಿದ್ಧಾಂತದಿಂದ ವಿವರಿಸುವದಕ್ಕಾಗುವದಿಲ್ಲ. ಸರಳ ವಾಸ್ತವಾಂಶವೇನಂದರೆ ದೇವರು ನಮಗೆ ನಮ್ಮ ಮನಸ್ಸುಗಳನ್ನು ನೀಡಿದ್ದಾನೆ; ಒಬ್ಬ

ಯೋಚಿಸುವ ಜೀವಿಯು ನಮ್ಮನ್ನು ಯೋಚಿಸಲು ಶಕ್ತರಾದ ಜೀವಿಗಳನ್ನಾಗಿ ಉಂಟುಮಾಡಿದ್ದಾನೆ. ನಾನು ಪುನಃ ಹೇಳುತ್ತೇನೆ: ದೇವರು ಮನುಷ್ಯನನ್ನು ಉಂಟುಮಾಡಿದ್ದಾನೆಂಬುದು ತಾರ್ಕಿಕ (ಸಮಂಜಸ)ವಾದದ್ದು. ನಾವು ಪೂರ್ವಜ ಮಂಗನ ರೀತಿಯ ಪ್ರಾಣಿಯೊಂದರ ಸ್ವರೂಪದಿಂದ ಬಂದವರೆನ್ನುವದಕ್ಕಿಂತಲೂ ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆಂದು ನಂಬುವದು ಇನ್ನು ಎಷ್ಟೋ ಸಮಂಜಸವಾಗಿದೆ (ಆದಿಕಾಂಡ 1:26)!

*ಮೂರನೆಯದಾಗಿ, ದೇವರು ಮನುಷ್ಯನಿಗೆ ಒಂದು ಪ್ರಕಟಣೆಯನ್ನು ಕೊಟ್ಟನು ಎಂಬದನ್ನು ನಂಬುವದು ಸಮಂಜಸವಾದದ್ದು.* ಈ ಜಗತ್ತನ್ನು ದೇವರು ಮಾಡಿದನು, ದೇವರು ಮಾನವನಿಗೆ ಆತನು ಹೇಗೆ ಬಂದನು, ಏಕೆ ಇಲ್ಲಿದ್ದಾನೆ ಮತ್ತು ಜೀವನ ಏನಾಗಿರುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಆತನಿಗೆ ಕೊಡುವದು ಸಮಂಜಸವೇ ಆಗಿದೆ.

ನೀವು ಒಂದು ದಿನ ಮನೆಗೆ ಹಿಂದಿರುಗಿದಾಗ, ನಿಮ್ಮ ಮನೆ ಎದುರಿನ ಹುಲ್ಲುಹಾಸಿನಲ್ಲಿ ಒಂದು ದೊಡ್ಡ ಯಂತ್ರವೊಂದು ಇದೆ ಎಂದು ಊಹಿಸಿಕೊಳ್ಳಿರಿ. ಅದು ಕ್ಲೀಷ್ಠಕರ, ಸುಂದರ ರೂಪಿತ, ಅತ್ಯಂಥ ಆದುನಿಕ ಆವಿಷ್ಕಾರಗಳಿಂದ ಕೂಡಿದ್ದು; ಅದು ಒಂದು ಬಹಳ ಪ್ರಾಮುಖ್ಯವಾದ ಕೆಲಸಕ್ಕಾಗಿ ನಿರ್ಮಿಸಲ್ಪಟ್ಟಿದೆಯೆಂದು ತೋರುತ್ತದೆ. ಹೇಗೂ, ಅದರ ಉದ್ದೇಶದ ಬಗ್ಗೆ ಮಾಹಿತಿಯಿಲ್ಲ, ಅದನ್ನು ಹೇಗೆ ಉಪಯೋಗಿಸಬೇಕೆಂದು ತಿಳಿಸುವ ಮಾಹಿತಿ ಪುಸ್ತಕ ಇಲ್ಲ, ಯಂತ್ರದ ಮೇಲೆ ಸಹ ಯಾವದೇ ಮಾಹಿತಿ ಮುದ್ರಿಸಿಲ್ಲ. ಅದು ಯಾವ ಚಟುವಟಿಕೆಗಾಗಿ ನಿರ್ಮಿಸಲ್ಪಟ್ಟಿದೆ ಎಂಬುದು ನಿಮಗೆ *ಗೊತ್ತೇ* ಆಗಲಿಲ್ಲವೆಂದಿಟ್ಟುಕೊಳ್ಳಿರಿ. ನೀವು ಬಹುಶಃ ಎರಡರಲ್ಲಿ ಒಂದು ತೀರ್ಮಾನಕ್ಕೆ ಬರುವಿರಿ: (1) ಅದನ್ನು ನಿರ್ಮಿಸಿದವನು ತನ್ನ ಉದ್ದೇಶವನ್ನು ಪ್ರಕಟಿಸುವ ಮೊದಲೇ ಸತ್ತು ಹೋಗಿರಬೇಕು, ಅಥವಾ (2) ಅದನ್ನು ಮಾಡಿದವನಿಗೆ ಹುಚ್ಚು ಇರಬೇಕೆನೋ ಎಂದುಕೊಳ್ಳುವಿರಿ.

ನಾವು ನಮ್ಮ ಸುತ್ತಲಿನ ಈ ಜಗತ್ತನ್ನು ನೋಡುವಾಗ—ಮಾನವನಿಂದ ಇದುವರೆಗೂ ನಿರ್ಮಿಸಲ್ಪಟ್ಟ ಯಾವದೇ ಯಂತ್ರಕ್ಕಿಂತಲೂ ಹೆಚ್ಚು ಸಂಕೀರ್ಣ ಮತ್ತು ಜಟಿಲವಾದ ಜಗತ್ತು—ಸೃಷ್ಟಿಕರ್ತನು ನಮಗೆ ಜೀವನ ಏನಾಗಿದೆ ಎಂಬದನ್ನು ತಿಳಿಸದೆ ಇದ್ದಿದ್ದರೆ ಆತನು ಸತ್ತಿರಬೇಕು ಅಥವಾ ಹುಚ್ಚನಿರಬೇಕು ಎಂದು ಭಾವಿಸಿಕೊಳ್ಳುತ್ತಿದ್ದೇವೆನೋ. ದೇವರು ಅವೆರಡರಲ್ಲಿ ಯಾವದೂ ಆಗಿಲ್ಲ! ಆದುದರಿಂದ, ಆತನು ನಮ್ಮೊಂದಿಗೆ ಮಾತಾಡಿದ್ದಾನೆ ಎಂಬ ತೀರ್ಮಾನಕ್ಕೆ ಬರುತ್ತೇವೆ, ಇಬ್ರಿಯ 1:1, 2ರಲ್ಲಿನ ಮಾತುಗಳು ಸಂಪೂರ್ಣ ಸಮಂಜಸವಾಗಿವೆ: "ದೇವರು . . . ನಮ್ಮೊಂದಿಗೆ ಮಾತಾಡಿದ್ದಾನೆ."

ದೇವರು ನಮ್ಮೊಂದಿಗೆ ಮಾತಾಡಿದ್ದಲ್ಲಿ, ಅದರರ್ಥವು ನಮ್ಮ ಮುಂದೆ ಕೆಲವು ಮಾನದಂಡಗಳಿವೆ, ಸರಿ ಅಥವಾ ತಪ್ಪು ಎಂಬ ಕೆಲವು ಸಂಗತಿಗಳು ಇವೆ ಎಂದಾಗಿರುತ್ತದೆ. ಸ್ವತಃ ಮನುಷ್ಯನೇ ಒಂದು ಮಾನದಂಡ ಆಗಿರುವದಿಲ್ಲ. ಬೈಬಲ್ ಹೇಳುತ್ತದೆ, " ಮಾನವನ ಮಾರ್ಗವು ಅವನ ಸ್ವಾಧೀನದಲ್ಲಿಲ್ಲವೆಂದು ನನಗೆ ಗೊತ್ತು; ಮನುಷ್ಯನು ನಡೆದಾಡುತ್ತಾ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನಿಡಲಾರನು" (ಯೆರೆಮೀಯ 10:23).

ಆ ಸಂವಹನ ಸಾಧನ ಯಾವದು? ವಿವಿಧ ಪುಸ್ತಕಗಳು ತಮಗೆ ಒಂದು ಉನ್ನತ

ಶಕ್ತಿಯಿಂದ ಪ್ರೇರಣೆ ಆಯಿತೆಂದು ಹೇಳಿಕೊಳ್ಳುತ್ತವೆ—ಅವುಗಳು ಒಂದಿಲ್ಲಾ ಒಂದು ಹಂತದಲ್ಲಿ ಪರಸ್ಪರ ವ್ಯತೀರಿಕ್ತಗೊಳಿಸಿಕೊಳ್ಳುತ್ತವೆ. ನಮಗೆ ಇಂಥಿಂಥದ್ದೇ ಎಂದು ನಿಖರವಾಗಿ ತಿಳಿಸುವ ದೇವರ ಪ್ರಕಟಣೆಯ ಅಗತ್ಯವಿದೆ. ಈ ವಿಚಾರವನ್ನು ಇನ್ನೊಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ಯೋಣ: *ದೇವರು ಮನುಷ್ಯನಿಗೆ ಕೊಟ್ಟ ಪ್ರಕಟಣೆಯು ಬೈಬಲ್* ಎಂದು *ನಂಬುವದು ಸಮಂಜಸವಾದದ್ದು.*

ಬೈಬಲ್ ಪ್ರೇರಣೆಗೊಂಡು ಬರೆಯಲ್ಪಟ್ಟಿದೆ ಎಂಬದಕ್ಕೆ ಅಸಂಖ್ಯಾತ ಸಾಕ್ಷ್ಯಾಧಾರಗಳಿವೆ: ಐಕ್ಯತೆ, ಪ್ರಾಚೀನತೆ. ಆಧುನಿಕತೆ, ಐತಿಹಾಸಿಕತೆ ಮತ್ತು ಭೌಗೋಳಿಕ ನಿಖರತೆಗಳು, ಸೊಗಸುತನ, ಪ್ರಭಾವ, ಅವಿನಾಶಿತ್ವ (ಅಳಿಸಲು ಸಾಧ್ಯವಿಲ್ಲದ), ನೆರವೇರಿದ ಪ್ರವಾದನೆ, ಮತ್ತು ಇತರೆ. ಈ ವಿಷಯಗಳನ್ನು ಅನ್ವೇಷಿಸುವ ಬದಲಿಗೆ, ನಾವು ಈಗಾಗಲೇ ಆರಂಭಿಸಿರುವ ವಿಚಾರಧಾರೆಯಲ್ಲಿಯೇ ಮುಂದುವರೆಯೋಣ. ಇದನ್ನು ಪರಿಗಣಿಸಿರಿ: ದೇವರು ಲೋಕವನ್ನು ಉಂಟುಮಾಡಿದ್ದರೆ, ಮನುಷ್ಯನನ್ನು ಅದರೊಳಗೆ ಇಟ್ಟಿರುವದೇ ಆದಲ್ಲಿ, ಮತ್ತು ಆ ಮೇಲೆ ಮನುಷ್ಯನಿಗೆ ಪ್ರಕಟಣೆ ಕೊಟ್ಟಿರುವದಾದರೆ, *ಆ ಕೊಡಲ್ಪಟ್ಟ ಪ್ರಕಟಣೆಯು ದೇವರ ಜಗತ್ತಿನಲ್ಲಿ ಜೀವಿಸುವದಕ್ಕೆ ಮನುಷ್ಯನಿಗೆ ಉತ್ತಮವಾಗಿ ಸರಿಹೊಂದುವಂತೆ ಇರುವದು ಸಮಂಜಸವಾಗಿರುವದಲ್ಲವೇ?*[198]

ಒಟ್ಟಾರೆಯಾಗಿ ಲೋಕವನ್ನು ನೋಡಿರಿ. ಮನುಷ್ಯನು ಅತಿ ಹೆಚ್ಚು ಅಭಿವೃದ್ಧಿಗೊಂಡಿರುವ, ಮನುಷ್ಯನ ಅಗತ್ಯತೆಗಳು ಹೆಚ್ಚು ಸಂತೃಪ್ತಿಕರವಾಗಿ ಸಂಧಿಸಲ್ಪಟ್ಟಿರುವ, ಮನುಷ್ಯ ಜೀವಿತಗಳು ಹೆಚ್ಚಾಗಿ ಗೌರವ ಹಾಗೂ ರಕ್ಷಣೆ ಮಾಡಲ್ಪಟ್ಟಿರುವ ದೇಶಗಳನ್ನೊಮ್ಮೆ ನೋಡಿರಿ. ನಿಮಗೆ ತಿಳಿದು ಬರುವದೇನೆಂದರೆ, ಆ ದೇಶಗಳ ಮೇಲೆ ಅತ್ಯಂಥ ಹೆಚ್ಚಿನ ಪ್ರಭಾವವನ್ನು *ಬೈಬಲ್* ಬೀರಿರುವದು—ಕನಿಷ್ಠ, ಗತಕಾಲದಲ್ಲಿ—ಕಾಣುತ್ತದೆ.[199]

ಪೌಲನ ಮಾತುಗಳು ಲೋಕದುದ್ದಕ್ಕೂ ಸತ್ಯವೆಂದು ಸಾಭಿತಾಗಿರುತ್ತವೆ: "ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿವೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ *ಸಕಲಸತ್ಕಾರ್ಯಕ್ಕೆ* ಸನ್ನದ್ಧನಾಗುವನು" (2 ತಿಮೊಥೆ 3:16, 17; ಒತ್ತಿ ಹೇಳಿದ್ದು ನನ್ನದು).

ಬೈಬಲ್ ತನ್ನೊಳಗೆಯೇ ಒಂದು ಪ್ರೇರಣೆಯ ಸಾಕ್ಷ್ಯವನ್ನು ಒಳಗೊಂಡಿದೆ. ಬೈಬಲ್ ನಿಜವಾಗಿಯೂ ದೇವರಿಂದ ಬಂದದ್ದೋ ಎಂದು ನಿಮಗೆ ನಂಬುವದಕ್ಕೆ ಕಷ್ಟವಾದಲ್ಲಿ, ನೀವು ಸ್ವತಃ ಆ ಪುಸ್ತಕವನ್ನೇ ತೆರೆದು ಓದಿ ಅದನ್ನು ಪರಿಚಯ ಮಾಡಿಕೊಳ್ಳಬೇಕೆಂದು ನಿಮಗೆ ಸಲಹೆ ಮಾಡುವೆನು. ರೋಮಾಪುರ ಪತ್ರಿಕೆಯಲ್ಲಿ ಪೌಲನು ಹೇಳುತ್ತಾನೆ, "ಕೇಳುವದರಿಂದ ನಂಬಿಕೆಯುಂಟಾಗುತ್ತದೆ. ದೇವರ ವಾಕ್ಯವನ್ನು ಕೇಳುವದರಿಂದಲೇ" (10:17).

ಇದನ್ನು ದೃಷ್ಟಾಂತಪಡಿಸುವದಕ್ಕೆ, ನನಗೆ ದರೋಡೆಯ ಭಯವಿದ್ದು ನನ್ನ ತಲೆದಿಂಬಿನ ಕೆಳಗೆ ಒಂದು ಗನ್ ಇಟ್ಟುಕೊಂಡಿದ್ದೇನೆಂದು ಊಹಿಸಿಕೊಳ್ಳೋಣ. ಸರಿ, ಮುಂದೆ ಒಂದು ರಾತ್ರಿ ನನಗೆ ಎಚ್ಚರವಾದಾಗ ಯಾವನೋ ಅತಿಕ್ರಮದಿಂದ ಮನೆಯೊಳಗೆ ಬಂದಿರುತ್ತಾನೆಂದು ಊಹಿಸಿಕೊಳ್ಳಿರಿ .ಅವನಿಗೆ ನಾನು ನನ್ನಲ್ಲಿರುವ

ಬಂದೂಕು ತೋರಿಸಿ ಹೆದರಿಸುವದಕ್ಕೆ ಬಯಸುತ್ತೇನೆ. ಹಾಗಾದರೆ ನಾನು ಏನು ಮಾಡಬೇಕು?

ನಾನು ಕನಿಷ್ಠ, ಎರಡು ದಾರಿಗಳನ್ನು ಅನುಸರಿಸಬಹುದು. ನಾನು ಲೈಟಗಳನ್ನು ಹೊತ್ತಿಸಬಲ್ಲೆ, ಆತನಿಗೆ ಬಂದೂಕು ತೋರಿಸಿ, "ನೋಡಿಲ್ಲಿ, gun ಕಾಣಿಸುತ್ತದಾ? ಇದರಲ್ಲಿ ಟೊಳ್ಳಾದ ಪೈಪ್ ಇದೆ. ಈ ಕೆಳಗಡೆಯಲ್ಲಿ ಒಂದು ಗುಂಡು ಇದೆ. ಆ ಗುಂಡಿನ ಮೇಲೆ ಒಂದು ಸಿಡಿಯುವ ಮುಚ್ಚಳವಿದೆ ಮತ್ತು gun ಪೌಡರ್ ಇದೆ, ಅಂತ್ಯದಲ್ಲಿ ಚೂಪಾದ ಗುಂಡು ಇದೆ. ನಾನು ಈ ಬಟನ್ ಒತ್ತಿದರೆ, ಅದು ಹಿಂದೆ ಸುತ್ತಿಗೆಯನ್ನು ಸಕ್ರಿಯಗೊಳಿಸುವದು, ಅದು ತಿರಿಗಿ ಗುಂಡಿನ ಮೇಲೆ ದೊಡ್ಡ ಶಕ್ತಿಯಿಂದ ಬಡಿಯುವದು, gun ಪೌಡರ್ ಸಿಡಿದು ಪೈಪಿನ ಮೂಲಕ ಗುಂಡು ಹೊರಸಿಡಿಯುವದು. ಆಗ ಅದು ಅತ್ಯಂಥ ವೇಗವಾಗಿ ಹಾರಿ ಬಂದು, ನಾನು ಅದನ್ನು ನಿನ್ನ ಕಡೆಗೆ ತಿರುಗಿಸಿದರೆ ಅದು ನಿನ್ನೊಳಗೆ ಒಂದು ರಂದ್ರವನ್ನು ಮಾಡಿಬಿಡುವದು."

ಇನ್ನೊಂದೆಡೆ, ನಾನು ಗಾಳಿಯಲ್ಲಿ ಕೆಲವು ಸುತ್ತು ಗುಂಡುಗಳನ್ನು ಹಾರಿಸಬಹುದು! ಅದು ಅತ್ಯಂಥ ಹೆಚ್ಚು ಪರಿಣಾಮಕಾರಿ ಆಗಿರಬಹುದಾದ ಸಾಧ್ಯತೆಯಿರುತ್ತದೆ!

ನಾವು ಬೈಬಲ್.ನ ಕುರಿತು *ಬಹಳಷ್ಟನ್ನು* ಮಾತಾಡಬಲ್ಲೆವು, ಆದರೆ ಬೈಬಲ್ *ಶಕ್ತಿಯುಳ್ಳದ್ದು* ಎಂಬದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ. ಅದು "ಸಜೀವವಾದದ್ದು, ಶಕ್ತಿಯುಳ್ಳದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು" (ಇಬ್ರಿಯ 4:12). ಅದು ವ್ಯಕ್ತಿಪರರ ಜೀವಿತಗಳನ್ನು, ದೇಶಗಳನ್ನು ಮತ್ತು ಇತಿಹಾಸದ ಗತಿಯನ್ನೇ ಬದಲಾಯಿಸಿರುತ್ತದೆ.

ನೀವು ನಿಜವಾಗಿಯೂ ಬೈಬಲ್ ದೇವರಿಂದಲೇ ಬಂದದ್ದು ಎಂಬದಕ್ಕೆ ಅಂತಿಮ ಸಾಕ್ಷ್ಯಾಧಾರ ಎಂದು ಇಚ್ಚಿಸುವದಾದರೆ, ಅದಕ್ಕೆ ನಿಮ್ಮ ಜೀವಿತದಲ್ಲಿ ಒಂದು ಅವಕಾಶವನ್ನು ನೀಡಿರಿ. ಅದನ್ನು *ಓದಿರಿ.* ಅದನ್ನು *ಅಧ್ಯಯನ ಮಾಡಿರಿ.* (ಅಂದರೆ, ಅದನ್ನು *ನಿಜವಾಗಿಯೂ* ಅಧ್ಯಯನ ಮಾಡಿರಿ.) ಅದನ್ನು ನಿಮ್ಮ ಜೀವಿತಕ್ಕೆ ಅನ್ವಯಿಸಿಕೊಳ್ಳಿರಿ. ಆಗ ನಿಮಗೆ, J. B. Phillips ಹೇಳುವ ಪ್ರಕಾರ, ಅದರೊಳಗೆ "ಸತ್ಯದ ಸುರುಳಿ" ಇದೆಯೆಂದು ಗೊತ್ತಾಗುವದು!

*ನಾಲ್ಕನೆಯದಾಗಿ, ದೇವರು ಮಾನವನ್ನು ಪ್ರೀತಿಸುತ್ತಾನೆ ಮತ್ತು ಆತನಿಗೆ ಸಹಾಯ ಮಾಡಲಿಚ್ಚೆಸುತ್ತಾನೆ ಎಂಬುದನ್ನು ನಂಬುವದು ಸಮಂಜಸವಾದದ್ದು.* ನಾವು ಸುತ್ತಲು ಲೋಕದಲ್ಲಿ ನೋಡುವಾಗ, ದೇವರು ಒಬ್ಬ ವೈಯಕ್ತಿಕ ದೇವರಾಗಿದ್ದು ಆತನಿಗೆ ನಮ್ಮ ಪ್ರತಿಯೊಂದು ಅಗತ್ಯತೆಯ ಬಗ್ಗೆ ಹೆಚ್ಚಿನ ಕಾಳಜಿ ಇರುತ್ತದೆಂಬ ಸತ್ಯವನ್ನು ಕಾಣುವಾಗ ನಾವು ನಿಜಕ್ಕೂ ಪ್ರಭಾವಿತರಾಗುತ್ತೇವೆ. ನನಗೆ ಇದು ಸಂಪೂರ್ಣ ಅರ್ಥವಾಗುವದಿಲ್ಲವಾದರೂ ದೇವರು ನಮ್ಮನ್ನು *ಪ್ರೀತಿಸುತ್ತಾನೆಂಬದು* ಸ್ಪಷ್ಟವಾಗಿ ಕಂಡುಬರುತ್ತದೆ.

ದೇವರು ಈ ಲೋಕವನ್ನು ಕಟ್ಟುನಿಟ್ಟಾಗಿ ಕ್ರಿಯೆಮಾಡುವಂತೆ—ಶರೀರದ ಅಗತ್ಯತೆಯೊಂದನ್ನೇ ತೃಪ್ತಿಗೊಳಿಸುವಂತೆ— ನಿರ್ಮಿಸಿರಬಹುದಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ. ಆತನು ಅದನ್ನು ಸುಂದರವಾಗಿ ನಿರ್ಮಿಸಿದನು. ಆತನು ಹೂಗಳನ್ನು ಸೃಷ್ಟಿಸಿದನು. ಆತನು ವರ್ಣರಂಜಿತ ಪಕ್ಷಿಗಳನ್ನು ರೂಪಿಸಿದನು. ಆತನು

ಉಂಟುಮಾಡಿದ್ದೇಲ್ಲವೂ "ಒಳ್ಳೆದಾಗಿತ್ತು" (ಆದಿಕಾಂಡ 1:31). ಏದೆನ್ ತೋಟದಲ್ಲಿ, ದೇವರು (1) "ನೋಡುವದಕ್ಕೆ ಸುಂದರವಾದ," (2) "ಊಟಕ್ಕೆ ಒಳ್ಳೆದಾದ," ಎಲ್ಲಾ ಮರಗಳನ್ನು ಇಟ್ಟನು (ಆದಿಕಾಂಡ 2:9). ಆತನು ಮನುಷ್ಯನಿಗೆ "ತಕ್ಕದಾದ ಸಂಗಾತಿಯನ್ನು" ಮಾಡುವ ವೇಳೆ, ಆತನು ಕೇವಲ ಮಕ್ಕಳನ್ನು ಹೆರುವದಕ್ಕೆ ಸಮರ್ಥವಾದ ಒಂದು ಶರೀರದ ಮುದ್ದೆಯನ್ನು ಉಂಟುಮಾಡಿರಬಹುದಿತ್ತು. ಬದಲಾಗಿ, ಆತನು ಪುರುಷನ ಜೀವಿತವನ್ನು ಬೆಡಗುಗೊಳಿಸಲು ಒಬ್ಬ ಸೌಂದರ್ಯವುಳ್ಳ ಜೀವಿಯನ್ನು ಉಂಟುಮಾಡಿದನು.

ನಾವು ಮನುಷ್ಯನ ಅಗತ್ಯತೆಗಳ ಬಗ್ಗೆ ಯೋಚಿಸುವಾಗ, ನಾವು ಅಂತಿಮವಾಗಿ ಆತ್ಮೀಕ ಹಾಗೂ ನೈತಿಕ ಅಗತ್ಯತೆಗಳಿಗೆ ಬರುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯು ಸಹ ಒಂದಲ್ಲಾ ಒಂದು ಸಂದರ್ಭದಲ್ಲಿ ಆತ್ಮೀಕ ಹಂಬಲಿಕೆಗಳನ್ನು ಅನುಭವಿಸಿರುವದಿಲ್ಲವೋ? ಯಾವ ಮನುಷ್ಯನೇ ಆಗಲಿ ತಾನು ದೇವರ ಮಾನದಂಡವನ್ನು ಮೀರಿಯೇ ಇಲ್ಲವೆಂದು ಹೇಳಬಲ್ಲನೋ? ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲಾ ಒಂದು ಸಮಯದಲ್ಲಿ ಅಸಹಾಯಕತೆಯು ಕಾಡಿದಾಗ ತನಗೆ ತನಗಿಂತಲೂ ದೊಡ್ಡವನೊಬ್ಬನ ಅಗತ್ಯತೆಯಿದೆ ಎಂಬ ಭಾವನೆಯನ್ನು ಅನುಭವಿಸಿರುವದಿಲ್ಲವೋ? ಬೈಬಲ್ ಹೇಳುತ್ತದೆ, "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (3:23).

ಹಾಗಾದರೆ, ದೇವರ ಪ್ರೀತಿ ಮತ್ತು ಕಾಳಜಿ ಬಗ್ಗೆ ತಿಳಿದವರಾಗಿ, ದೇವರು ನಮಗಾಗಿ ಮಾಡಿರುವ ಆತ್ಮೀಕ ಅನುಕೂಲತೆಗಳ ಬಗ್ಗೆ ಓದುವಾಗ ನಮಗೆ ಆಶ್ಚರ್ಯವಾಗುವದಿಲ್ಲ. ಆತನು ತನ್ನ ಮಗನ ರೂಪದಲ್ಲಿ ಪಾಪದ ದಂಡನೆಯನ್ನು ತನ್ನ ಮೇಲೆ ಹೊತ್ತುಕೊಂಡನು, ಮತ್ತು ಯೇಸುವಿನ ಮುಖಾಂತರ ನಿರಂತರವಾದ ಆತ್ಮೀಕ ಸಹಾಯವನ್ನು ನಮಗೆ ಒದಗಿಸಿದ್ದಾನೆ. ನಾನು ಇಷ್ಟನ್ನೇ ಹೇಳಲಿಚ್ಚಿಸುತ್ತೇನೆ, ದೇವರ ಪ್ರೀತಿಯ ಬೆಳಕಿನಲ್ಲಿ, ಈ ರೀತಿಯ ವಾಕ್ಯ ಭಾಗಗಳು ಪ್ರಾಮುಖ್ಯವಾಗಿರುತ್ತವೆ:

> "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಯೋಹಾನ 3:16).
>
> ". . . ಅದೇನಂದರೆ, ಶಾಸ್ತ್ರದಲ್ಲಿ ಮುಂತಿಳಿಸಿದ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು" (1 ಕೊರಿಂಥ 15:3, 4).
>
> ಆಕಾಶಮಂಡಲಗಳನ್ನು ದಾಟಿಹೋದ ದೇವಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ. . . . ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿಯ 4:14-16).

*ಐದನೆಯದಾಗಿ, ದೇವರು ನಮ್ಮಿಂದ ಒಂದು ಪ್ರತ್ಯುತ್ತರವನ್ನು ನಿರೀಕ್ಷಿಸುತ್ತಾನೆಂದು*

*ನಂಬುವದು ಸಮಂಜಸವಾದದ್ದು.* ದೇವರು ನಮ್ಮ ಆತ್ಮೀಕ ಹಿತಕ್ಕಾಗಿ ಎಲ್ಲವನ್ನು ಒದಗಿಸಿದ್ದಾನಾದರೂ, ಆತನು ನಮ್ಮನ್ನು ಯಂತ್ರಮಾನವರನ್ನಾಗಿ ಮಾಡಲಿಲ್ಲ. ಆತನು ನಮಗೆ ವಿಧೇಯವಾಗುವದಕ್ಕೆ ವಿಧಿಗಳನ್ನು ಕೊಟ್ಟಿದ್ದಾನೆ, ಆದರೆ ಆತನು ನಮಗೆ ಸ್ವೇಚ್ಛಾಚಿತ್ತವನ್ನು ಸಹ ಕೊಟ್ಟಿದ್ದಾನೆ. ಆತನು ನಮ್ಮನ್ನು ಸ್ವತಂತ್ರ ನೈತಿಕ ಪ್ರತಿನಿಧಿಗಳಾಗಿ ಮಾಡಿದನು; ನಮಗೆ ಆರಿಸಿಕೊಳ್ಳುವ ಹಕ್ಕು ಇದೆ. ನಾವು ನಂಬಬಲ್ಲೆವು, ಅಥವಾ ನಾವು ನಂಬದೆ ಇರಬಲ್ಲೆವು .ನಾವು ಪ್ರೀತಿಸಬಲ್ಲೆವು ಅಥವಾ ದ್ವೇಷಿಸಿಬಲ್ಲೆವು. ಯಾಂತ್ರಿಕ ಬೊಂಬೆಗಳ ಪ್ರತಿಕ್ರಿಯೆಯು ಯಾಂತ್ರಿಕವಾಗಿರುತ್ತದೆ, ಸ್ವಯಂಚಾಲಿತವಾಗಿರುತ್ತದೆ, ಅರ್ಥಹೀನವಾಗಿರುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಸ್ವೇಚ್ಛಾಚಿತ್ತದ ಪ್ರತಿಕ್ರಿಯೆಯು ಅರ್ಥವುಳ್ಳದ್ದಾಗಿರುತ್ತದೆ.

ದೇವರು ನಮಗೆ ಯಾವದರ ಮೇಲೆ ನಂಬಿಕೆಯನ್ನಿಡಬೇಕೆಂಬುದಕ್ಕೆ ಪುರಾವೆಯನ್ನು ಕೊಟ್ಟಿದ್ದಾನೆ. ಆತನು ತನ್ನ ಪ್ರೀತಿಯನ್ನು ಅಸಂಖ್ಯಾತ ರೀತಿಗಳಲ್ಲಿ ವ್ಯಕ್ತಪಡಿಸಿದ್ದಾನೆ. ಆತನು ನಮ್ಮಿಂದ *ನಂಬಿಕೆ, ವಿಧೇಯತೆ* ಮತ್ತು *ಪ್ರೀತಿಯ* ಪ್ರತಿಕ್ರಿಯೆಯನ್ನು ಬಯಸುವದು ಸಮಂಜಸವಾದದ್ದೋ?

> *ನಂಬಿಕೆ:* ಇಬ್ರಿಯ 11:6 ಹೇಳುತ್ತದೆ, "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ."
>
> *ವಿಧೇಯತೆ:* ಇಬ್ರಿಯ 5:9 ಹೇಳುತ್ತದೆ, ". . . ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು."
>
> *ಪ್ರೀತಿ:* 1 ಯೋಹಾನ 4:8 ಹೇಳುತ್ತದೆ, "ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕಂದರೆ ದೇವರು ಪ್ರೀತಿ ಸ್ವರೂಪಿಯು."

ದೇವರು ನಮಗಾಗಿ ಮಾಡಿರುವದೆಲ್ಲವನ್ನು ನಾವು ಪರಿಗಣಿಸುವಾಗ, ಆತನು ನಮ್ಮಿಂದ ಗಲಾತ್ಯ 5:6 ರಲ್ಲಿ ಸಾರಾಂಶಿಸಲಾಗಿರುವ "ಪ್ರೀತಿಯಿಂದ ಕೆಲಸನಡಿಸುವ ನಂಬಿಕೆ" ಯ ಪ್ರತಿಕ್ರಿಯೆಯನ್ನು ಬಯಸುವದು—ಮತ್ತು ನಿರೀಕ್ಷಿಸುವದು— ಸಮಂಜಸವಾಗಿರುತ್ತದೆ.

ಈ ಚರ್ಚೆಯನ್ನು ಬಹಳವಾಗಿ ವಿಸ್ತರಿಸಬಹುದಾಗಿದೆ, ಯಾಕೆಂದರೆ ದೇವರು ಇಚ್ಛಿಸುವ ಮತ್ತು ಬೇಡುವ ನಿರ್ದಿಷ್ಟವಾದ ಮಾಹಿತಿಯು ಹೊಸ ಒಡಂಬಡಿಕೆಯಲ್ಲಿ ಬಹಳಷ್ಟು ತುಂಬಿರುತ್ತದೆ. ಈಗ ಸದ್ಯಕ್ಕೆ, ನಮ್ಮ ವಿಚಾರಧಾರೆಯಲ್ಲಿ ಒಂದು ಕೊನೆಯ "ಜೋಡಣೆ" ಯನ್ನು ಸೇರಿಸುವ ಮೂಲಕ ಈ ಅಧ್ಯಯನವನ್ನು ಮುಕ್ತಾಯಗೊಳಿಸೋಣ.

*ಆರನೆಯದಾಗಿ, ದೇವರು ಒಂದು ದಿನ ಲೆಕ್ಕ ಒಪ್ಪಿಸುವಂತೆ ಮನುಷ್ಯನನ್ನು ಕರೆಯುವನೆಂದು ನಂಬುವದು ಸಮಂಜಸವಾಗಿರುತ್ತದೆ.* ನಮ್ಮ ಸುತ್ತಲೂ ಎಲ್ಲೆಡೆ, ಈ ಜೀವಿತವೊಂದೇ ನಮಗೆ ಶಾಶ್ವತವಲ್ಲ ಎಂಬದಕ್ಕೆ ಸಾಕಷ್ಟು ಸೂಚನೆಗಳು ಕಾಣಿಸುತ್ತವೆ. ಪ್ರತಿ ಜನಾಂಗವು ಸಹ ಒಂದು ರೀತಿಯ ಅಮರತ್ವದ ಭಾವನೆಯನ್ನು ಹುಟ್ಟಿನಿಂದಲೇ

ಹೊಂದಿರುವದು ಕಂಡುಬರುತ್ತದೆ. ಸತ್ಯ ದೇವರಿಂದ ಬಹಳಷ್ಟು ದೂರದಲ್ಲಿರುವ ಜನರು ಸಹ ಈ ಜೀವನವನ್ನು ದಾಟಿಯೂ ಇನ್ನೊಂದು ಜೀವನವಿರುತ್ತದೆಂಬ ಪರಿಕಲ್ಪನೆಯನ್ನು ಉಳಿಸಿಕೊಂಡಿರುತ್ತಾರೆ.[200]

ಬರಲಿರುವ ಆ ಜೀವಿತದ ಕುರಿತಂತೆ, ದೇವರು ನಮಗೆ ಈ ಜೀವನದಲ್ಲಿ ಅನುಗ್ರಹಿಸಿದ ಆಶಿರ್ವಾದಗಳು, ಅವಕಾಶಗಳು, ಸವಾಲುಗಳು ಹೇಗೆ ಉಪಯೋಗಿಸಿದ್ದೇವೆಂಬುದರ ಬಗ್ಗೆ ಲೆಕ್ಕ ಕೇಳುವದಕ್ಕೆ ನಮ್ಮನ್ನು ಕರೆಯುವನೆಂದು ನಂಬುವದು ಸಮಂಜಸವಾದದ್ದು. ನಮಗೆ ಹೀಗೆ ಹೇಳಲ್ಪಟ್ಟಿದೆ, "ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ" (1 ಕೊರಿಂಥ 4:2).

ಆ ಲೆಕ್ಕ ಕೊಡುವ ದಿನವನ್ನು ಬೈಬಲ್ "ನ್ಯಾಯತೀರ್ಪಿನ ದಿನ" ಎಂದು ಕರೆಯುತ್ತದೆ (ಮತ್ತಾಯ 10:15; 11:22, 24; 12:36). ಇಬ್ರಿಯ 9:27 ಹೇಳುತ್ತದೆ, "ಒಂದೇ ಸಾರಿ ಸಾಯುವದೂ ಆ ಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ನೇಮಕವಾಗಿದೆ." ನ್ಯಾಯತೀರ್ಪಿನ ಪರಿಕಲ್ಪನೆಯು ಸಮಂಜಸವಾದದ್ದೆಂದು ನನ್ನ ನಂಬಿಕೆಯಾಗಿದೆ. ಬಹಳಷ್ಟು ಸಾರಿ, ಈ ಜೀವನದಲ್ಲಿ ಲೆಕ್ಕದ ಪುಸ್ತಕ "ಸಮತೋಲನದಿಂದಿರುವದಿಲ್ಲ." ಕೆಟ್ಟವರು ಅಭಿವೃದ್ಧಿಯಾಗುತ್ತಲಿರುತ್ತಾರೆ, ಒಳ್ಳೆಯವರು ಅನೇಕ ವೇಳೆ ಶೋಷಣೆಗೆ ಗುರಿಯಾಗುತ್ತಾರೆ. ಅಪರಾಧಿಗಳು ಅನೇಕ ಸಾರಿ ಶಿಕ್ಷೆ ಹೊಂದದೆ ತಪ್ಪಿಸಿಕೊಳ್ಳುತ್ತಾರೆ, ಅದೇ ವೇಳೆಯಲ್ಲಿ ನಿರಪರಾಧಿಗಳು ಕಷ್ಟಪಡುತ್ತಾರೆ. ನಿಶ್ಚಯವಾಗಿ, ಒಬ್ಬ ದೇವರಿದ್ದರೆ, ಒಂದು ದಿನ ತಪ್ಪುಗಳು ಸರಿಪಡಿಸಲ್ಪಟ್ಟು, ತಪ್ಪುಗಳಿಗೆ ನೀತಿಯಿಂದ ಶಿಕ್ಷೆಯಾಗುವದೆಂಬುದು ಸಮಂಜಸವಾಗಿರುತ್ತದೆ.

ಇದರರ್ಥವೇನೆಂದರೆ ಒಂದು ದಿನ *ನೀವು* ದೇವರ ಮುಂದೆ ನಿಲ್ಲಬೇಕಾಗುವದು, ಆಗ "ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಬೇಕು" (14:12).

*ಮುಕ್ತಾಯ.* ನಮ್ಮ ವಿಚಾರಧಾರೆಯಲ್ಲಿನ "ಜೋಡನೆಗಳು" ಇಲ್ಲಿವೆ: ಈ ಕೆಳಗಿನವುಗಳನ್ನು ನಂಬುವದು ಸಮಂಜಸವಾದದ್ದು:

ಒಬ್ಬ ದೇವರಿದ್ದಾನೆ.
ಆತನು ಸಮಸ್ತವನ್ನು—ಮತ್ತು ವಿಶೇಷವಾಗಿ ಆತನು ಮಾನವನನ್ನು ಉಂಟುಮಾಡಿದನು.
ಆತನು ಮನುಷ್ಯನಿಗೆ ಒಂದು ಪ್ರಕಟಣೆಯನ್ನು ಅನುಗ್ರಹಿಸಿದನು—ಮತ್ತು ಆತನ ಪ್ರಕಟಣೆಯು ಬೈಬಲ್ ಆಗಿದೆ.
ಆತನು ಮನುಷ್ಯನನ್ನು ಪ್ರೀತಿಸುತ್ತಾನೆ ಮತ್ತು ಸಹಾಯ ಮಾಡುತ್ತಾನೆ—ಆತನಿಗೆ ಯೇಸುವಿನ ಮೂಲಕ *ಆತ್ಮೀಕ* ರೀತಿಯಲ್ಲಿ ಸಹಾಯ ಮಾಡುವನು.
ಆತನು ಒಂದು ಪ್ರತ್ಯುತ್ತರವನ್ನು ಬಯಸುತ್ತಾನೆ—ನಿರೀಕ್ಷಿಸುತ್ತಾನೆ.
ಮನುಷ್ಯನು ಅಂತಿಮವಾಗಿ ತನ್ನ ಶಾರೀರಿಕ ಮತ್ತು ಆತ್ಮೀಕ

ಆಶೀರ್ವಾದಗಳನ್ನು ಹಾಗೂ ಅವಕಾಶಗಳನ್ನೂ ಹೇಗೆ ಉಪಯೋಗಿಸಿದ್ದಾನೆಂಬುದರ ಕುರಿತು ದೇವರ ಮುಂದೆ ಲೆಕ್ಕ ಒಪ್ಪಿಸುವದಕ್ಕೆ ಕರೆಯಲ್ಪಡುವನು.

ನ್ಯಾಯತೀರ್ಪಿನ ದಿನಕ್ಕಾಗಿ ಸಿದ್ಧಗೊಳ್ಳುವ ನಿಟ್ಟಿನಲ್ಲಿ ನೀವು ಸಮೀಪದಲ್ಲಿ ಏನು ಮಾಡಿರುವಿರಿ?

ನಾವು ಪಾಠವನ್ನು ಮುಕ್ತಾಯಗೊಳಿಸುತ್ತಿರುವ ಹಾಗೆ, ಯೇಸುವಿನ ಪ್ರಶ್ನೆಗೆ ಪುನಃ ಬರೋಣ: "ಮನುಷ್ಯಕುಮಾರನು ಬರುವಾಗ, ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ?" ಹೇಗೂ, ನಾವು ಈ ಪ್ರಶ್ನೆಯನ್ನು ಹೆಚ್ಚು ವೈಯಕ್ತಿಕಗೊಳಿಸೋಣ: "ಮನುಷ್ಯಕುಮಾರನು ಬಂದಾಗ, ಆತನು *ನಿನ್ನ* ಹೃದಯದಲ್ಲಿ ನಂಬಿಕೆಯನ್ನು ಕಾಣುವನೋ?" ಖಂಡಿತವಾಗಿ, ಇದು *ನಿಮಗೆ* ಹಾಕಲಾಗುವ ಪ್ರಶ್ನೆಯ ಅತ್ಯಂಥ ಪ್ರಾಮುಖ್ಯವಾದ ಆಯಾಮವಾಗಿದೆ.

ನೀವು ಒಂದು ವೇಳೆ "ನಾನು ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು" ಎಂದು ಕೂಗಿದ ಆ ವ್ಯಕ್ತಿಯ ರೀತಿಯಲ್ಲಿ ಇರಬಹುದು (ಮಾರ್ಕ 9:24). ನಿಮ್ಮಲ್ಲಿ ನಂಬಿಕೆ ಕಡಿಮೆಯಾಗಿದ್ದರೆ, ಅದು ಬರಿ ಕಲಿಕೆಯಾಗಿದ್ದರೆ, ಅಥವಾ ಕರ್ತನಿಗೆ ನಿಮ್ಮ ಜೀವಿತವನ್ನು ಸಂಪೂರ್ಣವಾಗಿ ಒಪ್ಪಿಸಿಕೊಡುವದಕ್ಕೆ ಸಾಕಾಗುವಷ್ಟು ಇಲ್ಲವಾದರೆ, ಬೈಬಲ್‌.ನ್ನು ಓದಿರಿ, ಅಧ್ಯಯನ ಮಾಡಿರಿ ಮತ್ತು ವಿಧೇಯರಾಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ—ಹೀಗೆ ಕರ್ತನು ಬಂದಾಗ ನಿಮ್ಮಲ್ಲಿ ಆತನು ಪ್ರೀತಿಯಿಂದ ಕೆಲಸ ಮಾಡುವ ನಂಬಿಕೆಯನ್ನು ಕಾಣುವಂತಾಗುವದು!

## ಕೃತಜ್ಞತೆಯ ಹೃದಯಗಳು (1:21)

ನಾವು ಈಗಲೂ ದೇವರನ್ನು ಮಹಿಮೆಪಡಿಸಲು ವಿಫಲವಾಗುವ ಮತ್ತು ಆತನ ಆಶ್ಚರ್ಯವಾದ ಆಶೀರ್ವಾದಗಳಿಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸದಂಥ ಲೋಕದಲ್ಲಿಯೇ ಇದ್ದೇವೆ. ರೋಮಾ 1:21 ನೇ ವಚನವು ಸಾಮಾನ್ಯ ಜಗತ್ತನ್ನು ಈ ನಿಟ್ಟಿನಲ್ಲಿ ದೋಷಿಯೆಂದು ಹೇಳುವದರ ಜೊತೆಗೆ ನಮ್ಮನ್ನು ಸಹ ದೋಷಿಯೆಂದು ಹೇಳುತ್ತದೆ. ನಾವು ಅನೇಕ ವೇಳೆಗಳಲ್ಲಿ ನಮ್ಮ ಆಶೀರ್ವಾದಗಳನ್ನು ಎಣಿಸಲು ಹಾಗೂ ದೇವರಿಗೆ ನಮ್ಮ ಕೃತಜ್ಞಭಾವವನ್ನು ವ್ಯಕ್ತಪಡಿಸಲು ವಿಫಲರಾಗುತ್ತೇವೆ, ಆತನು "ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವಾತನು" (1 ತಿಮೊಥೆ 6:17; ನೋಡಿರಿ ಯಾಕೋಬ 1:17). ಕೃತಜ್ಞತೆಯಿಲ್ಲದಿರುವಿಕೆಯು ಜೀವವುಳ್ಳ ದೇವರಿಂದ ಬೇರ್ಪಡುವಂತೆ ನಡಿಸುವ ಹೆಜ್ಜೆಗಳಲ್ಲೊಂದೆಂಬುದನ್ನು ನಾವು ಮರೆಯದಿರೋಣ.

## ಈ ಯುಗದ ಜ್ಞಾನ (1:22)

ರೋಮಾ 1:22 ಹೇಳುತ್ತದೆ, "ಅವರು ತಮ್ಮನ್ನು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು." ಪೌಲನ ಮಾತುಗಳು ಈ ಜಗತ್ತು ಹೇಗೆಂದು ಬಣ್ಣಿಸಿದ್ದು ಮಾತ್ರವಲ್ಲದೆ, ಆ

ಮಾತುಗಳು ನಮ್ಮನ್ನು ಸಹ ಬಣ್ಣಿಸುತ್ತವೆ. ನಮ್ಮ ಸುತ್ತಮುತ್ತಲೆಲ್ಲಾ ತಮ್ಮ ಸಿದ್ಧಾಂತ ಹಾಗೂ ವಿಚಾರಗಳಲ್ಲಿ ದೇವರನ್ನು ಸೇರ್ಪಡೆಗೊಳಿಸದಂಥ ತತ್ವಜ್ಞಾನಿಗಳು, ವಿಜ್ಞಾನಿಗಳು ಹಾಗೂ ಶಿಕ್ಷಣತಜ್ಞರು ತುಂಬಿರುತ್ತಾರೆ. ನಾವು ದೇವರಿಲ್ಲದ ತರ್ಕ, ನಾಸ್ತಿಕತ್ವದ ಆರ್ಭಟ, ಅತೀಂದ್ರಿಯ ಕಸವನ್ನು ಮತ್ತು ಮಾಧ್ಯಮದವರ ಕುಚೋದ್ಯಗಳ "ಮೂರ್ಖತನ" ದ ಬಾಧೆಯನ್ನು ಅನುಭವಿಸಬೇಕಾಗಿರುತ್ತದೆ. ಲೋಕವು Glen Pace ಹೇಳಿದ ಹಾಗೆ "ಜೋರು–ಧ್ವನಿಯ ಹುಚ್ಚುತನ" ದಲ್ಲಿ ಮುಳುಗಿಹೋಗುತ್ತಿದೆ.[201]

## ವಿಗ್ರಹಾರಾಧನೆ (1:23, 25)

ಪೌಲನು ವಿಗ್ರಹಾರಾಧನೆಯನ್ನು ಖಂಡಿಸುವದನ್ನು ನಾವು ಓದುವಾಗ, ನಾವು ಕೆಲವು ಅಪಾಯಗಳಿಂದ ದೂರವಿರಬೇಕು. ಒಂದು ಅಪಾಯವೇನೆಂದರೆ, ನಾವು ನಮ್ಮ ಆಲೋಚನೆಗಳನ್ನು ಮೊದಲ ಶತಮಾನಕ್ಕೆ ಸಿಮೀತಗೊಳಿಸುತ್ತೇವೆ. ಪ್ರತಿಮೆಗಳನ್ನು ಪೂಜಿಸುವದು ಈಗಲೂ ಸರ್ವಸಾಮಾನ್ಯವಾಗಿದೆ. ಕೆಲವು ದೇಶಗಳಲ್ಲಿ, ಇನ್ನಿತರ ದೇಶಗಳಿಗಿಂತ ಹೆಚ್ಚು ಗೋಚರವಾಗುತ್ತದೆ, ಆದರೆ ಅದು ಎಲ್ಲೆಲ್ಲಿಯೂ ಇರುತ್ತದೆ. ಕೆಲವರಿಗೆ ಅಮೂರ್ತವಾಗಿ (ಕಣ್ಣು ಮುಂದೆ ಏನೂ ಇಲ್ಲದೆ) ಯೋಚಿಸುವದಕ್ಕೆ ಕಷ್ಟವಾಗಿರುತ್ತದೆ; ಅವರು ನೋಡಬಹುದಾದ ದೇವರು ಅಥವಾ ದೇವತೆಗಳನ್ನು ಬಯಸುತ್ತಾರೆ. ಅದೃಶ್ಯನಾದ ದೇವರನ್ನು ಆರಾಧಿಸಬೇಕೆಂದರೆ ಅದಕ್ಕೆ ಒಂದು ಬಲಿಷ್ಠವಾದ, ದೃಢವಾದ ನಂಬಿಕೆಯ ಅಗತ್ಯವಿರುತ್ತದೆ. ಹೊಸ ಒಡಂಬಡಿಕೆಯು ಈಗಲೂ ನಮಗೆ, "ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ" ಎಂದು ಕಲಿಸುತ್ತದೆ (1 ಯೋಹಾನ 5:21).

ಇನ್ನೊಂದು ಅಪಾಯವೇನೆಂದರೆ, ಸುಳ್ಳು ದೇವರುಗಳಿಗೋಸ್ಕರ ಸತ್ಯದೇವರನ್ನು ತಿರಸ್ಕರಿಸುವ ಕುರಿತು ಯೋಚಿಸುವಾಗ, ನಾವು ನಮ್ಮ ಆಲೋಚನೆಗಳನ್ನು ಪ್ರತಿಮೆಗಳ ಪೂಜೆಗೆ ಮಾತ್ರ ಸಿಮೀತಗೊಳಿಸಿಕೊಳ್ಳುತ್ತೇವೆ.

> ಒಬ್ಬರು ಹೀಗೆ ಹೇಳಿದ್ದಾರೆ, "ನಿನ್ನ ಕೈ ಯಾವದನ್ನು ಹಿಡಿದುಕೊಳ್ಳುತ್ತದೋ ಮತ್ತು ಅವಲಂಭಿಸುತ್ತದೋ ಅದೇ ನಿನ್ನ ದೇವರು." ನೀವು ನಿಮ್ಮ ಜೀವಿತದಲ್ಲಿ ಯಾವದಕ್ಕೆ ಪ್ರಥಮ ಆದ್ಯತೆಯನ್ನು ಕೊಡುವಿರೋ ಅದು ನಿಮ್ಮ ದೇವರು. ನಾವು ಕೆತ್ತಿದ ಕಲ್ಲಿನ ಬೃಹತ್ ಪಕ್ಷಿಯ ಪ್ರತಿಮೆಯ ಅಥವಾ ಕಲ್ಲಿನಿಂದ ಮಾಡಲ್ಪಟ್ಟ ಕಣ್ಣುಗಳುಳ್ಳ ಕಟ್ಟಿಗೆ ಮೂರ್ತಿಯ ಮುಂದೆ ತಲೆಬಾಗದಿರಬಹುದು, ಆದರೆ ಯೆಹೋವನಿಗೆ ಪೈಪೋಟಿ ನೀಡುತ್ತಿರುವ ಇತರೆ ದೇವರುಗಳನ್ನು ಹೊಂದಿರುತ್ತೇವೆ. ನಾವು ಒಂದು ಬಸವನ ವಿಗ್ರಹದ ಮುಂದೆ ಶಿರಭಾಗದಿರಬಹುದು, ಆದರೆ ಆಗಲೂ ನಾವು ಚಿನ್ನವನ್ನು ಪೂಜಿಸುವದಕ್ಕೆ ಸಾಧ್ಯ. ನಾವು ಕೆತ್ತಿದ ಬಾಳ್.ನ ಮುಂದೆ ಮೊಣಕಾಲೂರದೆ ಇರಬಹುದು ಆದರೆ ನಮ್ಮ ಹಣದಲ್ಲಿ ಸಹ ಕೆತ್ತಿದ ಪ್ರತಿಮೆಗಳಿರುತ್ತವೆ. ನಾವು ಎಂದಿಗೂ ದೇವರಿಗಿಂತ ಮುಖ್ಯಸ್ಥಾನದಲ್ಲಿ ಆಕಾಂಕ್ಷೆಗೆ, ವ್ಯರ್ಥತ್ವಕ್ಕೆ, ಅಥವಾ ಸ್ವಾರ್ಥಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಯಾರಾದರೂ ಹೇಳಲು ಸಾಧ್ಯವೋ? ಈ ಜೀವಿತದಲ್ಲಿನ ಅನೇಕ ಸಂಗತಿಗಳು ಒಳ್ಳೆಯವುಗಳು, ಆದರೆ ಅವುಗಳೇ ದೇವರಲ್ಲ.[202]

ಅನೇಕರು "ಸೃಷ್ಟಿಕರ್ತನಿಗೆ ಬದಲಾಗಿ ಸೃಷ್ಟಿಜೀವಿಯನ್ನು" ಆರಾಧಿಸುವಂಥ ಅತ್ಯಂತ ಸಾಮಾನ್ಯ ರೀತಿಯೆಂದರೆ ಸ್ವಾರ್ಥ ಸೇವೆ ಮತ್ತು ದೇವರ ಚಿತ್ತವನ್ನು ಕೇಳುವ ಬದಲಾಗಿ

ಮತ್ತು ಆತನನ್ನು ಮೆಚ್ಚಿಸುವದಕ್ಕೆ ಪ್ರಯಾಸ ಪಡುವ ಬದಲಾಗಿ ತಮ್ಮ ಸ್ವಂತ ಇಚ್ಛೆಗಳನ್ನೇ ನೆರವೇರಿಸಿಕೊಳ್ಳಲು ಪ್ರಯಾಸ ಪಡುವದು. ಅನೇಕರು ತಮ್ಮನ್ನು ಹೆಚ್ಚಿಸಿಕೊಂಡು ದೇವರನ್ನು ತಗ್ಗಿಸುತ್ತಾರೆ. ಅವರ ಮನೋಭಾವವು "ದೇವರು ಸಣ್ಣವನು, ನಾವು ದೊಡ್ಡವರು" ಎಂಬಂತಾಗುತ್ತದೆ.

## ದೇವರನ್ನು ತಿರಸ್ಕರಿಸುವದರ ದುರಂತ (1:24-32)

ದೇವರನ್ನು ತಿರಸ್ಕರಿಸಿದ್ದರ ಫಲವಾಗಿ (1:18-23), ಅನ್ಯಜನರ ಸ್ಥಿತಿ ದುರಂತಮಯವಾಗಿತ್ತು (1:24-32). ಒಬ್ಬನು ಯೆಹೂದ್ಯನಾಗಿರಲಿ ಅಥವಾ ಅನ್ಯಜನಾಂಗದವನಾಗಿರಲಿ ಸೃಷ್ಟಿಕರ್ತನನ್ನು ತಿರಸ್ಕರಿಸಿ ಕಠಿಣವಾದ ದುಷ್ಪರಿಣಾಮಗಳನ್ನು ಅನುಭವಿಸದೆ ಇರುವದಕ್ಕೆ ಸಾಧ್ಯವಿಲ್ಲ. ದೇವರನ್ನು ತಿರಸ್ಕರಿಸಿದ್ದರ ಫಲವಾಗಿ ಎಂಥ ದುರಂತದ ಸ್ಥಿತಿ ಬರುತ್ತದೆಂಬುದನ್ನು ಪೌಲನು ನೀಡುವ ಅನ್ಯ ಜನರ ಮಧ್ಯದಲ್ಲಿರುವ ಪಾಪಗಳ ಪಟ್ಟಿಯು ನಮಗೆ ನೆನಪಿಸತಕ್ಕದ್ದು:

ದುರಂತಕರ ವಾಸ್ತವಿಕತೆ: ಸ್ವೇಚ್ಛಾಮಯವಾದ ಜೀವಿತಗಳು (1:24, 26, 28).
ದುರಂತಕರ ಫಲಿತ: ಸ್ವಭಾವಕ್ಕೆ ವಿರುದ್ಧವಾದ ಭೋಗಗಳು (1:24-27).
ದುರಂತಕರ ದಾಖಲೆ: ಹೇಸಿಗೆತರುವ ಪಟ್ಟಿ (1:28-32).

## ಲೈಂಗಿಕ ಅನೈತಿಕತೆ (1:24)

ಪೌಲನ ದಿನದಲ್ಲಿ, ಒಂದು ಸಮಾಜವು ದೇವರಿಂದ ದೂರವಾಗಿದೆ ಎಂಬದಕ್ಕೆ ಒಂದು ಸಂಕೇತವೆಂದರೆ ಅಲ್ಲಿ ಕಂಡುಬರುತ್ತಿದ್ದ ಕಾಮಿಚ್ಛೆಗಳಿಗೆ ಪ್ರೋತ್ಸಾಹ ಮತ್ತು ಸ್ವಚ್ಛಂಧವಾದ ಕಾಮ ಸಂಬಂಧಗಳಿಗೆ ಅನುಮೋದನೆ. ಇಂದು ನಾವು ಜೀವಿಸುವ ಜಗತ್ತಿನ ಕುರಿತು ಇದು ಏನು ತಿಳಿಸುತ್ತದೆ?

ಪುಸ್ತಕಗಳು, ಸಿನಿಮಾಗಳು, ಟಿವಿ, ಮತ್ತು ಹಾಡುಗಳು ಸಹ ಕಾಮದ ಅಂಶಗಳ ಸುರಿಮಳೆಯನ್ನು ಸುರಿಯುತ್ತವೆ. ವಿವಾಹದ ಹೊರಗಿನ ಲೈಂಗಿಕತೆಯನ್ನು ಸಹಜ, ಸ್ವಾಭಾವಿಕ, ನಿರೀಕ್ಷಿತ ಮತ್ತು ಬಹಳ ಅಪೇಕ್ಷಣಿಯ ಎಂಬಂತೆ ಬಿಂಬಿಸಲಾಗುತ್ತಿದೆ. ವಿವಾಹಕ್ಕೆ ಮುಂಚೆ ಲೈಂಗಿಕವಾಗಿ ಪಾಲ್ಗೊಳ್ಳದ ಯುವಜನರನ್ನು ಕೆಲವು ಸಾರಿ ಅಸಹಜವಾದವರೆನೋ ಎಂಬಂತೆ ನೋಡಲಾಗುತ್ತದೆ. ಲೋಕದ ಮನಸ್ಸಿನವರಿಗೆ, "ವಿವಾಹವಾಗದೆ ಒಟ್ಟಿಗೆ ಜೀವಿಸುವದು (living together)" ಎಂಬದು ಪ್ರಣಯದ ಪ್ರಕ್ರಿಯೆಯಲ್ಲಿನ ಇನ್ನೊಂದು ಹೆಜ್ಜೆಯಾಗಿ ಮಾರ್ಪಟ್ಟಿದೆ, ಅದು ಮುಂದೆ ವಿವಾಹದ "ಆಳವಾದ ಸಂಬಂಧಕ್ಕೆ" ಹೋಗುತ್ತದೆಂಬುದಕ್ಕೆ ನಿಶ್ಚಯವಿರುವದಿಲ್ಲ. ಪೇತ್ರ ಹಾಗೂ ಯೂದನ ಮಾತುಗಳಲ್ಲಿ ಹೇಳುವದಾದರೆ, ಅಂಥ ಜನರು "ವಿವೇಕಶೂನ್ಯ ಮೃಗಗಳಂತೆ" ಬದುಕುವವರು (2 ಪೇತ್ರ 2:12; ಯೂದನು 10). ಅಜ್ಜಿಯು ಇಂಥ ಜೀವನ ಶೈಲಿ ಕುರಿತು ಇನ್ನಷ್ಟು ವರ್ಣಮಯವಾಗಿ ವಿವರಿಸುತ್ತಾಳೆ, ಆಕೆಯು ಹೇಳುವಳು, "ಅವರು ಓಣಿಯ ಬೆಕ್ಕಿನ ನೀತಿಗಳನ್ನು ಹೊಂದಿದ್ದಾರೆ."

ಅನೈತಿಕವಾದ ಜೀವಿತವನ್ನು ಜೀವಿಸುತ್ತಿರುವವರಿಗೆ ಮತ್ತೊಬ್ಬರು ಏಕೆ ನಮ್ಮನ್ನು ಟೀಕಿಸುತ್ತಿಲ್ಲವೆಂಬುದು ಅರ್ಥವಾಗದಿರಬಹುದು. ಅಂಥ ಜನರು ತಮ್ಮ ನಡವಳಿಕೆಯಿಂದ

ಮತ್ತೊಬ್ಬರಿಗೆ ದಕ್ಕೆಯುಂಟು ಮಾಡುತ್ತಿದ್ದೇವೆಂಬುದಾಗಿ ಅನೇಕ ವೇಳೆ ಗ್ರಹಿಸುವದಿಲ್ಲ. ಹೇಗೂ, ಅವರ ಬಗ್ಗೆ ಕಾಳಜಿ ಹೊಂದಿರುವಂಥ ತಮ್ಮ ಕುಟುಂಬ ಮತ್ತು ಇತರರಿಗೆ ಹಾನಿಗೊಳಿಸುತ್ತಾರೆ. ಅಷ್ಟುಮಾತ್ರವಲ್ಲದೆ, ನಾವು ಜೀವಿಸುತ್ತಿರುವ ಈ ಜಗತ್ತಿಗೆ ಸಹ ಅವರು ಹಾನಿಯನ್ನುಂಟು ಮಾಡುತ್ತಿದ್ದಾರೆ. ದೈವೀಕ ಮಾನದಂಡಗಳು ಕಾಣೆಯಾಗುವಾಗ, ನಾಗರಿಕತೆಯ ಚೌಕಟ್ಟು ಛಿದ್ರಗೊಳ್ಳುತ್ತದೆ. ವಿವಾಹದ ಹೊರಗಿನ ಲೈಂಗಿಕತೆಯು ಸಮಾಜದ ಮೂಲೆಗಲ್ಲುಗಳಾದ ದಾಂಪತ್ಯವನ್ನು ಹಾಗೂ ಕುಟುಂಬವನ್ನು ಬಲಹೀನಗೊಳಿಸುತ್ತದೆ.

ಅಲ್ಲದೆ, ಅವರು ಅದನ್ನು ಗ್ರಹಿಸುತ್ತಾರೋ ಇಲ್ಲವೋ, ಅವರು ತಮಗೆ ತಾವೇ ಹಾನಿಮಾಡಿಕೊಳ್ಳುತ್ತಿದ್ದಾರೆ. ದೇವರು ಅವರನ್ನು "ತಮ್ಮ ಹೃದಯಗಳ ದುರಾಶೆಗಳಂತೆ . . . ಹೊಲಸಾದ ನಡತೆಗೆ ಒಪ್ಪಿಸಿದಾಗ," ಸಂಭವಿಸಿದ ಒಂದು ಫಲವೆಂದರೆ, "ಅವರ ದೇಹಗಳು ಮಾನಹೀನ" ಗೊಂಡವು (1:24).[203] ರೋಮಾಪುರ ಪತ್ರಿಕೆಯ ನಂತರ ಭಾಗದಲ್ಲಿ, ಪೌಲನು ತನ್ನ ವಾಚಕರಿಗೆ "[ಅವರ] ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ" ಎಂದು ಪ್ರೋತ್ಸಾಹಿಸಿದನು (12:1). ಇನ್ನೊಂದೆಡೆ ಪೌಲನು, ನಮ್ಮ ದೇಹಗಳು "ಪವಿತ್ರಾತ್ಮನಿಗೆ ಗರ್ಭಗುಡಿಯಾಗಿವೆ" ಮತ್ತು "ನಮ್ಮ ದೇಹಗಳಿಂದ ದೇವರನ್ನು ಮಹಿಮೆಪಡಿಸಬೇಕು" ಎಂಬದನ್ನು ತೋರಿಸಿ ಕೊಡುತ್ತಾನೆ (1 ಕೊರಿಂಥ 6:19, 20). ಒಬ್ಬನು ವಿವಾಹಕ್ಕೆ ಮುನ್ನ ಅಥವಾ ವಿವಾಹದ ಹೊರಗೆ ಲೈಂಗಿಕತೆಯಲ್ಲಿ ತೊಡಗಿಸಿಕೊಳ್ಳುವಾಗ, ಆತನು ತನ್ನ ದೇಹವನ್ನು ಪ್ರೀತಿಗೆ ಸಮರ್ಪಿತಗೊಂಡು ಪವಿತ್ರಾತ್ಮನಿಗೆ ಗರ್ಭಗುಡಿಯಾಗಿ ಅರ್ಪಿಸುವ ಬದಲಿಗೆ, ಕಾಮೇಚ್ಛೆಗೆ ಸಮರ್ಪಿಸಿಕೊಂಡು ಅದನ್ನು ಪಿಶಾಚನಿಗೆ ಗರ್ಭಗುಡಿಯಾಗಿ ಮಾಡುತ್ತಾನೆ. ಪೌಲನು ಬರೆದದ್ದೇನೆಂದರೆ "ದೇಹವು ಹಾದರಕ್ಕೋಸ್ಕರ ಇರುವಂಥದಲ್ಲ, ಕರ್ತನಿಗೋಸ್ಕರವಾಗಿದೆ" ; "ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ. ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು ದೇಹಕ್ಕೆ ಹೊರಗಾಗಿವೆ, ಆದರೆ ಜಾರತ್ವ ಮಾಡುವವನು ತನ್ನ ದೇಹಕ್ಕೆ ಹಾನಿಕರವಾದ ಪಾಪವನ್ನು ಮಾಡುತ್ತಾನೆ" (1 ಕೊರಿಂಥ 6:13, 18).

## ಸಲಿಂಗಕಾಮದ ವಿಷಯವೇನು? (1:26, 27)

*ನಮ್ಮ ಆಧುನಿಕ ಸಂಸ್ಕೃತಿ.* ಪೌಲನು ಮಾತುಗಳು ಅಂದು ಆತನು ಬರೆದ ಕಾಲದಷ್ಟೇ ಈಗಲೂ ಪ್ರಸ್ತುತವಾಗಿವೆ. ಕೇಲವೇ ವರ್ಷಗಳ ಹಿಂದಷ್ಟೇ, ಅನೇಕ ದೇಶಗಳಲ್ಲಿ ಸಲಿಂಗಕಾಮವು (ಆಗ ಇದನ್ನು "sodomy," ಎಂದು ಕರೆಯಲಾಗುತ್ತಿತ್ತು), ಪ್ರಕೃತಿಯ, ಮಾನವ ಜನಾಂಗದ ಮತ್ತು ನಾಗರಿಕತೆಯ ವಿರುದ್ಧದ ಅಪರಾಧ ಎಂದು ಪರಿಗಣಿಸಲ್ಪಡುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ, ನಮಗೆ ಎಲ್ಲಿ ನೋಡಿದರೂ ಸಲಿಂಗಕಾಮದ ಪರವಾಗಿ ಬೆಂಬಲದ ಪ್ರಚಾರ ಕಾಣಿಸುತ್ತಿದೆ. ಸಲಿಂಗಕಾಮಿಗಳು ಮೊದಲು ಸಹಿಷ್ಣುತೆಯನ್ನು ಕೇಳಿದರು, ನಂತರ ಕರುಣೆಯನ್ನು ಕೇಳಿದರು, ಮತ್ತು ಈಗ ಅವರಿಗೆ ಸಂಪೂರ್ಣ ಅಂಗೀಕಾರ ಹಾಗೂ ಅವರ "ಪರ್ಯಾಯ ಜೀವನಶೈಲಿ" ("alternate lifestyle") ಎಂಬದಕ್ಕೆ ಅನುಮೋದನೆ ಸಿಕ್ಕುವವರೆಗೂ ವಿಶ್ರಮಿಸದಿರು ವದಕ್ಕೆ

ನಿರ್ಧಸಿರುತ್ತಾರೆ.[204] ಅವರು ಈಗಲೂ ಒಟ್ಟು ಜನಸಂಖ್ಯೆಯಲ್ಲಿ ಸ್ವಲ್ಪ ಜನರನ್ನು ಮಾತ್ರವೇ ಪ್ರತಿನಿಧಿಸುತ್ತಾರೆ, ಆದರೆ ಒಬ್ಬನು ಇದನ್ನು ಸಿನಿಮಾ ಹಾಗೂ ಟಿವಿಯಿಂದ ತಿಳಿಯುವದಕ್ಕೆ ಸಾಧ್ಯವೇ ಇಲ್ಲ—ಅದರಲ್ಲಿ ಬಹಳಷ್ಟು ಪ್ರಮಾಣದಲ್ಲಿ "ಸಲಿಂಗ" ಪಾತ್ರ ಹಾಗೂ "ಸಲಿಂಗ" ಕಥೆಗಳಿರುತ್ತವೆ.

ರಾಜಕೀಯ ವ್ಯಕ್ತಿಗಳು, ಸಲಿಂಗಕಾಮಿಗಳಿಗೆ ಬೆಂಬಲ ನೀಡುವದಕ್ಕೆ ತುದಿಕಾಲಲ್ಲಿ ನಿಂತಿರುತ್ತಾರೆ, ಅವರ ಚಳುವಳಿಗೆ ಬೆಂಬಲ ನೀಡುತ್ತಿದ್ದಾರೆ. Liberal denominations (ಪ್ರಗತಿಪರ ಸಂಸ್ಥೆಗಳು( ತಮ್ಮನ್ನು "ಸಲಿಂಗಕಾಮಿ" ಎಂದು ಹೇಳಿಕೊಂಡಿ ರುವ ಧಾರ್ಮಿಕ ನಾಯಕರನ್ನು "ಪ್ರತಿಷ್ಠೆಗೊಳಿಸಿರುತ್ತವೆ." ದೇವರ ವಾಕ್ಯದಲ್ಲಿನ ಬೋಧನೆಯನ್ನು ಈ ರೀತಿ ನೇರವಾಗಿ ದಿಕ್ಕರಿಸುವದನ್ನು ಯಾರಾದರೂ ಖಂಡಿಸಿದರೆ, ಅವರನ್ನು ಪ್ರೀತಿಯಿಲ್ಲದವರು, ಪೂರ್ವಗ್ರಹಪೀಡಿತ ಮತ್ತು ಮುಚ್ಚಿದ ಮನಸ್ಸಿನವರು ಎಂಬದಾಗಿ ಬಿಂಬಿಸುತ್ತಾರೆ. ಅಲ್ಲದೆ, ಸಲಿಂಗಕಾಮಿಗಳ "ಹಕ್ಕುಗಳ" ಬಗ್ಗೆ ಪ್ರಶ್ನೆ ಮಾಡುವವರಿಗೆ ಒಂದು ಹೆಸರನ್ನು ಕಂಡುಹಿಡಿದಿರುತ್ತಾರೆ: "homophobic" (ಸಲಿಂಗಿಗಳಿಗೆ ದಿಗಿಲುಪಡುವವನು). ಈ ಪದವನ್ನು ಹಿಂದೊಂದು ಕಾಲದಲ್ಲಿ ಸಲಿಂಗಿಗಳಿಗೆ ಹೆದರುತ್ತಿದ್ದವರಿಗೆ ಅನ್ವಯಿಸಲಾಗುತ್ತಿತ್ತು; ಈಗ ಸಲಿಂಗಕಾಮದ ಜೀವನಶೈಲಿಯನ್ನು ಖಂಡಿಸುವವರಿಗೆ ಆ ಹೆಸರಿನಿಂದ ಕರೆಯಲಾಗುತ್ತಿದೆ.[205]

ಸಲಿಂಗಕಾಮದ ವಿರುದ್ಧ ಮಾತಾಡುವದು ಜನಪ್ರಿಯ ಅಥವಾ "ರಾಜಕೀಯವಾಗಿ ಅನುಕೂಲಕರ" ಆಗಿರದೆ ಇರಬಹುದು, ಆದರೆ ವಾಕ್ಯವು ಎಂದೆಂದೂ ವಿರೋಧಿಸಿ ದಂತೆಯೇ ಈಗಲೂ ಸಹ ವಿರೋಧಿಸುತ್ತದೆ. ಸಲಿಂಗಕಾಮವು ತಪ್ಪು. ಸಲಿಂಗಕಾಮ ಕ್ರಿಯೆಗಳು ಪಾಪ.

*ಸಲಿಂಗಕಾಮದ ಕುರಿತು ಒಂದು "ಪ್ರಕರಣ" ?* ಸಲಿಂಗಕಾಮದ ಜೀವನ ಶೈಲಿಯನ್ನು ನಡಿಸುವ ಬಹಳಷ್ಟು ಜನರು ಸಲಿಂಗಕಾಮದ ಬಗ್ಗೆ ಬೈಬಲ್ ಹೇಳುವದನ್ನು ಅಸಡ್ಡೆಮಾಡುತ್ತಾರೆ; "ಅಂಥ ಉಪದೇಶವು ಈಗಿನ ಕಾಲಕ್ಕೆ ಅಸಮಂಜಸವಾದದ್ದು" ಎಂದು ಪರಿಗಣಿಸುತ್ತಾರೆ. ಹೇಗೂ, ಅವರಲ್ಲಿ ಕೆಲವರು ಅವರ ಬಾಲ್ಯದಲ್ಲಿ ದೇವರನ್ನು ಹಾಗೂ ಬೈಬಲ್.ನ್ನು ಗೌರವಿಸಬೇಕೆಂದು ಕಲಿಸಲ್ಪಟ್ಟವರಾಗಿರುತ್ತಾರೆ. ಆದುದರಿಂದ, ಅವರಿಗೆ ಸಲಿಂಗಕಾಮದ ಕುರಿತ ವಾಕ್ಯಗಳೊಂದಿಗೆ ಹೋರಾಟವಿರುತ್ತದೆ. ರೋಮಾ 1:26, 27 ವಚನಗಳನ್ನು ಅದು ಹಾಗಲ್ಲಾ ಎಂಬದಾಗಿ "ವಿವರಿಸಿ ಅಲ್ಲಗಳೆಯುವ" ಪ್ರಯತ್ನಗಳು ನಡೆದಿರುತ್ತವೆ. ಇತರ ಕೆಲವು ವಾದಗಳು ಹಾಗೂ ಬೈಬಲ್.ನ ಪ್ರತಿಕ್ರಿಯೆಗಳ ಒಂದು ಮಾದರಿ ಇಲ್ಲಿದೆ.

ವಾದ 1: "ಸಲಿಂಗಕಾಮವನ್ನು ಅನೇಕ ಸಾರಿ 'sodomy' ಎಂದು ಕರೆಯಲಾಗಿದೆ, ಆದರೆ ಸೊದೊಮಿನ ಪುರುಷರ ಪಾಪವು ಸಲಿಂಗಕಾಮ ಆಗಿರಲಿಲ್ಲ. ಬದಲಾಗಿ, ಅವರು ಅಥಿತಿಸತ್ಕಾರ ಮಾಡದಿರುವ—ಅಥವಾ, ಬಹುಶಃ ಗ್ಯಾಂಗ್ ರೇಪ್ ಮಾಡಿದ ಅಪರಾಧಕ್ಕೊಳಗಾಗಿದ್ದರು." ಉತ್ತರ: "ಯೆಹೆಜ್ಕೇಲನು ಸಾದೃಶ್ಯರೂಪದಲ್ಲಿ ಮಾತಾಡುವ ವೇಳೆ ಆತನು ಸೊದೊಮಿನ ಹಲವಾರು ಪಾಪಗಳ ಪಟ್ಟಿಯನ್ನು ಮಾಡುತ್ತಾನೆ (ಯೆಹೆಜ್ಕೇಲ 16:49, 50), ಆದರೆ ಸೊದೊಮ್ ಕುಖ್ಯಾತಗೊಂಡಿದ್ದ ಪಾಪ ಯಾವದೆಂದರೆ ಪುರುಷರು ಇತರ ಪುರುಷರ ಸಂಗಡ ಲೈಂಗಿಕ ಸಂಬಂಧಗಳನ್ನು ಇಟ್ಟುಕೊಂಡದ್ದಾಗಿದೆ

(ನೋಡಿರಿ ಆದಿಕಾಂಡ 19:5)."

ವಾದ 2: "ಬೈಬಲ್.ನಲ್ಲಿರುವ ಪ್ರಾಮುಖ್ಯವಾದ ಪಾತ್ರಧಾರಿಗಳು ಸಲಿಂಗಕಾಮಿಗಳಾಗಿದ್ದರು. ಉದಾಹರಣೆಗೆ, 1 ಸಮುವೇಲ 18:1ರ ಪ್ರಕಾರ ದಾವೀದನು ಮತ್ತು ಯೋನಾತಾನರು ಪರಸ್ಪರ ಪ್ರೀತಿಸುತ್ತಿದ್ದರು." ಉತ್ತರ: "ಬೈಬಲಿನಲ್ಲಿನ ವ್ಯಕ್ತಿಗಳು ಪಾಪ ಮಾಡಿದರೆಂಬ ಕಾರಣಕ್ಕೆ ಅದು ಸರಿ ಎಂದಾಗುವದಿಲ್ಲ, ಆದರೆ ಇದೊಂದು ಸಲಿಂಗಕಾಮದ ಪ್ರಕರಣ ಆಗಿರಲಿಲ್ಲ. ದಾವೀದನು ವಿರುದ್ಧಲಿಂಗ ಕಾಮಿಯಾಗಿದ್ದನು, ಆತನು ಸ್ತ್ರೀಯರೆಡೆಗೆ ಅಧಿಕ ಮೋಹಿತನಾಗಿದ್ದನು (2 ಸಮುವೇಲ 11:2). ಯೋನಾತಾನನ ಕಡೆಗಿದ್ದ ಆತನ ಪ್ರೀತಿಯು ಒಬ್ಬ ಮಿತ್ರನೆಡೆಗಿನ ಪ್ರೀತಿಯಾಗಿತ್ತು. ಇದನ್ನು ಓದುವ ಪ್ರತಿಯೊಬ್ಬರನ್ನೂ ನಾನು ಪ್ರೀತಿಸುತ್ತೇನೆ (ಯೋಹಾನ 13:34), ಆದರೆ ಹಾಗೆಂದ ಮಾತ್ರಕ್ಕೆ ನಾನೊಬ್ಬ ಸಲಿಂಗಕಾಮಿ ಆಗುವದಿಲ್ಲ."

ವಾದ 3: "ಸಲಿಂಗಕಾಮವು ಕೆಟ್ಟದ್ದಾಗಿದ್ದಲ್ಲಿ ಯೇಸು ಅದನ್ನು ಖಂಡಿಸಿರುತ್ತಿದ್ದನು, ಆದರೆ ಆತನು ಹಾಗೆ ಮಾಡಲಿಲ್ಲ." ಉತ್ತರ: "ಯೇಸು ಸಾರ್ವತ್ರಿಕವಾಗಿ ಅನುಮೋದನೆ ಮಾಡದಿರುವ ಲೈಂಗಿಕ ಪಾಪಗಳಲ್ಲಿ ಸಲಿಂಗಕಾಮದ ಪಾಪವು ಸೇರಿರುತ್ತದೆ (ಮತ್ತಾಯ 5:27, 32; ಮಾರ್ಕ 7:20-23). ಅಲ್ಲದೆ, ಯೇಸು ಒತ್ತಿಹೇಳಿದ್ದೇನೆಂದರೆ ಒಬ್ಬ *ಪುರುಷ* ಮತ್ತು ಒಬ್ಬ *ಸ್ತ್ರೀಯು* ಒಂದೇ ಶರೀರವಾಗುವದೇ ದೇವರ ಸಂಕಲ್ಪವಾಗಿದೆ (ಮತ್ತಾಯ 19:4). ಅಷ್ಟುಮಾತ್ರವಲ್ಲ, ಯೇಸುವಿನ ಅಪೊಸ್ತಲರ ಉಪದೇಶಗಳು ವಾಸ್ತವದಲ್ಲಿ ಸ್ವತಃ ಯೇಸುವಿನ ಉಪದೇಶಗಳೇ ಆಗಿವೆ (ಲೂಕ 10:16; ನೋಡಿರಿ ರೋಮಾ 1:26, 27)."

ವಾದ 4: "ರೋಮಾ 1:26, 27ರಲ್ಲಿ ಪೌಲನ ಉದ್ದೇಶವು ಸಲಿಂಗಕಾಮವನ್ನು ಖಂಡಿಸುವದಾಗಿರಲಿಲ್ಲ, ಆದರೆ ಮಾನವರಿಗೆ ದೇವರ ನೀತಿಯ ಅಗತ್ಯತೆಯಿರುತ್ತದೆಂಬುದನ್ನು ತೋರಿಸಿಕೊಡುವದಾಗಿತ್ತು." ಉತ್ತರ: "ದೇವರ ನೀತಿಯ ಅಗತ್ಯತೆಯನ್ನು ಸ್ಥಾಪಿಸಿ ತೋರಿಸುವದಕ್ಕೆ ಪೌಲನು ಮಾನವರು ಎಷ್ಟೊಂದು ಪಾಪಮಯವಾಗಿದ್ದಾರೆಂದು ತೋರಿಸಿಕೊಟ್ಟನು. ಈ ಪಾಪಮಯತೆಯ ಒಂದು ಪ್ರಮುಖ ಉದಾಹರಣೆಯೇ ಸಲಿಂಗಕಾಮವಾಗಿತ್ತು."

ವಾದ 5: "ರೋಮಾ 1:26, 27 ರಲ್ಲಿ, ಪೌಲನು ಹೇಳಿದ ಮಾತಿನ ಅರ್ಥವು ಮತ್ತೊಬ್ಬರ ಮೇಲೆ ಒತ್ತಾಯದಿಂದ ಸಂಭೋಗಕ್ಕೆ ಹೋಗುವದರ ಕುರಿತಾಗಿದೆ (ಉದಾ: ಮನಸ್ಸಿಲ್ಲದ ಒಂದು ಮಗುವಿನೊಂದಿಗೆ). ಆತನು 'ಸಮ್ಮತಿಯಿಂದ ಸಂಭೋಗಕ್ಕೆ ಇಳಿಯುವ ಇಬ್ಬರು ಪ್ರಾಯಸ್ಥರ' ಬಗ್ಗೆ ಖಂಡನೆ ಮಾಡುತ್ತಿಲ್ಲ." ಉತ್ತರ: "'ಗಂಡಸರು *ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಿದ್ದರು* ಎಂದು ಪೌಲನು ಹೇಳುತ್ತಾನೆ (1:27). ಇದು *ಸಮ್ಮತಿಯಿಂದ* ನಡೆದ ಸಲಿಂಗಕಾಮವಾಗಿತ್ತು. ವಚನ 27 ಈ ಮಾತುಗಳಿಂದ ಆರಂಭವಾಗುತ್ತದೆ, 'ಅದರಂತೆ ಗಂಡಸರು' ಎಂದು, ಇದು ಸ್ತ್ರೀಯರ ಮತ್ತು ಗಂಡಸರ ಸಲಿಂಗಕಾಮವನ್ನು ಒಂದಾಗಿ ಜೋಡಿಸುತ್ತದೆ. ಪೌಲನು ಪರಸ್ಪರ ಸಮ್ಮತಿಯ ಸಲಿಂಗಕಾಮವನ್ನು ಖಂಡಿಸಿದನು, ಅದು ಹೆಂಗಸರ ನಡುವೆ ಇರಲಿ ಅಥವಾ ಗಂಡಸರ ನಡುವೆಯೇ ಇರಲಿ."

ವಾದ 6: "ಅನೇಕ ಪ್ರಭಾವಿ ವ್ಯಕ್ತಿಗಳು ಸಲಿಂಗಕಾಮಿಗಳಾಗಿದ್ದಾರೆ, ಅವರಲ್ಲಿ ರೋಮನ್ ಚಕ್ರವರ್ತಿಗಳು ಮತ್ತು ಮಹಾ ತತ್ವಜ್ಞಾನಿಗಳು ಸಹ ಸೇರಿದ್ದಾರೆ." ಉತ್ತರ:

“ಹೌದು, ಮತ್ತು ಅದನ್ನು ಸಹ ಪೌಲನು ಖಂಡಿಸಿದನು. ಅವರವರ ಸಮಾಜಗಳಲ್ಲಿನ ನಾಗರಿಕತೆಯ ನೈತಿಕ ಚೌಕಟ್ಟು ನಾಶವಾಗಿ ಹೋಗುವದರಲ್ಲಿ ಅವರ ಆ ವಕ್ರ ನಡವಳಿಕೆಯೇ ಒಂದು ಕಾರಣವಾಗಿತ್ತು.”

*ಹೃತ್ಪೂರ್ವಕವಾದ ಕಳಕಳಿ.* ಬೈಬಲ್. ಸಲಿಂಗಕಾಮವನ್ನು ಖಂಡಿಸುತ್ತದೆಂದ ಮಾತ್ರಕ್ಕೆ ಸಲಿಂಗಕಾಮಿಗಳು ಸಂಕಟ ಅನುಭವಿಸುವಾಗ ನಾವು ಸಂಭ್ರಮಿಸಬೇಕೋ? ಸೊದೊಮ್ ಪಟ್ಟಣದಲ್ಲಿರುವ ಸಲಿಂಗಕಾಮಿಗಳು ಶೀಘ್ರದಲ್ಲಿ ನಾಶಗೊಳಿಸಲ್ಪಡಲಿದ್ದಾರೆ ಎಂದು ಅಬ್ರಹಾಮನಿಗೆ ಹೇಳಲ್ಪಟ್ಟಾಗ, ಆತನು ಸಂಭ್ರಮಿಸಲಿಲ್ಲ; ಬದಲಿಗೆ, ಆತನು ಅವರಿಗಾಗಿ ಪ್ರಾರ್ಥಿಸಿದನು (ಆದಿಕಾಂಡ 18). ಅದೇ ರೀತಿ, ಎಲ್ಲಾ ಪಾಪಿಗಳ ವಿಷಯದಲ್ಲಿರುವ ಪ್ರಕಾರವೇ ಸಲಿಂಗಕಾಮದ ಪಾಪ ಮಾಡುವವರ ಕಡೆಗೆ ಸಹ ನಮಗೆ ಅದೇ ಕಳಕಳಿ, ಪ್ರೀತಿಯಿರಬೇಕು. ಪೌಲನು ತಿಮೊಥೆಗೆ ನೀಡಿದ ಉಪದೇಶಗಳು ವಿಶೇಷವಾಗಿ ಸೂಕ್ತವೇನಿಸುತ್ತವೆ:

> ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ ಬೋಧಿಸುವದರಲ್ಲಿ ಪ್ರವೀಣನೂ ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು. ಒಂದು ವೇಳೆ ದೇವರು ಆ ಎದುರಿಸುವವರ ಮನಸ್ಸನ್ನು ತನ್ನ ಕಡೆಗೆ ತಿರುಗಿಸಿ ಸತ್ಯದ ಜ್ಞಾನವನ್ನು ಅವರಿಗೆ ಕೊಟ್ಟಾನು. ಸೈತಾನನ ಉರ್ಲಿಗೆ ಬಿದ್ದವರಾದ ಇವರು ಒಂದು ವೇಳೆ ತಪ್ಪಿಸಿಕೊಂಡು ದೇವರ ಚಿತ್ತವನ್ನು ಅನುಸರಿಸುವದಕ್ಕೆ ಸ್ವಸ್ಥಚಿತ್ತರಾದಾರು (2 ತಿಮೊಥೆ 2:24-26).

ಹಾಗಾದರೆ, ಅವರು ಪಶ್ಚಾತ್ತಾಪ ಪಡುವದಾದಲ್ಲಿ, ಅವರನ್ನು ಸಂತೋಷದಿಂದ ಪುನಃ ಸೇರಿಸಿಕೊಳ್ಳಲು ಸಿದ್ಧರಿರಬೇಕು.

ಬಹುಶಃ ಕೆಲವು ಸಲಿಂಗಕಾಮಿಗಳಿಗೆ ಬೈಬಲಿನ ಉಪದೇಶಗಳು ಚೆನ್ನಾಗಿ ಗೊತ್ತಿವೆ ಆದರೆ ಆ ವಿಷಯದಲ್ಲಿ ತಮಗೆ ಬೇರೆ ಆಯ್ಕೆಯೇ ಇಲ್ಲವೆಂಬ ನಂಬಿಕೆಯಲ್ಲಿದ್ದಾರೆಂದು ತೋರುತ್ತದೆ. ಯಾರೋ ಅವರಿಗೆ “ದೇವರು ನಿಮ್ಮನ್ನು ಸಲಿಂಗಕಾಮಿಗಳಾಗಿಯೇ ಉಂಟು ಮಾಡಿದನು; ನೀವು ಅದೇ ಆಗಿರುವಿರಿ ಮತ್ತು ಎಂದೆಂದೂ ಹಾಗೆಯೇ ಉಳಿಯುವಿರಿ” ಎಂದು ಹೇಳಿದ್ದಾರೆ. ಈ ರೀತಿಯ ಉಪದೇಶವು ವಾಕ್ಯದ ಸರಳ ಬೋಧನೆಗೆ ವಿರುದ್ಧವಾಗಿರುತ್ತದೆ. ಪೌಲನು ಕೊರಿಂಥದವರಿಗೆ ಹೇಳಿದ್ದೇನೆಂದರೆ “ಪುರುಷಗಾಮಿಗಳು” ಮತ್ತು ಅನೀತಿಯುಳ್ಳ ಮನುಷ್ಯರು “ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ” (1 ಕೊರಿಂಥ 6:9, 10). ಬಳಿಕ ಆತನು ಮುಂದುವರೆದು ಹೇಳುತ್ತಾನೆ, “ನಿಮ್ಮಲ್ಲಿ ಕೆಲವರು ಅಂಥವರಾಗಿದ್ದಿರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ” (1 ಕೊರಿಂಥ 6:11; ಒತ್ತಿ ಹೇಳಿದ್ದು ನನ್ನದು). ದೇವರ ಸಹಾಯದೊಂದಿಗೆ, ಕೆಲವು ಜನರು ತಮ್ಮ ಸಲಿಂಗಕಾಮದ ಜೀವನ ಶೈಲಿಯನ್ನು ಬಿಟ್ಟುಬಿಟ್ಟಿರುತ್ತಾರೆ.

ಬಹುಶಃ, ಒಬ್ಬನು ಸಲಿಂಗಕಾಮಕ್ಕೊಳಗಾಗುವ *ಮನೋವೃತ್ತಿ* ಹೊಂದಿರಬಹುದು. ಇನ್ನು ಕೆಲವರಿಗೆ ಸ್ವೇಚ್ಛಾಪರವಾದ ಕಾಮಾಭಿಲಾಷೆಗಳಿಗೆ ಅಥವಾ ಕುಡಿಕತನ

ಕ್ಕೊಳಗಾಗುವ ಮನೋವೃತ್ತಿ ಇರಬಹುದು. ಬಹಳಷ್ಟು ಜನರು *ಯಾವದೋ ಒಂದು* ಪಾಪಕ್ಕೊಳಗಾಗುವ ಮನೋವೃತ್ತಿ ಹೊಂದಿದ್ದಾರೆ; ಇಲ್ಲವಾದಲ್ಲಿ ಪಿಶಾಚನು ನಮ್ಮನ್ನು ಶೋಧಿಸುವದಕ್ಕಾಗುತ್ತಿರಲಿಲ್ಲ. ಅಂಥ ಒಳಪಡುವ ಮನೋವೃತ್ತಿಗಳು ಸಲಿಂಗಕಾಮ, ಸ್ವೇಚ್ಛಾಮಯ ಕಾಮಾಭಿಲಾಷೆ, ಕುಡಿಕತನ ಅಥವಾ ಬೇರೆ ಯಾವದೇ ಪಾಪವನ್ನು ಸರಿ ಎಂದು ಮಾಡುವದಿಲ್ಲ. ಅವುಗಳು ನಮಗಿರುವ ಬಲಹೀನತೆಗಳ ಬಗ್ಗೆ ಜಾಗ್ರತರಾಗಿ ಬಲಕ್ಕೋಸ್ಕರ ಕರ್ತನ ಮೇಲೆ ಅವಲಂಭಿಸಬೇಕೆಂಬದನ್ನು ತೋರಿಸಿಕೊಡುತ್ತವಷ್ಟೇ (ನೋಡಿರಿ 1 ಕೊರಿಂಥ 10:13).

ಸಲಿಂಗಕಾಮವನ್ನು ಜಯಿಸಬೇಕಾದರೆ ಮೊದಲ ಹೆಜ್ಜೆಯು ಯಾವದೆಂದರೆ ಅದನ್ನು ಒಂದು ಪಾಪ ಎಂಬದಾಗಿ ಕಾಣುವದು.[206] ಒಬ್ಬ ಅನಾಮಿಕ ಆಪ್ತಸಲಹೆಗಾರನು ಹೀಗೆ ಬರೆದನು, "ಸಲಿಂಗಕಾಮವನ್ನು ಒಂದು ರೋಗ ಎಂದು ಕರೆಯುವದರಿಂದ ಕಕ್ಷಿದಾರನ ನಿರೀಕ್ಷೆಯನ್ನು ಹೆಚ್ಚಿಸುವದಿಲ್ಲ. ಆದರೆ ಬೈಬಲ್ ಕರೆಯುವ ಪ್ರಕಾರ ಅದನ್ನು ಪಾಪ ಎಂದು ಕರೆಯುವದಾದರೆ, ಒಂದು ನಿರೀಕ್ಷೆಯು ದೊರಕುತ್ತದೆ. ಬಹುಶಃ, ಸಲಿಂಗಕಾಮದ ಪಾಪಿಗೆ ಸಹಾಯ ಮಾಡುವ ವೇಳೆ ,ಅವರಲ್ಲಿ ನಿರೀಕ್ಷೆ ಉಂಟುಮಾಡುವದಕ್ಕಿಂತಲೂ ಪ್ರಾಮುಖ್ಯವಾದ ಸಂಗತಿ ಮತ್ತೊಂದಿಲ್ಲ."[207]

ಒಬ್ಬ ಸಲಿಂಗಕಾಮಿಗೆ ಏಕೆ ಒಂದು ನಿರೀಕ್ಷೆ ದೊರಕಬಹುದಾಗಿದೆ? ಯಾಕೆಂದರೆ, ಆತನು ತನ್ನ ಪಾಪಕ್ಕಾಗಿ ಪಶ್ಚಾತ್ತಾಪ ಪಡುವದಕ್ಕೆ ಮನಸ್ಸುಳ್ಳವನಾಗಿದ್ದರೆ ದೇವರು ಆತನನ್ನು ಪುನಃ ಸೇರಿಸಿಕೊಳ್ಳುವನೆಂಬುದನ್ನು ಆತನು ತಿಳಿದುಕೊಳ್ಳಬಲ್ಲನು. ಅಷ್ಟು ಮಾತ್ರವಲ್ಲ, ಆತನ ಬಲಹೀನತೆಯನ್ನು ಜಯಿಸುವದಕ್ಕೆ ಮಾಡುವ ಆತನ ಹೋರಾಟದಲ್ಲಿ ದೇವರು ಅವನ ಸಂಗಡ ಇರುವನೆಂಬ ನಿಶ್ಚಯತೆಯು ದೇವರಿಂದ ಸಿಕ್ಕುತ್ತದೆ. ಕರ್ತನು "ಶೋಧಿಸಲ್ಪಡುವವರಿಗೆ ಸಹಾಯಮಾಡುವದಕ್ಕೆ" ಶಕ್ತನಾಗಿದ್ದಾನೆ (ಇಬ್ರಿಯ 2:18).

ಸಲಿಂಗಕಾಮವನ್ನು ಜಯಿಸುವದು ಅಷ್ಟೊಂದು ಸುಲಭವಾಗಿರುವದೋ? ಇಲ್ಲ. ಒಬ್ಬನು ಸಲಿಂಗಕಾಮದ ಚಟುವಟಿಕೆ ಗಳಲ್ಲಿ ಬಹಳ ಆಳವಾಗಿ ತೊಡಗಿಸಿ ಕೊಂಡಿರುವದಾದರೆ, ಆತನು ಒಬ್ಬ ವಿಶ್ವಾಸಾರ್ಹ, ವೃತ್ತಿಪರ, ಪೋಷಣೆಭಾವವುಳ್ಳ ಕ್ರೈಸ್ತ ಆಪ್ತ ಸಲಹೆಗಾರನೊಬ್ಬನ ಸಹಾಯವನ್ನು ಹುಡುಕಬೇಕಾಗಿರುತ್ತದೆ.[208] ಒಬ್ಬನು ಏನೇ ಮಾಡಿದರೂ, ಆತನು, "ದೇವರಿಗೆ ಎಲ್ಲವೂ ಸಾಧ್ಯವೇ" ಎಂಬ ಸತ್ಯವನ್ನು ದೃಢವಾಗಿ ಹಿಡಿದುಕೊಂಡಿರತಕ್ಕದ್ದು (ಮತ್ತಾಯ 19:26). ಅವನು ಪೌಲನ ಮಾತುಗಳನ್ನು ತನ್ನ ಧ್ಯೇಯವಾಕ್ಯವನ್ನಾಗಿ ಮಾಡಿಕೊಳ್ಳಬೇಕು: "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13)!

## ಪೌಲನ "ವಿಶ್ವದ ಸ್ಥಿತಿ" ಯ ಕುರಿತ ಭಾಷಣ (1:28-32)

ಪ್ರತಿ ವರ್ಷ ಅಮೆರಿಕದ ಅಧ್ಯಕ್ಷನು "State of the Union" (ಒಕ್ಕೂಟದ ಸ್ಥಿತಿ) ಭಾಷಣವನ್ನು ಮಾಡುತ್ತಾನೆ. ಅದೇ ರೀತಿ ರಾಜ್ಯಪಾಲಕರು ಸಹ ವಾರ್ಷಿಕವಾಗಿ "State of the State" (ರಾಜ್ಯದ ಸ್ಥಿತಿ (ಬಗ್ಗೆ ಭಾಷಣ ಮಾಡುವದು ಸರ್ವಸಾಮಾನ್ಯವಾಗಿ ರುತ್ತದೆ. ಈ ವಾಕ್ಯಭಾಗದಲ್ಲಿ ನಾವು "ವಿಶ್ವದ ಸ್ಥಿತಿ" ಯ ಕುರಿತು ಪೌಲನು ಮಾಡಿದ ಮೊದಲ ಶತಮಾನದ ಭಾಷಣವನ್ನು ನೋಡುತ್ತೇವೆ.

ಪೌಲನು ತನ್ನ ಈ ಸಂದೇಶದಲ್ಲಿ ದೇವರನ್ನು ತಿರಸ್ಕರಿಸಿ ಪಾಪಕ್ಕೆ ಒಪ್ಪಿಸಲ್ಪಟ್ಟಿದ್ದ ಅನ್ಯಜನಾಂಗದ ಕುರಿತಾಗಿ ಒಂದು ಕರಾಳ ಚಿತ್ರಣವನ್ನು ಮುಂದಿಡುತ್ತಾನೆ (1:28). ಅನ್ಯಜನರಿಗೆ ದೇವರಿಂದ ದೊರಕುವ ನೀತಿಯ ಅಗತ್ಯತೆ ಬಹಳವಾಗಿರುತ್ತದೆ ಎಂಬದನ್ನು ಒತ್ತಿ ಹೇಳುವದಕ್ಕಾಗಿ ಆತನು ದುರ್ಗುಣಗಳ ಮೇಲೆ ದುರ್ಗುಣಗಳ ಪಟ್ಟಿಯನ್ನು ಮಾಡುತ್ತಾನೆ (1:29-31). ಆತನು ತನ್ನ ಮನಸ್ಸಿಗೆ ತೋಚಿದ ಹಾಗೆಲ್ಲಾ ಈ ಪಾಪಗಳನ್ನು ವ್ಯವಸ್ಥಿತವಾಗಿ ಪಟ್ಟಿಮಾಡುತ್ತಾ ಸಾಗಿದನೆಂಬದಾಗಿ ಆಧುನಿಕ ವಾಚಕರಿಗೆ ತೋಚಬಹುದು. ಅನುಕೂಲಕ್ಕೋಸ್ಕರವಾಗಿ, ಆ ಪಾಪಗಳನ್ನು ಆರು ಗುಂಪುಗಳಾಗಿ ವಿಂಗಡಿಸಬಹುದು:

*ಸಮಗ್ರ ಪದಗಳು*—"ಅನೀತಿ," "ದುರ್ಮಾರ್ಗತನ," "ದುಷ್ಟತ್ವ," ಮತ್ತು "ದೇವರನ್ನು ದ್ವೇಷಿಸುವವರು."

*ಸ್ವಾರ್ಥ ಮನೋಭಾವಗಳು ಹಾಗೂ ಕ್ರಿಯೆಗಳು*—"ದುರಾಶೆ," "ಹೊಟ್ಟೇಕಿಚ್ಚು," "ಕೊಲೆ," "ಜಗಳ," ಮತ್ತು "ಮೋಸ."

*ಸಂಬಂಧಗಳ ನಾಶನ*—"ಹಗೆತನ," "ಕಿವಿ ಊದುವವರು," ಮತ್ತು "ಚಾಡಿಹೇಳುವವರು."

*ಸ್ವಾರ್ಥ-ಚಿಂತನೆ ನಡವಳಿಕೆ*—"ದ್ವೇಷಿಸುವವರು," "ಸೊಕ್ಕಿನವರು," ಮತ್ತು "ಬಡಾಯಿಕೊಚ್ಚುವವರು."

*ಒಂದು ಮಾರಕ ಜೋಡಿ*— "ಕೇಡನ್ನು ಕಲ್ಪಿಸುವವರು," ಮತ್ತು "ತಂದೆತಾಯಿಗೆ ಅವಿಧೇಯರು."

*ಅಂತಿಮ ನಾಲ್ವರು*- "ವಿವೇಕವಿಲ್ಲದವರು," "ಮಾತಿಗೆ ತಪ್ಪುವವರು," "ಮಮತೆಯಿಲ್ಲದವರು," ಮತ್ತು "ಕರುಣೆಯಿಲ್ಲ ದವರು."

ದುರಾದೃಷ್ಟಕರವಾಗಿ, ಜಗತ್ತನ್ನು ಬಣ್ಣಿಸುವದಕ್ಕೆ ಸಹ ಈ ಎಲ್ಲಾ ಭಾಷೆಯನ್ನು ಉಪಯೋಗಿಸಬಹುದಾಗಿದೆ. ಈಗಲೂ ಸಹ ದೇವರನ್ನು ದ್ವೇಷಿಸುವಂಥ ದುಷ್ಟಜನರು ಇದ್ದಾರೆ; ಕೆಲವರು ಆತನ ಇರುವಿಕೆಯನ್ನೇ ನಿರಾಕರಿಸುತ್ತಾರೆ. ಸ್ವಾರ್ಥಕ್ಕಾಗಿ ಜೀವಿಸುವವರು, ಸುಳ್ಳುಹೇಳುವವರು; ವಂಚನೆ, ಕಳ್ಳತನ ಮತ್ತು ತಮ್ಮ ಉದ್ದೇಶಗಳನ್ನು ನೆರವೇರಿಸಿಕೊಳ್ಳಲು ಕೊಲೆಗಳನ್ನು ಸಹ ಮಾಡುವವರು ಇದ್ದಾರೆ. ಕೆಲವರು ಹೊಲಸು ಬುದ್ಧಿಯುಳ್ಳವರು; ಮತ್ತೊಬ್ಬರ ಬಗ್ಗೆ ವದಂತಿಗಳನ್ನು ಹರಡಿಸುತ್ತಾರೆ ಮತ್ತು ತಮ್ಮ ವೈರಿಗಳ ಬಗ್ಗೆ ಚಾಡಿ ಹೇಳುತ್ತಾರೆ. ಇನ್ನು ಕೆಲವರು ಅಹಂ ತುಂಬಿದವರಾಗಿರುತ್ತಾರೆ, ತಮ್ಮ ಸಾಧನೆಗಳನ್ನಷ್ಟೇ ಬಡಾಯಿ ಕೊಚ್ಚಿಕೊಳ್ಳುವವರು ಆಗಿದ್ದಾರೆ. ತಮಗೆ ದೇವರಿಂದ ಕೊಡಲ್ಪಟ್ಟ ಶಕ್ತಿ ಮತ್ತು ತಲಾಂತುಗಳನ್ನು ಉದಾತ್ತ ಉದ್ದೇಶಗಳಿಗಾಗಿ ಉಪಯೋಗಿಸುವದನ್ನು ಬಿಟ್ಟು, ತಮ್ಮ ಸಮಯವನ್ನೆಲ್ಲಾ ಕೇಡು ಕಲ್ಪಿಸುವದರಲ್ಲಿಯೇ ಕಳೆಯುವವರು ಸಹ ಇದ್ದಾರೆ. ಎದುರುನೋಡದಿದ್ದರೂ, ನಾವು ಜೀವಿಸುವ ಈ ಕಾಲದಲ್ಲಿ ಹೆತ್ತವರಿಗೆ ಅವಿಧೇಯರಾಗುವದು ಸರ್ವಸಾಮಾನ್ಯವಾಗಿರುವದು.

ವ್ಯಾಪಕವಾಗಿ ಹರಡಿರುವ ವಂಚನೆಯ ನಿಮಿತ್ತವಾಗಿ, ನಾವು ಅನೇಕ ಸಾರಿ

ಯಾರನ್ನು ವಿಶ್ವಾಸಿಸಬೇಕೆಂಬ ಗೊಂದಲಕ್ಕೆ ಗುರಿಯಾಗುತ್ತೇವೆ. ವ್ಯಾಪಾರಿಗಳು ಹಾಗೂ ಉದ್ಯಮಿಗಳು ತಮ್ಮ ವಹಿವಾಟು ಹಾಗೂ ಸೇವೆಗಳಲ್ಲಿ ತಪ್ಪು ಲೆಕ್ಕಚಾರಗಳನ್ನು ಸೇರಿಸುತ್ತಾರೆ; ವಿವಾಹಿತ ದಂಪತಿಗಳು ತಾವು ವಿವಾಹದಲ್ಲಿ ಮಾಡಿದ ಪ್ರತಿಜ್ಞೆಗಳನ್ನು ಕಾಪಾಡಿಕೊಳ್ಳುವದಿಲ್ಲ; ಇನ್ನು ಕೆಲವರು ವಾಗ್ದಾನಗಳನ್ನು ಮಾಡುತ್ತಾರೆ ಹೊರತು ಒಂದನ್ನು ಕಾಪಾಡಿಕೊಳ್ಳುವದಿಲ್ಲ. ಹಿಂದಿನ ಕಾಲದಲ್ಲಿ, ಒಬ್ಬನು ಮಾತು ಕೊಟ್ಟರೆ ಹಾಗು ಕೈಕುಲುಕಿದರೆ ಒಪ್ಪಂದವು ಏರ್ಪಡುತ್ತಿತ್ತು; ಈಗ ನಮಗೆ ಒಂದು ಒಪ್ಪಂದ ಮಾಡಿಕೊಳ್ಳಬೇಕೆಂದರೆ ಹನ್ನೆರಡು ವಕೀಲರು ಮತ್ತು ಮೂರು ರಾಶಿ ಕಾಗದಗಳ ಅಗತ್ಯವಿರುತ್ತದೆ.

ಅಲ್ಲದೆ ನಾವು ಈ ಜೀವಿಸುವ ಈ ಕಾಲದಲ್ಲಿ, ಕೆಲವರಿಗೆ ಪ್ರೀತಿಯೆಂಬುದು ಗೊತ್ತಿಲ್ಲ, ಅವರಿಗೆ ಸಹಜ ಮಮತೆಯ ಅರಿವು ಇರುವದಿಲ್ಲ. ಗರ್ಭಪಾತ, ಕೂಸುಗಳನ್ನು ತೊರೆದುಬಿಡುವದು, ಮತ್ತು ಮಕ್ಕಳ ಶೋಷಣೆಗಳು ನಮ್ಮ ದಿನಗಳಲ್ಲಿ ಅಧಿಕವಾಗಿ ರುತ್ತವೆ. ಅಲ್ಲದೆ, ಕೆಲವರು ತಮ್ಮ "ಮನರಂಜನೆಯ ಕಾರ್ಯಕ್ರಮಗಳಲ್ಲಿ" ಹೆಚ್ಚೆಚ್ಚಾಗಿ ಹಿಂಸೆಯನ್ನೇ ಇಷ್ಟಪಡುವದನ್ನು ನೋಡುವಾಗ ಕರುಣೆಯ ಕೊರತೆ ಎದ್ದುಕಾಣುತ್ತದೆ. ಅಲ್ಲದೆ ನಾವು ಅಲ್ಲಲ್ಲಿ "ಹಿಂಸಾಕೃತ್ಯಗಳು" ನಡೆಯುವ ಬಗ್ಗೆ ಓದುತ್ತಲೇ ಇರುತ್ತೇವೆ. ಬಹುಶಃ, ನಾವು ಪೌಲನ ಕಾಲದ ಜಗತ್ತಿಗಿಂಥ ಅಷ್ಟೇನೂ ಹಿಂದಿರುವದಿಲ್ಲವೆಂದು ಅನ್ನಿಸುತ್ತದೆ.

ಪೌಲನು ತನ್ನ ಸಂದೇಶವನ್ನು ಮುಕ್ತಾಯಗೊಳಿಸಿದ ಹಾಗೆ, ಆತನು "ಇಂಥ ಕೃತ್ಯಗಳನ್ನು ನಡಿಸುವವರ" ಅಪರಾಧ ಹಾಗೂ ದಂಡನೆಯ ಬಗ್ಗೆ ಒತ್ತಿ ಹೇಳುತ್ತಾನೆ (1:32). ಪೌಲನ "ವಿಶ್ವದ ಸ್ಥಿತಿ" ಯ ಭಾಷಣವನ್ನು ಓದುವದು ಮತ್ತು ಮತ್ತೊಬ್ಬರ ಮೇಲೆ ಬೆರಳು ತೋರಿಸುವದು ಸುಲಭ. ಹೇಗೂ, ನಾವು ನಮ್ಮ ಸ್ವಂತ ಜೀವಿತಗಳನ್ನು ಸಹ ಪರಿಗಣಿಸಿಕೊಳ್ಳಬೇಕು. ನಾವು ನಮ್ಮನ್ನು "ಕೆಟ್ಟವರೆಂದು" ಭಾವಿಸಿಕೊಳ್ಳದಿರಬಹುದು ಆದರೆ ನಾವು ಮತ್ತೊಬ್ಬರ ಮೇಲೆ ಹೊಟ್ಟೇಕಿಚ್ಚು ಪಟ್ಟಿಲ್ಲವೋ? ನಾವು ಜಗಳವನ್ನು ಮಾಡದೆ ದೂರವಿರಲು ಪ್ರಯತ್ನಿಸಿರಬಹುದು, ಆದರೆ ನಾವು ನಮ್ಮ ಅಹಂಕಾರದ ವಿಷಯದಲ್ಲಿ ಹೋರಾಟ ಪಟ್ಟಿದ್ದೇವಾ? ಬಹುಶಃ ನಾವು ಎಂದೂ ಯಾರನ್ನೂ ಕೊಲೆ ಮಾಡದಿರಬಹುದು, ಆದರೆ ನಾವು ಚಾಡಿಹೇಳುವ ತಪ್ಪನ್ನು ಮಾಡಿಲ್ಲವೋ?

ಅಲ್ಲದೆ ಪೌಲನು ಅಂಥ ದುಷ್ಕೃತ್ಯಗಳಿಗೆ "ಅನುಮೋದನೆ" ಮಾಡುವವರನ್ನು ಸಹ ದೋಷಿಗಳೆಂದು ಹೇಳುತ್ತಾನೆ (1:32). ನಾವು ಕೆಟ್ಟದ್ದಕ್ಕೆ ಪ್ರೋತ್ಸಾಹ ಮಾಡಿದ ಅಪರಾಧಿಯಾಗಿರುವ ಸಾಧ್ಯತೆಯಿದೆಯಾ? ನಾವು ಪಾಪಕೃತ್ಯಗಳನ್ನು ವೈಭವೀಕರಿಸು ವಂಥ ಪುಸ್ತಕಗಳನ್ನು ಓದುತ್ತೇವಾ, ಸಿನಿಮಾಗಳನ್ನು ಮತ್ತು ಟಿವಿ ಕಾರ್ಯಕ್ರಮಗಳನ್ನು ವಿಕ್ಷಿಸುತ್ತೇವಾ, ಮತ್ತು ಹಾಡುಗಳನ್ನು ಕೇಳುತ್ತೇವೋ? ಪಾಪಮಯ ಜೀವನ ಶೈಲಿಯನ್ನು ನಡಿಸುವವರನ್ನು ನಮ್ಮ ವಿಗ್ರಹಗಳಾಗಿ ಮಾಡಿಕೊಂಡಿದ್ದೇವೋ? ಬೇರೆ ಯಾವದ ಕ್ಕಿಂತಲೂ ಹುರಿದುಂಬಿಸುವಂತದ್ದೇ ಪಾಪದ ಬೆಂಕಿಯನ್ನು ಮತ್ತಷ್ಟು ಹೊತ್ತಿ ಉರಿಯುವಂತೆ ಮಾಡುತ್ತದೆ.

ನೀವು ಯೇಸುವಿನಲ್ಲಿ ನಂಬಿಕೆಯಿಟ್ಟು ಪ್ರೀತಿಯಿಂದ ಕೂಡಿದ ವಿಧೇಯತೆಯಲ್ಲಿ ನಿಮ್ಮ ನಂಬಿಕೆಯನ್ನು ವ್ಯಕ್ತಪಡಿಸುವ ಮೂಲಕ ದೇವರ ಕರುಣೆಯಲ್ಲಿ ಆತುಕೊಂಡಿದ್ದೀರೋ

(ಯೋಹಾನ 14:15; ಮತ್ತಾಯ 7:21; ಮಾರ್ಕ 16:16)? ನಿಮಗೊಂದು ಆಯ್ಕೆ ಇದೆ. ನೀವು ನಿಮ್ಮನ್ನು "ಪಾಪಕ್ಕೆ ಒಪ್ಪಿಸಿಕೊಳ್ಳುವದಾದರೆ," ದೇವರು "ನಿಮ್ಮನ್ನು ನಿಮ್ಮ ಪಾಪದ ದುಷ್ಪರಿಣಾಮಗಳಿಗೆ ಒಪ್ಪಿಸಿಕೊಡುವನು." ಆದರೆ, ನೀವು ನಿಮ್ಮನ್ನು ದೇವರಿಗೆ ಒಪ್ಪಿಸಿಕೊಳ್ಳುವದಾದರೆ, ಆತನು ನಿಮಗೆ ತನ್ನ ಪ್ರೀತಿಯ ವರದಾನವನ್ನು ಅನುಗ್ರಹಿಸುವನು (6:23).

---

**ಅಡಿ ಟಿಪ್ಪಣಿಗಳು**

[1]ಕೆಲವು ಆಧುನಿಕ ಭಾಷಾಂತರಗಳು ಈ ವಾಕ್ಯಸಾಲುಗಳನ್ನು ಚಿಕ್ಕ ಚಿಕ್ಕ ಭಾಗಗಳಾಗಿ ವಿಂಗಡಿಸುತ್ತವೆ, ಆದರೆ ಗ್ರೀಕ್ ಪ್ರತಿಯಲ್ಲಿ ಅದು ಒಂದೇ ವಾಕ್ಯದ ಸಾಲಾಗಿರುತ್ತದೆ. [2]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 30. [3]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: InterVarsity Press, 1994), 47. [4]Anders Nygren, *Commentary on Romans* (Philadelphia: Fortress Press, 1949), 45–46. [5]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 36. [6]Larry Deason, *"The Righteousness of God"* : An Indepth Study of Romans, rev. ed. (Clifton Park, N.Y.: Life Communications, 1989), 40, n. 2. [7]James Burton Coffman, *Commentary on Romans* (Austin, Tex.: Firm Foundation Publishing House, 1973), 7. [8]ಗ್ರೀಕ್ ವಾಕ್ಯಭಾಗದ ಅಕ್ಷರಶಃ ಅರ್ಥವೇನೆಂದರೆ "ಸತ್ತವರ ಪುನರುತ್ಥಾನ." ಆದ್ದರಿಂದ ಕೆಲವರು ಇದು ಯೇಸು ಸತ್ತವರನ್ನು ಎಬ್ಬಿಸಿ ತಾನು ದೇವರೆಂಬುದನ್ನು ತೋರ್ಪಡಿಸಿದನೆಂದು ಭಾವಿಸುತ್ತಾರೆ. ಹೇಗೂ, ಅಪೊಸ್ತಲರ ಕೃತ್ಯಗಳು 26:23 ರಲ್ಲಿ ಅದೇ ಮಾತುಗಳನ್ನು ಉಪಯೋಗಿಸಲಾಗಿದೆ, ಅಲ್ಲಿ ವಾಕ್ಯವು ಯೇಸುವಿನ ಸ್ವಂತ ಪುನರುತ್ಥಾನವು ಪರಿಗಣಿಸಲ್ಪಟ್ಟಿದೆ ಎಂದು ಸ್ಪಷ್ಟವಾಗುತ್ತದೆ. ಅಷ್ಟುಮಾತ್ರವಲ್ಲದೆ, ರೋಮಾಪುರದವರಿಗೆ ಬರೆದ ಪತ್ರಿಕೆಯುದ್ದಕ್ಕೂ ಯೇಸುವಿನ ಪುನರುತ್ಥಾನದ ಮೇಲೆ ಒತ್ತು ಕೊಡಲ್ಪಟ್ಟಿರುತ್ತದೆ (ನೋಡಿರಿ 6:4, 5, 9; 7:4; 8:11, 34; 10:9). [9]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 69. [10]D. Stuart Briscoe, *Romans*, The Communicator's Commentary (Waco, Tex.: Word Books, 1982), 26.

[11]*The Analytical Greek Lexicon* (London: Samuel Bagster & Sons, 1971), 414. [12]Moo, *Romans*, 38. [13]Briscoe, 27. [14]Moo, *Romans*, 42. [15]Leslie C. Allen, "Romans," in *New International Bible Commentary*, ed. F. F. Bruce (Grand Rapids, Mich.: Zondervan Publishing House, 1979), 1317. [16]Charles R. Swindoll, *Coming to Terms with Sin: A Study of Romans 1—5* (Anaheim, Calif.: Insight for Living, 1999), 11. [17]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 15. [18]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 410. [19]Stott, 56. [20]Vine, 376.

[21]Jack Cottrell, *Romans*, vol. 1, College Press NIV Commentary (Joplin, Mo.: College Press Publishing Co., 1996), 93. [22]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 60. [23]Cottrell, 93. [24]Charles Hodge, *Romans*, The Crossway Classic Commentaries (Wheaton, Ill.: Crossway Books, 1993), 25. [25]John Murray, *The Epistle to the Romans*, vol. 1, The New

International Commentary on the New Testament (Grand Rapids, Mich.: Wm. B. Eerdmans Publishing Co., 1968), 22. [26]Douglas J. Moo, *The Epistle to the Romans*, The New International Commentary on the New Testament (Grand Rapids, Mich.: Wm. B. Eerdmans Publishing Co., 1996), 59. ಆಂಗ್ಲ ಸತ್ಯವೇದಗಳಲ್ಲಿ "ಆತ್ಮೀಕ ವರಗಳು" ಎಂಬ ಪದವು 1 ಕೊರಿಂಥ 12:1; 14:1 ರಲ್ಲಿ ಸಿಕ್ಕುತ್ತದೆ, ಆದರೆ "ವರಗಳು" ಎಂಬ ಪದವು italics ನಲ್ಲಿದೆ. "ವರಗಳು" ಎಂಬುದು ಗ್ರೀಕ್ ಪ್ರತಿಯಲ್ಲಿಲ್ಲ; ಇದು ಅನುವಾದಕರಿಂದ ಸೇರಿಸಲ್ಪಟ್ಟಿದೆ. [27]John MacArthur, Jr., *Romans 1—8*, The MacArthur New Testament Commentary (Chicago: Moody Press, 1991), 43. [28]Stott, 57. [29]Vine, 206. [30]James Macknight, *A New Literal Translation, from the Original Greek of All the Apostolical Epistles with a Commentary and Notes* (N.p.: n.d.; reprint, Grand Rapids, Mich.: Baker Book House, 1984),57.

[31]Stott, 57. [32]Ibid. [33]Bruce, 73. [34]Vine, 150. [35]Ibid., 508. [36]Briscoe, 34. [37]Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 516. [38]Everett Ferguson, *Backgrounds of Early Christianity*, 2d ed. (Grand Rapids, Mich.: Wm. B. Eerdmans Publishing Co., 1993), 559–61. [39]Gerhard Friedrich, "*euangelízomai*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 269–70. [40]Robert H. Mounce, "Gospel," in *Evangelical Dictionary of Theology*, ed. Walter A. Elwell (Grand Rapids, Mich.: Baker Books, 1984), 472.

[41]Bruce Barton, David Veerman, and Neil Wilson, *Romans*, Life Application Bible Commentary (Wheaton, Ill.: Tyndale House Publishers, 1992), xxiii. [42]Chris Bullard, "Romans: How God Accepts People Like Us" (N.p., n.d.), cassette. [43]Coy Roper, "The Gospel," sermon preached at Walnut Grove church of Christ, Savannah, Tennessee, 13 August 2000. [44]W. J. Deane, "Habakkuk," in *The Pulpit Commentary*, vol. 14, *Amos to Malachi*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 23. [45]Nygren, 88. [46]Stott, 69. [47]Vine, 651. [48]Ibid., 653. [49]ಪಾಪದ ವಿರುದ್ಧ "ನೀತಿಯ ಕೋಪ" ಎಂಬುದು ಇರುತ್ತದೆ, ಆದರೆ ನಮ್ಮ ಬಹುಪಾಲು ಕೋಪವು ಸ್ವಾರ್ಥದಿಂದ ಆಗಿರುತ್ತದೆ. [50]Bauer, 582.

[51]Dave Miller, "The Meaning of Romans (3)," sermon presented on the *Truth in Love* television program, Fort Worth, Texas, 16 January 2002. [52]Morris, 76. [53]Briscoe, 40. [54]Stott, 72. [55]ವಾಕ್ಯವು ಹೇಳುವದೇನೆಂದರೆ "ದೇವರು ಅದನ್ನು ಸ್ಪಷ್ಟವಾಗಿ ತಿಳಿಯಪಡಿಸಿದನು. ಪೌಲನು ಇಲ್ಲಿ ದೇವರು ಸ್ವತಃ ತನ್ನನ್ನು ಪ್ರಕಟಗೊಳಿಸಿಕೊಂಡನು, ಹೊರತು ಮನುಷ್ಯನು ಸೃಷ್ಟಿಯನ್ನು ನೋಡಿ (ಒಂದು" ಪ್ರಕೃತಿಯ ದೈವಶಾಸ್ತ್ರ" ರೂಪದಲ್ಲಿ) "ಕಂಡುಹಿಡಿಯಲಿಲ್ಲ" ಎಂಬದನ್ನು ಒತ್ತಿ ಹೇಳುತ್ತಾನೆ. [56]Coffman, 32–38. [57]Halford E. Luccock, *Preaching Values in the Epistles of Paul*, vol. 1, *Romans and First Corinthians* (New York: Harper & Brothers, 1959), 23. ಕೆಲವರು ನಂಬುವದೇನೆಂದರೆ, ಅನ್ಯಜನರು ಸತ್ಯವನ್ನು "ತಡೆ ಹಿಡಿದರು" ಆದರೂ ಅವರು ಸತ್ಯವನ್ನು ಅನುಸರಿಸಿ ಜೀವಿಸಲಿಲ್ಲ, ಮತ್ತು ಹೀಗೆ ಅವರು ಚಂಚಲರಾಗಿದ್ದರು ಎಂಬುದು ಪೌಲನ ಮಾತುಗಳಾಗಿದ್ದವು ಎಂಬದಾಗಿ. ಹೇಗೂ, ಇಲ್ಲಿ ಸಂದರ್ಭವು ಚಂಚಲತೆಯ ಬದಲಾಗಿ ಅಜ್ಞಾನದ (ಇಚ್ಛಾಪೂರ್ವಕವಾಗಿ ನಿರ್ಲಕ್ಷದಿಂದಿರುವದು) ಕುರಿತಾಗಿರುತ್ತದೆ. [58]*The Analytical Greek Lexicon*, 208. [59]Morris, 82. [60]Vine, 178–79. *Thieotēs*ಎಂಬ ಪದವು θεότης (*theotēs*) ಪದಕ್ಕಿಂತ ಬೇರೆಯಾಗಿದೆ, ಅದು ಕೊಲೊಸ್ಸೆ 2:9 ರಲ್ಲಿ ಸಿಕ್ಕುತ್ತದೆ. ರೋಮಾಪುರ 1 ಮತ್ತು ಕೊಲೊಸ್ಸೆ 2 ರಲ್ಲಿ, KJVಯು ಎರಡೂ ಪದಗಳನ್ನು "ದೈವತ್ವ" ("Godhead") ಎಂದು ಅನುವಾದಿಸುತ್ತದೆ; ಆದರೆ ಮೊದಲ ಶಬ್ದವು ದೇವತ್ವದ ಗುಣಸ್ವಭಾವವನ್ನು ಸೂಚಿಸಿದರೆ, ಎರಡನೆಯ ಶಬ್ದವು ಆ ದೈವತ್ವದ ತಿರುಳನ್ನು ಸೂಚಿಸುತ್ತದೆ. "ದೈವತ್ವವು" ಎಂಬುದು ಹಳೆಯ ಆಂಗ್ಲ ಪದವಾದ "ದೈವತ್ವ" ("Godhead") ಎಂಬದರಿಂದ ಬಂದಿರುತ್ತದೆ ,ಅದಕ್ಕೆ ದೈವಗುಣ "Godhood")

ಎಂದರ್ಥ.

[61]Barton, Veerman, and Wilson, 28. [62]Vine, 657. The KJV ಯಲ್ಲಿ "ವ್ಯರ್ಥ" ಎಂದಿರುತ್ತದೆ, ಅದರ ಮೂಲತಃ "ಶೂನ್ಯ" ಅಥವಾ "ನಿಷ್ಪ್ರಯೋಜಕ" ಎಂಬ ಅರ್ಥವನ್ನು ನೀಡುವದಾಗಿತ್ತು. [63]Ibid., 246. [64]ಲ್ಯಾಟಿನ್ ಭಾಷೆಯಲ್ಲಿ, *homo* ಎಂಬುದು "ಪುರುಷ" ಎಂಬರ್ಥವಾಗಿರುತ್ತದೆ ಮತ್ತು *sapiens* ಎಂಬುದರ ಅರ್ಥವು "ಜ್ಞಾನಿ." [65]Coffman, 41. [66]Chester Warren Quimby, *The Great Redemption* (New York: Macmillan Co., 1950), 45–46. [67]F. Buschel, "*didōmi*," in *Theological Dictionary of the New Testament*, 166. [68]*The Analytical Greek Lexicon*, 302. [69]ಉದಾಹರಣೆಗೆ, ಹಲವು ಬರಹಗಾರರು ಅವರನ್ನು "ಒಪ್ಪಿಸಿ ಕೊಡುವ ಮೂಲಕ" ನಿಷ್ಕ್ರೀಯನಾಗಿರದೆ ಸಕ್ರಿಯಯಾಗಿದ್ದನು ಎಂದು ಒತ್ತಿ ಹೇಳುತ್ತಾರೆ. [70]Briscoe, 48.

[71]J. D. Thomas, Class Notes, *Romans*, Abilene Christian College (1955). [72]Richard Rogers, *Paid in Full: A Commentary on Romans* (Lubbock, Tex.: Sunset Institute Press, 2002), 33. [73]Barton, Veerman, and Wilson, 31. [74]C. S. Lewis, *The Problem of Pain* (Oxford: N.p., 1940; reprint, New York: Macmillan Co., 1962), 127–28. [75]Vine, 384. [76]Various usages are explained in Friedrich Hauck, "*katharós*," in *Theological Dictionary of the New Testament*, 381–82. [77]"ದೇವರಿಂದ ಅನುಮೋದಿತ ಮದುವೆಗಳು" ಮತ್ತು "ಆತ್ಮೀಕ ಮದುವೆಗಳು" ಎಂಬ ಪದಗಳನ್ನು ಕೆಲವು ಮದುವೆಗಳು ದೇವರಿಂದ ಅಂಗೀಕರಸಲ್ಪಟ್ಟಿಲ್ಲ ಎಂಬುದನ್ನು ಒತ್ತು ಕೊಡಲು ಉಪಯೋಗಿಸಿದೆ (ನೋಡಿರಿ ಮಾರ್ಕ 10:11). [78]NASB ಯಲ್ಲಿ "ಸಂಬಧವಿತ್ತು" ಆದರೆ "ತಿಳಿದಿತ್ತು" ಎಂಬುದು ಅಕ್ಷರಶಃ ನಿರೂಪಿಸಲು. [79]"ಹಾದರ" ಮತ್ತು "ವ್ಯಭಿಚಾರ" ಎರಡೂ ಎಲ್ಲಾ ಲೈಗಿಕ ಪಾಪಗಳನ್ನು ಸೂಚಿಸುವದಕ್ಕೆ ಸಂಕ್ಷೀಪ್ತ ಪದವಾಗಿ ಕೆಲವು ಸಾರಿ ಉಪಯೋಗಿಸ್ಪಡುತ್ತವೆ. ಅದೇ ಸನ್ನಿವೇಶದಲ್ಲಿ ಉಪಯೋಗಿಸಲ್ಪಟ್ಟಾಗ "ಹಾದರ" ಎಂಬುದು ಸಾಮಾನ್ಯ ಅವಿವಾಹಿತರ ನಡುವಿನ ಲೈಂಗಿಕ ಸಂಬಂಧವನ್ನು ಸೂಚಿಸುತ್ತದೆ, ಮತ್ತು "ವ್ಯಭಿಚಾರ" ಕನಿಷ್ಠ ಒಬ್ಬ ವಿವಾಹಿತ ವ್ಯಕ್ತಿಯನ್ನೊಳಗೊಂಡಿರುತ್ತದೆ. [80]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati: Standard Publishing, n.d.), 305.

[81]Vine, 16. [82]Ibid., 660, 567. [83]ಗ್ರೀಕ್ ಪ್ರತಿಗಳಲ್ಲಿ "ಹೆಂಗಸು" ಎಂಬ ಪದವು ಏಕ ವಚನವಾಗಿದೆ, ಆದರೆ ಇಲ್ಲಿ "ಹೆಂಗಸು" ಎಂಬುದು ಹೆಣ್ಣುಗಳ ಗುಂಪನ್ನು ಸೂಚಿಸುತ್ತದೆ. ಆದ್ದರಿಂದ ಅನೇಕ ಭಾಷಾಂತರಗಾರರು "ಹೆಂಗಸು" ಎಂಬುದನ್ನು ಬಹು ವಚನವಾಗಿ ಉಪಯೋಗಿಸುತ್ತಾರೆ. [84]Morris, 92. [85]The Analytical Greek Lexicon, 62. [86]J. Schneider, "*schḗma*," in *Theological Dictionary of the New Testament*, 1129. [87]Vine, 205. [88]Moo, *Romans*, 66–67. [89]Ibid., 62. [90]Stott, 78.

[91]Barclay, 25. [92]Charles Swindoll, "Sinnerama in Panorama" (Part 2) (Anaheim, Calif.: Insight for Living, 1976), cassette. [93]F. LaGard Smith, "The Gay-is-Good Sales Pitch Is a Rip-Off," *Gospel Advocate* (2 March 1978): 132. [94]Barton, Veerman, and Wilson, 36. [95]Quoted in Jim Townsend, *Romans: Let Justice Roll Down* (Elgin, Ill.: David C. Cook Publishing Co., 1988), 16. [96]Swindoll, "Sinnerama in Panorama," cassette. [97]Barton, Veerman, and Wilson, 36. [98]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 88. [99]Vine, 526–27. [100]Stott, 78 (emphasis added).

[101]Morris, 94. [102]Ibid. [103]Fyodor Dostoevsky, *The Brothers Karamazov*; as quoted in Jeff Hood, "What About Homosexuality?" (tract) (Oklahoma City: By the author, n.d.), 2. [104]*The Analytical Greek Lexicon*, 186, 207. [105]Ibid., 207. [106]ಕೆಲವು ಗ್ರೀಕ್ ಹಸ್ತಪ್ರತಿಗಳಲ್ಲಿ ವೈವಿಧ್ಯತೆಯ ಆಧಾರದಲ್ಲಿ, KJVಯು "ಅನೀತಿ" ಮತ್ತು "ದುರ್ಮಾರ್ಗತನ" ಇವುಗಳ ನಡುವೆ "ಹಾದರ" ವನ್ನು ಸೇರ್ಪಡೆಗೊಳಿ ಸುತ್ತದೆ. ಹೊಸ ಒಡಂಬಡಿಕೆಯ ಬಹುಪಾಲು "ದುರ್ಗುಣಗಳ ಪಟ್ಟಿಯು" "ಹಾದರ" (ಲೈಂಗಿಕ ಅನೈತಿಕತೆ) ದಿಂದ ಆರಂಭವಾಗುತ್ತವೆ. ಉದಾಹರಣೆಗೆ, ನೋಡಿರಿ ಗಲಾತ್ಯ 5:19-21. ಹೇಗೂ, ಈ ವಚನಗಳಲ್ಲಿ ಪೌಲನು ಮುಂಚೆಯೇ ಲೈಂಗಿಕ ಅನೈತಿಕತೆಯ ಕುರಿತು ಹೇಳಿ ಮುಗಿಸಿದ್ದನು (1:24-27). [107]Vine, 675; G. Harder "*ponērós*," in *Theological Dictionary of the New Testament*, 913.

[108]McGarvey and Pendleton, 305–6. [109]*The Analytical Greek Lexicon*, 210. [110]W. J. Conybeare and J. S. Howson (Grand Rapids, Mich.: Wm. B. Eerdmans Publishing Co., 1980), 501.

[111]Morris, 96. [112]Luccock, 27. [113]Ibid., 28. [114]*The Analytical Greek Lexicon*, 105. [115]Morris, 96. [116]Vine, 388. [117]Macknight, 60. [118]Vine, 388. [119]Moses E. Lard, *Commentary on Paul's Letter to Romans* (Lexington, Ky.: N.p., 1875; reprint, Delight, Ark.: Gospel Light Publishing Co., n.d.), 64–65. [120]Ibid., 65.

[121]*The Analytical Greek Lexicon*, 193. [122]Morris, 97. [123]Barclay, 37. [124]*The Analytical Greek Lexicon*, 412. [125]Barclay, 37. [126]Theophrastus; quoted in Barclay, 37. [127]Vine, 71. [128]Morris, 98; Barclay, 38. [129]Townsend, 17. Thomas Alva Edison (1847–1931) ಇತಿಹಾಸದಲ್ಲಿ ಅತ್ಯಂತ ಶ್ರೇಷ್ಠ ಆವಿಷ್ಕಾರಕ ಎಂದು ಕರೆಯಲ್ಪಟ್ಟಿದ್ದಾನೆ. ಆತನು 60 ವರ್ಷಗಳಲ್ಲಿ 1,100 ಕ್ಕಿಂತಲೂ ಹೆಚ್ಚು ವಿಶಿಷ್ಟಾಧಿಕಾರಗಳನ್ನು (Patent) ಹೊಂದಿದ್ದನು. [130]Vine, 173.

[131]Ibid., 246. [132]*The Analytical Greek Lexicon*, 57, 404. [133]Morris, 99, n. 313. [134]Vine, 16. [135]Barclay, 39. [136]ವಾಕ್ಯಭಾಗಗಳಲ್ಲಿನ ವ್ಯತ್ಯಾಸಗಳ ನಿಮಿತ್ತವಾಗಿ NKJV ಯು "ಪ್ರೀತಿಯಿಲ್ಲದವರು" ಮತ್ತು "ಕರುಣೆಯಿಲ್ಲದವರು" ಎಂಬದರ ನಡುವೆ "ಕ್ಷಮಿಸದವರು" ಎಂಬುದನ್ನು ಸೇರ್ಪಡೆಗೊಳಿಸಿರುತ್ತದೆ. ಕ್ಷಮಿಸಲು ವಿಫಲರಾಗುವದು ಪ್ರೀತಿಯಿಲ್ಲದ್ದಕ್ಕೆ ಮತ್ತು ಕರುಣೆಯಿಲ್ಲದ್ದಕ್ಕೆ ಸಮವಾಗಿದೆ, ಆದ್ದರಿಂದ ಈ ಪದಗಳಲ್ಲಿ ಅದನ್ನು ಸೇರಿಸಲಾಗಿದೆ. [137]Barclay, 39. [138]Stott, 78. [139]Hodge, 41. [140]Morris, 99.

[141]Ibid. [142]Hodge, 42. [143]Briscoe, 52. [144]R. C. Bell, *Studies in Romans* (Austin, Tex.: Firm Foundation Publishing House, 1957), 16. [145]*Pistis* ನಾಮಪದ, *pisteuō* ಒಂದು ಕ್ರಿಯಾಪದ, ಮತ್ತು *pistos* ವಿಶೇಷಣವಾಗಿದೆ. [146]*Pistis* ಕೆಲವು ಸಂದರ್ಭಗಳಲ್ಲಿ "ನಂಬಿಗಸ್ತಿಕೆ" ಎಂದು ಅನುವಾದಿಸಲ್ಪಟ್ಟಿದೆ ಎಂಬದನ್ನು ಗಮನಿಸತಕ್ಕದ್ದು (3:3ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ). ಅಲ್ಲದೆ, *pistis* ಕೆಲವು ಸಾರಿ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಸುತ್ತ ಕೇಂದ್ರಿಕೃತವಾದ ಉಪದೇಶದ ವೇಳೆಯಲ್ಲಿನ ಪದವನ್ನು ಸೂಚಿಸುತ್ತದೆ. ವಿಷಯ ಇದಾಗಿರುದಾದರೆ, *pistis* ಅನೇಕ ವೇಳೆ ಮುಂದೆ ಒಂದು ನಿಯಮಿತ ಉಪಪದ ("the") ವನ್ನು ಹೊಂದಿರುತ್ತದೆ. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಇದನ್ನು ಉಪಯೋಗಿಸಲಾಗಿರುವ ಉದಾಹರಣೆ ಕಾಣುವದಿಲ್ಲ. [147]ಅವರು ಒಂದೇ ರೀತಿ ಪದಗಳನ್ನು ಉಪಯೋಗಿಸುವದಿಲ್ಲವಾದರೂ, ಇತರ ಲೇಖಕರು ರಕ್ಷಣೆಯುಂಟು ಮಾಡುವ ನಂಬಿಕೆಯ ಮೂರು ವಿಧವಾದ ಸ್ವಭಾವವನ್ನು ಒಪ್ಪುತ್ತಾರೆ. ನೋಡಿರಿ Vine, 222; Swindoll, *Coming to Terms with Sin*, xiii. [148]Vine, 61. [149]Rudolf Bultmann, "*pisteuō*," in *Theological Dictionary of the New Testament*, 854–55. [150]ಉದಾಹರಣೆಗೆ, ಯೋಹಾನ 3:36 ಹೇಳುತ್ತದೆ, "ಮಗನನ್ನು *ನಂಬುವವನಿಗೆ* ನಿತ್ಯಜೀವ ಉಂಟು; ಮಗನಿಗೆ *ಒಳಗಾಗದವನು* (ವಿಧೇಯನಾಗದವನು) ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿದೆ" (ಒತ್ತಿ ಹೇಳಿದ್ದು ನನ್ನದು). ಅಲ್ಲದೆ ಇಬ್ರಿಯ 3:19 ಮತ್ತು 4:6ನ್ನು ಹೋಲಿಸಿ ನೋಡಿರಿ.

[151]Vine, 222. [152]Bultmann, 854. [153]Ibid. [154]*The Analytical Greek Lexicon*, 102. [155]A. W. Tozer, *The Knowledge of the Holy* (San Francisco: Harper & Row, 1961), 86. [156]Vine, 535. [157]ಈ ವಾಕ್ಯಸಾಲುಗಳು ದೇವರ ಸಂಗಡ ಸರಿಯಾದ ಸಂಬಂಧದಲ್ಲಿರುವ ವ್ಯಕ್ತಿಯನ್ನು ಸೂಚಿಸುತ್ತದೆ. ಸತ್ಯವೇದ ಒಬ್ಬ ಅವಿಶ್ವಾಸಿಯನ್ನು ಎಂದಿಗೂ "ನೀತಿವಂತ" ಎಂದು ಕರೆಯುವದಿಲ್ಲ, ಆತನು ಎಷ್ಟೇ ಉನ್ನತವಾದ ನೈತೀಕ ಮಾನದಂಡದಲ್ಲಿ ಜೀವಿಸುತ್ತಿದ್ದರೂ ಸರಿಯೇ. [158]ಯೇಸು ಬಾಗಲು ತಟ್ಟಿದನು ಮತ್ತು ಯಾರೋ ಬಾಗಲು ತೆರೆದು ಒಳಗೆ ಬಿಟ್ಟರು ಎಂದು ಕೆಲವರು ನಂಬುತ್ತಾರೆ. ಅಂಥ ಸಹಜ ಹಾಗೂ ಸಾಧಾರಣವಾದ ಪ್ರವೇಶವಾಗಿದ್ದರೆ ಲೂಕ 24:36, 37 ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಪ್ರತಿಕ್ರಿಯೆಗಳು ಬರುತ್ತಿರಲಿಲ್ಲವೇನೋ. [159]Bauer, 546. [160]Homer Hailey, *That You May Believe: Studies in the Gospel of John* (Grand Rapids, Mich.: Baker Book House, 1973), 145.

[161]John Franklin Carter, *A Layman's Harmony of the Gospels* (Nashville: Broadman Press, 1961), 341. [162]Ibid. [163]Ibid. [164]"ಅಂತ್ಯಕಾಲ ಶಾಸ್ತ್ರವು" "ಕಡೇ ಸಂಗತಿಗಳ ಕುರಿತ ಅಧ್ಯಯನವಾಗಿದೆ" -ಅಂದರೆ, ಲೋಕಾಂತ್ಯದ, ನ್ಯಾಯತೀರ್ಪು, ಪರಲೋಕ ಮತ್ತು ನರಕ, ಮತ್ತು ಇತ್ಯಾದಿ

ಸಂಗತಿಗಳ ಅಧ್ಯಯನ. ಒಂದು "ಅಂತ್ಯಕಾಲಿಕ" ದೇಹವು ನಾವು "ಕಡೇಕಾಲದಲ್ಲಿ" ಪಡೆದುಕೊಳ್ಳುವ ದೇಹದ ವಿಧವಾಗಿದೆ, ಆಗ ಕ್ರಿಸ್ತನು ತಿರುಗಿ ಬರುವವನಾಗಿದ್ದಾನೆ. [165]Robert Duncan Culver, *The Life of Christ* (Grand Rapids, Mich.: Baker Book House, 1976), 267. [166]Carter, 341. [167]ಸಹಜವಾಗಿ ಕಾಣುವಂತೆ, ನಮ್ಮ ಆತ್ಮಗಳು ಪೂರ್ಣವಾಗಿ ಕಾರ್ಯಮಾಡುವದಕ್ಕೂ ತಮ್ಮ ನಿತ್ಯತ್ವದ ಗಮ್ಯತೆಯನ್ನು ನೆರವೇರಿಸುವದಕ್ಕೂ ಆತ್ಮೀಕ ದೇಹಗಳನ್ನು "ಧರಿಸಿಕೊಳ್ಳುವದು" ಅಗತ್ಯವಾಗಿರುತ್ತದೆ. [168]ಲೂಕ 24:39 LB ಆವೃತ್ತಿಯಲ್ಲಿ ಹೇಳಲ್ಪಡುವದೇನೆಂದರೆ, "ನನ್ನನ್ನು ಮುಟ್ಟಿನೋಡಿ ನಾನು ಭೂತವಲ್ಲವೆಂದು ಖಚಿತಮಾಡಿಕೊಳ್ಳಿರಿ! ಯಾಕೆಂದರೆ ಭೂತಗಳಿಗೆ ದೇಹಗಳಿರುವದಿಲ್ಲ, ನನಗೆ ಇರುವದನ್ನು ನೀವು ಕಾಣುತ್ತೀರಲ್ಲಾ!" [169]ಯೇಸು ಕರ್ತನ ಭೋಜನ ಸಂಸ್ಕಾರವನ್ನು ಸ್ಥಾಪಿಸುವ ವೇಳೆ, ಅದು ಆತನ ಮರಣವನ್ನು ಸಾರುತ್ತದೆಂಬದನ್ನು ಒತ್ತಿ ಹೇಳಿದನು (1 ಕೊರಿಂಥ 11:23-26); ಆದರೆ ಕರ್ತನ ಭೋಜನ ಮತ್ತು ಪುನರುತ್ಥಾನಗಳ ನಡುವೆ ಒಂದು ನಿಕಟ ಸಂಬಂಧ ಸಹ ಇರುತ್ತದೆ. ಯೇಸು ವಾರದ ಮೊದಲ ದಿನದಂದು ಎದ್ದು ಬಂದದ್ದರಿಂದ (ಮತ್ತಾಯ 28:1-6), ಸಭೆಯು ಆ ದಿನದಂದು ಕೂಡಿಬರುತ್ತದೆ-ವಿಶೇಷವಾಗಿ ಕರ್ತನ ಭೋಜನವನ್ನು ಅನುಸರಿಸುವದಕ್ಕಾಗಿಯೇ (ಅಪೊಸ್ತಲರ ಕೃತ್ಯಗಳು 20:7; ನೋಡಿರಿ 1 ಕೊರಿಂಥ 16:1, 2). [170]ಪೇತ್ರನ ಜೊತೆಯಲ್ಲಿದ್ದವನು "ಯೇಸುವಿಗೆ ಪ್ರಿಯನಾದ ಶಿಷ್ಯನು" ಎಂದು ಗುರುತಿಸಲ್ಪಟ್ಟಿದ್ದಾನೆ (ಯೋಹಾನ 20:2), ಅದು ಯೋಹಾನನು ತನ್ನನ್ನು ಸೂಚಿಸುವದಕ್ಕೆ ಅನುಸರಿಸುವ ರೀತಿ ಎಂದು ಬಹಳ ಜನರು ನಂಬುತ್ತಾರೆ (ನೋಡಿರಿ ಯೋಹಾನ 13:23; 19:26; 21:7, 20).

[171]"ನೋಡಿ" ಎಂಬದು ಗ್ರೀಕ್.ನ ὁράω (*horaō*) ಎಂಬ ಪದದ ಅನುವಾದ ರೂಪವಾಗಿದೆ. ಈ ಗ್ರೀಕ್ ಪದವು ಸುಮ್ಮನೆ ನೋಡುವದಕ್ಕಿಂತಲೂ ಹೆಚ್ಚಾದ ಅರ್ಥವನ್ನು ಕೊಡುತ್ತದೆ; ಇದು ಗಾಢವಾಗಿ ಗ್ರಹಿಸಿಕೊಳ್ಳುವದನ್ನು ಸೂಚಿಸುತ್ತದೆ. [172]ಕೆಲವರು ಈ ರೀತಿ ಹೇಳಿಕೊಂಡಿದ್ದಾರೆ (ಮತ್ತಾಯ 28:11-15; ಯೋಹಾನ 20:2). [173]ವಾಕ್ಯವು ಇದನ್ನು ತಿಳಿಸುವ ಒಂದು ವಿಧವೆಂದರೆ ಅದು ಅನೇಕರಿಗೆ ಪರಿಚಯವಿಲ್ಲದ ಪದ: "ಸಮಾಧಾನಪಡಿಸು" (1 ಯೋಹಾನ 2:2; 4:10). ಈ ಪದದ ಅರ್ಥವು "ದೇವರ ನೀತಿಯನ್ನು ಸಂತೃಪ್ತಿಗೊಳಿಸುವಂತದ್ದು." [174]ಸಬ್ಬತ್ ಮತ್ತು ಮೊದಲ ದಿನ ಎರಡೂ ಸಹ "res" ದಿಂದ ಆರಂಭವಾಗುವ ಸಂಗತಿಗಳಿಂದ ಪರಿಶುದ್ಧವೆಂದು ಎಣಿಸಲ್ಪಡುತ್ತಿದ್ದವು: ಸಬ್ಬತ್ ದಿನವು ಏಳನೆಯ ದಿನದಂದು ದೇವರ ವಿಶ್ರಾಂತಿ (*res*ting) ಹೊಂದಿದ ಕಾರಣದಿಂದ ಪರಿಶುದ್ಧವೆಂದು ಎಣಿಸಲ್ಪಡುತ್ತಿತ್ತು. ವಾರದ ಮೊದಲ ದಿನವು ಯೇಸುವಿನ ಪುನರುತ್ಥಾನದ (*res*urrection) ಕಾರಣದಿಂದ ಪರಿಶುದ್ಧವೆಂದು ಎಣಿಸಲ್ಪಡುತ್ತದೆ. [175]ಈ ದೃಷ್ಟಾಂತವು ಆರಿಸಿಕೊಳ್ಳಲ್ಪಟ್ಟ ಮೂಲವು: Dick Marcear ರವರ, "It's Time to Take a Stand," Hilltop Reflections, bulletin of the Central church of Christ in Amarillo, Texas, 13 April 1986. [176]ರಿಂದ ಈ ಕಾರಣಗಳನ್ನು Deasonದಿಂದ ಆಯ್ದುಕೊಳ್ಳಲಾಗಿದೆ, 51-52 [177]Quoted in David F. Burgess, comp., *Encyclopedia of Sermon Illustrations* (Saint Louis: Concordia Publishing House, 1988), 67. [178]Roger Lovette, in *Illustrating Paul's Letter to the Romans*, comp. James E. Hightower (Nashville: Broadman Press, 1984), 10 ರಿಂದ ಆಯ್ದುಕೊಳ್ಳಲ್ಪಟ್ಟದ್ದು. [179]Ray F. Chester, "The Powerful Gospel," *Abilene Christian College Annual Bible Lectures* (1959), 41–42 ರಿಂದ ಆಯ್ದುಕೊಳ್ಳಲ್ಪಟ್ಟದ್ದು. [180]Wiersbe, 516–17.

[181]James Meadows, Class Notes, *Romans*, East Tennessee School of Preaching and Missions, Knoxville (2003), 5. [182]Adapted from Brian Harbour, in *Illustrating Paul's Letter to the Romans*, 12. [183]Coy Roper (sermon). [184]Ibid. (emphasis added). [185]Richard C. Halverson, *No Greater Power*. Quoted in *The Answer* edition of the New Century Version (Dallas: Word Bibles, 1993), 1248. [186]ನಾವು ಸುವಾರ್ತೆಯಿಂದ ರಕ್ಷಿಸಲ್ಪಟ್ಟಿದ್ದೇವೆ ಹೊರತು "ಹೇಳುವದಕ್ಕಿಂತಲೂ ಉತ್ತಮವಾಗಿ ತೋರುತ್ತದೆಂಬ" ಯಾವದೋ ಭಾವನೆಯಿಂದಲ್ಲ ಎಂಬದನ್ನು ಒತ್ತಿಹೇಳುವದಕ್ಕಾಗಿ ಕೆಲವು ಬೋಧಕರು ಕೆಲವು ಸಾರಿ "ದಿ" ಎಂಬದರ ಮೇಲೆ ಹೆಚ್ಚು ಒತ್ತು ನೀಡುತ್ತಾರೆ: "ಸುವಾರ್ತೆಯು ರಕ್ಷಣೆಯುಂಟು ಮಾಡುವದಕ್ಕೆ ದೇವರ (ದಿ ಏಕೈಕ) ಶಕ್ತಿಯಾಗಿದೆ." ಈ ವಾಕ್ಯವು ಇಂದು ಆತ್ಮಗಳನ್ನು ರಕ್ಷಿಸಲು ಸುವಾರ್ತೆಯು ದೇವರ ಸಾಧನವಾಗಿದೆ (ಮತ್ತು ಈ ಕಾರಣದಿಂದ ಪವಿತ್ರಾತ್ಮನ "ನೇರವಾದ ಕ್ರಿಯೆಯು" ಅನಾವಶ್ಯಕ) ಎಂಬದನ್ನು ಬೋಧಿಸುತ್ತದೆ, ಆದರೆ "ದಿ" ಎಂಬ ಅನುಚ್ಛೇದದ ಮೇಲೆ ಒತ್ತು ನೀಡುವ ಮೂಲಕವಂತೂ ಅಲ್ಲ. ಮೇಲೆ ಗಮನಿಸಿದ ಹಾಗೆ, "the" ಎಂಬುದು ಮೂಲಪ್ರತಿಯಲ್ಲಿರುವದಿಲ್ಲ. [187]ಉದಾಹರಣೆಗೆ, ಅದು ರಾಜ್ಯವು/ಸಭೆಯು "ಸಮೀಪ" ವಾಗಿದೆ ಎಂಬದು ಶುಭವಾರ್ತೆಯಾಗಿತ್ತು (ಮಾರ್ಕ 1:14)

ಮತ್ತು ದೇವರು ಏರ್ಪಡಿಸಿರುವ ದಾರಿಯು ಎಲ್ಲಾ ಮಾನವರಿಗಾಗಿ ಎಂಬುದು ಶುಭವಾರ್ತೆಯಾಗಿತ್ತು (ಮತ್ತಾಯ 11:5). [188]ಕೆಲವು ಸಾರಿ ಬೋಧಕರು ಹೇಳುತ್ತಾರೆ, "ಪಂಚಾಶತ್ತಮ ದಿನದಂದು ನಡೆದ ಅತಿ ದೊಡ್ಡ ಅದ್ಭುತವು . . . ಅಲ್ಲ . . . ಆದರೆ . . ." ಈ ರೀತಿಯಾಗಿ ವಿಚಾರವನ್ನು ಹೇಳುವಾಗ ಅವರು ಉಪಯೋಗಿಸುವ "ಅದ್ಭುತ" ಎಂಬುದು "ದೇವರು ಆಶ್ಚರ್ಯವಾಗಿ ಕ್ರಿಯೆಮಾಡುವದನ್ನು" ಸೂಚಿಸುವ ಅರ್ಥದಲ್ಲಿ ಆಗಿದೆ. ಇಂದು ನಮ್ಮ ದಿನಗಳಲ್ಲಿ ಅದ್ಭುತಗಳು ನಡೆಯುತ್ತವೋ ಎಂಬದನ್ನು ಚರ್ಚಿಸಿದವನಾಗಿ ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ "ಅದ್ಭುತ" ಎಂಬ ಪದವನ್ನು ಈ ಅರ್ಥದಲ್ಲಿ ಉಪಯೋಗಿಸದಿದ್ದರೆ ಉತ್ತಮ. [189]Adapted from a variety of sources, including Morris, 73; and Swindoll, *Coming to Terms with Sin*, 16. [190]Adapted from Alton H. McEachern, in *Illustrating Paul's Letter to the Romans*, 20–21.

[191]Adapted from Bill Bruster, in *Illustrating Paul's Letter to the Romans*, 20. [192]ಹೇಳಿದ್ದೇನೆಂದರೆ ನಾವು ಪ್ರಕೃತಿಯಿಂದ ಮಾತ್ರದಿಂದಲೇ ಏಕದೇವಾರಾಧನೆಯನ್ನು ಸಾಭೀತುಪಡಿಸಲು ಆಗದು. (McGuiggan, 76–77.) ಏಕೈಕ ದೇವರು ಮಾತ್ರವೇ ಇದ್ದಾನೆ ಆದರೆ ಪೌಲನು ಇಲ್ಲಿ ಬೇರೊಂದು ವಿಷಯದ ಬಗ್ಗೆ ಮಾತಾಡುತ್ತಿದ್ದಾನೆ. [193]Quoted in Townsend, 14. [194]ನಮ್ಮ ಜಗತ್ತು ಪ್ರಾಥಮಿಕವಾಗಿ *ಕ್ರಮಬದ್ಧ* ಮತ್ತು *ಉದ್ದೇಶ*ದಿಂದ ಕೂಡಿದ್ದು. ವಿಶ್ವಾಸಿಯು "ಕೆಟ್ಟತನದ ಸಮಸ್ಯೆ" ಯ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದಾದರೂ, ಅವಿಶ್ವಾಸಿಗೆ ಅದಕ್ಕಿಂತಲೂ ದೊಡ್ಡ ಸವಾಲು ಇರುತ್ತದೆ: "ಒಳ್ಳೆದರ ಸಮಸ್ಯೆ" ಯ ಬಗ್ಗೆ ವಿವರಿಸುವದು. [195]ವಿಶ್ವ ತನ್ನಷ್ಟಕ್ಕೆ ತಾನೇ ವಿನೂತನಪಡಿಸಿ ಕೊಳ್ಳುವದೆಂದು ಹೇಳುವ ಒಂದು "ಋತುಚಕ್ರ" ದ ಸಿದ್ಧಾಂತವಿರುತ್ತದೆಂದು ನನಗೆ ಗೊತ್ತಿದೆ ಆದರೆ ಈ ಕಾಲಘಟ್ಟದಲ್ಲಿ ಅದು ವಿಜ್ಞಾನದ ಪರಿಚಿತ ಸತ್ಯಗಳಿಂದ ಬೆಂಬಲಿಸಲ್ಪಡದ ಒಂದು ಸಿದ್ಧಾಂತವಾಗಿ ಉಳಿದಿರುತ್ತದೆ. [196]*The Evidence of God* ಎಂಬ ಪುಸ್ತಕದಲ್ಲಿ ಒಬ್ಬ ಬರಹಗಾರನು ಹೇಳಿದ್ದೇನೆಂದರೆ ಮಾಡಲ್ಪಡಬಹುದಾದ್ದೆಲ್ಲವೂ ಸ್ವಾಭಾವಿಕವಾಗಿರಬೇಕು, ಹೊರತು ಕಲಿಕೆಯಿಂದಲ್ಲ ಎಂಬದು ನಮ್ಮ ತಿಳುವಳಿಕೆಯಾಗಿದೆ. ಪ್ರತಿಯೊಂದು ಮಗುವು, "ಅದು ಎಲ್ಲಿಂದ ಬಂತು?" "ಅದನ್ನು ಯಾರು ಮಾಡಿದ್ದು?" ಎಂದು ಕೇಳುತ್ತಾನೆ. [197]ಒಂದು ಟಿವಿ ಕಾರ್ಯಕ್ರಮದಲ್ಲಿ ಸಾವಿರಾರು ಡಾಲರ್ ಬೆಲೆಯುಳ್ಳ ಒಂದು ಯಂತ್ರದ ಬಗ್ಗೆ ತೋರಿಸಲಾಯಿತು. ಅದನ್ನು ಚಲಾಯಿಸಬೇಕಾದರೆ ಬಹಳಷ್ಟು ನಿಪುಣತೆ ಮತ್ತು ತರಬೇತಿಯ ಅಗತ್ಯವಿತ್ತು. ಆ ಯಂತ್ರಕ್ಕೆ ಒಂದು ಉದ್ದೇಶವಿತ್ತು: ರೆಡಿಯೋ ಆಕ್ಟಿವ್ ಸಾಮಗ್ರಿಗಳುಳ್ಳ ನಾಜೂಕಾದ ಕಂಟೈನರ್ಗಳನ್ನೆತ್ತಿಕೊಂಡು ಇಡಬೇಕಿತ್ತು. ಇಲ್ಲಿ ಹೇಳಬೇಕಾದದ್ದೇನೆಂದರೆ, ಅದು ಮಾನವನು ಮಾಡಬಹು ದಾದ ಕ್ರಿಯೆಗಳಲ್ಲಿ ಒಂದೇ ಒಂದು ಕೆಲಸವನ್ನು ಮಾಡುವದಕ್ಕೆ ಶಕ್ತವಾಗಿತ್ತು. [198]ಸತ್ಯವೇದ ನಮಗೆ ಹೇಳುತ್ತದೆ, ಈ ಲೋಕವು ನಮ್ಮ ನಿತ್ಯತ್ವದ ಪ್ರಯಾಣದಲ್ಲಿ ಕೇವಲ ಒಂದು ತಾತ್ಕಾಲಿಕ ತಂಗುದಾಣವಾಗಿದೆ; ಆದರೆ *ನಾವು ಇಲ್ಲಿ ಇರುವ ವೇಳೆ ಬೈಬಲ್* "ನಮಗೆ ಸಮೃದ್ಧಿಯಾದ ಜೀವನ" ವನ್ನು ಒದಗಿಸುತ್ತದೆಂಬ ಸತ್ಯವು ಈಗಲೂ ಹಾಗೆಯೇ ನಿಲ್ಲುತ್ತದೆ. [199]ಈಗ ಅನೇಕ ದೇಶಗಳಲ್ಲಿ, ಬೈಬಲಿನ ಪ್ರಭಾವ ಅಷ್ಟಾಗಿ ಪ್ರಭಾವವನ್ನು ಹೊಂದಿಲ್ಲ. ಹೇಗೂ, ಆರಂಭದ ದಿನಗಳಲ್ಲಿ ಬೈಬಲ್ ಹೆಚ್ಚು ಪ್ರಭಾವ ಹೊಂದಿದ್ದರಿಂದ, ಆ ಕಾಲದಲ್ಲಿ ತತ್ವಗಳನ್ನು ರೂಪಿಸುವಾಗ ಮತ್ತು ದೇಶದ ರೂಪರೇಶೆಗಳನ್ನು ನಿರ್ಧರಿಸುವಾಗ, ಈ ಹೇಳಿಕೆ ಸತ್ಯವಾಗಿ ಉಳಿಯುತ್ತದೆ. [200]ಮುಂದಿನ ಜನ್ಮಕ್ಕಾಗಿ ಉಪಯೋಗವಾಗಲೆಂಬದಕ್ಕಾಗಿ ಸತ್ತವರ ಸಮಾಧಿಗಳ ಮೇಲೆ ಆಹಾರ ಮತ್ತು ಇತರ ವಸ್ತುಗಳನ್ನು ಇಡುವವರ ಬಗ್ಗೆ ಯೋಚಿಸಿರಿ.

[201]ರಿಂದ Glen Pace, ರಲ್ಲಿ ಬೋಧಿಸಿದ ಪ್ರಸಂಗ Judsonia church of Christ, Judsonia, Arkansas, 5 January 2003. [202]David Roper, *"The Day Christ Came (Again)" and Other Sermons* (Dallas: Christian Publishing Co., n.d.), 64–65 ರಿಂದ ಆಯ್ದುಕೊಳ್ಳಲ್ಪಟ್ಟದ್ದು. [203]"ಹವನ್ನು ಅವಮಾನಿಸಿಕೊಳ್ಳುವ" ವಿಚಾರವು ಸಲಿಂಗಕಾಮಕ್ಕೆ ಸಂಬಂಧಿಸಿದಂತೆ ವಿಶೇಷ ಅನ್ವಯವಿರುವಂತೆ ತೋರುತ್ತದೆ, ಅದನ್ನು ಪೌಲನು ಮುಂದಿನ ಭಾಗದಲ್ಲಿ ಚರ್ಚಿಸಿದನು (1:26, 27). ಹೀಗಿದ್ದರೂ, ವಾಕ್ಯಕ್ಕೆ ವಿರುದ್ಧವಾದ ಲೈಂಗಿಕತೆಯಿಂದಾಗಿ ಹೇಗೆ ದೇಹಕ್ಕೆ ಮಾನಹಾನಿಯಾಗುತ್ತದೆಂಬ ಬಗ್ಗೆ ಸಾಮಾನ್ಯ ಅರ್ಥದ ಹೇಳಿಕೆಗಳನ್ನು ನೀಡಿದರೆ ಸೂಕ್ತವಾಗಿರುತ್ತದೆ. [204]"Morality and Homosexuality," *Wall Street Journal* (24 February 1994): A18. [205]Bobby Dockery, "Homosexuality" (tract) (N.P.: Gospel Tracts International, n.d.). [206]Swindoll, *Coming to Terms with Sin*, 26. [207]Ibid, 6. [208]Barton, Veerman, and Wilson, 36.